ಶುಕ್ರವಾರ, ಏಪ್ರಿಲ್ 10, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಉತ್ಸವ
ದೆಹಲಿಯಲ್ಲಿ ನಡೆದ ಮರಿಯಮ್ಮ ವಾರ್ಷಿಕ ಉತ್ಸವದಲ್ಲಿ ಭಾಗವಹಿಸಿದ್ದ ತಮಿಳು ಸಮುದಾಯದ ಮಹಿಳೆ

ಬಿಸಿಲ ಬೇಗೆ
ಹುಬ್ಬಳ್ಳಿಯಲ್ಲಿ ಗುರುವಾರ ಅತಿಯಾದ ಬಿಸಿಲು ತಾಳಲಾರದೇ, ಯುವತಿಯರು ತಲೆಗೆ ಬಟ್ಟೆ ಮತ್ತು ಮುಖಕ್ಕೆ ಮುಸುಕು ಹಾಕಿಕೊಂಡು ಸಾಗಿದರು

REGAL
JEWELLERS

MANUFACTURER
& WHOLESALERS

ನಮ್ಮ ಬೆಂಗಳೂರಿನ ಎರಡು ಹೊಸ ಶಾಖೆಗಳ
ಭವ್ಯ ಉದ್ಘಾಟನೆಗೆ ನಿಮಗೆ ಹೃತ್ಪೂರ್ವಕ ಆಹ್ವಾನ

ಜಯನಗರ & ಹೆಚ್‌ಎಸ್‌ಆರ್ ಲೇಔಟ್

ನಿಜವಾದ ಹೋಲ್‌ಸೇಲ್ ಬೆಲೆಯಲ್ಲಿ ಸುಂದರ ಚಿನ್ನ ಮತ್ತು
ಡೈಮಂಡ್ ಆಭರಣಗಳನ್ನು ಆನಂದಿಸಿ
ಭವ್ಯ ಉದ್ಘಾಟನೆಗೆ ನಮ್ಮೊಂದಿಗೆ ಸೇರಿ



ಅದ್ದೂರಿ ಉದ್ಘಾಟನ ಆಫರ್ಸ್

ಏಪ್ರಿಲ್ 10, 11 ಹಾಗೂ 12 ರಂದು ಮಾತ್ರ

ಉಚಿತ
ಚಿನ್ನದ ನಾಣ್ಯ
ಪ್ರತೀ 10 ಗ್ರಾಂ ಚಿನ್ನಾಭರಣ ಖರೀದಿಗೆ

ಉಚಿತ
ಚಿನ್ನದ ನಾಣ್ಯ
₹1,00,000 ಮೌಲ್ಯದ ವಜ್ರಾಭರಣ ಖರೀದಿಗೆ

ನೇರ
50%
ರಿಯಾಯಿತಿ
ಎಲ್ಲಾ ಚಿನ್ನಾಭರಣಗಳ ಮೇಕಿಂಗ್ ಚಾರ್ಜಸ್ ಮೇಲೆ

₹15,000
ರಿಯಾಯಿತಿ
ವಜ್ರಾಭರಣಗಳ ಪ್ರತೀ ಕ್ಯಾರಟ್‌ಗೆ

*T&C Apply

ಕರ್ನಾಟಕದ ಎಲ್ಲಾ ರೀಗಲ್ ಜ್ಯುವೆಲ್ಲರ್ಸ್ ಶಾಖೆಗಳಲ್ಲಿ ಆಫರ್ ಗಳು ಲಭ್ಯವಿರುತ್ತದೆ

ಜಯನಗರ | ಹೆಚ್‌ಎಸ್‌ಆರ್ ಲೇಔಟ್ | ಮಾರತಹಳ್ಳಿ | ಮಲ್ಲೇಶ್ವರಂ | ಕಮ್ಮನಹಳ್ಳಿ

ಅಕ್ಷಯ
ತೃತೀಯ

ಅಕ್ಷಯ ತೃತೀಯದ ಈ ಶುಭ ಸಂದರ್ಭದಲ್ಲಿ ಸಮೃದ್ಧಿ
ಮತ್ತು ಸೌಭಾಗ್ಯವನ್ನು ನಿಮ್ಮ ಮನೆಗೆ ಕರೆತನ್ನಿ

ಕೇವಲ
₹1000
ಪಾವತಿಸಿ ಹಾಗೂ 8 ಗ್ರಾಮ್
ಚಿನ್ನವನ್ನು ಲಾಕ್ ಮಾಡಿ

ಬುಕ್ ಮಾಡಿರುವ ದರ ಅಥವಾ ಖರೀದಿ ಮಾಡುವ
ದಿನದ ಮಾರುಕಟ್ಟೆಯ ದರ, ಯಾವುದು ಕಡಿಮೆ
ಇರುತ್ತದೋ ಆ ದರದಲ್ಲಿ ಆಭರಣ ಖರೀದಿಸಿ.

ಈ ಆಫರ್ ಏಪ್ರಿಲ್ 19ರಂದು ಅಕ್ಷಯ ತೃತೀಯದ
ದಿನದಂದು ಮಾಡಿದ ಆಭರಣ
ಖರೀದಿಗಳಿಗೆ ಮಾತ್ರ ಅನ್ವಯಿಸುತ್ತದೆ.

*T&C Apply

ಡೌನ್ಲೋಡ್ ರೀಗಲ್ ಜ್ಯುವೆಲ್ಲರ್ಸ್ ಆ್ಯಪ್
ಸರಳ ಯೋಜನೆ ನೋಂದಣಿ, ಟ್ರಾಕಿಂಗ್
ಮತ್ತು ಪಾವತಿಗಾಗಿ.

GET IT ON Google Play
DOWNLOAD ON App Store

ಕರ್ನಾಟಕ | ಕೇರಳ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ
prajavani.net prajavani | ಶುಕ್ರವಾರ, ಏಪ್ರಿಲ್ 10, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 99 | ಪುಟ 20 | www.prajavani.net

ಚಿನ್ನದ ಪಂಚ್

ಭಾರತದ ಮೀನಾಕ್ಷಿ ಹೂಡಾ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ 48 ಕೆ.ಜಿ ವಿಭಾಗದಲ್ಲಿ ಚಿನ್ನ ಗೆದ್ದರು. ಅವರು ಫೈನಲ್‌ನಲ್ಲಿ ಮಂಗೋಲಿಯಾದ ನೊಮುನ್ದರಿ ಅವರನ್ನು ಸೋಲಿಸಿದರು

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 76,631 | ನಿಫ್ಟಿ 23,775 | $/₹ 92.51 | ಚಿನ್ನ (Std. 10g) ₹1,56,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,49,200 (ಬೆಂಗಳೂರು)

ಯುದ್ಧದ ಪರಿಣಾಮ ಎದುರಿಸಲು ಸಮರ್ಥ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಜಾಗತಿಕ ಮಟ್ಟದಲ್ಲಿ ಇಂಧನ ಪೂರೈಕೆಗೆ ಆಗಿರುವ ಧಕ್ಕೆಯನ್ನು ನಿಭಾಯಿಸುವ ಸಾಮರ್ಥ್ಯವು ಭಾರತಕ್ಕೆ ಇದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ.

ವಿವರ 12

ಆಧಾರ್: 'ಸುಪ್ರೀಂ'ಗೆ ಪಿಐಎಲ್ ಸಲ್ಲಿಕೆ

ನವದೆಹಲಿ: ಆರು ವರ್ಷದೊಳಗಿನ ಭಾರತೀಯ ಪ್ರಜೆಗಳಿಗೆ ಮಾತ್ರ ಆಧಾರ್ ಕಾರ್ಡ್ ವಿತರಿಸುವಂತೆ ನಿರ್ದೇಶನ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದು ಸಲ್ಲಿಕೆಯಾಗಿದೆ.

ವಿವರ 13

ಚಿನಕುರುಳಿ ಪ್ರಕಾಶ್ ಶೆಟ್ಟಿ

ಪಿಯು ಫಲಿತ: ಶೇ 86.48ಕ್ಕೆ ಜಿಗಿತ

5.46 ಲಕ್ಷ ವಿದ್ಯಾರ್ಥಿಗಳು ತೇರ್ಗಡೆ ● ಮೂರು ವಿಭಾಗ: ವಿದ್ಯಾರ್ಥಿನಿಯರದ್ದೇ ಶಿಖರ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಪರೀಕ್ಷೆ ಬರೆದಿದ್ದ 6.32 ಲಕ್ಷ ವಿದ್ಯಾರ್ಥಿಗಳಲ್ಲಿ 5.46 ಲಕ್ಷ (ಶೇ 86.48) ತೇರ್ಗಡೆಯಾಗುವ ಮೂಲಕ ಹೊಸ ದಾಖಲೆ ಬರೆದಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಫಲಿತಾಂಶದ ವಿವರ ನೀಡಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು, ತೇರ್ಗಡೆಯ ಕನಿಷ್ಠ ಅಂಕವನ್ನು ಶೇ 35ರಿಂದ 33ಕ್ಕೆ ಇಳಿಸಿದ್ದು ದಾಖಲೆಯ ಫಲಿತಾಂಶಕ್ಕೆ ಕಾರಣವಲ್ಲ. ಕನಿಷ್ಠ ಅಂಕ ಇಳಿಕೆಯ (ಶೇ 2) ಪ್ರಯೋಜನ ಪಡೆದವರು 5,577 ವಿದ್ಯಾರ್ಥಿಗಳು. ಈ ಬಾರಿ ಯಾವುದೇ ಕೃಪಾಂಕ ನೀಡಿಲ್ಲ ಎಂದರು.

2023-24ನೇ ಸಾಲಿನ ಫಲಿತಾಂಶ ಇದುವರೆಗಿನ ದಾಖಲೆ ಯಾಗಿತ್ತು. ಕೋವಿಡ್ ಸಮಯದಲ್ಲಿ ಎಲ್ಲರನ್ನೂ ಉತ್ತೀರ್ಣ ಗೊಳಿಸಿದ್ದನ್ನು ಹೊರತುಪಡಿಸಿದರೆ ಇದು ದಾಖಲೆ ಫಲಿತಾಂಶ ಎಂದು ಹೇಳಿದರು.

ವಿವರಗಳೇನು?: ಈ ಬಾರಿಯೂ ವಿದ್ಯಾರ್ಥಿನಿಯರೇ ಅತ್ಯುತ್ತಮ ಸಾಧನೆ (ಶೇ 88.70) ಮೆರೆದಿದ್ದಾರೆ.

ಮೂರೂ ವಿಭಾಗಗಳಲ್ಲೂ ಮೊದಲ ಸ್ಥಾನದ ಕಿರೀಟವನ್ನು ಬಾಲಕಿಯರು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

ಮುಖ್ಯಾಂಶಗಳು

- ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪರೀಕ್ಷೆ–2ಕ್ಕೆ ಶುಲ್ಕವಿಲ್ಲ
- ಪರೀಕ್ಷೆ ಬರೆದಿದ್ದ 206 ಅಂಗವಿಕಲರಲ್ಲಿ 154 ಮಂದಿ ತೇರ್ಗಡೆ
- ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರ ಫಲಿತಾಂಶ ಏ.24ಕ್ಕೆ ಪ್ರಕಟ

ಕಲಾ ವಿಭಾಗದಲ್ಲಿ ವಿಜಯನಗರ ಜಿಲ್ಲೆಯ ಇಂದು ಕಾಲೇಜಿನ ಡಿ.ಎಂ. ಅರ್ಚನಾ (598 ಅಂಕ), ಸಂಗೀತಾ (598) ಹಾಗೂ ಕಲಬುರಗಿ ವಿಜಿ ಪಿಯು ಮಹಿಳಾ ಕಾಲೇಜಿನ ಸೃಷ್ಟಿ (598), ವಾಣಿಜ್ಯ ವಿಭಾಗದಲ್ಲಿ ಬೆಂಗಳೂರಿನ ಎಸ್.ಬಿ.ಮಹಾವೀರ ಜೈನ್ ಕಾಲೇಜಿನ ಅದಿತಿ ಎ.ಬಾಪು (600), ಮೂಡುಬಿದಿರೆಯ ಆಳ್ವಾಸ್ ಕಾಲೇಜಿನ ದಿಶಾ (600) ಹಾಗೂ ವಿಜ್ಞಾನ ವಿಭಾಗದಲ್ಲಿ ಮಂಗಳೂರಿನ ದಿ ಲರ್ನಿಂಗ್ ಸೆಂಟರ್ ಕಾಲೇಜಿನ ಪ್ರಿನ್ಸಿಲಾ ಕಾರ್ಡೋಜಾ (599) ಮೊದಲ ಸ್ಥಾನ ಪಡೆದವರು.

ಶೇ 83.65ರಷ್ಟು ಬಾಲಕರು ತೇರ್ಗಡೆಯಾಗಿದ್ದಾರೆ. ಗ್ರಾಮೀಣ ವಿದ್ಯಾರ್ಥಿಗಳು ಮೇಲುಗೈ ಸಾಧಿಸಿದ್ದು, ಶೇ 87.62 ಹಾಗೂ ನಗರ ಪ್ರದೇಶದ ಶೇ 85.95 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

2024–25ರಲ್ಲಿ ಪರೀಕ್ಷೆ ಬರೆದಿದ್ದ 6.37 ಲಕ್ಷ ವಿದ್ಯಾರ್ಥಿಗಳಲ್ಲಿ 4.68 ಲಕ್ಷ ವಿದ್ಯಾರ್ಥಿಗಳು (ಶೇ 73.45) ತೇರ್ಗಡೆಯಾಗಿದ್ದರು. 2023–24ನೇ ಸಾಲಿನ ಫಲಿತಾಂಶಕ್ಕೆ (ಶೇ 81.15) ಹೋಲಿಸಿದರೆ ಶೇ 7.70 ಫಲಿತಾಂಶ ಕುಸಿದಿತ್ತು. 2025–26ನೇ ಸಾಲಿನಲ್ಲಿ ಶೇ 13.03ರಷ್ಟು ಹೆಚ್ಚು ಫಲಿತಾಂಶ ಪಡೆದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಅತಿ ಹೆಚ್ಚು ಫಲಿತಾಂಶ ಬಂದಿದ್ದು, ಪರೀಕ್ಷೆ ಬರೆದಿದ್ದ 2.90 ಲಕ್ಷ ವಿದ್ಯಾರ್ಥಿಗಳಲ್ಲಿ 2.66 ಲಕ್ಷ ತೇರ್ಗಡೆಯಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ 1.82 ಲಕ್ಷ (2.07 ಲಕ್ಷ), ಕಲಾ ವಿಭಾಗದಲ್ಲಿ 98,310 (1.34 ಲಕ್ಷ) ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಪರೀಕ್ಷೆ -2ಕ್ಕೆ ವಿದ್ಯಾರ್ಥಿಗಳು ಸಿದ್ಧರಾಗಲು ಹೆಚ್ಚು ಸಮಯಾವಕಾಶ ನೀಡಲಾಗಿದೆ. ಏ.25ರ ಬದಲು ಏ.30ಕ್ಕೆ ನಿಗದಿ ಮಾಡಲಾಗಿದೆ. ಮರು ಮೌಲ್ಯ ಮಾಪನದಲ್ಲಿ ಗಳಿಸಿದ ಅಂಕಗಳನ್ನೇ ಪರೀಕ್ಷೆ-1ರ ಅಂಕಗಳೆಂದು ಪರಿಗಣಿಸಲಾಗುವುದು, ಮೇಲ್ಮನವಿಗೆ ಅವಕಾಶವಿಲ್ಲ. ಅಂಕಗಳ ಮರು ಎಣಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ.



ಪರೀಕ್ಷೆ–3 ಇಲ್ಲ

ದ್ವಿತೀಯ ಪಿಯು ಪರೀಕ್ಷೆ–3 ಈ ಬಾರಿ ನಡೆಸುವುದಿಲ್ಲ. ದಾಖಲೆಯ ಫಲಿತಾಂಶ ಬಂದ ಕಾರಣ ಪರೀಕ್ಷೆ–2 ಅಷ್ಟೇ ನಡೆಸಲು ನಿರ್ಧರಿಸಲಾಗಿದೆ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ಎಲ್ಲ ವಿಷಯಗಳಲ್ಲೂ ಅನುತ್ತೀರ್ಣರಾದವರ ಸಂಖ್ಯೆ ಕೇವಲ 1,772 ಇದೆ. ಕಳೆದ ಬಾರಿ 39,923 ವಿದ್ಯಾರ್ಥಿಗಳು ಎಲ್ಲ ವಿಷಯಗಳಲ್ಲೂ ಅನುತ್ತೀರ್ಣರಾಗಿದ್ದರು. ಹಾಗಾಗಿ, ಪರೀಕ್ಷೆ–3 ನಡೆಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಜಾತಿಗಣತಿ, ಒಳಮೀಸಲಾತಿ ಸಮೀಕ್ಷೆ, ಚುನಾವಣಾ ಕಾರ್ಯದ ಕೆಲಸಗಳ ನಡುವೆಯೂ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿದ್ದರ ಫಲವಾಗಿ ದ್ವಿತೀಯ ಪಿಯುನಲ್ಲಿ ದಾಖಲೆಯ ಫಲಿತಾಂಶ ಪಡೆಯಲು ಸಾಧ್ಯವಾಗಿದೆ. ಸಚಿವರೂ ಸೇರಿದಂತೆ ಜನಪ್ರತಿನಿಧಿಗಳು, ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿಇಒಗಳು, ಶಾಲಾ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಫಲಿತಾಂಶ ವೃದ್ಧಿಗೆ ಶ್ರಮಿಸಿದ್ದಾರೆ

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ಇನ್ನಷ್ಟು ಸುದ್ದಿಗಳು 4

'ಚಾರಣ: ಎಸ್‌ಒಪಿ ರೂಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಗಿರಿ ಶ್ರೇಣಿಗಳಿಗೆ ತೆರಳುವ ಚಾರಣಿಗರ ಸುರಕ್ಷತೆಯ ಉದ್ದೇಶದಿಂದ ದೇಶಕ್ಕೇ ಮಾದರಿಯಾಗುವ ಪ್ರಮಾಣಿತ ಕಾರ್ಯಚರಣಾ ವಿಧಾನ (ಎಸ್‌ಒಪಿ) ರೂಪಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ತಡಿಯಾಂಡಮೋಲ್ ಚಾರಣದ ವೇಳೆ ಕೇರಳದ ಮಹಿಳೆ ಶರಣ್ಯ ಮೂರು ದಿನ ಕಾಡಿನಲ್ಲಿ ಕಳೆದಿದ್ದರು. ಚಂದ್ರದ್ರೋಣ ಪರ್ವತದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿ ನಾಪತ್ತೆಯಾಗಿರುವ ಕಾರಣ ಮುಖ್ಯ ವನ್ಯಜೀವಿ ಪಾಲಕರಿಗೆ ಲಿಖಿತ ಸೂಚನೆ ನೀಡಿದ್ದಾರೆ.

ಅರಣ್ಯ ಇಲಾಖೆ ಈಗಾಗಲೇ ಅಭಿವೃದ್ಧಿಪಡಿಸಿರುವ ಇ–ಗಸ್ತು, ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಎಂ.ಸ್ಟ್ರೈಪ್ ಎಂಬ ಆ್ಯಪ್ ಬಳಸಲಾಗುತ್ತಿದೆ. ಅದೇ ರೀತಿಯಲ್ಲೇ ಚಾರಣದ ಅವಧಿಯಲ್ಲಿ ಚಾರಣಿಗರ ಮೊಬೈಲ್‌ನಲ್ಲಿ ತಾತ್ಕಾಲಿಕವಾಗಿ ಇಂತಹ ಆ್ಯಪ್ ಅಳವಡಿಸಿದರೆ, ಯಾರೇ ದಾರಿ ತಪ್ಪಿಸಿಕೊಂಡರೂ ಅವರ ಶೋಧ ಕಾರ್ಯ ಸುಲಭವಾಗುತ್ತದೆ. ಹೀಗಾಗಿ ಆ್ಯಪ್ ಅಭಿವೃದ್ಧಿಗೆ ಕ್ರಮ ವಹಿಸಬೇಕು ಹಾಗೂ ಚಾರಣಿಗರಿಗೆ ಗುಂಪು ವಿಮೆ ಮಾಡಿಸುವಂತೆ ಅವರು ನಿರ್ದೇಶನ ನೀಡಿದ್ದಾರೆ.

ಅಲ್ಲದೇ, ಚಾರಣಿಗರಿಗೆ ಮಾರ್ಗ ದರ್ಶನ ಮಾಡುವ ನೇಚರ್ ಗೈಡ್‌ಗಳಿಗೆ ಕಡ್ಡಾಯವಾಗಿ ವೈರ್‌ಲೆಸ್ ಸೆಟ್ ನೀಡಬೇಕು ಮತ್ತು ಚಾರಣಿಗರನ್ನು ತಮ್ಮೊಂದಿಗೆ ಕರೆದುಕೊಂಡು ಹೋಗುವ ಗೈಡ್‌ಗಳಿಗೆ ಹೊಣೆಗಾರಿಕೆ ನಿಗದಿ ಮಾಡುವಂತೆಯೂ ಖಂಡ್ರೆ ಅವರು ಸೂಚಿಸಿದ್ದಾರೆ.

2 ದಿನ ಕಳೆದರೂ ವಿದ್ಯಾರ್ಥಿನಿ ಪತ್ತೆಯಿಲ್ಲ

ಚಿಕ್ಕಮಗಳೂರು: ಚಂದ್ರದ್ರೋಣ ಪರ್ವತ ಶ್ರೇಣಿಯ ಮಾಣಿಕ್ಯಧಾರಾ ಜಲಪಾತದ ಬಳಿಯಿಂದ ನಾಪತ್ತೆಯಾಗಿರುವ ಕೇರಳದ ವಿದ್ಯಾರ್ಥಿನಿ ಎರಡು ದಿನ ಕಳೆದರೂ ಪತ್ತೆಯಾಗಿಲ್ಲ. ಬಾಲಕಿಗಾಗಿ ರಕ್ಷಣಾ ತಂಡ ಶೋಧ ಮುಂದುವರಿಸಿದೆ.

ಪೊಲೀಸರು, ಅಗ್ನಿಶಾಮಕ ದಳ, ಅರಣ್ಯ ಸಿಬ್ಬಂದಿ ಸೇರಿ 100ಕ್ಕೂ ಹೆಚ್ಚು ಜನ ಮಾಣಿಕ್ಯಧಾರಾ ಜಲಪಾತದ ಕಡಿದಾದ ಪ್ರದೇಶದಲ್ಲಿ ಹುಡುಕಾಟ ನಡೆಸುತ್ತಿದ್ದಾರೆ. ಒಂದೆಡೆ ಕಡಿದಾದ ಪ್ರಪಾತಕ್ಕೆ ಹಗ್ಗ ಕಟ್ಟಿಕೊಂಡು ಇಳಿದು ಶೋಧ ನಡೆಸಿದರು. ಮತ್ತೊಂದೆಡೆ ಡ್ರೋಣ್‌ಗಳ ಮೂಲಕವೂ ಹುಡುಕಾಟ ನಡೆಸಿದರು.

ಸುತ್ತಮುತ್ತಲ ಶೋಲಾ ಕಾಡಿನಲ್ಲೂ ರಕ್ಷಣಾ ತಂಡಗಳು ಕಾರ್ಯಾಚರಣೆ ನಡೆಸುತ್ತಿವೆ. ಬಾಲಕಿಯ ಪೋಷಕರು ಮತ್ತು ಅವರ ಸಂಬಂಧಿಕರು ಸ್ಥಳದಲ್ಲೇ ಮಗಳಿಗಾಗಿ ಕಾಯುತ್ತಿದ್ದಾರೆ. ಬಾಲಕಿಯ ಶೋಧ ಕಾರ್ಯಾಚರಣೆ ಬಗ್ಗೆ ಮಾಹಿತಿ ಪಡೆಯಲು ಕೇರಳದಿಂದ ಮೂವರು ಪೊಲೀಸ್ ಸಿಬ್ಬಂದಿ ಬಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೇರಳದ ಪಾಲಕ್ಕಾಡಿನಿಂದ ಬಂದಿದ್ದ 40 ಜನರ ತಂಡದಲ್ಲಿ ವಿದ್ಯಾರ್ಥಿನಿ ಕೂಡ ಬಂದಿದ್ದರು. ಮಂಗಳವಾರ ಸಂಜೆಯಿಂದ ನಾಪತ್ತೆಯಾಗಿದ್ದಾರೆ.

CMR UNIVERSITY

Private University Estd in Karnataka State by Act No. 45 of 2013

BENGALURU | RECOGNISED BY UGC

A GRADE ACCREDITED BY NAAC

ADMISSIONS OPEN FOR AY 2026-27

APPLY NOW!

It doesn't start with a map.
It starts with a spark.
An idea that doesn't wait for permission.
A question that won't fit inside the lines.

The world will tell you how it's done.
But here, we learn to listen differently,
to that small, steady voice that says,
'Try it your way.'

Because discovery isn't
about following paths.
It's about making them.
It's about falling, figuring, fixing, and
finding something that feels like you.

At CMR, we don't hand out directions.
We hand over possibilities.

You learn to connect disciplines,
to see patterns others miss,
to build, question, and begin again.
You learn to trust the process.

Because there's no single way forward,
only the one you create.

Make Your Own Way

SCHOOL OF ENGINEERING & TECHNOLOGY (Lakeside Campus)

B.Tech.
- Computer Science & Engineering
- Computer Science & Engineering (Artificial Intelligence & Machine Learning)
- Computer Science & Engineering (Data Science)
- Computer Engineering*
  *With specialisation in Artificial Intelligence & Machine Learning/Internet of Things
- Computer Science & Technology*
  *With specialisation in Artificial Intelligence & Machine Learning/Internet of Things
- Information Technology
- Electronics & Communication Engineering
- Artificial Intelligence & Data Science#

M.Tech.
- Computer Science & Engineering
- Artificial Intelligence

Ph.D.
- Computer Science & Engineering (Artificial Intelligence, Machine Learning, Networking & Cloud Computing, Data Analytics, Cyber Security, Data Science & Internet of Things)
- Electronics & Communication Engineering
- Mechanical Engineering • Physics • Chemistry
- Mathematics

SCHOOL OF DESIGN (Lakeside Campus)

B.Des.
- Communication Design • Product Design
- Fashion Design • Interior Design

B.Sc.
- Sound Engineering
- Visual Effects & Animation

SCHOOL OF ECONOMICS & COMMERCE

B.Com. (City & OMBR Campuses)
- International Accounting & Finance (ACCA, UK) (City Campus)
- Professional - CA Integrated (OMBR Campus)
- Data Science (OMBR Campus)
- Certified Management Accountant (US CMA) (OMBR Campus)
- Fintech NEW (OMBR Campus)

M.Com.
- Fintech with AI & Taxation NEW (OMBR Campus)

Ph.D.
- Economics • Commerce

SCHOOL OF SCIENCE & COMPUTER STUDIES

BCA (Lakeside & OMBR Campuses)
- Cloud Computing (OMBR Campus)
- Data Science (Lakeside & OMBR Campuses)
- Game Development (OMBR Campus)
- Artificial Intelligence & Machine Learning (Lakeside & OMBR Campuses)

B.Sc. | Information Technology (OMBR Campus)

M.Sc. | Information Technology in Data Science (OMBR Campus)

MCA (Lakeside & OMBR Campuses)
- Artificial Intelligence & Machine Learning NEW

Ph.D. | Computer Applications

SCHOOL OF MANAGEMENT

BBA (All Campuses)
- Digital Marketing (City Campus)
- Business Analytics (City Campus)
- Fintech (Lakeside & OMBR Campuses)
- Data Science & AI (City & OMBR Campuses)
- Logistics & Supply Chain Management (OMBR Campus)
- Tourism & Hospitality Management (City Campus)

MBA with Dual Specialisation (All Campuses)
- Marketing • HR • Finance
- Digital Marketing
- Supply Chain Management • Fintech NEW

MBA with Specialisation in Business Analytics & Business Intelligence (City Campus)

MBA (Technology Management) (Lakeside Campus)

Executive MBA
Product Leadership (CMRIT Campus)

Ph.D. | Management

SCHOOL OF ARCHITECTURE (Lakeside Campus)

B.Arch.

SCHOOL OF LEGAL STUDIES (OMBR Campus)

B.A.,LL.B. (Hons)
B.B.A.,LL.B. (Hons)
LL.B.
LL.M.
- Constitutional Law
- Commercial Law
- Criminal Law

Ph.D. | Law

SCHOOL OF LIBERAL STUDIES

B.A. (City & Lakeside Campuses)
- Psychology • English • Journalism
- Economics • Political Science
- History • Sociology • Media Studies
- Travel & Tourism

B.Sc. | Psychology (City & Lakeside Campuses)

M.Sc. | Psychology (City Campus)
- Clinical • Counselling • Human Resource Development & Management

Ph.D. | Psychology

SCHOOL OF ALLIED & HEALTHCARE SCIENCES#

B.Sc. / B.Sc. (Hons) / Bachelor
- Anaesthesia & Operation Theatre Technology
- Medical Laboratory Technology
- Optometry
- Medical Radiology & Imaging Technology
- Hospital Administration

COLLEGE OF NURSING (PROPOSED)

B.Sc. | Nursing

Subject to government approval

- Scholarships available for eligible candidates*
- Semester-wise payment option available
- Interest-free education loan (EMI option*)
- Hostel facility for boys & girls

*T&C apply

ACCP

Accelerated Credit Course Programme

Get trained and certified for **FREE** in niche courses, earn credits in advance and stay ahead of the competition.

CMR University (CMRU), Bengaluru, founded in 2013, fosters creative communities by promoting new ideas and diverse subjects, preparing students for successful careers. Guided by the mission to develop global creative thinkers, CMRU, backed by the CMR Jnanadhara Trust, nurtures over 20,000 students from 40+ countries and is committed to quality education.

CELEBRATING 25 YEARS CMRIT CMR INSTITUTE OF TECHNOLOGY, BENGALURU.

NAAC GRADE A++ ACCREDITED INSTITUTION

CMR INSTITUTE OF TECHNOLOGY

- Permanently affiliated to VTU • Approved by AICTE
- NIRF Ranked • Recognised by the Govt. of Karnataka

B.E. | CSE • CSE (AI & ML) • AI & DS • AI & ML
CSE (Data Science) • ISE • ECE

MBA | **MCA**

Ph.D. | CSE • ECE • Physics • Chemistry • Mathematics
Business Administration • Computer Applications

nirf RANKED

- B.E. CET Code: E097
- ComedK Code: E032
- PGCET Code: MBA: B151 | MCA: C420

www.cmrit.ac.in | **admission@cmrit.ac.in**

SCAN FOR DETAILS

We honour JEE, COMEDK, CUET, KCET and other state/national-level tests.
Direct admission for CUET students.

Providing opportunities to get scholarships worth **₹12 crores***

*T&C apply

CET codes	COMEDK code	PGCET MBA codes	PGCET MCA codes	PGCET M.Tech. codes
• B.Tech. - E257	• B.Tech. - E187	• City Campus- B150	• OMBR Campus - C527	• Lakeside campus - T610
• B.Arch. - E245	• B.Arch. - E187(A)	• OMBR Campus- B149	• Lakeside campus - C521	
		• Lakeside Campus- B395		

200+ TOP RECRUITERS

Capgemini, opentext, Radisson, standard chartered, htc, ICICI PRUDENTIAL, eurofins, Tech Mahindra

and many more..

OUR GLOBAL ACADEMIC COLLABORATIONS

Atlantis University, BRADLEY University, ISM, HUMANIZA, excelia, PUTRA Business School, IT Tutor Pro

ADMISSIONS HELPLINE +91 93429 00666

admissions@cmr.edu.in | www.cmr.edu.in

Lakeside Campus: Off Hennur–Bagalur Main Road, Chagalahatti, Bengaluru – 562 149
City Campus: #2, 3rd Cross, 6th A Main, HRBR Layout, Bengaluru – 560 043
OMBR Campus: #5, Bhuvanagiri, OMBR Layout, Bengaluru – 560 043
CMRIT Campus: #132, AECS Layout, ITPL Main Road, Kundalahalli, Bengaluru - 560 037

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರಜತ್ ತಾಲೀಮು

ಗುವಾಹಟಿಯಲ್ಲಿ ಶುಕ್ರವಾರ ನಡೆಯಲಿರುವ ರಾಜಸ್ಥಾನ ರಾಯಲ್ಸ್ ಎದುರಿನ ಐಪಿಎಲ್ ಪಂದ್ಯದಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ರಜತ್ ಪಾಟೀದಾರ್ ಗುರುವಾರ ಅಭ್ಯಾಸ ನಡೆಸಿದರು

‘ಕಾಯಂ ಮಾಡಿಕೊಳ್ಳಿ’

ಸರ್ಕಾರಿ ಭೂಮಾಪಕರಾಗಿ ಕಾಯಂ ಮಾಡಿಕೊಳ್ಳಬೇಕು ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ ಪರವಾನಗಿ ಭೂ ಮಾಪಕರು ಮೈಸೂರಿನಲ್ಲಿ ಪ್ರತಿಭಟನೆ ನಡೆಸಿದರು

ಅಲ್ಪ ವಿರಾಮದ ಮೇಲೆ ತೂಗುಗತ್ತಿ

ಲೆಬನಾನ್ ಮೇಲೆ ಇಸ್ರೇಲ್ ದಾಳಿ ಇರಾನ್‌ನಿಂದ ಪ್ರತಿದಾಳಿ ಮುಂದುವರಿಕೆ

ಪಶ್ಚಿಮ ಏಷ್ಯಾ ಸಂಘರ್ಷ

ದುಬೈ (ಎಪಿ): ಅಮೆರಿಕ, ಇಸ್ರೇಲ್ ಹಾಗೂ ಇರಾನ್ ನಡುವಿನ ತಾತ್ಕಾಲಿಕ ಕದನ ವಿರಾಮ ಒಪ್ಪಂದಕ್ಕೆ ಈಗ ಹಲವು ಅಡ್ಡಿಗಳು ಎದುರಾಗಿವೆ. ಕದನ ವಿರಾಮ ಘೋಷಣೆಯಾದ ಬೆನ್ನಲ್ಲೇ, ಈ ಯುದ್ಧದಲ್ಲಿ ತಾವೇ ಗೆದ್ದಿದ್ದಾಗಿ ಇರಾನ್ ಮತ್ತು ಅಮೆರಿಕ ಹೇಳಿಕೊಂಡಿದ್ದವು. ಆದರೆ, ಪಶ್ಚಿಮ ಏಷ್ಯಾದಲ್ಲಿನ ಸನ್ನಿವೇಶಗಳು ಬೇರೆ ಚಿತ್ರಣವನ್ನೇ ನೀಡುತ್ತಿವೆ.

ಒಂದೆಡೆ, ಇಸ್ರೇಲ್ ಪಡೆಗಳು ಲೆಬನಾನ್ ಮೇಲೆ ದಾಳಿಯನ್ನು ತೀವ್ರಗೊಳಿಸಿವೆ. ಮತ್ತೊಂದಡೆ, ಹೊರ್ಮುಜ್ ಜಲಸಂಧಿ ಮೇಲಿನ ತನ್ನ ಹಿಡಿತವನ್ನು ಇರಾನ್ ಸಡಿಲಿಸಿಲ್ಲ.

12

ಪಾಕ್‌ಗೆ ವ್ಯಾನ್ಸ್ ನೇತೃತ್ವದ ನಿಯೋಗ

ತಾತ್ಕಾಲಿಕ ಕದನ ವಿರಾಮ ಒಪ್ಪಂದ ಕುರಿತು ಚರ್ಚಿಸಲು ಏಪ್ರಿಲ್ 10ರಂದು ಪಾಕಿಸ್ತಾನ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ನಡೆಯಲಿರುವ ಸಭೆಯಲ್ಲಿ ಪಾಲ್ಗೊಳ್ಳುವ ಅಮೆರಿಕ ನಿಯೋಗದ ನೇತೃತ್ವವನ್ನು ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ವಹಿಸುವರು ಎಂದು ಶ್ವೇತಭವನ ತಿಳಿಸಿದೆ.

12

ಲೆಬನಾನ್‌ನ ದಕ್ಷಿಣ ಕರಾವಳಿ ನಗರ ಸಿಡಾನ್ ಮೇಲೆ ಇಸ್ರೇಲ್ ನಡೆಸಿದ ವಾಯು ದಾಳಿಯಲ್ಲಿ ಕಟ್ಟಡವೊಂದು ಧ್ವಂಸವಾಗಿದೆ ಎಎಫ್‌ಪಿ ಚಿತ್ರ

‘ದಿನಕ್ಕೆ 15 ಹಡಗು ಮಾತ್ರ ಸಾಗಲು ಅವಕಾಶ’

ಮಾಸ್ಕೊ (ರಾಯಿಟರ್ಸ್): ಅಮೆರಿಕದೊಂದಿಗೆ ಮಾಡಿಕೊಂಡಿರುವ ತಾತ್ಕಾಲಿಕ ಕದನ ವಿರಾಮ ಒಪ್ಪಂದದಂತೆ ದಿನವೊಂದಕ್ಕೆ ಗರಿಷ್ಠ 15 ಹಡಗುಗಳು ಹೊರ್ಮುಜ್ ಜಲಸಂಧಿ ಮೂಲಕ ಸಾಗುವುದಕ್ಕೆ ಇರಾನ್ ಅನುಮತಿ ನೀಡಲಿದೆ ಎಂದು ರಷ್ಯಾದ ಸುದ್ದಿಸಂಸ್ಥೆ ಟಿಎಎಸ್‌ಎಸ್ ಗುರುವಾರ ವರದಿ ಮಾಡಿದೆ.

ಈಗಾಗಲೇ, ಕನಿಷ್ಠ ಎರಡು ಹಡಗುಗಳು ಚೀನಾ ಕರೆನ್ಸಿ 1.36 ಕೋಟಿ ಯುವಾನ್ (ಅಂದಾಜು 2 ಮಿಲಿಯನ್ ಡಾಲರ್) ಶುಲ್ಕ ಪಾವತಿಸಿದ ಬಳಿಕ ಅವುಗಳು ಸಾಗುವುದಕ್ಕೆ ಐಆರ್‌ಜಿಸಿ ಅನುಮತಿ ನೀಡಿದೆ ಎಂದು ಮತ್ತೊಂದು ಮೂಲ ವರದಿ ಮಾಡಿದೆ.

ಉದ್ದೇಶಿತ ಕದನ ವಿರಾಮ ಒಪ್ಪಂದ ಏರ್ಪಡುವ ವರೆಗೆ ಇರಾನ್ ಸುತ್ತಲೂ ಅಮೆರಿಕದ ಯುದ್ಧನೌಕೆಗಳು ಹಾಗೂ ಯೋಧರ ನಿಯೋಜನೆ ಮುಂದುವರಿಯಲಿದೆ

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಇಸ್ರೇಲ್‌ನ ಉತ್ತರ ಭಾಗದ ನಿವಾಸಿಗಳಿಗೆ ಭದ್ರತೆ ಮರು-ಸ್ಥಾಪಿಸುವವರೆಗೂ ಹಿಜ್ಬುಲ್ಲಾ ಬಂಡುಕೋರರ ಮೇಲೆ ದಾಳಿ ಮುಂದುವರಿ ಯುವುದು

ಬೆಂಜಮಿನ್ ನೆತನ್ಯಾಹು, ಇಸ್ರೇಲ್ ಪ್ರಧಾನಿ

ಅಮೆರಿಕ ತನ್ನ ಆಕ್ರಮಣ ನಿಲ್ಲಿಸಿದಲ್ಲಿ ಹಾಗೂ ಲೆಬನಾನ್ ಮೇಲಿನ ದಾಳಿಯನ್ನು ಇಸ್ರೇಲ್ ಸ್ಥಗಿತಗೊಳಿಸಿದ ಬಳಿಕ ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ ಹೊರ್ಮುಜ್ ಜಲಸಂಧಿ ಮೂಲಕ ಹಡಗುಗಳು ಸಾಗಲು ಅನುಮತಿ ನೀಡಲಾಗುವುದು

ಸಯೀದ್ ಖತೀಬ್‌ಜಾದೆ, ಉಪ ವಿದೇಶಾಂಗ ಸಚಿವ, ಇರಾನ್

ಬಾಗಲಕೋಟೆ, ದಾವಣಗೆರೆ: ಶೇ 68 ದಾಟಿದ ಮತದಾನ

2 ಕ್ಷೇತ್ರ, ಮೇ 4ಕ್ಕೆ ಫಲಿತಾಂಶ

ಪ್ರಜಾವಾಣಿ ವಾರ್ತೆ

ದಾವಣಗೆರೆ/ಬಾಗಲಕೋಟೆ: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಗುರುವಾರ ಉಪ ಚುನಾವಣೆಯ ಮತದಾನ ಪ್ರಕ್ರಿಯೆ ಶಾಂತಿಯುತವಾಗಿ ನಡೆಯಿತು.

ಪ್ರಾಥಮಿಕ ಮಾಹಿತಿ ಪ್ರಕಾರ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಶೇ 68.55ರಷ್ಟು ಮತದಾನವಾಗಿದೆ. ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಶೇ 68.74ರಷ್ಟು ಮತದಾನವಾಗಿದೆ. ಮೇ 4ರಂದು ಮತ ಎಣಿಕೆ ನಡೆಯಲಿದೆ.

ದಾವಣಗೆರೆ ವರದಿ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಬೆಳಿಗ್ಗೆ 7ಕ್ಕೆ ಆರಂಭವಾದ ಮತದಾನ ಸಂಜೆ 6ರವರೆಗೆ ನಿರಂತರವಾಗಿ ನಡೆ ಯಿತು. ಕೊನೆಯ ಗಳಿಗೆಯವರೆಗೂ ಮತಗಟ್ಟೆಯತ್ತ ಧಾವಿಸಿದ ಮತದಾರರು ಸರದಿ ಸಾಲಿನಲ್ಲಿ ನಿಂತಿದ್ದರಿಂದ ಕೆಲವೆಡೆ ಮತದಾನ ಪ್ರಕ್ರಿಯೆ ಪೂರ್ಣಗೊಳ್ಳುವುದು ಅರ್ಧ ಗಂಟೆ ತಡವಾಯಿತು. 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಶೇ 69.04ರಷ್ಟು ಮತದಾನವಾಗಿತ್ತು.

ಕ್ಷೇತ್ರ ವ್ಯಾಪ್ತಿಯ 284 ಮತಗಟ್ಟೆಗಳಲ್ಲಿ 50 ಗ್ರಾಮೀಣ ಹಾಗೂ 234 ನಗರ ಪ್ರದೇಶದಲ್ಲಿದ್ದವು. ಗ್ರಾಮೀಣ ಪ್ರದೇಶದಲ್ಲಿ ಬೆಳಿಗ್ಗೆ ಹಾಗೂ ನಗರ ಪ್ರದೇಶದ ಮತಗಟ್ಟೆಗಳಲ್ಲಿ ಸಂಜೆ ಮತದಾನ ಪ್ರಕ್ರಿಯೆ ಚುರುಕು ಪಡೆದಿತ್ತು. ಬೆಳಿಗ್ಗೆ ಉತ್ತಮವಾಗಿ ಆರಂಭವಾದ ಮತದಾನ ಪ್ರಕ್ರಿಯೆ ಮಧ್ಯಾಹ್ನ ಕಡಿಮೆಯಾಗಿತ್ತು. ಇಳಿಸಂಜೆಯ ಹೊತ್ತಿಗೆ ಮತ್ತೆ ಚುರುಕು ಪಡೆಯಿತು.

ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾದ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಅವರ ಮೊಮ್ಮಗ ಸಮರ್ಥ್ ಶಾಮನೂರು ಹಾಗೂ ಬಿಜೆಪಿ ಅಭ್ಯರ್ಥಿಯಾಗಿ ಎಸ್‌ಟಿ ಮೋರ್ಚಾ ರಾಜ್ಯ ಘಟಕದ ಉಪಾಧ್ಯಕ್ಷ ಟಿ.ಶ್ರೀನಿವಾಸ ದಾಸಕರಿಯಪ್ಪ ಕಣದಲ್ಲಿದ್ದಾರೆ. ಆಮ್ ಆದ್ಮಿ ಪಾರ್ಟಿ (ಎಎಪಿ), ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಹಾಗೂ ಪಕ್ಷೇತರರು ಸೇರಿದಂತೆ 25 ಅಭ್ಯರ್ಥಿಗಳ ಭವಿಷ್ಯ ಮತಯಂತ್ರ ಸೇರಿದೆ.

ಬಾಗಲಕೋಟೆ ವರದಿ: 2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಾಗಲಕೋಟೆ ಕ್ಷೇತ್ರದಲ್ಲಿ ಶೇ 69.43 ಮತದಾನವಾಗಿತ್ತು. ಈ ಬಾರಿ ತುರುಸಿನ ಸ್ಪರ್ಧೆ ಮತ್ತು ತೀವ್ರ ಪ್ರಚಾರ ನಡೆಸಿದ್ದರೂ ಕಳೆದ ಬಾರಿಗೆ ಹೋಲಿಸಿದರೆ, ಈ ಬಾರಿ ಶೇ 0.7ರಷ್ಟು ಕಡಿಮೆ ಮತದಾನವಾಗಿದೆ.

13

ಅಸ್ಸಾಂನಲ್ಲಿ ಶೇ 85, ಕೇರಳದಲ್ಲಿ ಶೇ 78ರಷ್ಟು, ಪುದುಚೆರಿಯಲ್ಲಿ ಶೇ 90ರಷ್ಟು ಮತದಾನ

ನವದೆಹಲಿ: ಅಸ್ಸಾಂ, ಕೇರಳ ಮತ್ತು ಪುದುಚೆರಿ ವಿಧಾನಸಭೆಗಳಿಗೆ ಗುರುವಾರ ಬಿರುಸಿನ ಮತದಾನ ನಡೆದಿದ್ದು, ಕೆಲವೆಡೆ ಸಣ್ಣಪುಟ್ಟ ಘರ್ಷಣೆ, ಪ್ರತಿಭಟನೆಗಳನ್ನು ಹೊರತುಪಡಿಸಿದರೆ ಬಹುತೇಕ ಶಾಂತಿಯುತವಾಗಿ ನಡೆದಿದೆ.

ಅಸ್ಸಾಂನಲ್ಲಿ ಶೇ 85.38, ಕೇರಳದಲ್ಲಿ 78.12, ಪುದುಚೆರಿಯಲ್ಲಿ ಶೇ 89.83ರಷ್ಟು ಮತದಾನ ದಾಖಲಾಗಿದೆ.

ಅಸ್ಸಾಂನ 126, ಕೇರಳದ 140 ಮತ್ತು ಪುದುಚೆರಿಯ 30 ಕ್ಷೇತ್ರಗಳಿಗೆ ಮತದಾನ ನಡೆಯಿತು. ಬೆಳಿಗ್ಗೆಯಿಂದಲೇ ಮತದಾರರು ಮತಗಟ್ಟೆಗಳ ಬಳಿ ಬಂದು ಮತಚಲಾಯಿಸಿದರು. ಮಧ್ಯಾಹ್ನ ಬಿಸಿಲನ್ನೂ ಲೆಕ್ಕಿಸದೆ ಸಾಲಿನಲ್ಲಿ ನಿಂತು ಮತದಾನ ಮಾಡಿದರು. ಮತಗಟ್ಟೆಗಳ ಬಳಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿತ್ತು.

ಬೆಳಿಗ್ಗೆ 7 ಗಂಟೆಗೆ ಆರಂಭವಾದ ಮತದಾನ ಸಂಜೆ 6 ಗಂಟೆಯವರೆಗೆ ನಡೆಯಿತು. ಮತ ಎಣಿಕೆ ಮೇ 4ರಂದು ನಡೆಯಲಿದೆ.

ಸುದ್ದಿ 9

ಶಬರಿಮಲೆ: ಮಹಿಳೆಯರ ನಿಷೇಧಕ್ಕೆ ಬೆಂಬಲ

‘ಸುಪ್ರೀಂ’ನಲ್ಲಿ ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ಕೇರಳದ ಶಬರಿಮಲೆ ಅಯ್ಯಪ್ಪ ಸ್ವಾಮಿ ದೇಗುಲಕ್ಕೆ ಋತುಚಕ್ರದ ವಯಸ್ಸಿನ ಮಹಿಳೆಯರ ಪ್ರವೇಶದ ಮೇಲಿನ ನಿರ್ಬಂಧವನ್ನು ಗುರುವಾರ ಬೆಂಬಲಿಸಿದ ಕೇಂದ್ರ ಸರ್ಕಾರ, 2018ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪು ಪುರುಷರು ಶ್ರೇಷ್ಠರು ಮತ್ತು ಮಹಿಳೆಯರು ಕೆಳಮಟ್ಟದಲ್ಲಿ ದ್ದಾರೆ ಎಂಬ ಭಾವನೆಯನ್ನು ಆಧರಿಸಿದೆ ಎಂದು ತಿಳಿಸಿದೆ.

ಶಬರಿಮಲೆ ದೇವಸ್ಥಾನ ಸೇರಿದಂತೆ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯ ಮತ್ತು ವಿವಿಧ ಧರ್ಮಗಳ ಜನರ ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿ ಕುರಿತು ಸಲ್ಲಿಕೆ-ಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ಮುಂದೆ ಸರ್ಕಾರ ಈ ಹೇಳಿಕೆ ನೀಡಿದೆ.

ಕೇಂದ್ರದ ಪರ ವಾದಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಈ ಕುರಿತು ಪೀಠಕ್ಕೆ ಲಿಖಿತ ಹೇಳಿಕೆ ಸಲ್ಲಿಸಿದರು. ಅಲ್ಲದೆ, ಕೆಲ ದೇವಾಲಯ-ಗಳಲ್ಲಿ ಪುರುಷರಿಗೆ ಪ್ರವೇಶ ನಿರಾಕರಣೆ ಇರುವು ದರ ಮಾಹಿತಿಯನ್ನೂ ತಿಳಿಸಿದರು.

ಕೇರಳದ ಕೊಟ್ಟಂಕುಳಂಕರದ ಶ್ರೀ ಭಗವತಿ ಕ್ಷೇತ್ರಲ್ಲಿನ ಕೆಲ ನಂಬಿಕೆ ಆಚರಣೆಗಳ ಬಗ್ಗೆ ಅವರು ಈ ವೇಳೆ ವಿವರಿಸಿದರು. ‘ಈ ದೇಗುಲದಲ್ಲಿ ಪುರುಷರು ಮಹಿಳೆಯರಂತೆ ವೇಷ ಭೂಷಣ ತೊಡಬೇಕು ಎಂಬುದನ್ನು ನಾನು ಓದಿದ್ದೇನೆ. ಈ ದೇಗುಲ ಪ್ರವೇಶಕ್ಕೂ ಮುನ್ನ ಪುರುಷರು ಬ್ಯೂಟಿ ಪಾರ್ಲರ್‌ಗೆ ಹೋಗುತ್ತಾರೆ, ಅಲ್ಲಿ ಕುಟುಂಬದ ಮಹಿಳಾ ಸದಸ್ಯರು ಅವರಿಗೆ ಸೀರೆ ಉಡಲು ನೆರವಾಗುತ್ತಾರೆ’ ಎಂದು ಅವರು ಉಲ್ಲೇಖಿಸಿದರು.

13

ಆಯುಷ್ಮಾನ್: ರೂಟ್ ಕೆನಾಲ್ ಚಿಕಿತ್ಸೆ ಸೇರ್ಪಡೆ

ಬೆಂಗಳೂರು: ರಾಜ್ಯದಲ್ಲಿ ಜಾರಿಯಲ್ಲಿರುವ ‘ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ–ಮುಖ್ಯಮಂತ್ರಿಯವರ ಆರೋಗ್ಯ ಕರ್ನಾಟಕ ಯೋಜನೆಯಡಿ’ ರೂಟ್ ಕೆನಾಲ್ ಚಿಕಿತ್ಸೆಯನ್ನು ಸೇರ್ಪಡೆ ಮಾಡಲಾಗಿದೆ.

ಈ ಬಗ್ಗೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ರೂಟ್ ಕೆನಾಲ್ ಚಿಕಿತ್ಸೆಯು ಹುಳುಕು ಹಲ್ಲು ಅಥವಾ ಸೋಂಕಿನಿಂದ ಹಾನಿಗೊಳಗಾದ ಹಲ್ಲನ್ನು ಉಳಿಸಲು ಬಳಸುವ ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ. ಬಾಯಿಯ ಆರೋಗ್ಯ ಸುಧಾರಣೆಗೆ ಇದು ಸಹಕಾರಿಯಾಗಿದೆ. ಅಧಿಕ ಚಿಕಿತ್ಸಾ ವೆಚ್ಚ ಮತ್ತು ಜಾಗೃತಿ ಕೊರತೆಯಿಂದಾಗಿ ಹೆಚ್ಚಿನ ಜನರು ರೂಟ್ ಕೆನಾಲ್ ಬದಲಿಗೆ, ದಂತ ತೆಗೆಯುವ ವಿಧಾನವನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಚಿಕಿತ್ಸೆಯನ್ನು ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ.

ಯೋಜನೆಯಡಿ ಮುಂಭಾಗದ ಮತ್ತು ಹಿಂಭಾಗದ ಹಲ್ಲುಗಳಿಗೆ ರೂಟ್ ಕೆನಾಲ್ ಚಿಕಿತ್ಸೆ ಒದಗಿಸಲಾಗುತ್ತದೆ. ಇವುಗಳನ್ನು ಸಂಕೀರ್ಣ ದ್ವಿತೀಯ ಕಾರ್ಯವಿಧಾನಗಳು (2ಬಿ) ಎಂದು ವರ್ಗೀಕರಿಸಲಾಗಿದೆ. ಚಿಕಿತ್ಸೆಗೆ ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಯ (ಸಿಜಿಎಚ್‌ಎಸ್) ದರಗಳನ್ನು ಅಳವಡಿಸಿಕೊಳ್ಳಲು ನಿರ್ದೇಶಿಸಲಾಗಿದೆ. ಅದರಂತೆ, ಮುಂಭಾಗದ ಹಲ್ಲುಗಳಿಗೆ ₹1,360 ಮತ್ತು ಹಿಂಭಾಗದ ಹಲ್ಲುಗಳಿಗೆ ₹2,040 ನಿಗದಿಪಡಿಸಲಾಗಿದೆ.

ಯೋಜನೆಯಡಿ ಬಿಪಿಎಲ್ ಹಾಗೂ ಎಪಿಎಲ್ ಕುಟುಂಬದ ಸದಸ್ಯರು ಪ್ರಯೋಜನ ಪಡೆಯಬಹುದಾಗಿದೆ. ಯೋಜನೆಯ ಸೌಲಭ್ಯವನ್ನು ಸರ್ಕಾರವು 50 ಸಾವಿರ ಪ್ರಕರಣಗಳಿಗೆ ಅಥವಾ 5 ಕೋಟಿ ಆರ್ಥಿಕ ವೆಚ್ಚಕ್ಕೆ ಮಿತಿಗೊಳಿಸಿದೆ.

POWERFUL ENGINE WITH 190 hp AND 400 Nm TORQUE

4MATIC WITH OFF-ROAD TECHNOLOGY PACKAGE

7 AIRBAGS, BLINDSPOT ASSIST & 360-DEGREE CAMERA

Make the smart move with STAR Agility+. Avail up to 50% lower EMIs and only pay for the distance you subscribe to drive. Effortlessly Upgrade, Retain or Return your vehicle with Guaranteed Future Value. All this, while you retain full ownership of your Star.

EMI starting from ₹46 848 | ROI starting from 6.99% | Attractive Trade-in Benefits with Welcome Program

Akshaya Motors Showrooms & Service Centers: Bengaluru - Koramangala, Mysore Road & Hosur Road - **+91 9513727171**

Mysuru - Hebbal Industrial Area - **+91 9019455055 | Hubballi** - PB Road Rayapur - **+919015089089**

Scan the QR code to connect with us on WhatsApp.

Mercedes-Benz India Pvt Ltd. (CIN: U34102PN1994PTC083160)
Accessories, colors, and fitments shown may not be part of standard specifications of models available in India. For more details, please refer to the Product Brochure applicable for Indian market. For more information on working of airbags, please refer to the detailed owner's manual available on the Mercedes-Benz India official website. '140 Years Benefits' can be availed as per the applicable terms & conditions. Final price and offers may vary based on applicable taxes, levies, and vehicle pricing at the time of invoicing. Finance is at the sole discretion of financier, Mercedes-Benz Financial Services India Pvt. Ltd. (CIN U67190TN2010FTC077890). Terms & Conditions apply on offers.

ತಕ್ಷಣವೇ ಸ್ಥಗಿತಗೊಳಿಸಲು ಆದೇಶ

ಬೆಂಗಳೂರು: ನ್ಯಾಯಾಲಯಕ್ಕೆ ನೀಡಿದ್ದ ಭರವಸೆಯನ್ನು ಉಲ್ಲಂಘಿಸಿ ಮೈಸೂರಿನ ಚಾಮುಂಡಿ ಬೆಟ್ಟದ ದೇಗುಲದ ಆವರಣದಲ್ಲಿ ಕಾಮಗಾರಿ ಮುಂದುವರಿಸಿದ್ದ ರಾಜ್ಯ ಸರ್ಕಾರದ ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, 'ಭವಿಷ್ಯದಲ್ಲಿ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದರೆ ಅದನ್ನು ನ್ಯಾಯಾಂಗ ನಿಂದನೆ' ಎಂದು ಗಂಭೀರವಾಗಿ ಪರಿಗಣಿಸುವುದಾಗಿ ಎಚ್ಚರಿಕೆ ನೀಡಿದೆ.

'ಚಾಮುಂಡಿ ಬೆಟ್ಟದ ಮೂಲ ಸ್ವರೂಪಕ್ಕೆ ಧಕ್ಕೆಯಾಗುವಂತಹ ಕಾಮಗಾರಿ ನಡೆಸಲಾಗುತ್ತಿದೆ' ಎಂದು ಆಕ್ಷೇಪಿಸಿ ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ, ವಿವಾದಿತ ಸ್ಥಳದಲ್ಲಿ ನಡೆಯುತ್ತಿರುವ ಎಲ್ಲ ಬಗೆಯ ನಿರ್ಮಾಣ ಕಾಮಗಾರಿ ಚಟುವಟಿಕೆಯನ್ನು ತಕ್ಷಣವೇ ಸ್ಥಗಿತಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಖಡಕ್ ತಾಕೀತು ಮಾಡಿ ಮಧ್ಯಂತರ ಆದೇಶ ಹೊರಡಿಸಿದೆ.

ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ

ವೈದ್ಯಕೀಯ ಅಧೀಕ್ಷಕರ ಕಛೇರಿ, ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು–560008

ವಿಚಾರಣೆ ಸಂಖ್ಯೆ : ಕಾರಾವಿಆ/ಇಂನಗರ/ಕಿಚನ್/24/2025-26 ದಿನಾಂಕ: 31.03.2026

ಟೆಂಡರ್ ಪ್ರಕಟಣೆ

ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ ಇಲ್ಲಿಗೆ ಡಯಟ್ (DIET) ಪದಾರ್ಥ ಬ್ರೆಡ್ ಹಾಗೂ ಮೊಟ್ಟೆಗಳನ್ನು ಒಳಗೊಂಡಂತೆ ಸರಬರಾಜು ಮಾಡಲು ಒಂದು ವರ್ಷದ ಅವಧಿಗಾಗಿ (ಜೂನ್ 2026 ರಿಂದ ಮೇ 2027 ರವರೆಗೆ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು/ಸ್ವೀಕರಿಸಲು ಕೊನೆಯ ದಿನಾಂಕ ಹಾಗೂ **ಸಮಯ: 05.05.2026, ಸಂಜೆ 4.00 ಗಂಟೆಯವರೆಗೆ,** (2) ಟೆಂಡರ್ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ **ಸಮಯ: 11.05.2026 ಬೆಳಿಗ್ಗೆ 09.00 ಗಂಟೆಗೆ.** (3) ಟೆಂಡರ್ ತೆರೆಯುವ ವಿಳಾಸ: ವೈದ್ಯಕೀಯ ಅಧೀಕ್ಷಕರ ಕಛೇರಿ, ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು–560008. (4) ಸ್ಯಾಂಪಲ್‌ಗಳನ್ನು ಸಲ್ಲಿಸಲು ನಿಗದಿತ **ದಿನಾಂಕ: 08.05.2026 ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಮೂಲಕ ಮಾತ್ರ ಸಲ್ಲಿಸಬೇಕು. ಸಹಾಯವಾಣಿ: 080–25501216/227. ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಿ.

ಸಹಿ/–
ವೈದ್ಯಕೀಯ ಅಧೀಕ್ಷಕರು,
ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ,
ಬೆಂಗಳೂರು–08

ವಾಸಾಸಂಇ/ವಾ.ಪ್ರ/120/ಶಿರಡಿ ಸಾಯಿ/2026-27

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ

ಸಾಮಾಜಿಕ ಅರಣ್ಯ ಉಪವಿಭಾಗ, ಮಧುಗಿರಿ

ಸಂಖ್ಯೆ: ಸಅಸಂ/ಸಾಅಉವಿ/ಮಧು/26–27ಕಾಮಗಾರಿಟೆಂಡರ್/ವಿವ-07/2025–26 ದಿನಾಂಕ: 31/03/2026

ಹೊರಗುತ್ತಿಗೆ ನೌಕರರನ್ನು ಒದಗಿಸಲು ಇ-ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ, 2026–27ನೇ ಸಾಲಿಗೆ ಮಧುಗಿರಿ ಸಾಮಾಜಿಕ ಅರಣ್ಯ ಉಪ ವಿಭಾಗದ ತುಮಕೂರು, ಕೊರಟಗೆರೆ, ಮಧುಗಿರಿ, ಪಾವಗಡ ಮತ್ತು ಶಿರಾ ವಲಯ ಕಛೇರಿ/ಉಪ ವಿಭಾಗ /ವಿಭಾಗ ಕಛೇರಿಗಳಿಗೆ ಬೇಕಾದ ಡಾಟಾ ಎಂಟ್ರಿ ಆಪರೇಟರ್ ಮತ್ತು ವಾಹನ ಚಾಲಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಸಲು ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸುವ ಸಂಸ್ಥೆಗಳಿಂದ KPPP ಪೋರ್ಟಲ್ ಮುಖಾಂತರ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸೇವೆಗಳನ್ನು ಒದಗಿಸುವ ಒಟ್ಟು ಅಂದಾಜು ಮೊತ್ತ **ರೂ.38,87,100/–** ಗಳಿಗೆ ಇ.ಎಂ.ಡಿ ಮೊತ್ತ **ರೂ.78,080/–**ಗಳನ್ನು ಪಾವತಿಸಿ ಟೆಂಡರ್‌ನಲ್ಲಿ ಭಾಗವಹಿಸಬೇಕು. ಟೆಂಡರ್ ಸ್ವೀಕರಿಸುವ **ದಿನಾಂಕ:22/04/2026 ರಂದು ಮಧ್ಯಾಹ್ನ 3.00 ಗಂಟೆಯವರೆಗೆ,** ತಾಂತ್ರಿಕ ಬಿಡ್ಡು **ದಿನಾಂಕ:23/04/2026ರಂದು ಮಧ್ಯಾಹ್ನ 3.00 ಗಂಟೆಗೆ** ಹಾಗೂ ಆರ್ಥಿಕ ಬಿಡ್ಡು **ದಿನಾಂಕ:24/04/2026 ರಂದು ಮಧ್ಯಾಹ್ನ 4.00 ಗಂಟೆಗೆ,** ಆ ಸಮಯದಲ್ಲಿ ಹಾಜರಿರುವ ಟೆಂಡರ್‌ದಾರರ ಸಮಕ್ಷಮ ತೆರೆಯಲಾಗುವುದು. ಸದರಿ ದಿನದಂದು ಯಾರು ಭಾಗವಹಿಸದಿದ್ದಲ್ಲಿ ಟೆಂಡರ್ ಸ್ವೀಕರಿಸುವ Extension ಅವಧಿಯನ್ನು **ದಿನಾಂಕ:27/04/2026 ರಂದು ಮಧ್ಯಾಹ್ನ 3.00 ಗಂಟೆಯವರೆಗೆ** ನಿಗಧಿಪಡಿಸಿದೆ. ಕಾಮಗಾರಿ ವಿವರ, ಇ.ಎಂ.ಡಿ ಹಾಗೂ ಇನ್ನಿತರ ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ. ವೆಬ್‌ಸೈಟ್ ವಿಳಾಸ: **https://kppp.karnataka.gov.in**

ಸಹಿ/–
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪವಿಭಾಗ,
ಮಧುಗಿರಿ

DIPR/TUM/RO-08/26-27/Oysters

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 07/ಎಸ್‌ಬಿಸಿ/26 ದಿನಾಂಕ : 30–03–2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕಾಮಗಾರಿಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಬೆಂಗಳೂರು (SBC) – ಜೋಲಾರಪೇಟ್ಟೈ (JTJ) ಸೆಕ್ಷನ್ : **ಸಬ್‌ವರ್ಕ್–1 :** ಬೆಂಗಳೂರು (SBC) – ಜೋಲಾರಪೇಟ್ಟೈ (JTJ) ಸೆಕ್ಷನ್ : ಕಿ.ಮೀ.325/800–900ನಲ್ಲಿ ಅಪ್ರೋಚ್ ರಸ್ತೆಯೊಂದಿಗೆ ಏರ್ ಪುಶಿಂಗ್ ವಿಧಾನದಿಂದ 1x5.0x2.75ಮೀ ಅಳತೆಯ (ಬ್ಯಾರೆಲ್ ಉದ್ದ – 30.0ಮೀ) ಉದ್ದೇಶಿತ ಪಾದಚಾರಿ ಸಬ್‌ವೇಯ ನಿರ್ಮಾಣ. **ಸಬ್‌ವರ್ಕ್–2 :** ಬೆಂಗಳೂರು (SBC) – ಜೋಲಾರಪೇಟ್ಟೈ (JTJ) ಸೆಕ್ಷನ್ : ವೇಗವನ್ನು ಗಂಟೆಗೆ 130ಕಿ.ಮೀ.ಗೆ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಸುರಕ್ಷತಾ ಫೆನ್ಸಿಂಗ್‌ನೊಂದಿಗೆ ಪಾದಚಾರಿ ಸಬ್‌ವೇಗಳ ನಿರ್ಮಾಣ (ಒಟ್ಟು 14 ಸಬ್‌ವೇಗಳು) ಕಾಮಗಾರಿಗೆ ಸಂಬಂಧಿಸಿದಂತೆ ಕಿ.ಮೀ.321/200–300ನಲ್ಲಿ ಅಪ್ರೋಚ್ ರಸ್ತೆಯೊಂದಿಗೆ ಏರ್ ಪುಶಿಂಗ್ ವಿಧಾನದಿಂದ 1x5.0x4.0ಮೀ ಅಳತೆಯ (ಬ್ಯಾರೆಲ್ ಉದ್ದ – 30.0ಮೀ) ಉದ್ದೇಶಿತ ಪಾದಚಾರಿ ಸಬ್‌ವೇಯ ನಿರ್ಮಾಣ. ನಿರ್ವಹಣಾ ಅವಧಿಯು 4 ವರ್ಷಗಳು.	ರೂ. 8,78,21,956/-
2	ಬೆಂಗಳೂರು (SBC) – ಜೋಲಾರಪೇಟ್ಟೈ (JTJ) ಸೆಕ್ಷನ್ : **ಸಬ್‌ವರ್ಕ್–1 :** ಬೆಂಗಳೂರು (SBC) – ಜೋಲಾರಪೇಟ್ಟೈ (JTJ) ಸೆಕ್ಷನ್ : ಕಿ.ಮೀ.292/000–100ನಲ್ಲಿ ಅಪ್ರೋಚ್ ರಸ್ತೆಯೊಂದಿಗೆ ಏರ್ ಪುಶಿಂಗ್ ವಿಧಾನದಿಂದ 1x5.0x4.50ಮೀ ಅಳತೆಯ (ಬ್ಯಾರೆಲ್ ಉದ್ದ – 30.0ಮೀ) ಉದ್ದೇಶಿತ ಪಾದಚಾರಿ ಸಬ್‌ವೇಯ ನಿರ್ಮಾಣ. **ಸಬ್‌ವರ್ಕ್–2 :** ಬೆಂಗಳೂರು (SBC) – ಜೋಲಾರಪೇಟ್ಟೈ (JTJ) ಸೆಕ್ಷನ್ : ವೇಗವನ್ನು ಗಂಟೆಗೆ 130ಕಿ.ಮೀ.ಗೆ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಸುರಕ್ಷತಾ ಫೆನ್ಸಿಂಗ್‌ನೊಂದಿಗೆ ಪಾದಚಾರಿ ಸಬ್‌ವೇಗಳ ನಿರ್ಮಾಣ (ಒಟ್ಟು 14 ಸಬ್‌ವೇಗಳು) ಕಾಮಗಾರಿಗೆ ಸಂಬಂಧಿಸಿದಂತೆ ಕಿ.ಮೀ.291/000–100ನಲ್ಲಿ ಅಪ್ರೋಚ್ ರಸ್ತೆಯೊಂದಿಗೆ ಏರ್ ಪುಶಿಂಗ್ ವಿಧಾನದಿಂದ 1x5.0x4.0ಮೀ ಅಳತೆಯ (ಬ್ಯಾರೆಲ್ ಉದ್ದ – 30.0ಮೀ) ಉದ್ದೇಶಿತ ಪಾದಚಾರಿ ಸಬ್‌ವೇಯ ನಿರ್ಮಾಣ. ನಿರ್ವಹಣಾ ಅವಧಿಯು 4 ವರ್ಷಗಳು.	ರೂ. 8,14,97,277/-
3	ಬೆಂಗಳೂರು (SBC) – ಜೋಲಾರಪೇಟ್ಟೈ (JTJ) ಸೆಕ್ಷನ್ : **ಸಬ್‌ವರ್ಕ್–1 :** ಸಹಾಯಕ ವಿಭಾಗೀಯ ಇಂಜಿನಿಯರ್ / ಬಂಗಾರಪೇಟೆ (BWT) ಸೆಕ್ಷನ್‌ನ ಗುಡುಪಲ್ಲಿ (GDP) – ಬಿಸಾನತ್ತಂ (BSM) ನಿಲ್ದಾಣಗಳ ನಡುವೆ ಕಿ.ಮೀ.263/000–100ನಲ್ಲಿನ ಎಲ್ ಸಿ ಸಂ.106 ಬದಲಿಗೆ ರೋಲಿಂಗ್ / ಲಾಂಚಿಂಗ್ ವಿಧಾನದಿಂದ 1x5.00ಮೀx3.0ಮೀ ಅಳತೆಯ (ಬ್ಯಾರೆಲ್ ಉದ್ದ 24.48 ಮೀಟರ್‌ಗಳು) ಆರ್‌ಸಿಸಿ ಬಾಕ್ಸ್‌ನೊಂದಿಗೆ ರಸ್ತೆ ಕೆಳಸೇತುವೆಯ ನಿರ್ಮಾಣ. **ಸಬ್‌ವರ್ಕ್–2 :** ಸಹಾಯಕ ವಿಭಾಗೀಯ ಇಂಜಿನಿಯರ್ / ಬಂಗಾರಪೇಟೆ (BWT) ಸೆಕ್ಷನ್‌ನ ಗುಡುಪಲ್ಲಿ (GDP) – ಬಿಸಾನತ್ತಂ (BSM) ನಿಲ್ದಾಣಗಳ ನಡುವೆ ಕಿ.ಮೀ.263/700–800ನಲ್ಲಿನ ಎಲ್ ಸಿ ಸಂ.107 ಬದಲಿಗೆ ರೋಲಿಂಗ್ / ಲಾಂಚಿಂಗ್ ವಿಧಾನದಿಂದ 1x5.00ಮೀx4.50ಮೀ ಅಳತೆಯ (ಬ್ಯಾರೆಲ್ ಉದ್ದ 24.48 ಮೀಟರ್‌ಗಳು) ಆರ್‌ಸಿಸಿ ಬಾಕ್ಸ್‌ನೊಂದಿಗೆ ರಸ್ತೆ ಕೆಳಸೇತುವೆಯ ನಿರ್ಮಾಣ.	ರೂ. 9,61,46,866/-
4	**ಸಬ್‌ವರ್ಕ್–1 :** ಕೆಎಸ್‌ಆರ್ ಬೆಂಗಳೂರು : ಎಂಜಿ ಕಾಲೋನಿ, ಬೆಂಗಳೂರು ಇಲ್ಲಿ 455 (ಎ–ಎಕ್ಸ್), 456 (ಎ–ಎಕ್ಸ್), 457 (ಎ–ಎಕ್ಸ್), 463 (ಎ–ಟಿ), 493 (ಎ–ಪಿ), 491 (ಎ–ಎಲ್), 492 (ಎ–ಎಲ್) ನಲ್ಲಿ ಬಾಲ್ಕನಿ ಗ್ರಿಲ್‌ಗಳನ್ನು ಒದಗಿಸುವುದು ಮತ್ತು ಅಳವಡಿಸುವುದು. (ಒಟ್ಟು 164 ಯೂನಿಟ್‌ಗಳು). **ಸಬ್‌ವರ್ಕ್–2 :** ಬೆಂಗಳೂರು (SBC) – ಮೈಸೂರು (MYS) ಸೆಕ್ಷನ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ (MYA) ಉಪವಿಭಾಗದ ಮದ್ದೂರು (MAD) – ಹನಕೆರೆ (HNK) ನಿಲ್ದಾಣಗಳ ನಡುವೆ ಎಲ್‌ಸಿ ಸಂ.62ರಲ್ಲಿ ಅನುಮೋದಿತ ಡ್ರಾಯಿಂಗ್‌ಗೆ ಅನುಸಾರವಾಗಿ ವಿದ್ಯುತ್ ಭಾಗವನ್ನು ಒಳಗೊಂಡಂತೆ 1 ಸಂಖ್ಯೆಯ ಗ್ಯಾಂಗ್ ಟೂಲ್ ಕಮ್ ರೆಸ್ಟ್ ರೂಮ್ (ಫ್ರೇಮ್ಡ್ ಸ್ಟ್ರಕ್ಚರ್) ನಿರ್ಮಾಣ. ನಿರ್ವಹಣಾ ಅವಧಿಯು 3 ವರ್ಷಗಳು. ಸಂಯೋಜಿತ ಟೆಂಡರ್.	ರೂ. 1,06,31,277/-
5	ಬೆಂಗಳೂರು (SBC) – ಮೈಸೂರು (MYS) ಸೆಕ್ಷನ್ : 1. ಬೆಂಗಳೂರು (SBC) – ಮೈಸೂರು (MYS) : 62/000 – 107/700 ಅಪ್ ವರೆಗೆ ಮತ್ತು 81/750 – 85/250 ಡೌನ್ ಲೈನ್ ವರೆಗೆ ಟಿಬಿಆರ್ – 43.20 ಕಿ.ಮೀ.ಗಳು. 2. ಮೈಸೂರು (MYS) ಸೆಕ್ಷನ್ : ಟಿಬಿಆರ್ – 0.8 ಕಿ.ಮೀ (ಲೂಪ್ ಲೈನ್‌ಗಳು) ಮತ್ತು 16 ಪಾಯಿಂಟ್‌ಗಳು ಮತ್ತು ಕ್ರಾಸಿಂಗ್‌ಗಳಿಗೆ ಟಿಬಿಆರ್ ಕಾಮಗಾರಿಗೆ ಸಂಬಂಧಿಸಿದಂತೆ ಎಲಿಯೂರು (Y) ಡಿಪೋನಲ್ಲಿ ಲೋಡಿಂಗ್ ಒಳಗೊಂಡಂತೆ ಮೆಷೀನ್ ಕ್ರಷ್ಡ್ ಟ್ರ್ಯಾಕ್ ಬಲ್ಲಾಸ್ಟ್‌ನ ತಯಾರಿಕೆ, ಸರಬರಾಜು ಮತ್ತು ಶೇಖರಣೆ (52850 ಸಿಯುಎಂ)	ರೂ. 4,60,22,837/-
6	**ಸಬ್‌ವರ್ಕ್–1 :** ಚಿಕ್ಕಬಾಣಾವರ (BAW) – ಹಾಸನ (HAS) ಸೆಕ್ಷನ್ : ಹಾಲಿ ಇರುವ 52/60 ಕೆಜಿ ಸಾಮಾನ್ಯ ಎಸ್‌ಇಜೆ ಗಳನ್ನು ಥಿಕ್ ವೆಬ್ ಎಸ್‌ಇಜೆ ಗೆ ನವೀಕರಿಸುವುದು – 40 ಸಂಖ್ಯೆಗಳು. **ಸಬ್‌ವರ್ಕ್–2 :** ಚಿಕ್ಕಬಾಣಾವರ (BAW) – ಹಾಸನ (HAS) ಸೆಕ್ಷನ್ : ಎಸ್‌ಎಸ್‌ಇ/ಪಿವೇ/ಚನ್ನರಾಯಪಟ್ಟಣ (CNPA) ಸೆಕ್ಷನ್‌ನ ಹಿರೀಸಾವೆ ಮತ್ತು ಚನ್ನರಾಯಪಟ್ಟಣ (CNPA) ಯಾರ್ಡ್‌ಗಳಲ್ಲಿ ಹಾಲಿ ಇರುವ 12ರಲ್ಲಿ 1ರ 6 ಸಂಖ್ಯೆಗಳು ಮತ್ತು ಟಿಡಬ್ಲ್ಯುಎಸ್ ಮತ್ತು ಡಬ್ಲ್ಯುಸಿಎಂಎಸ್ ನೊಂದಿಗೆ 16 ಪಾಯಿಂಟ್‌ಗಳಲ್ಲಿ 1ರ 1 ಸಂಖ್ಯೆಯ ಟಿಟಿಆರ್ (ಟಿಡಬ್ಲ್ಯುಎಸ್ + ಡಬ್ಲ್ಯುಸಿಎಂಎಸ್) ಒಟ್ಟು 7 ಸೆಟ್‌ಗಳು. **ಸಬ್‌ವರ್ಕ್–3 :** ಚಿಕ್ಕಬಾಣಾವರ (BAW) – ಹಾಸನ (HAS) ಸೆಕ್ಷನ್ : ಎಸ್‌ಎಸ್‌ಇ/ಪಿವೇ/ಕುಣಿಗಲ್ (KIGL) ಸೆಕ್ಷನ್‌ನ ನೆಲಮಂಗಲ (NMGA) ಮತ್ತು ಸೋಲೂರು (SOLR) ಯಾರ್ಡ್‌ಗಳಲ್ಲಿ ಹಾಲಿ ಇರುವ 12ರಲ್ಲಿ 1 ಕರ್ವ್ಡ್ ಸ್ವಿಚ್ (5 ಸಂಖ್ಯೆಗಳು) ಮತ್ತು ಟಿಡಬ್ಲ್ಯುಎಸ್ ನೊಂದಿಗೆ 16 ರಲ್ಲಿ 1 ಕರ್ವ್ಡ್ ಸ್ವಿಚ್ (2 ಸಂಖ್ಯೆಗಳು), ವೆಲ್ಡೆಬಲ್ ಸಿಎಂಎಸ್ ಕ್ಸಿಂಗ್‌ನ ಟಿಟಿಆರ್ ಒಟ್ಟು 7 ಸೆಟ್‌ಗಳು. **ಸಬ್‌ವರ್ಕ್–4 :** ಬೆಂಗಳೂರು (SBC) – ಸೇಲಂ (SA) ಸೆಕ್ಷನ್ : ಕಾರುವಳ್ಳಿ (KVLR) ನಿಲ್ದಾಣದಲ್ಲಿ ಹೆಚ್ಚುವರಿ ಲೂಪ್ ಲೈನ್ ಕಾಮಗಾರಿಗೆ ಸಂಬಂಧಿಸಿದಂತೆ ಟ್ರ್ಯಾಕ್ ಕಾಮಗಾರಿ.	ರೂ. 1,00,50,314/-
7	ವಿಭಾಗೀಯ ಇಂಜಿನಿಯರ್ / ದಕ್ಷಿಣ / ಬೆಂಗಳೂರು (SBC) ಸೆಕ್ಷನ್ : ಕಾರುವಳ್ಳಿ (KVLR) : ಕಾರುವಳ್ಳಿ (KVLR) ನಿಲ್ದಾಣದಲ್ಲಿ ಹಳೆಯ ಪ್ಲಾಟ್‌ಫಾರಂನ ಅಗಲೀಕರಣ, 1 ಸಂಖ್ಯೆಯ ಹೆಚ್ಚುವರಿ ಲೂಪ್ ಲೈನ್, ಅಪ್ರೋಚ್ ರಸ್ತೆ (500 x 6ಮೀ), ಪ್ಲಾಟ್‌ಫಾರಂಗಾಗಿ ರೀಟೇನಿಂಗ್ ಗೋಡೆ ಮತ್ತು ಎಂಬ್ಯಾಂಕ್‌ಮೆಂಟ್‌ಗಾಗಿ ಟೋ ವಾಲ್, ಭೂಮಿ ಕಾಮಗಾರಿ, 2 ಸಂಖ್ಯೆಯ ಬಾಕ್ಸ್ ಕಲ್ವರ್ಟ್‌ನ ವಿಸ್ತರಣೆ (ಸೇತುವೆ ಸಂ.43,44), ಹಳೆಯ ನಿಲ್ದಾಣ ಕಟ್ಟಡ, ಕೇಬಲ್ ಹಟ್ ರೂಮ್, ದಿವ್ಯಾಂಗರ ಶೌಚಾಲಯ, ಸಾರ್ವಜನಿಕ ಶೌಚಾಲಯ ಮತ್ತು ಎಸ್&ಟಿ ಕಟ್ಟಡವನ್ನು ಕೆಡವುವುದು (ಕಿ.ಮೀ.22/800–21/800) (ಸಂಯೋಜಿತ ಕಾಮಗಾರಿ). ನಿರ್ವಹಣಾ ಅವಧಿಯು 12 ತಿಂಗಳು.	ರೂ. 3,64,44,295/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 24–04–2026 ರಂದು 15:00 ಗಂಟೆಯವರೆಗೆ.

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/15/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026–27 **ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ, ಬೆಂಗಳೂರು**

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್–ಇನ್–ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್‌ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಬುಕ್ ಮಾಡಬಹುದು ಮತ್ತು ಇನ್ನೂ ಅನೇಕ ಸೇವೆಗಳನ್ನು ತಮ್ಮ ಬೆರಳ ತುದಿಯಲ್ಲಿ ಪಡೆಯಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಯನ್ನು ಬಳಸಿ ಮತ್ತು ಶೇ.3ವರೆಗೆ ರಿಯಾಯಿತಿಯನ್ನು ಪಡೆದು ಆನಂದಿಸಿ.

South Western Railway-SWR | SWRRLY | @SWRAILWAYHQ | @sw_railways

ಜಿಎಸ್‌ಐ ತಜ್ಞರ ತಂಡದ ವಿಜಯ್ ವಿಷ್ಣುಪಂತ್ ಮುಗಲ್ ಅವರಿಗೆ ನಾಗರಿಕರ ಸಂಘಗಳ ಪ್ರತನಿಧಿಗಳು ಮನವಿ ಸಲ್ಲಿಸಿದರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–383/2025–26/92/2026–27 ದಿನಾಂಕ: 09.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಟಿ.ಆರ್. ಶ್ರೀನಿವಾಸ ಮತ್ತು ಶ್ರೀ ಎ.ಹೆಚ್.ಗೋವಿಂದರಾಜು ರವರುಗಳು ತಿಪ್ಪೇನಹಳ್ಳಿ ಗ್ರಾಮ, ನಾಗಸಂದ್ರ ಅಂಚೆ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು–560 073	ಬೆಂಗಳೂರು ಉತ್ತರ	ದಾಸನಪುರ	ತಮ್ಮೇನಹಳ್ಳಿ	1/2	3ಎ–10 ಗುಂ	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಮತ್ತು ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಸುರಂಗ ರಸ್ತೆ: ಜನರ ಮನವಿ

ಪ್ರಜಾವಾಣಿ ವಾರ್ತೆ

'ಅಧ್ಯಯನಕ್ಕೆ ಸಮಯ ಬೇಕು'

'ನಾವು ಭೂವಿಜ್ಞಾನಿಗಳು, ಸಿವಿಲ್ ಎಂಜಿನಿಯರ್‌ಗಳಲ್ಲ. ಪಾರಂಪರಿಕ ತಾಣವನ್ನು ಉಳಿಸುವುದು ನಮ್ಮ ಉದ್ದೇಶ. ನಮ್ಮಿಂದ ಶೀಘ್ರ ವರದಿಯನ್ನು ನಿರೀಕ್ಷಿಸಬಾರದು. ವೈಜ್ಞಾನಿಕ ಅಧ್ಯಯನ ಕೈಗೊಳ್ಳಲು ನಮಗೆ ಸಮಯ ಬೇಕು' ಎಂದು ತಜ್ಞರ ತಂಡದ ವಿಜಯ್ ವಿಷ್ಣುಪಂತ್ ಮುಗಲ್ ಹೇಳಿದರು.

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ಹಾಗೂ ಅದರ ಕೆಳಗೆ ನಿರ್ಮಿಸಲು ಉದ್ದೇಶಿಸಿರುವ ಸುರಂಗ ರಸ್ತೆ ಯೋಜನೆಯಿಂದ ಜಿಯೊ–ಪಾರಂಪರಿಕ ತಾಣದ ನಿಯಮಗಳು ಉಲ್ಲಂಘನೆಯಾಗುವ ಜತೆಗೆ, ನಗರದಲ್ಲಿ ಅಂತರ್ಜಲ ಮಟ್ಟ ಕುಸಿತವಾಗಲಿದೆ ಎಂದು ನಾಗರಿಕರ ಸಂಘಗಳು ಹಾಗೂ ಪರಿಸರ ಕಾರ್ಯಕರ್ತರು ಆತಂಕ ವ್ಯಕ್ತಪಡಿಸಿದರು.

ಉತ್ತರ–ದಕ್ಷಿಣ ಸುರಂಗ ರಸ್ತೆ ಯೋಜನೆ ಬಗ್ಗೆ ಭಾರತೀಯ ಭೂವಿಜ್ಞಾನ ಸಮೀಕ್ಷೆಯ (ಜಿಎಸ್‌ಐ) ಹಿರಿಯ ಅಧಿಕಾರಿಗಳನ್ನು ಗುರುವಾರ ಭೇಟಿ ಮಾಡಿ ಈ ಬಗ್ಗೆ ಮನವಿ ಸಲ್ಲಿಸಿದರು.

ಸುರಂಗ ರಸ್ತೆಯಿಂದ ಲಾಲ್‌ಬಾಗ್‌ನ ಐತಿಹಾಸಿಕ ಬಂಡೆಯ ಮೇಲಾಗುವ ಪರಿಣಾಮವನ್ನು ಜಿಎಸ್‌ಐನ ಉನ್ನತ ಮಟ್ಟದ ತಜ್ಞರ ಸಮಿತಿ ಪರಿಶೀಲನೆ ನಡೆಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

'ಲಾಲ್‌ಬಾಗ್‌ನೊಳಗೆ 60 ಮೀಟರ್ ಕೆಳಗೆ ಸುರಂಗ ಕೊರೆಯಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಇಲ್ಲಿನ ಬಂಡೆ ಪಾರಂಪರಿಕ ತಾಣವಾಗಿದ್ದು, 1975ರಲ್ಲಿ ಜಿಎಸ್‌ಐ ಅಧಿಸೂಚನೆಯಾಗಿದೆ. ಪಾರಂಪರಿಕ ತಾಣಗಳ ಕಾಯ್ದೆ ಪ್ರಕಾರ ಇದನ್ನು ರಕ್ಷಿಸಬೇಕು. ಈ ಪ್ರದೇಶವನ್ನು ನಿರ್ಮಾಣರಹಿತ ವಲಯವನ್ನಾಗಿ ಘೋಷಿಸಬೇಕು' ಎಂದು ನಾಗರಿಕರು ಆಗ್ರಹಿಸಿದರು.

'ಬೆಂಗಳೂರಿನಲ್ಲಿ ಹಸಿರು ಹೊದಿಕೆ ಕಡಿಮೆಯಾಗುತ್ತಿದ್ದು, ಅಂತರ್ಜಲ ಮಟ್ಟ ಕುಸಿಯುತ್ತಿದೆ. ಲಾಲ್‌ಬಾಗ್‌ನಂತಹ ಹಸಿರು ಪ್ರದೇಶವನ್ನು ನಗರ ಮೂಲಸೌಕರ್ಯಕ್ಕಾಗಿ ಉಪಯೋಗಿಸಿಕೊಂಡರೆ ಜೀವವೈವಿಧ್ಯಕ್ಕೆ ಧಕ್ಕೆಯಾಗುತ್ತದೆ' ಎಂದರು.

'ಲಾಲ್‌ಬಾಗ್ ಪ್ರದೇಶದ ಜಿಯೊ–ಪಾರಂಪರಿಕ ತಾಣಕ್ಕೆ ಸಂಬಂಧಿಸಿದ ಅತ್ಯುನ್ನತ ಚಿತ್ರಗಳು ಸೇರಿದಂತೆ ಎಲ್ಲ ಮಾಹಿತಿಗಳನ್ನು ಜಿಎಸ್‌ಐನ ಪ್ರಧಾನ ಕಚೇರಿ ಹಾಗೂ ನವದೆಹಲಿಯಲ್ಲಿರುವ ಯುನೆಸ್ಕೊ ತಂಡಕ್ಕೆ ನೀಡಲಾಗುವುದು' ಎಂದು ಅಧಿಕಾರಿಗಳು ತಿಳಿಸಿದರು.

ಹೈದರಾಬಾದ್, ಚೆನ್ನೈ ಮತ್ತು ಬೆಂಗಳೂರಿನ ತಜ್ಞರ ತಂಡವು ಮಾರ್ಚ್ 31ರಿಂದ ಏಪ್ರಿಲ್ 2ರವರೆಗೆ ಪರಿಶೀಲನೆ ನಡೆಸಿತ್ತು. ಕೆಎಂಎಲ್ ಕಡತ ಸಿದ್ಧವಾಗುವುದಕ್ಕೆ ಅಧಿಕಾರಿಗಳು ಕಾಯುತ್ತಿದ್ದು, ಬೆಂಗಳೂರು ಮೆಟ್ರೊ ರೈಲ್ ಕಾರ್ಪೊರೇಷನ್ (ಬಿಎಂಆರ್‌ಸಿಎಲ್) ಹಾಗೂ ಬಿ-ಸ್ಮೈಲ್‌ನಿಂದ ಸಂಪೂರ್ಣ ಮೌಲ್ಯಮಾಪನದ ವರದಿಯನ್ನು ನಿರೀಕ್ಷಿಸುತ್ತಿದ್ದಾರೆ.

ಸಿಟಿಜನ್ 4 ಸಿಟಿಜನ್ಸ್, ಎನ್ವಿರಾನ್‌ಮೆಂಟಲ್ ಇಂಪ್ಯಾಕ್ಟ್ ಗ್ರೂಪ್, ಬೆಂಗಳೂರು ಎನ್ವಿರಾನ್‌ಮೆಂಟ್ ಟ್ರಸ್ಟ್, ಪರಿಸರಕ್ಕಾಗಿ ನಾವು, ಹಸಿರು ರಥ, ಬಸವನಗುಡಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಲಾಲ್‌ಬಾಗ್ ವಾಕರ್ಸ್, ಬೆಂಗಳೂರು ಟೌನ್ ಹಾಲ್‌ನ ಪ್ರತಿನಿಧಿಗಳು ಲಾಲ್‌ಬಾಗ್ ಉಳಿಸುವಂತೆ ಮನವಿ ಸಲ್ಲಿಸಿದರು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/177/2026
ದಿನಾಂಕ : 16–03–2026ಗೆ ತಿದ್ದುಪಡಿ

ಕೆಲಸದ ಹೆಸರು	ಅಂದಾಜು ಮೌಲ್ಯ
ಶಿವಮೊಗ್ಗ ಟೌನ್ (SMET) – ಶೃಂಗೇರಿ ಮಂಗಳೂರು (MAJN) (332 ಕಿಮೀ), ತಾಳಗುಪ್ಪ (TLGP) – ಹೊನ್ನಾವರ (HNA) (95 ಕಿಮೀ), ಆಲಮಟ್ಟಿ (LMT) – ಯಾದಗಿರಿ (YG) (162 ಕಿಮೀ) ಮತ್ತು ಭದ್ರಾವತಿ (BDVT) – ಚಿಕ್ಕಜಾಜೂರು (JRU) (73 ಕಿಮೀ) ನಡುವೆ ಹೊಸ ಮಾರ್ಗಕ್ಕಾಗಿ ಅಂತಿಮ ಸ್ಥಳ ಸರ್ವೇ ನಡೆಸುವುದು. **(ಟೆಂಡರ್ ಉಲ್ಲೇಖ ಸಂ. ಎಸ್‌ಡಬ್ಲ್ಯುಆರ್–ಎಫ್‌ಎಲ್‌ಎಸ್–ರೇಟ್–ಕಂಟ್ರಾಕ್ಟ್–03ಆರ್)**	ರೂ. 33,52,62,609/-

ಮುಕ್ತಾಯದ ದಿನಾಂಕ	
ಹಾಲಿ ಇರುವ ದಿನಾಂಕ	ಪರಿಷ್ಕೃತ ದಿನಾಂಕ
09–04–2026 (15:00 ಗಂಟೆಗಳು)	21–04–2026 (15:00 ಗಂಟೆಗಳು)

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು
ಬೆಂಗಳೂರು ದಂಡು

ಪಿಯುಬಿ/20/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026–27

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್–ಇನ್–ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್‌ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಬುಕ್ ಮಾಡಬಹುದು ಮತ್ತು ಇನ್ನೂ ಅನೇಕ ಸೇವೆಗಳನ್ನು ತಮ್ಮ ಬೆರಳ ತುದಿಯಲ್ಲಿ ಪಡೆಯಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಯನ್ನು ಬಳಸಿ ಮತ್ತು ಶೇ.3ವರೆಗೆ ರಿಯಾಯಿತಿಯನ್ನು ಪಡೆದು ಆನಂದಿಸಿ.

South Western Railway-SWR | SWRRLY | @SWRAILWAYHQ | @sw_railways

ರೆವರೆಂಡ್ ಫರ್ಡಿನೆಂಡ್ ಕಿಟೆಲ್ ಅವರ ಜನ್ಮದಿನ ಅಂಗವಾಗಿ ವಿಶ್ವಚೇತನ ಕರ್ನಾಟಕ ನವನಿರ್ಮಾಣ ವೇದಿಕೆಯಿಂದ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಕಿಟೆಲ್ ಅವರ ಪತ್ರಿಮೆಗೆ ಮಾಲಾರ್ಪಣೆ ಮಾಡಲಾಯಿತು. ಎಸ್. ಆನಂದ್, ಮಾರುತಿ, ಎಸ್. ಕುಮಾರಸ್ವಾಮಿ, ನಂ. ವಿಜಯಕುಮಾರ್, ಡಿ. ಸುಮನಾ, ಕೆ.ಎಸ್. ಆನಂದ, ರೇಣುಕ ವೈಕುಂಠಯ್ಯ ಇದ್ದರು

ಶೇ 80ಕ್ಕೂ ಹೆಚ್ಚು ಪ್ರಕರಣ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ (ಎ.ಸಿ ಕೋರ್ಟ್) ಅವಧಿ ಮೀರಿದ ಶೇ 80ಕ್ಕೂ ಹೆಚ್ಚು ಬಾಕಿ ಪ್ರಕರಣಗಳನ್ನು ಈಗಾಗಲೇ ವಿಲೇವಾರಿ ಮಾಡಲಾಗಿದೆ. ಮೂರು ವರ್ಷಗಳ ಹಿಂದೆ ಅವಧಿ ಮೀರಿದ 73,624 ಪ್ರಕರಣಗಳಿದ್ದವು. ಈಗ ಆ ಸಂಖ್ಯೆ 9,024ಕ್ಕೆ ಇಳಿದಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾಹಿತಿ ನೀಡಿದ್ದಾರೆ.



ಕೃಷ್ಣ ಬೈರೇಗೌಡ

ಎ.ಸಿ ಕೋರ್ಟ್‌ಗಳಲ್ಲಿ ಬಾಕಿ ಇರುವ ಪ್ರಕರಣಗಳ ವಿಲೇವಾರಿ ಕುರಿತಂತೆ ರಾಜ್ಯದ ಎಲ್ಲ ಉಪ ವಿಭಾಗಾಧಿಕಾರಿಗಳ ಜೊತೆ ಗುರುವಾರ ಅವರು ವಿಡಿಯೊ ಸಂವಾದದ ಮೂಲಕ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

'ಉಪ ವಿಭಾಗಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಎಷ್ಟು ಪ್ರಕರಣ 180 ದಿನಗಳನ್ನು ಮೀರಿವೆಯೊ ಅವುಗಳನ್ನು ಮೊದಲು ವಿಲೇ ಮಾಡಬೇಕು. ಇಲ್ಲದಿದ್ದರೆ ಸ್ವಯಂ ಸೃಜನೆಗೊಳ್ಳಲಿರುವ ನೋಟಿಸ್ ನೀಡಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

'ಉಪ ವಿಭಾಗಾಧಿಕಾರಿಗಳು ಹೊಸದಾಗಿ ದಾಖಲಿಸಿಕೊಂಡ ಪ್ರಕರಣಗಳನ್ನೂ ಸಮಯಕ್ಕೆ ಸರಿಯಾಗಿ ವಿಲೇವಾರಿ ಮಾಡುತ್ತಿಲ್ಲ. ಅವರು ದಾಖಲಿಸಿಕೊಂಡಿರುವ ಪ್ರಕರಣಗಳ ಕಾರಣಕ್ಕೆ ಹಳೆಯ ಪ್ರಕರಣಗಳ ಜೊತೆ ಮತ್ತೆ 1,500 ಪ್ರಕರಣಗಳು ಸೇರಿಕೊಂಡಿವೆ. ರಾಮನಗರ, ತುಮಕೂರು, ಕೊಳ್ಳೇಗಾಲ, ಹುಣಸೂರು, ತರೀಕೆರೆ ವಲಯದಲ್ಲಿ ಹೆಚ್ಚು ಪ್ರಕರಣಗಳು ಬಾಕಿ ಇವೆ. ಕೆಲವು ಉಪ ವಿಭಾಗಾಧಿಕಾರಿಗಳ ಬೇಜವಾಬ್ದಾರಿಯಿಂದಾಗಿ ಉತ್ತಮವಾಗಿ ಕೆಲಸ ನಿರ್ವಹಿಸುತ್ತಿರುವ ಉಪ ವಿಭಾಗಾಧಿಕಾರಿಗಳಿಗೂ ಕೆಟ್ಟ ಹೆಸರು ಬರುತ್ತಿದೆ' ಎಂದು ಅವರು ಬೇಸರಪಟ್ಟರು.

'ಬೆಂಗಳೂರು ಉತ್ತರ, ತುಮಕೂರು, ದೊಡ್ಡಬಳ್ಳಾಪುರದ ವಿಶೇಷ ಉಪ ವಿಭಾಗಾಧಿಕಾರಿಗಳು ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಗಣನೀಯ ಸಂಖ್ಯೆಯಲ್ಲಿ ಪ್ರಕರಣಗಳನ್ನು ವಿಲೇವಾರಿ ಮಾಡುತ್ತಿದ್ದಾರೆ' ಎಂದರು.

'ಒಂದೂವರೆ ವರ್ಷದ ಹಿಂದೆ ವಿಶೇಷ ವಿಭಾಗಾಧಿಕಾರಿಗಳಿಗೆ ಬಾಕಿ ಇದ್ದ ಹಳೆಯ 18,300 ಪ್ರಕರಣಗಳನ್ನು ವಿಲೇವಾರಿಗೆ ನೀಡಲಾಗಿತ್ತು. ಆ ಪೈಕಿ ಸದ್ಯ 4,300 ಪ್ರಕರಣಗಳು ಮಾತ್ರ ಬಾಕಿ ಇವೆ. 14 ಸಾವಿರ ಪ್ರಕರಣಗಳು ವಿಲೇವಾರಿ ಆಗಿವೆ. ತುಮಕೂರಿನಲ್ಲಿ 180 ದಿನ ಮೀರಿದ 91 ಪ್ರಕರಣಗಳು ಬಾಕಿ ಇವೆ. ಅಲ್ಲಿ ಮೂರು ಜನ ವಿಶೇಷ ವಿಭಾಗಾಧಿಕಾರಿಗಳಿದ್ದಾರೆ. ಮುಂದಿನ 2 ತಿಂಗಳಲ್ಲಿ ಎಲ್ಲ ಬಾಕಿ ಪ್ರಕರಣಗಳನ್ನು ವಿಲೇವಾರಿ ಮಾಡಬೇಕು' ಎಂದು ಸಚಿವರು ಸೂಚನೆ ನೀಡಿದರು.

ಜೆಡಿಎಸ್ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಭಾಗಿಯಾಗಿದ್ದ ಮಹಿಳಾ ಮುಖಂಡರು

ಜೆಡಿಎಸ್ : ಪೂರ್ವಸಿದ್ಧತಾ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಪಕ್ಷದ ಗ್ರೇಟರ್ ಬೆಂಗಳೂರು ಸಮಾವೇಶದ ಪೂರ್ವಸಿದ್ಧತೆಯ ಭಾಗವಾಗಿ ನಗರ ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್‌ಗೌಡ ಅವರು ಮಹಿಳಾ ಮುಖಂಡರ ಜತೆ ಗುರುವಾರ ಸಭೆ ನಡೆಸಿದರು.

ಕೊಮ್ಮಘಟ್ಟದ ನೈಸ್ ಮೈದಾನದಲ್ಲಿ ಇದೇ 11ರಂದು ನಡೆಯಲಿರುವ ಸಮಾವೇಶದಲ್ಲಿ ಪಕ್ಷದ ಮಹಿಳಾ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಭಾಗಿಯಾಗುವಂತೆ ಮಾಡಬೇಕು. ಆ ಹೊಣೆಯನ್ನು ಮಹಿಳಾ ಮುಖಂಡರು ಹೊರಬೇಕು ಎಂದು ರಮೇಶ್‌ಗೌಡ ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಪಾಲಿಕೆಗಳ ಚುನಾವಣೆ ದೃಷ್ಟಿಯಿಂದಲೂ ಈ ಸಮಾವೇಶ ಮಹತ್ವ ಪಡೆದಿದೆ. ನಗರದ 28 ವಿಧಾನಸಭಾ ಕ್ಷೇತ್ರಗಳ ಎಲ್ಲ ಕಾರ್ಯಕರ್ತರು ಮತ್ತು ಅವರ ಕುಟುಂಬದವರನ್ನು ಸಮಾವೇಶಕ್ಕೆ ಕರೆತರಬೇಕು. ರಾಜ್ಯ ಸರ್ಕಾರದ ಅಕ್ರಮ ಮತ್ತು ದುರಾಡಳಿತದ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡಬೇಕು ಎಂದು ಹೇಳಿದರು.

ಪಕ್ಷದ ಪ್ರಮುಖರ ಸಮಿತಿ ಅಧ್ಯಕ್ಷ ಎಂ.ಕೃಷ್ಣಾರೆಡ್ಡಿ, ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಇ.ಕೃಷ್ಣಪ್ಪ, ನಗರ ಮಹಿಳಾ ಘಟಕದ ಅಧ್ಯಕ್ಷೆ ಶೈಲಾ ಸಂತೋಷಿರಾವ್ ಸೇರಿ ಹಲವು ಮುಖಂಡರು ಸಭೆಯಲ್ಲಿ ಭಾಗಿಯಾಗಿದ್ದರು.

ನಿಧನ ವಾರ್ತೆ

ನಂಜಪ್ಪ



ಬೆಂಗಳೂರು: ಬೆಂಗಳೂರು ಪೂರ್ವ ತಾಲ್ಲೂಕಿನ ಮಂಡೂರು ಗ್ರಾಮದ ಶತಾಯುಷಿ, ಪ್ರಗತಿಪರ ಕೃಷಿಕ ಎನ್.ನಂಜಪ್ಪ (104) ನಿಧನರಾದರು. ಅವರಿಗೆ ನಾಲ್ವರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಸ್ವಗ್ರಾಮ ಮಂಡೂರಿನಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

CONNECT ಕ್ಲಾಸಿಫೈಡ್ಸ್

ರಾಷ್ಟ್ರೀಯ ಗ್ರಾಹಕರ ಮೇಳ
NATIONAL CONSUMER FAIR
ಬೆಂಗಳೂರಿನ ಪ್ರಮುಖ ಆಕರ್ಷಣೆಯಾದ ಧುಮುಕುವ ಅದ್ಭುತ ಜಲಪಾತ
wonder falls

Shopping & Amusement Expo
Daily: 4pm - 9pm, Call: 8904727123
Binny Mill Ground, Bengaluru

ಅದ್ದೂರಿ ಉದ್ಘಾಟನೆ
ನಮ್ಮ 3ನೇ ಮಳಿಗೆ
MYSORE SILKS ಸೀರೆ ಉತ್ಸವ By Sulakshmi Silks
Opening Offer 60%+10% Off
ON PURE MYSORE CREPE SILK SAREE

ಸೀರೆ ಉತ್ಸವ-3 ನಮ್ಮೊಂದಿಗೆ ಸೇರಿ ಆಚರಿಸಿ
ನಮ್ಮ ಹೊಸ ಮಳಿಗೆಯಲ್ಲಿ 1 ರಿಂದ 10ನೇ ಏಪ್ರಿಲ್ 2026
SULAKSHMI SILKS
ಕರ್ನಾಟಕದ ಅತಿದೊಡ್ಡ ಸೀರೆ ಉತ್ಸವ
ಸಂಪರ್ಕಿಸಿ: 99727 18898 | 93531 38343 | 9886306643 | 96631 27606
ಸ್ಥಳ: ನಂ.119/1, ಶ್ರೀನಿಧಿ ಕಾಂಪ್ಲೆಕ್ಸ್, 11ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

General

JUPITER HOSPITALS Nelamangala & Malleswaram Wanted Receptionist & Staff Nurse. Computer, Good English. 9845024211/ 9341220446

Teachers/ Professors

WANTED EXPERIENCED, TRAINED FACULTIES, PRINCIPAL:For PU College MA/M.Sc with B.Ed HIGH SCHOOL KANNADA TEACHER: BA.B.Ed PRIMARY SCHOOL KANNADA and MATHS TEACHER, Apply before 18.04.2026 'STRACEY MEMORIAL EDUCATIONAL SOCIETY.' #52 St.Marks Road, Bangalore-01

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PERSONAL

Change of Name

CHANGE OF NAME
We, Mr. Dhananjaya Kulkarni & Mrs. Rajashri Ramesh Patil, residing at 2202, Sobha Forest Edge, Vajarahalli, 100 Feet Road, Off. Kanakapura Road, Thalaghattapura, Bengaluru - 560109, have changed our minor daughter's name from Greshma Kulkarni to GRISHMA KULKARNI, vide affidavit dated 26.03.2026 before notary G.R. Rajanna, Bengaluru.

CHANGE OF NAME
I, DEEPALAKSHMI SUNDEEP MUNISWAMY, residing at No. 1141, 12th A Main, 9th Block, Nagarabhavi 2nd Stage, Bengaluru - 560072, have changed my name to DEEPALAKSHMI SUNDEEP vide affidavit dated 04-04-2026 before notary H.R. Karunakara, Bengaluru.

I, RAHUL_NANGIA R/a#101, 1st Floor,the address,46, Vivian Road, Richards Town Bangalore 560005 have`changed my Minor Son's Name from SACHIN RAHUL NANGIA to SACHIN_NANGIA (DOB:10.7.2008) vide`affidavit dated:7.4.2026 before`Notary Sharada Bangalore.

CHANGE OF NAME
I, Ditty Joseph Wilson W/o Joseph Wilson V J as per my passport no N6714621, R/at No 101 Thaliyath Villa Phase 1, Bluejay Ardley, Doddabele, Kengeri, Bengaluru - 560060, have changed my name to DITTY K S (DITTY KADAMATTU SEBASTIAN) vide affidavit dated 12-03-2026 before notary Ravi, Bengaluru.

Vasavi Educational Trust
V.E.T. FIRST GRADE COLLEGE
(Permanently Affiliated to Dr. Manmohan Singh Bengaluru City University, Listed U/s.2(f) & 12B of UGC, NAAC Accredited by 'A' Grade, Approved by AICTE, New Delhi)
14th Main, 2nd Phase, J.P.Nagar, Bangalore - 560 078.
ADMISSIONS OPEN FOR 2026
B.Com | B.C.A | B.Sc-FAD (Fashion & Apparel Design)
B.Com (Business Data Analytics) | B.B.A | B.B.A-Business Analytics*
B.V.A (Animation & Game Art) | B.C.A-Artificial Intelligence & Machine Learning | M.Com.
➢Qualified & experienced teaching faculty
➢Well established Laboratories
➢Seminars & Workshops
➢Well Stocked Library & Digital Library
➢Career Guidance & Placement assistance
➢Preference to SC/ST students in admissions
➢Scholarships to meritorius students
➢Active Students Clubs
➢Sports facilities viz., Temperature Controlled Swimming Pool, Turf outdoor ground, Gym
➢Interactive smart board classrooms
Dr. MANANDI N.SURESH, Hon.Secretary
B.S.ARUN KUMAR, President
Contact office for : Prospectus & admission formalities
Ph : 080-2658 6808 / 2658 4760 / 95137 04800
www.vetfgc.edu.in

PUBLIC NOTICE

ELECTRONICS CITY INDUSTRIAL TOWNSHIP AUTHORITY (ELCITA) — PUBLIC NOTICE
Notice is hereby given that Pay & Park services will be implemented in Electronics City Phase I & II with effect from 01 May 2026.
LOCATIONS: DESIGNATED ROADS IN ELECTRONICS CITY PHASE 1 & 2
All vehicle owners are advised to park only in designated areas and comply with parking regulations.
Violations and unauthorized parking will attract penalties as per rules.
This initiative aims to improve traffic management and ensure orderly parking in Electronics City.
For details, visit the official ELCITA website www.elcita.in or contact the ELCITA office on 080 69360000.
By Order - ELCITA

ಜನಗಣತಿ: ಗೈರಾದ ಸಿಬ್ಬಂದಿಗೆ ಕಡೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಗಣತಿ ಕಾರ್ಯಕ್ಕೆ ಆಯೋಜಿಸಿರುವ ಅಧಿಕಾರಿ/ನೌಕರರಿಗೆ ಏಪ್ರಿಲ್ 11ರಿಂದ ತರಬೇತಿ ಆಯೋಜಿಸಲಾಗಿದ್ದು, ಈ ಹಿಂದಿನ ತರಬೇತಿಯಲ್ಲಿ ಗೈರಾದವರಿಗೆ ಇದು ಅಂತಿಮ ಅವಕಾಶವಾಗಿದೆ ಎಂದು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ತಿಳಿಸಿದರು.

ಗಣತಿದಾರರಾಗಿ ನೇಮಕಗೊಂಡಿರುವ ಅಧಿಕಾರಿ/ನೌಕರರಿಗೆ ಏ.6ರಿಂದ 8ರವರೆಗೆ ತರಬೇತಿ ನೀಡಲಾಗಿತ್ತು. ಅದರಲ್ಲಿ ಭಾಗವಹಿಸದೆ ಗೈರಾದವರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ. ಅವರೆಲ್ಲ ಕಡ್ಡಾಯವಾಗಿ ಏ.11ರಿಂದ ತರಬೇತಿಯಲ್ಲಿ ಪಾಲ್ಗೊಳ್ಳಬೇಕು ಎಂದರು.

1948ರ ಜನಗಣತಿ ಕಾಯ್ದೆಯ ಸೆಕ್ಷನ್ 11ರ ನಿಯಮಗಳ ಪ್ರಕಾರ, ಜನಗಣತಿ ಕರ್ತವ್ಯ ನಿರಾಕರಿಸಿದರೆ ₹1,000 ದಂಡ ವಿಧಿಸಲಾಗುತ್ತದೆ. ಜೊತೆಗೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆ ವಿಧಿಸಲು ಅವಕಾಶವಿರುತ್ತದೆ ಎಂದು ತಿಳಿಸಿದರು.

ಏ.11ರಿಂದ ನಡೆಯುವ ತರಬೇತಿಗೆ ಹಾಜರಾಗದ ಅಧಿಕಾರಿ/ನೌಕರರ ವಿರುದ್ಧ ಮೊಕದ್ದಮೆ ಹೂಡಲಾಗುವುದು ಎಂದರು.

ಕ್ರೀಡಾಕೂಟ: ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಬೆಂಗಳೂರು ದಕ್ಷಿಣ ನಗರ ಪಾಲಿಕೆಯು ಪೌರಕಾರ್ಮಿಕರು, ಗ್ಯಾಂಗ್‌ಮೆನ್‌ಗಳಿಗೆ ಆಯೋಜಿಸಿದ್ದ ಕ್ರೀಡಾಕೂಟಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಗುರುವಾರ ಚಾಲನೆ ನೀಡಿದರು.

ಜಯನಗರ, ಬೊಮ್ಮನಹಳ್ಳಿ ಮತ್ತು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಸುಮಾರು 600ಕ್ಕೂ ಹೆಚ್ಚು ಪೌರಕಾರ್ಮಿಕರು ಪಾಲ್ಗೊಂಡಿದ್ದರು. ಕ್ರೀಡಾಕೂಟದ ಎರಡನೇ ದಿನ ಶುಕ್ರವಾರ ಬಿಟಿಎಂ ಲೇಔಟ್ ಮತ್ತು ಪದ್ಮನಾಭನಗರ ವಿಧಾನಸಭಾ ಕ್ಷೇತ್ರಗಳ ಪೌರಕಾರ್ಮಿಕರು ಭಾಗವಹಿಸಲಿದ್ದಾರೆ. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಜಿಬಿಎ ಕೇಂದ್ರ ಕಚೇರಿಯ ಆವರಣದಲ್ಲಿರುವ ಡಾ.ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ವಿತರಿಸಲಾಗುವುದು ಎಂದು ರಮೇಶ್ ತಿಳಿಸಿದರು.

ಶ್ವಾನಗಳ ದತ್ತು ಅಭಿಯಾನ

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸಮುದಾಯ ಶ್ವಾನಗಳನ್ನು ಪ್ರಾಣಿಪ್ರಿಯರು ದತ್ತು ಪಡೆದುಕೊಳ್ಳಲು ಅಭಿಯಾನ ನಡೆಸುವಂತೆ ಹೆಚ್ಚುವರಿ ಅಭಿವೃದ್ಧಿ ಆಯುಕ್ತ ದಲ್ಜಿತ್ ಕುಮಾರ್ ಅವರು ಪಶುಸಂಗೋಪನೆ ವಿಭಾಗದ ಅಧಿಕಾರಿಗಳಿಗೆ ಸೂಚಿಸಿದರು.

ಎಬಿಸಿ ಹಾಗೂ ಎ.ಆರ್.ವಿ ಕುರಿತು ಪಶು ಸಂಗೋಪನೆ ವಿಭಾಗದ ಅಧಿಕಾರಿಗಳು ಹಾಗೂ ಸಮುದಾಯದ ಶ್ವಾನಗಳ ನಿರ್ವಹಣೆ ಎನ್‌ಜಿಒ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಸಮುದಾಯ ಶ್ವಾನಗಳನ್ನು ದತ್ತು ನೀಡುವಾಗ ಅವುಗಳ ಆರೋಗ್ಯ ಪರಿಶೀಲನೆ ನಡೆಸಿ ಅಗತ್ಯ ಲಸಿಕೆಗಳನ್ನು ನೀಡಬೇಕು' ಎಂದರು. ಸುಪ್ರೀಂ ಕೋರ್ಟ್ ಆದೇಶದಲ್ಲಿರುವ ಮಾರ್ಗಸೂಚಿಯಂತೆ ಸಮುದಾಯದ ಶ್ವಾನಗಳ ನಿರ್ವಹಣೆಗೆ ಹಾಗೂ ಲಸಿಕೆಗಳನ್ನು ಹಾಕಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು. ಪಶುಸಂಗೋಪನೆ ಸಹಾಯಕ ನಿರ್ದೇಶಕ ಬಸವರಾಜೇಂದ್ರ ಬಿರಾದಾರ, ವೀಣಾ, ಡಾ. ರಾಜೇಂದ್ರ, ಡಾ. ಶಿವಕುಮಾರ್ ಭಾಗವಹಿಸಿದ್ದರು.

ಸರ್ಕಾರಿ ಜಾಲತಾಣ ದುರ್ಬಳಕೆ: ಛಲವಾದಿ

ಬೆಂಗಳೂರು: 'ಸರ್ಕಾರಿ ಸಾಮಾಜಿಕ ಜಾಲತಾಣವನ್ನು ಒಂದು ಪಕ್ಷದ ಪರವಾಗಿ ಪ್ರಚಾರ ಮಾಡುವುದಕ್ಕೆ ಅಥವಾ ಸಾಂವಿಧಾನಿಕ ಸಂಸ್ಥೆಗಳನ್ನು ಟೀಕಿಸುವುದಕ್ಕೆ ಬಳಸುವುದು ಅಕ್ಷಮ್ಯ ಅಪರಾಧ. ಇದು ಸಾರ್ವಜನಿಕರ ತೆರಿಗೆ ಹಣದ ದುರ್ಬಳಕೆ' ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ. ಈ ಕುರಿತು ಅವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

'ಮುಖ್ಯಮಂತ್ರಿ ಕಚೇರಿ ಎನ್ನುವುದು ಕೇವಲ ಒಬ್ಬ ವ್ಯಕ್ತಿ ಅಥವಾ ರಾಜಕೀಯ ಪಕ್ಷದ ಸ್ವತ್ತಲ್ಲ. ಅದು ರಾಜ್ಯದ ಏಳು ಕೋಟಿ ಜನರ ಆಶೋತ್ತರಗಳು ಮತ್ತು ಆಡಳಿತದ ಪಾರದರ್ಶಕತೆ ಯನ್ನು ಪ್ರತಿನಿಧಿಸುವ ಉನ್ನತ ಸಾಂವಿಧಾನಿಕ ಸ್ಥಾನವಾಗಿದೆ. ಇತ್ತೀಚಿನ ದಿನಗಳಲ್ಲಿ ಮುಖ್ಯಮಂತ್ರಿ ಕಚೇರಿಯನ್ನು ರಾಜಕೀಯ ಲಾಭಕ್ಕೆ ಮತ್ತು ವಿರೋಧ ಪಕ್ಷಗಳ ತೇಜೋವಧೆಗಾಗಿ ಬಳಸಿಕೊಳ್ಳಲಾಗುತ್ತಿದೆ. ಇದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬಗೆಯುತ್ತಿರುವ ದ್ರೋಹ' ಎಂದು ಟೀಕಿಸಿದ್ದಾರೆ.

ಛಲವಾದಿ ನಾರಾಯಣಸ್ವಾಮಿ

'ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ಆದರೆ ಮುಖ್ಯಮಂತ್ರಿಯವರ ಅಧಿಕೃತ ಖಾತೆಗಳ ಮೂಲಕ ಕೇಂದ್ರ ಸರ್ಕಾರದ ವಿರುದ್ಧ ನಿರಂತರವಾಗಿ ವಿಷ ಕಾರುವುದು ಮತ್ತು ಸಾಂವಿಧಾನಿಕ ಸಂಸ್ಥೆಗಳ ವಿಶ್ವಾಸಾರ್ಹತೆ ಕುಗ್ಗಿಸುವ ಪ್ರಯತ್ನ ನಡೆಸಲಾಗುತ್ತಿದೆ' ಎಂದು ದೂರಿದ್ದಾರೆ.

'ಸರ್ಕಾರದ ಅಧಿಕೃತ ಪ್ರಕಟಣೆಗಳು, ಜನಹಿತ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಗಳ ಮಾಹಿತಿ ನೀಡಬೇಕಾದ ವೇದಿಕೆಗಳು ಇಂದು ಹೇಳಿದ್ದಾರೆ.

ಯೋಗೇಶ್ ಗೌಡ ಕೊಲೆ: ಇದೇ 15ಕ್ಕೆ ತೀರ್ಪು

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೇಶ್‌ಗೌಡ ಗೌಡರ್ ಕೊಲೆ ಪ್ರಕರಣದ ತೀರ್ಪನ್ನು ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ಇದೇ 15ಕ್ಕೆ ಪ್ರಕಟಿಸಲಿದೆ. ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ 15ನೇ ಆರೋಪಿಯಾಗಿರುವ ಈ ಪ್ರಕರಣದ ವಿಚಾರಣೆಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಇತ್ತೀಚೆಗಷ್ಟೇ ಮುಕ್ತಾಯಗೊಳಿಸಿ ತೀರ್ಪನ್ನು ಗುರುವಾರ (ಮಾ.9) ಪ್ರಕಟಿಸುವುದಾಗಿ ತಿಳಿಸಿದ್ದರು. ಶಾಸಕ ವಿನಯ ಕುಲಕರ್ಣಿ ಸೇರಿದಂತೆ ಎಲ್ಲ 21 ಆರೋಪಿಗಳು ಗುರುವಾರ ಬೆಳಿಗ್ಗೆ ನ್ಯಾಯಾಲಯಕ್ಕೆ ಹಾಜರಾಗಿದ್ದರು. ಆದರೆ, ಈ ವೇಳೆ ನ್ಯಾಯಾಧೀಶರು ತೀರ್ಪು ಪ್ರಕಟಣೆಯನ್ನು ಇದೇ 15ಕ್ಕೆ ಮುಂದೂಡಿ ಆದೇಶಿಸಿದರು.

SESHADRIPURAM INSTITUTIONS
ADMISSION ENQUIRIES OPEN
for 1st Year Degree Programs: 2026-27

Seshadripuram Institute of Technology
Campus No. 4, 5, 6A, 6B & 7B, Kadakola Industrial Area, Mysuru - 571 311
Contact : Dr. Prahalad Rao K. Principal Tel : +91 96064 50926 / +91 96064 50925 / 0821 2440024
E-Mail: sitsetmysuru@gmail.com website: www.sitmysore.ac.in
CSE | ISE | AI & ML | EEE | ME | ECE

Seshadripuram College
NAAC Accredited A++
27, Nagappa Street, Seshadripuram, Bengaluru - 560020.
Contact : Dr. Anandappa Iramukhadavar, Principal Tel: 22955354.
website: www.spmcollege.ac.in
B.B.A. | B.C.A. | B.Com | B.Com (A&F)
B.Com. (Logistics & Supply Chain Management)

Seshadripuram Evening College
NAAC Accredited A
27, Nagappa Street, Seshadripuram, Bengaluru - 560020.
Contact : Dr. N. S. Satish, Principal Tel: 22955356. www.sedc.ac.in
B.Com | B.B.A. | B.C.A.

Seshadripuram Institute of Commerce & Management
NAAC Accredited A
40, Girls' School Street, Seshadripuram, Bengaluru - 560020.
Contact : Dr. Vidya Shivannavar, Principal Tel : 22955382. www.sicm.edu.in
B.Com | B.Com (BDA) | B.Com (A&F) | B.B.A.
B.C.A. | B.C.A (AI&ML)

Seshadripuram Academy of Business Studies
NAAC Accredited
18, 2nd Main, Kengeri Satellite Town, Bengaluru - 560060.
Contact : Dr. Jayarama, Principal Tel : 28488676 website: www.sabs.ac.in
B.Com | B.B.A. | B.C.A.

Seshadripuram First Grade College
NAAC Accredited A+
26, Yelahanka New Town, Bengaluru - 560064.
Contact : Dr. S. N. Venkatesh, Principal Tel : 22955369 website: www.sfgc.ac.in
B.Com | B.Com (BDA) | B.B.A. | B.B.A. (Aviation)
B.C.A. | B.Sc. EMC / BBG

Seshadripuram Law College
1, Govinda Rao Street, Seshadripuram, Bengaluru - 560020.
Contact : Dr. Praneetha B. S. Principal Tel : 22955367
website: www.spmlawcollege.ac.in.
LL.B. (3 Years) | B.A., LL.B. (5 Years)

N. R. Pandith Aradhya
President

Dr. Wooday P. Krishna
Honorary General Secretary

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ಜಿಬಿಎ ಕಾಲೇಜು: ಶೇ 74.16 ಫಲಿತಾಂಶ

ಒಟ್ಟು 2,593 ವಿದ್ಯಾರ್ಥಿಗಳಲ್ಲಿ 1,923 ಮಂದಿ ಉತ್ತೀರ್ಣ
ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 4.05 ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಐದು ನಗರ ಪಾಲಿಕೆಗಳ ವ್ಯಾಪ್ತಿಯ ಕಾಲೇಜುಗಳು ಪಿಯುಸಿ ಪರೀಕ್ಷೆಯಲ್ಲಿ ಶೇ 74.16ರಷ್ಟು ಫಲಿತಾಂಶ ದಾಖಲಿಸಿವೆ. ಕಳೆದ ವರ್ಷ ಶೇ 70.11 ರಷ್ಟು ಫಲಿತಾಂಶ ದಾಖಲಾಗಿತ್ತು. ಆದರೆ, 2023-24ನೇ ಸಾಲಿನಲ್ಲಿ ಶೇ 77.83ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು.

2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಗೆ 19 ಪದವಿ ಪೂರ್ವ ಕಾಲೇಜುಗಳಿಂದ ಒಟ್ಟು 2,593 ವಿದ್ಯಾರ್ಥಿಗಳು ಹಾಜರಾಗಿದ್ದರು. ಈ ಪೈಕಿ 1,923 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 260 ವಿದ್ಯಾರ್ಥಿಗಳು ಶೇ 85ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಪಶ್ಚಿಮ ನಗರ ಪಾಲಿಕೆಯ ಭೈರವೇಶ್ವರನಗರ ಪದವಿ ಪೂರ್ವ ಕಾಲೇಜು ಶೇ 88.82 ಫಲಿತಾಂಶದೊಂದಿಗೆ ಅಗ್ರಸ್ಥಾನ ಪಡೆದಿದೆ. ಕೇಂದ್ರ ನಗರ ಪಾಲಿಕೆಯ ಕಸ್ತೂರಬಾನಗರ ಪದವಿ ಪೂರ್ವ ಕಾಲೇಜು ಶೇ 86.45ರಷ್ಟು, ಪಶ್ಚಿಮ ನಗರ ಪಾಲಿಕೆಯ ಶ್ರೀರಾಂಪುರ ಪದವಿ ಪೂರ್ವ ಕಾಲೇಜು ಶೇ 81.99ರಷ್ಟು ಫಲಿತಾಂಶ ದಾಖಲಿಸಿ, ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿವೆ.

ವೈಯಕ್ತಿಕ ಸಾಧನೆಯಲ್ಲಿ, ಉತ್ತರ ನಗರ ಪಾಲಿಕೆಯ ಕ್ಲೀವ್ ಲ್ಯಾಂಡ್ ಟೌನ್ ಪದವಿ ಪೂರ್ವ ಕಾಲೇಜಿನ ಫಿರ್ದೋಸ್ ಹಾಗೂ ಶಾಜೀದ್ ಅವರು ವಾಣಿಜ್ಯ ವಿಭಾಗದಲ್ಲಿ ತಲಾ 582 ಅಂಕ (ಶೇ 97) ಗಳಿಸಿ ಗಮನಾರ್ಹ ಸಾಧನೆ ಮಾಡಿದ್ದಾರೆ. ಅದೇ ಕಾಲೇಜಿನ ಅರ್ಫಿನ್ ಖಾನಂ ಅವರು ವಿಜ್ಞಾನ ವಿಭಾಗದಲ್ಲಿ 578 ಅಂಕ (ಶೇ 96.33) ಪಡೆದಿದ್ದಾರೆ. ಪಶ್ಚಿಮ ನಗರ ಪಾಲಿಕೆಯ ಭೈರವೇಶ್ವರನಗರ ಪದವಿ ಪೂರ್ವ ಕಾಲೇಜಿನ ಮುಸ್ರತ್ ಅವರು ಕಲಾ ವಿಭಾಗದಲ್ಲಿ 574 ಅಂಕ (ಶೇ 95.66) ಗಳಿಸಿದ್ದಾರೆ.

ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಎಲ್ಲಾ 260 ವಿದ್ಯಾರ್ಥಿಗಳಿಗೆ ನಗರ ಪಾಲಿಕೆಗಳ ವತಿಯಿಂದ ತಲಾ ₹35 ಸಾವಿರ ಪ್ರೋತ್ಸಾಹಧನ ನೀಡಿ ಗೌರವಿಸಲಾಗುವುದು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದ್ದಾರೆ.

ಫಿರ್ದೋಸ್ | ಶಾಜೀದ್ | ಅರ್ಫಿನ್ ಖಾನಂ | ಮುಸ್ರತ್

ಕಾಲೇಜುವಾರು ಫಲಿತಾಂಶ

ಕಾಲೇಜು	ಪರೀಕ್ಷೆ ಬರೆದವರು	ಉತ್ತೀರ್ಣ	ಅತ್ಯುನ್ನತ ಶ್ರೇಣಿ	ಶೇಕಡ
ಭೈರವೇಶ್ವರನಗರ	161	143	29	88.82
ಕಸ್ತೂರ ಬಾ ನಗರ	310	268	30	86.45
ಶ್ರೀರಾಮಪುರ	261	214	41	81.99
ಮತ್ತಿಕೆರೆ	108	87	10	80.56
ಶಕ್ತಿಗಣಪತಿ ನಗರ	72	57	4	79.17
ಬನ್ನಪ್ಪ ಪಾರ್ಕ್	52	41	1	78.85
ಮಾಗಡಿ ರಸ್ತೆ	88	69	13	78.41
ಚಾಮರಾಜಪೇಟೆ	54	41	5	75.93
ಥಣಿಸಂದ್ರ	45	34	3	75.56
ಡಿಸ್ಪೆನ್ಸರಿ ರಸ್ತೆ	123	89	13	72.36
ಕ್ಲೀವ್‌ಲ್ಯಾಂಡ್ ಟೌನ್	507	365	55	71.99
ಪಿಳ್ಳಣ್ಣ ಗಾರ್ಡನ್	143	100	23	69.93
ಉತ್ತರಹಳ್ಳಿ	142	99	6	69.72
ಹೇರೋಹಳ್ಳಿ	127	84	11	66.14
ಜೋಗುಪಾಳ್ಯ	63	41	4	65.08
ಕಾವೇರಿಪುರ	94	60	2	63.83
ಆಸ್ಟಿನ್ ಟೌನ್	26	16	3	61.54
ಪಾದರಾಯನಪುರ	128	76	7	59.38
ಟ್ಯಾಸ್ಕರ್‌ಟೌನ್	89	39	0	43.82

ಕೂಲಿ ಕಾರ್ಮಿಕನ ಮಗಳ ಸಾಧನೆ

ಕೆ.ಆರ್.ಪುರ: ಹೂಡಿ ಪದವಿಪೂರ್ವ ಕಾಲೇಜಿನ ಕಲಾ ವಿಭಾಗದ ವಿದ್ಯಾರ್ಥಿನಿ ದೀಪಿಕಾ ಗುಪ್ತ ಅವರು ಪಿಯು ಪರೀಕ್ಷೆಯಲ್ಲಿ 592 ಅಂಕ (ಶೇ 98.6) ಗಳಿಸಿದ್ದಾರೆ.

ದೀಪಿಕಾ ಗುಪ್ತ ಅವರ ತಂದೆ ಕೂಲಿ ಕೆಲಸ ಮಾಡುತ್ತಿದ್ದಾರೆ. ಕಾಲೇಜಿನ 16 ವಿದ್ಯಾರ್ಥಿಗಳು ಶೇ 85ಕ್ಕೂ ಹೆಚ್ಚು ಅಂಕ ಪಡೆದಿದ್ದಾರೆ.

ದೀಪಿಕಾ ಗುಪ್ತರನ್ನು ಹೂಡಿ ಗ್ರಾಮದ ಮುಖಂಡ ಹಾಗೂ ಮಹದೇವಪುರ ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಹೂಡಿ ಪಿಳ್ಳಪ್ಪ ಮತ್ತು ಕಾಲೇಜಿನ ಆಡಳಿತ ಮಂಡಳಿ ಅಭಿನಂದಿಸಿದ್ದಾರೆ.



ದೀಪಿಕಾ ಗುಪ್ತ

ಆಸೆಂಟ್ ಪಿಯು ಕಾಲೇಜು, ಹೆಸರಘಟ್ಟ ಮುಖ್ಯರಸ್ತೆ



ಲಹರಿ ಶೆಟ್ಟಿ ವಿಜ್ಞಾನ 589 (ಶೇ 98.17) | ಪ್ರದೀಪ್ ಎಚ್ ವಿಜ್ಞಾನ 582 (ಶೇ 97) | ಅಮೃತ ಕೆ.ಆರ್ ವಿಜ್ಞಾನ 580 (ಶೇ 96.5) | ಕುಶಲೇಶ್ ಎಸ್ ವಾಣಿಜ್ಯ 580 (ಶೇ 96.67)

ವರುಣ್ ಸಂದೇಶ್ ವಾಣಿಜ್ಯ 580 (ಶೇ 96.67)

ಚಿನ್ಮಯಿ ಎಸ್ ಗೌಡ ವಿಜ್ಞಾನ 579 (ಶೇ 96.5)

ಸೌಂದರ್ಯ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ

ಸ್ಫೂರ್ತಿ ವಾಣಿಜ್ಯ 596 (ಶೇ 99.33) | ಚಂದನ್ ಎಸ್ ಭಟ್ ವಿಜ್ಞಾನ 595 (ಶೇ 99.16) | ಸೂರ್ಯ ಕಿರಣ್ ವಿಜ್ಞಾನ 593 (ಶೇ 98.83) | ನಿನಾದ್ ವಿಜ್ಞಾನ 592 (ಶೇ 98.66)

ಇವರು ಪಿಯು ಸಾಧಕರು



ಮೇಘಾ | ಆರ್.ಎನ್. ಲೋಚನ್ | ಲಕ್ಷಿಯಾ ವೆಲ್ಲೂರ್ ವಿನೋದ್ | ಲಕ್ಷಿತಾ ವೆಲ್ಲೂರ್ ವಿನೋದ್ | ಸಹನಾ
ಸಾಹಿಲ್ ಅರ್ಫತ್ | ನವ್ಯ ಬಿ ಎಂ | ಅಭಿಜ್ಞಾ ರಾವ್ ಜಿ ಬಿ | ಅಮೃತಾ ಪಿ ಎನ್ | ನಿಹಾರ | ದಿವ್ಯಾ ಟಿ ಆರ್
ಮಾನ್ವಿ ಕಶ್ಯಪ್ | ಸೋನಂ. ಎಸ್ | ಗಾನವಿ ಸಿ | ಪೂರ್ವಿ ಎಸ್ | ಕೃತಿಕಾ ಕೆ ಹಿರೇಮಠ್ | ಮಣಿಚಂದನ ಬಿ.ಎಮ್
ಯಶ್ ಎನ್ | ಕಿರಣ್ ಕುಮಾರ್ ಎಂ | ಚಿನ್ಮಯಿ ಅನಂತರಾಮು | ಲೇಖನ ಎಂ.ಡಿ | ಅನುಶ್ರೀ.ಎಚ್ | ವರ್ಷ.ಎಲ್

- ಮೇಘಾ. ಎಸ್ (ಶೇ 98), ಎ.ಪಿ.ಎಸ್. ಪಿಯು ಕಾಲೇಜು, ಬೆಂಗಳೂರು
- ಆರ್.ಎನ್.ಲೋಚನ್ (ಶೇ 98.50), ನಾರಾಯಣ ಪಿಯು ಕಾಲೇಜು, ಚೀಮಸಂದ್ರ
- ಲಕ್ಷಿಯಾ ವೆಲ್ಲೂರ್ ವಿನೋದ್ (ಶೇ 95.83), ವಿಷನ್ ಪಿಯು ಕಾಲೇಜು
- ಲಕ್ಷಿತಾ ವೆಲ್ಲೂರ್ ವಿನೋದ್, (ಶೇ 96) ವಿಷನ್ ಪಿಯು ಕಾಲೇಜು

ಆರ್ ಎನ್ ಎಸ್ ಪದವಿ ಪೂರ್ವ ಕಾಲೇಜು, ಚನ್ನಸಂದ್ರ: ಸಹನಾ ಆರ್ (598), ಸಾಹಿಲ್ ಅರ್ಫತ್ (595), ನವ್ಯ ಬಿ.ಎಂ (595), ಅಭಿಜ್ಞಾ ರಾವ್ ಜಿ.ಬಿ (595), ಅಮೃತಾ ಪಿ ಎನ್ (596), ನಿಹಾರ (594), ದಿವ್ಯಾ ಟಿ.ರ್. (593), ಮಾನ್ವಿ ಕಶ್ಯಪ್ (593), ಸೋನಂ. ಎಸ್. (593), ಗಾನವಿ ಸಿ. (592), ಪೂರ್ವಿ ಎಸ್. (592), ಕೃತಿಕಾ ಕೆ. ಹಿರೇಮಠ್ (591), ಮಣಿಚಂದನ ಬಿ.ಎಂ. (591), ಯಶ್ ಎನ್. (591), ಕಿರಣ್ ಕುಮಾರ್ ಎಂ. (595), ಚಿನ್ಮಯಿ ಅನಂತರಾಮು (594), ಲೇಖನ ಎಂ.ಡಿ. (590), ಅನುಶ್ರೀ ಎಚ್. (589), ವರ್ಷ ಎಲ್. (589),

ಯೂನಿವರ್ಸಲ್ ಕಾಲೇಜು: ಯೂನಿವರ್ಸಲ್ ಪಿಯು ಕಾಲೇಜಿನ ಶೇಕಡ 80ರಷ್ಟು ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಆಂಧ್ರಪ್ರದೇಶದ ಅಚ್ಯುತ ಸುಮಶ್ರೀ ಅವರು (591 ಅಂಕ) ರಾಜ್ಯದಲ್ಲಿ 8ನೇ ಸ್ಥಾನ ಗಳಿಸಿದ್ದಾರೆ. ಸಂಸ್ಥೆ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ ಅವರು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಸಮರ್ಪಣೆ ಮತ್ತು ಕಠಿಣ ಪರಿಶ್ರಮಕ್ಕಾಗಿ ಅಭಿನಂದಿಸಿದ್ದಾರೆ.

ಈ ವರ್ಷದಿಂದ ಪಿಯು ವಿಜ್ಞಾನ ಆರಂಭಿಸಲಾಗಿದ್ದು, ಎನ್‌ಇಇಟಿ, ಜೆಇಇ, ಎನ್‌ಡಿಎ ಮತ್ತು ಪೈಲಟ್ ತರಬೇತಿಗಾಗಿ ವಿಶೇಷ ಕೋಚಿಂಗ್ ನೀಡಲಾಗುತ್ತದೆ. ಈ ವರ್ಷ ಸಂಸ್ಥೆಯ ಐದು ವಿದ್ಯಾರ್ಥಿಗಳು ಎನ್‌ಎಲ್‌ಎಸ್‌ಐಯು ಬೆಂಗಳೂರು ಮತ್ತು ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ಜೋಧ್‌ಪುರ ಸೇರಿ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆದಿದ್ದಾರೆ ಎಂದು ತಿಳಿಸಿದ್ದಾರೆ.

‘ದಲಿತರು ಉದ್ಯಮಿಗಳಾಗಲು ಬೆಂಬಲ’

ಸಿ.ಜಿ.ಶ್ರೀನಿವಾಸನ್ ಅಭಿನಂದನಾ ಕಾರ್ಯಕ್ರಮದಲ್ಲಿ ಬೊಮ್ಮಾಯಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಲಿತರು ಉದ್ಯಮಿಗಳಾಗಿ ಬೆಳೆಯಲು ಕೇಂದ್ರ ಸರ್ಕಾರದಿಂದ ಅಗತ್ಯ ಬೆಂಬಲ ನೀಡುವುದರ ಜತೆಗೆ ಹೊಸ ಕೈಗಾರಿಕಾ ನೀತಿಯಲ್ಲೂ ಆದ್ಯತೆ ನೀಡಲು ಕ್ರಮಕೈಗೊಳ್ಳಲಾಗುವುದು’ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಗುರುವಾರ ಆಯೋಜಿಸಿದ್ದ ಉದ್ದಿಮೆದಾರ ಸಿ.ಜಿ.ಶ್ರೀನಿವಾಸನ್ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಪರಿಶಿಷ್ಟ ಜಾತಿ ಹಾಗೂ ಪಂಗಡದವರು ಕೈಗಾರಿಕೆಗಳನ್ನು ಸ್ಥಾಪಿಸಿ ಉದ್ಯೋಗ ನೀಡುವಂತಾಗಬೇಕು. ಸರ್ಕಾರಗಳು ಹಲವು ಸೌಲಭ್ಯಗಳನ್ನು ಎಲ್ಲಾ ಸಮುದಾಯದವರಿಗೆ ನೀಡಿದರೂ ಅದನ್ನು ಜಾರಿಗೊಳಿಸುವ ಬದ್ಧತೆ ಅಧಿಕಾರಿಗಳು, ಜನಪ್ರತಿನಿಧಿಗಳಲ್ಲಿ ಇರಬೇಕಾಗುತ್ತದೆ. ಸೌಲಭ್ಯ ಜಾರಿಗೆ ಎದುರಾಗುವ ಅಡ್ಡಿಗಳನ್ನು ದೂರ ಮಾಡುವಂತೆ ರಾಜ್ಯ ಸರ್ಕಾರವನ್ನೂ ಗಟ್ಟಿ ದನಿಯಲ್ಲಿ ಕೇಳಬೇಕು’ ಎಂದು ತಿಳಿಸಿದರು.

‘ಶ್ರೀನಿವಾಸನ್ ಅವರು ಸರ್ಕಾರಿ ಹುದ್ದೆಯನ್ನು ತೊರೆದು ದಲಿತ ವರ್ಗದವರೂ ಉದ್ಯಮಿಗಳಾಗಬೇಕು ಎಂದು ಎರಡು ದಶಕದಿಂದ ನಿರಂತರ ಪ್ರಯತ್ನ ಮಾಡುತ್ತಲೇ ಇದ್ದಾರೆ. ರಾಜ್ಯದಲ್ಲಿ ಸುಮಾರು 5 ಸಾವಿರ ಮಂದಿ ದಲಿತ ಸಮುದಾಯದವರು ಉದ್ಯಮ ನಡೆಸುತ್ತಿರುವುದರ ಹಿಂದೆ ಶ್ರೀನಿವಾಸನ್ ಶ್ರಮವೂ ಇದೆ. ಪ್ರತಿ ಜಿಲ್ಲೆಯಲ್ಲಿ ಶ್ರೀನಿವಾಸನ್ ತರಹದವರು ಒಬ್ಬರು ಇದ್ದರೆ ಈ ಸಮುದಾಯಕ್ಕೆ ಇನ್ನಷ್ಟು ಬಲ ಬರಲಿದೆ’ ಎಂದರು.

ಅಭಿನಂದನೆ ಸ್ವೀಕರಿಸಿದ ಶ್ರೀನಿವಾಸನ್, ‘ಸರ್ಕಾರದ ಹಂತದಲ್ಲಿ ನಿರಂತರ ಹೋರಾಟ, ಪ್ರಮುಖರ ಬೆಂಬಲದ ಪರಿಣಾಮವಾಗಿ ದಲಿತರಿಗೆ ಉದ್ಯಮ ವಲಯದಲ್ಲಿ ಅವಕಾಶ ಸಿಗುತ್ತಿದೆ. ದಲಿತರು ಉದ್ಯಮ ಆರಂಭಿಸಲು ನೀಡುವ ಸಹಾಯಧನದ ಪ್ರಮಾಣವನ್ನು ಶೇಕಡ 75ಕ್ಕೆ ಏರಿಸಬೇಕು. ಸಮಾಜ ಕಲ್ಯಾಣ ಇಲಾಖೆಯಿಂದ ಕೆಐಎಡಿಬಿಗೆ ₹800 ಕೋಟಿ ಸಹಾಯಧನ ಬಿಡುಗಡೆ ಮಾಡಬೇಕು’ ಎಂದು ಒತ್ತಾಯಿಸಿದರು.

ಸಂಸದ ಮಲ್ಲೇಶ್ ಬಾಬು, ಶಾಸಕರಾದ ಎ.ಸಿ.ಶ್ರೀನಿವಾಸ್, ಎಚ್. ವಿ.ವೆಂಕಟೇಶ್, ವಿಧಾನ ಪರಿಷತ್ ಸದಸ್ಯ ಸುಧಾಮ ದಾಸ್, ನಿವೃತ್ತ ಐಎಎಸ್ ಅಧಿಕಾರಿಗಳಾದ ಇ.ವೆಂಕಟಯ್ಯ, ಇ.ವಿ. ರಮಣರೆಡ್ಡಿ, ಮಂಜುನಾಥ ಪ್ರಸಾದ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಮಂಗಮ್ಮ ಮುನಿಸ್ವಾಮಿ, ಆರ್‌ಪಿಐನ ವೆಂಕಟಸ್ವಾಮಿ, ದಸಂಸ ನಾಗರಾಜು ಉಪಸ್ಥಿತರಿದ್ದರು.

ನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಸಿ.ಜಿ.ಶ್ರೀನಿವಾಸನ್ ಅವರನ್ನು ಸನ್ಮಾನಿಸಲಾಯಿತು. ಸಂಸದರಾದ ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ನಿವೃತ್ತ ಮುಖ್ಯ ಕಾರ್ಯದರ್ಶಿ ರತ್ನಪ್ರಭಾ, ಸಂಸದ ಜಿ.ಕುಮಾರ್ ನಾಯಕ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಆರ್.ವಿ.ವಿಶ್ವವಿದ್ಯಾಲಯದಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಅನುಕೂಲ
ವಿದ್ಯಾರ್ಥಿವೇತನಕ್ಕೆ ₹9 ಕೋಟಿ ಮೀಸಲು

● ಎ.ಎಂ.ಸುರೇಶ

ಬೆಂಗಳೂರು: ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತೇಜನ ಮತ್ತು ಆರ್ಥಿಕ ನೆರವು ನೀಡುವ ಉದ್ದೇಶದಿಂದ ಆರ್.ವಿ ವಿಶ್ವವಿದ್ಯಾಲಯ 2026-27ನೇ ಸಾಲಿನಲ್ಲಿ ಸುಮಾರು ₹9 ಕೋಟಿಯನ್ನು ವಿದ್ಯಾರ್ಥಿವೇತನಕ್ಕೆ ಮೀಸಲಿಟ್ಟಿದೆ.

ಆರ್.ವಿ ವಿಶ್ವವಿದ್ಯಾಲಯದ ಬೇರೆ ಬೇರೆ ಕೋರ್ಸ್‌ಗಳಲ್ಲಿ ಸುಮಾರು ಏಳು ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇವರಲ್ಲಿ ಶೇ 35ರಿಂದ 40ರಷ್ಟು ವಿದ್ಯಾರ್ಥಿಗಳು ಅರ್ಹತೆ ಆಧಾರದ ಮೇಲೆ ವಿದ್ಯಾರ್ಥಿ ವೇತನ ಪಡೆಯಲಿದ್ದಾರೆ ಎಂದು ಕುಲಸಚಿವೆ ಸಹನ ಡಿ.ಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

ಪದವಿ, ಸ್ನಾತಕೋತ್ತರ ಪದವಿ ಹಾಗೂ ಪಿಎಚ್.ಡಿಗೆ ಪ್ರವೇಶ ಪಡೆದಿರುವ ಎಲ್ಲ ವರ್ಗದವರಿಗೆ ಅರ್ಹತೆ ಆಧರಿಸಿ ನೀಡಲಾಗುತ್ತದೆ. ವಿವಿಧ ಕ್ರೀಡೆಗಳಲ್ಲಿ ಮಾಡಿರುವ ಸಾಧನೆ ಆಧರಿಸಿ ಕ್ರೀಡಾ ಕೋಟಾದಡಿ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಪ್ರತಿ ವರ್ಷ ಪಡೆಯುವ ಅಂಕಗಳು ಹಾಗೂ ಕ್ರೀಡಾ ಕ್ಷೇತ್ರದ ಸಾಧನೆ ಆಧರಿಸಿ ಕೋರ್ಸ್ ಮುಗಿಯುವವರೆಗೂ ಈ ಸೌಲಭ್ಯ ಮುಂದುವರಿಸಲಾಗುತ್ತದೆ.

ಪ್ರಸಕ್ತ ಸಾಲಿನಿಂದ ಮೈಸೂರಿನಲ್ಲೂ ಕ್ಯಾಂಪಸ್ ಆರಂಭಿಸಲಾಗುತ್ತಿದೆ. ಅಲ್ಲಿನ ವಿದ್ಯಾರ್ಥಿಗಳಿಗೆ ₹2.13 ಕೋಟಿ ಹಾಗೂ ಬೆಂಗಳೂರು ಕ್ಯಾಂಪಸ್‌ನ ವಿದ್ಯಾರ್ಥಿಗಳಿಗೆ ₹6.55 ಕೋಟಿಯನ್ನು ಮೆರಿಟ್ ಆಧಾರದ ಮೇಲೆ ನೀಡಲಾಗುತ್ತದೆ. ಸೌಲಭ್ಯವನ್ನು ಪಡೆಯಲು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್ ಮೂಲಕವೇ ಅರ್ಜಿ ಸಲ್ಲಿಸಬೇಕು.

ಆರ್ಥಿಕವಾಗಿ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಕೋವಿಡ್ ಸಂದರ್ಭದಲ್ಲಿ(2021-22) ಈ ಯೋಜನೆ ಆರಂಭಿಸಿ, ₹36.06 ಲಕ್ಷ ನೀಡಲಾಗಿತ್ತು. ಇದನ್ನು ಮುಂದುವರಿಸಿಕೊಂಡು ಬರುತ್ತಿದ್ದು, ಪ್ರತಿ ವರ್ಷ ಇದಕ್ಕಾಗಿ ಮೀಸಲಿಡುವ ಹಣವನ್ನು ಜಾಸ್ತಿ ಮಾಡಲಾಗುತ್ತಿದೆ. ಕಳೆದ ವರ್ಷ ₹5.94 ಕೋಟಿಯನ್ನು ಇದಕ್ಕಾಗಿ ವೆಚ್ಚ ಮಾಡಲಾಗಿತ್ತು.

‘ಆರ್.ವಿ. ಶಿಕ್ಷಣ ಸಮಿತಿ ಟ್ರಸ್ಟ್ ಅಡಿಯಲ್ಲಿ 30 ಶಿಕ್ಷಣ ಸಂಸ್ಥೆಗಳು ಇವೆ. ಯಾವುದೇ ವಿಭಾಗದಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಹೊಸದಾಗಿ ಪ್ರವೇಶ ಪಡೆದವರಿಗೆ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಗಳಿಸಿರುವ ಅಂಕಗಳನ್ನು ಆಧರಿಸಿ ನೀಡಲಾಗುತ್ತದೆ. ಈಗಾಗಲೇ ಓದುತ್ತಿರುವ ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಗಳಿಸಬೇಕು. ಆಯಾ ವರ್ಷವೇ ಎಲ್ಲ ವಿಷಯಗಳಲ್ಲಿ ಉತ್ತೀರ್ಣರಾಗಬೇಕು ಎಂಬುದು ನಮ್ಮ ಆಶಯ’ ಎಂದು ತಿಳಿಸಿದರು.

ಮುಖ್ಯಾಂಶಗಳು

- 2021–22ರಲ್ಲಿ ಯೋಜನೆ ಆರಂಭ
- ವಿದ್ಯಾರ್ಥಿ ವೇತನ: ಅನುದಾನ ಪ್ರತಿ ವರ್ಷ ಏರಿಕೆ
- ಕ್ರೀಡಾ ಸಾಧಕರಿಗೂ ನೆರವು

ದಾನಿಗಳಿಂದಲೂ ವಿದ್ಯಾರ್ಥಿ ವೇತನ

ಸಹನ ಡಿ.ಗೌಡ

ಆರ್ಥಿಕವಾಗಿ ಹಿಂದುಳಿದಿರುವ ಪೋಷಕರ ಮಕ್ಕಳಿಗೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವಾಗಬೇಕು ಎಂಬ ಉದ್ದೇಶದಿಂದ ದಾನಿಗಳು ಕೂಡ ವಿದ್ಯಾರ್ಥಿ ವೇತನ ನೀಡುತ್ತಿದ್ದಾರೆ. ನಿಜವಾದ ಅರ್ಹರನ್ನು ಗುರುತಿಸಿ ಆರ್.ವಿ ಶಿಕ್ಷಣ ಸಮಿತಿ ಟ್ರಸ್ಟ್ ಮೂಲಕವೇ ದಾನಿಗಳು ಕೊಡುವ ನೆರವು ನೀಡಲಾಗುತ್ತದೆ.

ಉದ್ಯಮಿಗಳು, ಹಿರಿಯ ನಾಗರಿಕರು, ಸರ್ಕಾರೇತರ ಸಂಸ್ಥೆಗಳು ವಿದ್ಯಾರ್ಥಿಗಳ ಶಿಕ್ಷಣದ ವೆಚ್ಚ ಭರಿಸಲು ಮುಂದೆ ಬರುತ್ತಿದ್ದಾರೆ. ಸುಮಾರು 40 ವಿದ್ಯಾರ್ಥಿಗಳು ಈ ರೀತಿಯ ಪ್ರಯೋಜನ ಪಡೆದಿದ್ದಾರೆ.

ಕೆಲವರು ತಮ್ಮ ತಂದೆ –ತಾಯಿ ಹೆಸರಿನಲ್ಲಿ ವಿದ್ಯಾರ್ಥಿ ವೇತನ ನೀಡುತ್ತಿದ್ದಾರೆ ಎಂದು ಸಹನ ಡಿ.ಗೌಡ ತಿಳಿಸಿದರು.

ಜೈನ್ ವಿಶ್ವವಿದ್ಯಾಲಯದಲ್ಲಿ ಕಿರು ಚಲನಚಿತ್ರೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈನ್ ಡೀಮ್ಡ್ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವತಿಯಿಂದ ಆಯೋಜಿಸಿದ್ದ ಕಿರು ಚಲನಚಿತ್ರೋತ್ಸವ ಗುರುವಾರ ಮುಕ್ತಾಯವಾಯಿತು.

ಕಿರುಚಿತ್ರೋತ್ಸವದ ತೀರ್ಪುಗಾರ, ಲವ್ ಮಾಕ್‌ಟೇಲ್ ಸರಣಿಯ ಸಂಕಲನಕಾರ ಕ್ರೇಜಿ ಮೈಂಡ್ಸ್ ಮಾತನಾಡಿ, ‘ಚಲನಚಿತ್ರದಲ್ಲಿ ಅಸಾಧಾರಣ ಕಥೆಯ ಚಿತ್ರಕಥೆ ಮತ್ತು ಸಂಕಲನದ ಪಾತ್ರ ಮಹತ್ವದ್ದಾಗಿದೆ’ ಎಂದು ಹೇಳಿದರು.

ಸಿನಿಮಾದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಕೆಯಾಗುತ್ತಿದೆ. ಆದರೆ, ಅದು ಎಂದಿಗೂ ಮಾನವನ ಭಾವನೆಯ ಜಟಿಲತೆಗಳನ್ನು ತೋರಿಸಲು ಸಾಧ್ಯವಿಲ್ಲ. ಸಿನಿಮಾದಲ್ಲಿ ಎಐ ತಂತ್ರಜ್ಞಾನದ ಬಳಕೆ ದಶಕದ ಹಿಂದಿನಿಂದಲೂ ಇದೆ ಎಂದು ಹೇಳಿದರು.

ಫಿಲ್ಮ್‌ಫೇರ್ ಪ್ರಶಸ್ತಿ ವಿಜೇತ ನವೀನ್ ಶಂಕರ್ ಮಾತನಾಡಿ, ‘ಈ ರೀತಿಯ ಚಲನಚಿತ್ರೋತ್ಸವ ಹೊಸ ಆಲೋಚನೆ ಮತ್ತು ಉತ್ಸಾಹಕ್ಕೆ ಕಾರಣವಾಗುತ್ತದೆ. ಚಿತ್ರ ಮಾಡಲು ಧೈರ್ಯವನ್ನು ತಂದುಕೊಡುತ್ತದೆ. ಕಾಲೇಜು ಆವರಣದಲ್ಲಿ ಚಿತ್ರೋತ್ಸವ ನಡೆಯುತ್ತಿರುವುದರಿಂದ ಅದರ ಪರಿಣಾಮ ಹೆಚ್ಚಿರುತ್ತದೆ. ವಿದ್ಯಾರ್ಥಿಗಳನ್ನು ಇನ್ನಷ್ಟು ಕ್ರಿಯಾಶೀಲರನ್ನಾಗಿ ಮಾಡುತ್ತದೆ’ ಎಂದರು.

ತೀರ್ಪುಗಾರರ ಸಮಿತಿ ಸದಸ್ಯ ಬಿ.ಎಸ್. ಕೆಂಪರಾಜು, ನವೀನ್ ದ್ವಾರಕನಾಥ್, ಜೈನ್ ಡೀಮ್ಡ್ ವಿಶ್ವವಿದ್ಯಾಲಯದ ಸಹ ಕುಲಪತಿ ದಿನೇಶ್ ನೀಲಕಾಂತ್, ಶೈಕ್ಷಣಿಕ ವಿಭಾಗದ ಉಪ-ಡೀನ್ ಕಿರಣ್ ಎಸ್., ಪ್ರಾಧ್ಯಾಪಕಿ ಸಂಗೀತಾ ದೇವನಾಥನ್, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥೆ ಭಾರ್ಗವಿ ಡಿ. ಹೆಮ್ಮಿಗೆ ಭಾಗವಹಿಸಿದ್ದರು.

ನವೀನ್ ಶಂಕರ್ ಅವರನ್ನು ದಿನೇಶ್ ನೀಲಕಾಂತ್, ಕಿರಣ್ ಎಸ್, ಸಂಗೀತಾ ದೇವನಾಥನ್, ಭಾರ್ಗವಿ ಡಿ ಹೆಮ್ಮಿಗೆ ಗೌರವಿಸಿದರು

‘ಅಂಗವಿಕಲರ ಸಬಲೀಕರಣಕ್ಕೆ ಒತ್ತು ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿನ ಬಹುತೇಕ ಅಂಗವಿಕಲರು ಬಡತನ ರೇಖೆಗಿಂತ ಕೆಳಗೆ ಬದುಕುತ್ತಿದ್ದು ಅವರ ಸಬಲೀಕರಣಕ್ಕೆ ಸರ್ಕಾರ ಮತ್ತು ಸಮಾಜ ಅಗತ್ಯ ನೆರವು ನೀಡಬೇಕು’ ಎಂದು ಸಮರ್ಥನಂ ಇಂಟರ್ ನ್ಯಾಷನಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಜಿ.ಕೆ. ಮಹಾಂತೇಶ್ ತಿಳಿಸಿದರು.

ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಮಾಜ ಕಾರ್ಯ ವಿಭಾಗವು ಅಂಗವಿಕಲರ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿರುವ ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಧಾನ ಭಾಷಣ ಮಾಡಿದರು.

‘ವಿಶ್ವದ ಜನಸಂಖ್ಯೆಯ ಶೇ 15ರಷ್ಟು ಮಂದಿ ವಿವಿಧ ಅಂಗವೈಕಲ್ಯದಿಂದ ಬಳಲುತ್ತಿದ್ದಾರೆ. ಉನ್ನತ ಶಿಕ್ಷಣದ ಹಂತದಲ್ಲಿ ಅಂಗವಿಕಲರ ಸಂಖ್ಯೆ ಅತ್ಯಲ್ಪವಾಗಿದ್ದು, ಉದ್ಯೋಗದಲ್ಲೂ ಅವಕಾಶಗಳಿಂದ ವಂಚಿತರಾಗಿದ್ದಾರೆ’ ಎಂದರು.

‘ಅಂಗವಿಕಲರೂ ತೆರಿಗೆ ಪಾವತಿಸುವವರಾಗಿ ಪರಿವರ್ತನೆಯಾಗಬೇಕು. ಸಮರ್ಥನಂ ಟ್ರಸ್ಟ್ ಸಿಎಸ್‌ಆರ್ ನಿಧಿಯ ಬೆಂಬಲದಿಂದ ಕರ್ನಾಟಕ ಸೇರಿ ಅನೇಕ ರಾಜ್ಯಗಳಲ್ಲಿ ಅಂಗವಿಕಲರಿಗೆ ನೆರವು ಒದಗಿಸುತ್ತಿದೆ’ ಎಂದು ತಿಳಿಸಿದರು.

ಸಮ್ಮೇಳನ ಉದ್ಘಾಟಿಸಿದ ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್, ‘ಅಂಗವಿಕಲರ ಜೀವನಮಟ್ಟ ಸುಧಾರಣೆಗೆ ಉತ್ತೇಜನ ನೀಡಲಾಗುವುದು’ ಎಂದರು.

ಅಂಗವಿಕಲರ ಪುನರ್ವಸತಿ ಮತ್ತು ಸಂಶೋಧನಾ ಸಂಸ್ಥೆಯ ಪ್ರತಿನಿಧಿ ಎನ್. ಎಸ್.ಸೆಂಥಿಲ್ ಕುಮಾರ್, ನಿಮ್ಹಾನ್ಸ್ ನಿವೃತ್ತ ಪ್ರಾಧ್ಯಾಪಕ ಐ.ಎ. ಷರೀಫ್, ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ವೈ.ಎಸ್.ಸಿದ್ದೇಗೌಡ, ಕುಲಪತಿ ಬಿ.ರಮೇಶ್, ಕುಲಸಚಿವರಾದ ಎ.ನವೀನ್ ಜೋಸೆಫ್, ರಮೇಶ. ಬಿ.ಕುಡೇನಟ್ಟಿ, ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥರಾದ ರಿತಿಕಾ ಸಿನ್ಹಾ ಇದ್ದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿರುವ ರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಉಮಾ ಮಹದೇವನ್, ಜಿ.ಕೆ.ಮಹಾಂತೇಶ್, ವೈ.ಎಸ್.ಸಿದ್ದೇಗೌಡ, ಬಿ.ರಮೇಶ್ ಉಪಸ್ಥಿತರಿದ್ದರು

ಜಿಆರ್‌ಟಿಯಿಂದ ಅಕ್ಷಯ ತೃತೀಯ ವಿಶೇಷ ಕೊಡುಗೆ

ಬೆಂಗಳೂರು : ಚಿನ್ನಾಭರಣ ಮಾರಾಟ ಕ್ಷೇತ್ರದಲ್ಲಿ ತನ್ನದೇ ಆದ ಪ್ರತ್ಯೇಕತೆಯನ್ನು ಹೊಂದಿರುವ ಜಿಆರ್‌ಟಿ ಜ್ಯುವೆಲ್ಲರ್ಸ್ ಈ ವರ್ಷದ ಅಕ್ಷಯ ತೃತೀಯ ಹಬ್ಬದ ಅಂಗವಾಗಿ ತನ್ನ ಗ್ರಾಹಕರಿಗಾಗಿ ಆಕರ್ಷಕ ರಿಯಾಯಿತಿ ಹಾಗೂ ವಿಶೇಷ ಕೊಡುಗೆಗಳನ್ನು ಪ್ರಕಟಿಸಿದೆ. 1964ರಿಂದ ಗ್ರಾಹಕರ ನಂಬಿಕೆ, ವಿಶ್ವಾಸ ಉಳಿಸಿಕೊಂಡು ಬಂದಿರುವ ಜಿಆರ್‌ಟಿ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದ ಗ್ರಾಹಕರಿಗಾಗಿ ಈ ಸೌಲಭ್ಯಗಳನ್ನು ನೀಡುತ್ತಿದೆ.

ಏನೇನು ಕೊಡುಗೆ : ಅಕ್ಷಯ ತೃತೀಯ ಹಬ್ಬದ ಸಡಗರವನ್ನು ಹೆಚ್ಚಿಸಲು ಜಿಆರ್‌ಟಿ ಜ್ಯುವೆಲ್ಲರಿ ಬಂಗಾರದ ಆಭರಣಗಳ ತಯಾರಿಕಾ ವೆಚ್ಚದ(ವಿಎ) ಮೇಲೆ ಶೇ.20ರಷ್ಟು ರಿಯಾಯಿತಿ ಘೋಷಿಸಿದೆ. ಜತೆಗೆ, ಹಳೆಯ ಚಿನ್ನದ ಆಭರಣಗಳ ವಿನಿಮಯದ ಮೇಲೆ ಪ್ರತಿ ಗ್ರಾಂಗೆ ಹೆಚ್ಚುವರಿ 100ರೂ. ಲಾಭ ನೀಡುತ್ತಿದೆ. ವಜ್ರ ಮತ್ತು ಅನ್‌ಕಟ್ ವಜ್ರಗಳ ಮೌಲ್ಯದ ಮೇಲೆ ಶೇ.12.5ರಷ್ಟು ರಿಯಾಯಿತಿ (ಸೋಲಿಟೇರ್ ಹೊರತುಪಡಿಸಿ) ನೀಡುತ್ತಿದೆ. ಇದಲ್ಲದೇ, ಬೆಳ್ಳಿ ಸಾಮಗ್ರಿಗಳ ತಯಾರಿಕಾ ವೆಚ್ಚದ ಮೇಲೆ ಶೇ.25 ರಷ್ಟು ಮತ್ತು ಬೆಳ್ಳಿ ಆಭರಣಗಳ ಎಂಆರ್‌ಪಿ ಮೇಲೆ ಶೇ.10ರಷ್ಟು ರಿಯಾಯಿತಿ ಘೋಷಿಸುವುದರೊಂದಿಗೆ ಚಿನ್ನದ ನಾಣ್ಯಗಳ ಮೇಲೆ ಯಾವುದೇ ತಯಾರಿಕಾ ವೆಚ್ಚ (ವಿಎ) ಇರುವುದಿಲ್ಲ ಎಂದು ಸಂಸ್ಥೆ ತಿಳಿಸಿದೆ.

ಮುಂಗಡ ಬುಕ್ಕಿಂಗ್ ವ್ಯವಸ್ಥೆ : ಗ್ರಾಹಕರು ತಾವು ಮೆಚ್ಚಿದ ಆಭರಣಗಳನ್ನು ದರ ಏರಿಕೆಯ ಭೀತಿಯಿಲ್ಲದೆ ಖರೀದಿಸಲು ಮುಂಗಡ ಬುಕ್ಕಿಂಗ್ ಮಾಡುವ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿದೆ. ಗ್ರಾಹಕರು ಶೇ.75ರಷ್ಟು ಮುಂಗಡ ಹಣ ಪಾವತಿಸಿ ಆಭರಣಗಳನ್ನು ಕಾಯ್ದಿರಿಸಬಹುದು. ಅಕ್ಷಯ ತೃತೀಯ ದಿನದಂದು (ಏಪ್ರಿಲ್ 19 ಮತ್ತು 20) ಚಿನ್ನದ ಬೆಲೆ ಕಡಿಮೆಯಾದಲ್ಲಿ, ಆ ವ್ಯತ್ಯಾಸದ ಮೊತ್ತವನ್ನು ಗ್ರಾಹಕರಿಗೆ ಮರುಪಾವತಿಸಲಾಗುವುದು ಎಂದು ಸಂಸ್ಥೆ ಭರವಸೆ ನೀಡಿದೆ.

ಈ ಬಗ್ಗೆ ಮಾತನಾಡಿರುವ ಜಿಆರ್‌ಟಿ ಜ್ಯುವೆಲ್ಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಆನಂದ್ ಅನಂತಪದ್ಮನಾಭನ್, 'ಅಕ್ಷಯ ತೃತೀಯವು ಸಮೃದ್ಧಿ ಮತ್ತು ಹೊಸ ಆರಂಭದ ಸಂಕೇತವಾಗಿದೆ. ಈ ಸುಸಂದರ್ಭದಲ್ಲಿ ಗ್ರಾಹಕರಿಗೆ ಉತ್ತಮ ಮೌಲ್ಯದ ಆಭರಣಗಳು ಮತ್ತು ಆರ್ಥಿಕ ಪ್ರಯೋಜನಗಳನ್ನು ನೀಡುವ ಉದ್ದೇಶದಿಂದ ನಾವು ಈ ಕೊಡುಗೆಗಳನ್ನು ವಿನ್ಯಾಸಗೊಳಿಸಿದ್ದೇವೆ' ಎಂದಿದ್ದಾರೆ.

ಜಿಆರ್‌ಟಿ ಜ್ಯುವೆಲ್ಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್.ರಾಧಾಕೃಷ್ಣನ್ ಮಾತನಾಡಿ, ' ಜಿಆರ್‌ಟಿ ಜ್ಯುವೆಲ್ಲರಿಯಿಂದ ಗ್ರಾಹಕರ ನಿರೀಕ್ಷೆಗೆ ತಕ್ಕಂತೆ ಆಭರಣಗಳನ್ನು ಪರಿಚಯಿಸಲಾಗುತ್ತಿದೆ. ಜತೆಗೆ, ಖರೀದಿಗೆ ಪೂರಕ ವಾತಾವರಣ ನಿರ್ಮಿಸಿದ್ದೇವೆ. ಅಕ್ಷಯ ತೃತೀಯ ಹಬ್ಬಕ್ಕೆಂದು ವಿಶೇಷ ಕೊಡುಗೆ ನೀಡುತ್ತಿದ್ದು, ಮುಂಗಡ ಬುಕ್ಕಿಂಗ್ ವ್ಯವಸ್ಥೆ ನೀಡಲಾಗುತ್ತಿದೆ. ನಮ್ಮ ಬೆಲೆ ರಕ್ಷಣೆ ಮತ್ತು ಮುಂಗಡ ಬುಕ್ಕಿಂಗ್ ಸೌಲಭ್ಯವು ಗ್ರಾಹಕರಿಗೆ ಸುರಕ್ಷಿತ ಮತ್ತು ಭರವಸೆಯ ಶಾಪಿಂಗ್ ಅನುಭವವನ್ನು ನೀಡುತ್ತದೆ' ಎಂದಿದ್ದಾರೆ. ದಕ್ಷಿಣ ಭಾರತದಾದ್ಯಂತ 66 ಶೋರೂಮ್‌ಗಳನ್ನು ಹೊಂದಿರುವ ಜಿಆರ್‌ಟಿ ಜ್ಯುವೆಲ್ಲರ್ಸ್, ಸಿಂಗಾಪುರದಲ್ಲೂ ತನ್ನ ಶಾಖೆಯನ್ನು ಹೊಂದಿದೆ. ಗ್ರಾಹಕರು ಹತ್ತಿರದ ಶೋರೂಮ್‌ಗೆ ಭೇಟಿ ನೀಡಿ ಈ ಸೌಲಭ್ಯಗಳ ಪ್ರಯೋಜನ ಪಡೆಯಬಹುದಾಗಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ನಿ.)
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಹಳೇ ಅಂಚೆ ಕಛೇರಿ ಕಟ್ಟಡ, ಮೊದಲನೇ ಮಹಡಿ, ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು–24
ದೂರವಾಣಿ ಸಂಖ್ಯೆ–080–22236837, ಇ–ಮೇಲ್: ksmdmc@gmail.com

ಸಂ: ಕರಾಮಾಅ&ಮಾನಿನಿ/ವ್ಯನಿ/ವಿನಿ1/135/2025–26 ದಿನಾಂಕ:26.03.2026

ಅಲ್ಪಾವಧಿ ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ನಿ.) ಹಾಗೂ ತೋಟಗಾರಿಕೆ ಇಲಾಖೆ ಸಹಯೋಗದೊಂದಿಗೆ ಮಾವು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಏರ್ಪಡಿಸಲು ಮಳಿಗೆಗಳ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಕೆಲಸಗಳಿಗೆ ವಿದ್ಯುನ್ಮಾನ (e-procurement portal) ವೇದಿಕೆಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ದಿನಾಂಕ 15.04.2026 ರಂದು 16.00 ಗಂಟೆಯ ಒಳಗೆ e-procurement portal ಮೂಲಕ ಸಲ್ಲಿಸತಕ್ಕದ್ದು, ತಾಂತ್ರಿಕ ಟೆಂಡರ್‌ಗಳನ್ನು ದಿನಾಂಕ: **17.04.2026 ರಂದು 16.30 ಗಂಟೆಗೆ** ಮತ್ತು ಆರ್ಥಿಕ ಟೆಂಡರ್‌ಗಳನ್ನು ದಿನಾಂಕ: **18.04.2026 ರಂದು 16.30 ಗಂಟೆಗೆ** ತೆರೆಯಲಾಗುವುದು. **ಭದ್ರತಾ ಠೇವಣಿ (EMD) ರೂ. 75,000/–** ನಿಗದಿ ಪಡಿಸಿದೆ.
ಹೆಚ್ಚಿನ ವಿವರಗಳನ್ನು **http://eproc.karnataka.gov.in.** ರಲ್ಲಿ ಪಡೆಯಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ
ಮತ್ತು ಮಾರುಕಟ್ಟೆ ನಿಗಮ, ನಿಯಮಿತ
ಹಳೇ ಅಂಚೆ ಕಛೇರಿ ಕಟ್ಟಡ, ಪಶು ವೈದ್ಯಕೀಯ ಕಾಲೇಜು
ಆವರಣ, ಹೆಬ್ಬಾಳ, ಬೆಂಗಳೂರು–24

6ನೇ ಸ್ಥಾನಕ್ಕೇರಿದ ಬೆಂ. ಗ್ರಾಮಾಂತರ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: 2025-26ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಶೇ 91ರಷ್ಟು ಫಲಿತಾಂಶದೊಂದಿಗೆ ರಾಜ್ಯದಲ್ಲಿ 6ನೇ ಸ್ಥಾನ ಪಡೆದಿದೆ.

ಕಳೆದ ವರ್ಷ 8ನೇ ಸ್ಥಾನದಲ್ಲಿದ್ದ ಜಿಲ್ಲೆಯು, ಶೇ. 79.70 ರಷ್ಟು ಫಲಿತಾಂಶ ಪಡೆದುಕೊಂಡಿದ್ದು, ಈ ಬಾರಿ ಫಲಿತಾಂಶದ ಪ್ರಮಾಣದಲ್ಲಿ ಏರಿಕೆಯೊಂದಿಗೆ 6ನೇ ಸ್ಥಾನಕ್ಕೆ ಜಿಗಿದಿದೆ.

ಜಿಲ್ಲೆಗೆ ಪ್ರಥಮ: ನೆಲಮಂಗಲದ ಹೊಯ್ಸಳ ಪಿಯು ಕಾಲೇಜು ವಿದ್ಯಾರ್ಥಿ ಎ.ಬಿಂದು ವಿಜ್ಞಾನ ವಿಭಾಗದಲ್ಲಿ 600ಕ್ಕೆ 597 ಅಂಕ ಪಡೆದು ವಿಜ್ಞಾನ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಹೊಸಕೋಟೆಯ ಶ್ರೀ ಮಾರುತಿ ಪಿಯು ಕಾಲೇಜು ವಿದ್ಯಾರ್ಥಿ ಜೀವಿತ ಎಚ್. ಎಸ್ ಅವರು ವಾಣಿಜ್ಯ ವಿಭಾಗದಲ್ಲಿ 600 ಕ್ಕೆ 597 ಅಂಕ ಪಡೆದು ವಾಣಿಜ್ಯ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ, ರಾಜ್ಯಕ್ಕೆ 4ನೇ ಸ್ಥಾನ ಪಡೆದಿದ್ದಾರೆ.

‘ರೈಲಿನ ವೇಗ 135 ಕಿ.ಮೀ.ಗೆ ಹೆಚ್ಚಳ’

ಬೆಂಗಳೂರು–ಮೈಸೂರು ನಡುವೆ ಒಂದು ಗಂಟೆಯ ಪ್ರಯಾಣ: ಸಚಿವ ವಿ. ಸೋಮಣ್ಣ

ಪ್ರಜಾವಾಣಿ ವಾರ್ತೆ

ಮೈಸೂರು: ‘ಬೆಂಗಳೂರು- ಮೈಸೂರು ನಡುವೆ ಸಂಚರಿಸುವ ರೈಲುಗಳ ಗರಿಷ್ಠ ವೇಗವನ್ನು 110ರಿಂದ 135 ಕಿ.ಮೀ.ಗೆ ಹೆಚ್ಚಿಸಿದ್ದು, ಪ್ರಯಾಣದ ಅವಧಿ ಒಂದು ಗಂಟೆಗೆ ಇಳಿಯಲಿದೆ’ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಬೆಂಗಳೂರಿಗೆ ಪರ್ಯಾಯವಾಗಿ ಮೈಸೂರು, ತುಮಕೂರಿನಂತಹ ನಗರಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ. ರಾಜಧಾನಿಯಿಂದ ಮೈಸೂರಿಗೆ ಸದ್ಯದಲ್ಲೇ ಇನ್ನೂ ಎರಡು ಮೆಮು ರೈಲುಗಳು ಸಂಚರಿಸಲಿವೆ’ ಎಂದರು.

ರೈಲ್ವೆ ಯೋಜನೆಗಳಿಗೆ ಅಡ್ಡಿ: ‘ರಾಜ್ಯ ಸರ್ಕಾರ ರೈಲ್ವೆ ಯೋಜನೆಗಳಿಗೆ ಭೂಸ್ವಾಧೀನ ಸೇರಿ ಅಗತ್ಯ ನೆರವು ನೀಡದೇ ಅಡ್ಡಗಾಲು ಹಾಕುತ್ತಿದೆ’ ಎಂದು ಸೋಮಣ್ಣ ದೂರಿದರು.

‘ಬೆಂಗಳೂರಿನಿಂದ ಕನಕಪುರ ಮಾರ್ಗವಾಗಿ ಚಾಮರಾಜನಗರದವರೆಗೆ 142 ಕಿ.ಮೀ. ಉದ್ದದ ರೈಲು ಮಾರ್ಗ ನಿರ್ಮಾಣಕ್ಕೆ ₹1,200 ಕೋಟಿ ವೆಚ್ಚದ ಯೋಜನೆ ರೂಪಿಸಲಾಗಿತ್ತು. ಆದರೆ 2024ರ ಡಿಸೆಂಬರ್‌ನಲ್ಲಿ ಪತ್ರ ಬರೆದ ರಾಜ್ಯ ಸರ್ಕಾರ, ಯೋಜನೆಗೆ ಸಹಕಾರ ನೀಡಲು ನಿರಾಕರಿಸಿದೆ’ ಎಂದರು.

‘ಮೈಸೂರು-ಕುಶಾಲನಗರ ಮಾರ್ಗ ನಿರ್ಮಾಣಕ್ಕೂ ಸಹಕಾರ ನೀಡುತ್ತಿಲ್ಲ. ಆದಾಗ್ಯೂ ಇಲಾಖೆಯು ಯೋಜನೆ ಮುಂದುವರಿಸಲಿದೆ’ ಎಂದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆಯ 17 ಬಾರಿ ಬಜೆಟ್ ಮಂಡಿಸಿದ್ದರೂ ರಾಜ್ಯಕ್ಕೆ ಏನೂ ಕೊಡುಗೆ ನೀಡಿಲ್ಲ. ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಹಳ್ಳ ಹಿಡಿದಿದೆ. ಆದರೆ ಅನಿರೀಕ್ಷಿತವಾಗಿ ಕೇಂದ್ರ ಸಚಿವರಾದ ನಾನು ಹಾಗೂ ಎಚ್‌.ಡಿ. ಕುಮಾರಸ್ವಾಮಿ ಸಾಕಷ್ಟು ಕೆಲಸ ಮಾಡುತ್ತಿದ್ದೇವೆ. ರಾಜ್ಯದಲ್ಲಿ ₹52 ಸಾವಿರ ಕೋಟಿ ವೆಚ್ಚದ ರೈಲ್ವೆ ಯೋಜನೆಗಳು ಪ್ರಗತಿಯಲ್ಲಿದ್ದು, ಹತ್ತು ವರ್ಷದಲ್ಲಿ 1,750 ಕಿ.ಮೀ. ಉದ್ದದ ಹೊಸ ಹಳಿಗಳನ್ನು ನಿರ್ಮಿಸಲಾಗಿದೆ. ₹1,900 ಕೋಟಿ ವೆಚ್ಚದಲ್ಲಿ 61 ಅಮೃತ ನಿಲ್ದಾಣಗಳನ್ನು ನವೀಕರಿಸಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

‘ಮಂಗಳೂರು-ಕುಕ್ಕೆ ಸುಬ್ರಹ್ಮಣ್ಯ ನಡುವಿನ 51 ಕಿ.ಮೀ. ಉದ್ದದ ರೈಲು ಮಾರ್ಗವನ್ನು ವಿದ್ಯುದೀಕರಣ ಮಾಡಿದ್ದು ನಮ್ಮ ಸಾಧನೆ. ₹6 ಸಾವಿರ ಕೋಟಿ ವೆಚ್ಚದಲ್ಲಿ ಮೆಗಾ ಕೋಚ್ ಕೇಂದ್ರ ನಿರ್ಮಾಣಕ್ಕೂ ಯೋಜನೆ ರೂಪಿಸಿದ್ದೇವೆ’ ಎಂದರು.

ಸೇತುವೆ ನಿರ್ಮಾಣಕ್ಕೆ ಒತ್ತು: ‘ಹತ್ತು ವರ್ಷದಲ್ಲಿ ರಾಜ್ಯದಲ್ಲಿ 707 ಹೊಸ ರೈಲ್ವೆ ಸೇತುವೆಗಳನ್ನು ನಿರ್ಮಿಸಲಾಗುತ್ತಿದೆ. ಅಗತ್ಯವಿರುವೆಡೆ ನಿರ್ಮಿಸಲು ಸೂಚಿಸಿದ್ದು, ವೆಚ್ಚವನ್ನು ಕೇಂದ್ರವೇ ಭರಿಸಲಿದೆ’ ಎಂದರು.

ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹಾಗೂ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇದ್ದರು. ಬಳಿಕ ಸಚಿವದ್ವಯರು ರೈಲ್ವೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಬೆಂಗಳೂರು–ಮೈಸೂರು ರೈಲು ಮಾರ್ಗ ಪರಿಶೀಲಿಸಿದ ಕೇಂದ್ರ ಸಚಿವರಾದ ವಿ.ಸೋಮಣ್ಣ ಮತ್ತು ಎಚ್‌.ಡಿ.ಕುಮಾರಸ್ವಾಮಿ.

ಐದು ತಾಸು ಪ್ರಯಾಣ

ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹಾಗೂ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಒಳಗೊಂಡ ತಂಡವು ಗುರುವಾರ ವಿಶೇಷ ರೈಲಿನಲ್ಲಿ ಬೆಂಗಳೂರು–ಮೈಸೂರು ನಡುವೆ ಪ್ರಯಾಣಿಸಿತು.

ಬೆಳಿಗ್ಗೆ 10ಕ್ಕೆ ಬೆಂಗಳೂರು ಕೆಎಸ್‌ಆರ್ ನಿಲ್ದಾಣದಿಂದ ಆರಂಭಗೊಂಡ ಪ್ರಯಾಣವು ಮಧ್ಯಾಹ್ನ 2.45ರ ವೇಳೆಗೆ ಮೈಸೂರಿನಲ್ಲಿ ಮುಕ್ತಾಯಗೊಂಡಿತು. ನಡುವೆ ಎಂಟು ನಿಲ್ದಾಣಗಳಿಗೆ ಭೇಟಿ ಕೊಟ್ಟು ಜನರ ಅಹವಾಲು ಆಲಿಸಿತು. ‘ಪ್ರಯಾಣಿಕರ ಸಮಸ್ಯೆ ಆಲಿಸಿದ್ದೇವೆ. ಕೆಲವೆಡೆ ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆಗೆ ಮನವಿ ಮಾಡಿದ್ದಾರೆ ಎಂದು ಕುಮಾರಸ್ವಾಮಿ ತಿಳಿಸಿದರು.

ಬಾಂಗ್ಲಾದ ನಾಲ್ವರಿಗೆ ಮೂರು ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಮಾನವ ಕಳ್ಳಸಾಗಣೆ ಪ್ರಕರಣದಲ್ಲಿ ಬಾಂಗ್ಲಾದೇಶದ ನಾಲ್ವರನ್ನು ದೋಷಿಗಳೆಂದು ತೀರ್ಪು ನೀಡಿರುವ ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯವು ಅಪರಾಧಿಗಳಿಗೆ ಮೂರು ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿದೆ.

ಬಾಂಗ್ಲಾದೇಶದ ಜಕೀರ್ ಖಾನ್, ಬಾದಲ್ ಹೌಲಾದರ್, ಕಬೀರ್, ಮೊಹಮ್ಮದ್ ಬಚ್ಚು ಫರಾಮಿ ಶಿಕ್ಷೆಗೆ ಒಳಗಾದ ಅಪರಾಧಿಗಳು. ನಾಲ್ವರೂ ತಲಾ ₹20 ಸಾವಿರ ದಂಡ ಪಾವತಿಸಬೇಕು. ದಂಡ ಕಟ್ಟಲು ವಿಫಲವಾದರೆ ಒಂದು ತಿಂಗಳು ಹೆಚ್ಚುವರಿ ಜೈಲು ಶಿಕ್ಷೆ ಅನುಭವಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಬಾಂಗ್ಲಾದೇಶದಿಂದ ಬೆನ್‌ಪೋಲ್, ಜಶೋರ್, ಅಖೌರಾ ಮೂಲಕ ಭಾರತ ಪ್ರವೇಶಿಸಿದ್ದಾಗಿ ಅಪರಾಧಿಗಳು ವಿಚಾರಣೆಯ ವೇಳೆ ತಪ್ಪೊಪ್ಪಿಕೊಂಡಿದ್ದರು. ಜತೆಗೆ, ನಕಲಿ ದಾಖಲೆಗಳನ್ನು ಸೃಷ್ಟಿಸಿ, ಭಾರತೀಯರು ಎಂಬುದಾಗಿ ಗುರುತಿನ ದಾಖಲೆ ಪಡೆದುಕೊಂಡಿದ್ದರು ಎಂದು ಮೂಲಗಳು ಹೇಳಿವೆ.

ನಗರದ ಕೆಲವು ಪ್ರದೇಶಗಳಲ್ಲಿ ಅಪರಾಧಿಗಳು ಕಸ ವಿಂಗಡಣೆ ವ್ಯವಹಾರ ನಡೆಸುತ್ತಿದ್ದರು. ಅಲ್ಲದೆ, ಕಳ್ಳಸಾಗಣೆ ಮೂಲಕ ಬಾಂಗ್ಲಾದೇಶದ ಪ್ರಜೆಗಳನ್ನು ಕರೆಸಿಕೊಂಡು ಕೆಲಸಕ್ಕೆ ನೇಮಿಸಿಕೊಂಡಿದ್ದರು. ಅಕ್ರಮ ವಾಸಿಗಳಿಗೆ ಶೆಡ್ ನಿರ್ಮಿಸಿ ಬೆಂಗಳೂರಿನಲ್ಲಿ ವಾಸಿಸಲು ಅವಕಾಶ ಮಾಡಿಕೊಡುತ್ತಿದ್ದರು ಎಂಬುದು ಎನ್‌ಐಎ ತನಿಖೆಯಲ್ಲಿ ಪತ್ತೆಯಾಗಿತ್ತು.

ಎನ್‌ಐಎ ಅಧಿಕಾರಿಗಳು ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಗುಪ್ತಚರ ವಿಭಾಗದ ಮಾಹಿತಿ ಮೇರೆಗೆ 2023ರಲ್ಲಿ ಎನ್‌ಐಎ ಅಧಿಕಾರಿಗಳು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದರು. ತನಿಖೆ ವೇಳೆ ಲಭಿಸಿದ ಸಾಕ್ಷ್ಯಾಧಾರಗಳನ್ನು ಆಧರಿಸಿ 12 ಆರೋಪಿಗಳನ್ನು ಬಂಧಿಸಲಾಗಿತ್ತು. ಆ ಪೈಕಿ ನಾಲ್ವರಿಗೆ ಎನ್‌ಐಎ ವಿಶೇಷ ನ್ಯಾಯಾಲಯವು ಶಿಕ್ಷೆ ವಿಧಿಸಿ ಆದೇಶಿಸಿದೆ.

ಚಿಟಿಕೆ ಸುದ್ದಿ

ಬೆಂಕಿ ಅವಘಡ ಶಾರ್ಟ್ ಸರ್ಕಿಟ್ ಕಾರಣ?

ಹೊತ್ತಿ ಉರಿದ ಗೋದಾಮು

ನೆಲಮಂಗಲ: ಬೆಂಗಳೂರು–ತುಮಕೂರು ರಸ್ತೆಯ ಅಡಕಮಾರನಹಳ್ಳಿಯ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯ ಗೋದಾಮು ಗುರುವಾರ ರಾತ್ರಿ ಹೊತ್ತಿ ಉರಿಯಲು ವಿದ್ಯುತ್ ಶಾರ್ಟ್ ಸರ್ಕಿಟ್ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಬೇರೆ ಏನಾದರೂ ಕಾರಣವಿದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ರಿಲಯನ್ಸ್ ಕಂಪನಿಗೆ ಸೇರಿದ ದಿನಸಿ ಪದಾರ್ಥಗಳನ್ನು ಗೋದಾಮಿನಲ್ಲಿ ಸಂಗ್ರಹಿಸಿ ಇಡಲಾಗಿತ್ತು. ಅಗ್ನಿ ಅವಘಡ ಸಂಭವಿಸಿದ ವೇಳೆ ಸಿಬ್ಬಂದಿ ಯಾರೂ ಇರಲಿಲ್ಲ. ಸ್ಥಳಕ್ಕೆ ಬಂದ ಮಾದನಾಯಕನಹಳ್ಳಿ ಪೊಲೀಸರು ಮತ್ತು ನೆಲಮಂಗಲ, ಪೀಣ್ಯ ಅಗ್ನಿಶಾಮಕ ದಳದ ಸಿಬ್ಬಂದಿ ಮಧ್ಯರಾತ್ರಿವರೆಗೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು.

ಅಗ್ನಿ ಅವಘಡ ಐವರು ಪಾರು

ಬೆಂಗಳೂರು: ರಾಮಮೂರ್ತಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಹೊರವರ್ತುಲ ರಸ್ತೆಯಲ್ಲಿರುವ ಹೆರಾಲ್ಡ್ ಎಲೆಕ್ಟ್ರಿಕಲ್ ಶಾಪ್‌ನಲ್ಲಿ ಗುರುವಾರ ರಾತ್ರಿ ಅಗ್ನಿ ಅವಘಡ ಸಂಭವಿಸಿದ್ದು ಮಳಿಗೆಯಲ್ಲಿದ್ದ ವಸ್ತುಗಳು ಭಸ್ಮವಾಗಿವೆ.

ಕಟ್ಟಡದ ನಾಲ್ಕನೇ ಮಹಡಿಯಲ್ಲಿ ಮಳಿಗೆ ಇತ್ತು. ಮಳಿಗೆಯಲ್ಲಿದ್ದ ಐವರು ಹೊರಕ್ಕೆ ಬಂದು ಪಾರಾಗಿದ್ದಾರೆ. ಮಾಹಿತಿ ತಿಳಿದು ಸ್ಥಳಕ್ಕೆ ಹೋದ ಅಗ್ನಿಶಾಮಕದ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ.

ಬಾಲಕಿ ಮೇಲೆ ಅತ್ಯಾಚಾರ ಆರೋಪಿ ಸೆರೆ

ಬೆಂಗಳೂರು: ಆಟವಾಡುತ್ತಿದ್ದ 11 ವರ್ಷದ ಬಾಲಕಿಯನ್ನು ನಿರ್ಮಾಣ ಹಂತದ ಕಟ್ಟಡಕ್ಕೆ ಎಳೆದೊಯ್ದು ಅತ್ಯಾಚಾರ ಎಸಗಿದ್ದ ಆರೋಪಿಯನ್ನು ಜ್ಞಾನಭಾರತಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಿಹಾರದ ಮೊಹಮ್ಮದ್ ಮುನ್ನ (28) ಬಂಧಿತ ಆರೋಪಿ.

ಅತ್ಯಾಚಾರ ಎಸಗಿ, ಯಾರಿಗೂ ವಿಷಯ ತಿಳಿಸದಂತೆ ಬಾಲಕಿಗೆ ₹150 ಕೊಟ್ಟು ಪರಾರಿ ಆಗಿದ್ದ ಎಂದು ಮೂಲಗಳು ಹೇಳಿವೆ. ಬಾಲಕಿ ಕೈಯಲ್ಲಿ ಹಣ ಇರುವುದನ್ನು ಕಂಡು ಪೋಷಕರು ಪ್ರಶ್ನಿಸಿದ್ದರು. ಆಗ ಆರೋಪಿ ಎಸಗಿದ ಕೃತ್ಯದ ಕುರಿತು ಬಾಲಕಿ ತಿಳಿಸಿದ್ದಳು. ಬಳಿಕ ಪೋಷಕರು ದೂರು ನೀಡಿದ್ದರು. ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಆರೋಪಿ ಕೂಲಿ ಕೆಲಸಕ್ಕೆಂದು ನಗರಕ್ಕೆ ಬಂದಿದ್ದ ಎಂದು ಪೊಲೀಸರು ಹೇಳಿದರು.

ಮಹಡಿಯಿಂದ ಬಿದ್ದ ಮಗು: ಗಾಯ

ಬೆಂಗಳೂರು: ನಾಯಂಡಹಳ್ಳಿಯ ಮನೆಯೊಂದರಲ್ಲಿ ಆಟವಾಡುತ್ತಿದ್ದ ಒಂದೂವರೆ ವರ್ಷದ ಮಗು ಸಹನಾ ಮೊದಲ ಮಹಡಿಯಿಂದ ಕೆಳಕ್ಕೆ ಬಿದ್ದು, ಗಾಯಗೊಂಡಿದೆ.

ಘಟನೆ ಏಪ್ರಿಲ್ 6ರಂದು ನಡೆದಿದೆ. ನಾಯಂಡಹಳ್ಳಿಯ ನವೀನ್ ಮತ್ತು ಜಯಶ್ರೀ ದಂಪತಿ ಪುತ್ರಿ ಸಹನಾ ಮಹಡಿಯಿಂದ ಕೆಳಕ್ಕೆ ಬೀಳುತ್ತಿರುವ ದೃಶ್ಯವು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಮಗುವಿಗೆ ಬಸವನಗುಡಿಯ ಆಸ್ಪತ್ರೆಯೊಂದರ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

‘ಮಗುವಿನ ಪ್ರಾಣಕ್ಕೆ ಯಾವುದೇ ಅಪಾಯವಿಲ್ಲವೆಂದು ವೈದ್ಯರು ತಿಳಿಸಿದ್ದಾರೆ.

ಮಗು ಬಿದ್ದಿರುವುದನ್ನು ನೋಡಿದ್ದ ತಾಯಿಯೂ ಅಸ್ವಸ್ಥಗೊಂಡಿದ್ದರು.

ಮದುವೆಗೆ ಒಪ್ಪದ ಯುವತಿ: ಯುವಕ ಆತ್ಮಹತ್ಯೆ

ಬೆಂಗಳೂರು: ಮದುವೆಗೆ ಯುವತಿ ಒಪ್ಪದ ಕಾರಣಕ್ಕೆ ಮನನೊಂದ ಯುವಕ, ಮರಣಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡ ಘಟನೆ ಯಲಹಂಕ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಅಭಿಷೇಕ್(23) ಆತ್ಮಹತ್ಯೆ ಮಾಡಿಕೊಂಡ ಯುವಕ.

ಅಭಿಷೇಕ್ ಬಿ.ಕಾಂ ಪದವಿ ಪಡೆದಿದ್ದರು. ಕಾಲೇಜಿನಲ್ಲಿ ಓದುವಾಗ ಯುವತಿಯನ್ನು ಪ್ರೀತಿಸಿದ್ದರು. ಇಬ್ಬರ ಪ್ರೀತಿ ವಿಷಯ ಯುವತಿಯ ಮನೆಯವರಿಗೆ ಗೊತ್ತಾಗಿತ್ತು. ಯುವತಿಯ ಪೋಷಕರು ಅಭಿಷೇಕ್ ಜತೆಗೆ ಮದುವೆಗೆ ನಿರಾಕರಿಸಿದ್ದರು. ಹೀಗಾಗಿ ಯುವತಿ ಅಭಿಷೇಕ್‌ನಿಂದ ದೂರ ಉಳಿಯಲು ಯತ್ನಿಸಿದ್ದರು. ಮನನೊಂದ ಅಭಿಷೇಕ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಎಚ್ಚರಿಕೆ

ಝೂಂಬಿ ಡ್ರಗ್ಸ್: ಅಪಪ್ರಚಾರ ವಿರುದ್ಧ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲೂರು ರಸ್ತೆಯಲ್ಲಿ ವ್ಯಕ್ತಿಯೊಬ್ಬ ಪ್ರಜ್ಞೆ ತಪ್ಪಿದಂತೆ ವಿಚಿತ್ರವಾಗಿ ವರ್ತಿಸಿದ್ದ ವಿಡಿಯೊ ವಿಚಾರವಾಗಿ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಸ್ಪಷ್ಟನೆ ನೀಡಿದ್ದು, ‘ಅಪಪ್ರಚಾರ ನಡೆಸುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು’ ಎಂದೂ ಎಚ್ಚರಿಕೆ ನೀಡಿದ್ದಾರೆ.

ಸಾಮಾಜಿಕ ಮಾಧ್ಯಮದಲ್ಲಿ ಎರಡು ದಿನಗಳಿಂದ ವಿಡಿಯೊವೊಂದು ಹರಿದಾಡುತ್ತಿದೆ. ವಿಡಿಯೊದಲ್ಲಿರುವ ವ್ಯಕ್ತಿ ‘ಝೂಂಬಿ’ ಡ್ರಗ್ಸ್ ತೆಗೆದುಕೊಂಡು ವಿಚಿತ್ರವಾಗಿ ವರ್ತಿಸುತ್ತಿದ್ದಾನೆಂಬ ಶಂಕೆ ವ್ಯಕ್ತವಾಗಿತ್ತು. ನಗರಕ್ಕೆ ಹೊಸ ಮಾದರಿಯ ಮಾದಕ ವಸ್ತು ಪೂರೈಕೆ ಆಗುತ್ತಿದೆಯಾ ಎಂಬ ಆತಂಕವೂ ಎದುರಾಗಿತ್ತು.

ವಿಡಿಯೊ ಅಪ್‌ಲೋಡ್: ವ್ಯಕ್ತಿಗೆ ನೋಟಿಸ್

ಇನ್‌ಸ್ಟಾಗ್ರಾಂನಲ್ಲಿ ವಿಡಿಯೊ ಅಪ್‌ಲೋಡ್ ಮಾಡಿದ್ದ ವ್ಯಕ್ತಿಯನ್ನು ಪತ್ತೆಹಚ್ಚಲಾಗಿದೆ. ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ವಿಡಿಯೊದಲ್ಲಿ ಏನಿತ್ತು?: ವ್ಯಕ್ತಿಯೊಬ್ಬ ಮೈಮೇಲೆ ಪ್ರಜ್ಞೆ ಇಲ್ಲದವನಂತೆ ವಿಚಿತ್ರವಾಗಿ ಕೈ-ಕಾಲುಗಳನ್ನು ಆಡಿಸುತ್ತಾ ನಿಂತಿದ್ದ. ಆತ ಎಲ್ಲಿಗೆ ಹೋಗುತ್ತಿದ್ದಾನೆ ಅಥವಾ ಏನು ಮಾಡುತ್ತಿದ್ದಾನೆ ಎಂಬ ಅರಿವೂ ಇರಲಿಲ್ಲ. ಅದನ್ನು ಗಮನಿಸಿದ್ದ ಸ್ಥಳೀಯರು, ವಿದೇಶಗಳಲ್ಲಿ ಕಂಡುಬರುವ ‘ಝೂಂಬಿ’ ಡ್ರಗ್ಸ್ ನಶೆಯಲ್ಲಿ ವಿಚಿತ್ರವಾಗಿ ವರ್ತನೆ ಮಾಡುತ್ತಿರಬಹುದು ಎಂದು ಶಂಕಿಸಿ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದರು.

‘ವಿಡಿಯೊದಲ್ಲಿ ಇರುವ ವ್ಯಕ್ತಿಯನ್ನು ಪತ್ತೆ ಮಾಡಲಾಗಿದೆ. ಆತನನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗಿದೆ. ಆತನ ರಕ್ತದ ಮಾದರಿಯಲ್ಲಿ ಯಾವುದೇ ರೀತಿಯ ಡ್ರಗ್ಸ್ ಅಥವಾ ಅಮಲು ಪದಾರ್ಥಗಳ ಅಂಶ ಪತ್ತೆಯಾಗಿಲ್ಲ. ಆತ ನಗರದಲ್ಲಿ ನೆಲಸಿದ್ದ ವ್ಯಕ್ತಿ ಅಲ್ಲ. ಹೊರಗಿನಿಂದ ಬೆಂಗಳೂರಿಗೆ ಬಂದಿದ್ದ. ಆತ ಅನಾರೋಗ್ಯದಿಂದ ಬಳಲುತ್ತಿದ್ದ’ ಎಂದು ಸೀಮಾಂತ್‌ಕುಮಾರ್ ಸಿಂಗ್ ತಿಳಿಸಿದರು.

‘ಅನಾರೋಗ್ಯದ ಕಾರಣಕ್ಕೆ ಕೆಲವು ಔಷಧಿಗಳನ್ನು ಸೇವಿಸಿದ್ದ. ಅದರ ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಮದ್ಯಪಾನ ಸಹ ಮಾಡಿದ್ದ. ಔಷಧದ ಅಡ್ಡಪರಿಣಾಮ ಹಾಗೂ ಕುಡಿತದ ನಶೆಯಿಂದ ಆತನ ದೇಹದ ಸಮತೋಲನ ತಪ್ಪಿ ವಿಚಿತ್ರವಾಗಿ ವರ್ತಿಸಿದ್ದ ಎಂಬುದು ಕಂಡುಬಂದಿದೆ’ ಎಂದು ಮಾಹಿತಿ ನೀಡಿದರು.

‘ಯಾವುದೇ ಒಂದು ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುವ ಮುನ್ನ ಅದರ ಸತ್ಯಾಸತ್ಯತೆ ಪರಿಶೀಲಿಸಬೇಕು. ಬೆಂಗಳೂರಿಗೆ ಕೆಟ್ಟ ಹೆಸರು ತರುವ ಪ್ರಯತ್ನ ಇದಾಗಿದೆ. ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹಾಕಿ ಅಪಪ್ರಚಾರ ಮಾಡುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು’ ಎಂದೂ ಅವರು ಎಚ್ಚರಿಕೆ ನೀಡಿದರು.

ಪ್ರಕರಣ ರದ್ದತಿಗೆ ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತ್ಯೇಕವಾಗಿ ವಾಸವಾಗಿದ್ದ ಪತ್ನಿಯ ಜೊತೆಗೆ ಬಲವಂತದ ಲೈಂಗಿಕ ಕ್ರಿಯೆ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಪತಿಯೊಬ್ಬರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ಸ್ಪಷ್ಟವಾಗಿ ನಿರಾಕರಿಸಿದೆ.

‘ನನ್ನ ವಿರುದ್ಧ ನನ್ನ ಪತ್ನಿ ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ದೂರು ಮತ್ತು ಈ ಕುರಿತ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 6ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದಲ್ಲಿನ ವಿಚಾರಣೆ ರದ್ದುಪಡಿಸಬೇಕು’ ಎಂದು ಕೋರಿ ತಮಿಳುನಾಡಿನ ದಕ್ಷಿಣ ಮಧುರೈ ಜಿಲ್ಲೆಯ 37 ವರ್ಷದ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ತನ್ನ ದೇಹದ ಖಾಸಗಿ ಭಾಗದಲ್ಲಿ ಉಂಟಾದ ನೋವಿಗೆ ಆಸ್ಪತ್ರೆಗೆ ಹೋಗಿ ದಾಖಲಾಗಿ ತುರ್ತು ಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದು ಪತ್ನಿ (35) ದೂರಿನಲ್ಲಿ ತಿಳಿಸಿದ್ದಾರೆ. ಆದರೆ, ಅವರು ಆಸ್ಪತ್ರೆಯ ಹೊರರೋಗಿ ವಿಭಾಗದಲ್ಲಿ ದಾಖಲಾಗಿದ್ದಾರೆ. ಅಂತೆಯೇ, ವಿಧಿವಿಜ್ಞಾನ ಪ್ರಯೋಗಾಲಯದ ವರದಿಯಲ್ಲಿ ಲೈಂಗಿಕ ಕ್ರಿಯೆ ನಡೆದಿಲ್ಲ ಎಂದು ಉಲ್ಲೇಖಿಸಲಾಗಿದೆ. ಇದು ಅರ್ಜಿದಾರರನ್ನು ಸುಳ್ಳು ಕೇಸಿನಲ್ಲಿ ಸಿಲುಕಿಸಿರುವ ಪ್ರಕರಣ’ ಎಂದರು.

ಇದಕ್ಕೆ ಪ್ರತಿಯಾಗಿ ವಕೀಲೆಯೂ ಆಗಿರುವ ದೂರುದಾರ ಪತ್ನಿ ಖುದ್ದು ವಾದ ಮಂಡಿಸಿ, ‘ಘಟನೆ ನಡೆದ ದಿನ ನಾನು ನಸುಕಿನಲ್ಲಿ 4.40ಕ್ಕೆ ಆಸ್ಪತ್ರೆಗೆ ತೆರಳಿದ್ದೆ. ಆ ಸಮಯದಲ್ಲಿ ಹೊರರೋಗಿ ವಿಭಾಗ ತೆರೆದಿರಲಿಲ್ಲ. ಅಲ್ಲಿ ಸ್ತ್ರೀರೋಗ ತಜ್ಞೆಯೂ ಇರಲಿಲ್ಲ. ಹಾಗಾಗಿ, ತಕ್ಷಣವೇ ತುರ್ತು ಚಿಕಿತ್ಸಾ ಘಟಕದಲ್ಲಿ ದಾಖಲಾಗಿ ಚಿಕಿತ್ಸೆ ಪಡೆದೆ. ಆದರೆ, ದಾಖಲೆಗಳ ಫಾರಂನಲ್ಲಿ ಹೊರರೋಗಿ ವಿಭಾಗ ಎಂದೇ ಉಲ್ಲೇಖವಾಗಿದೆ’ ಎಂದು ಸಮಜಾಯಿಷಿ ನೀಡಿದರು.

‘ಬಲವಂತದ ಲೈಂಗಿಕ ಕ್ರಿಯೆ ನಡೆದಿದೆ ಎಂಬುದಕ್ಕೆ ಸಾಕ್ಷಿಯಾಗಿ ಘಟನೆ ನಡೆದಾಗ ನನ್ನ ಪತಿ ಘಟನಾ ಸ್ಥಳದಲ್ಲಿ ಇದ್ದುದು ಪೊಲೀಸರು ಸಂಗ್ರಹಿಸಿರುವ ಸಿಡಿಆರ್‌ನಲ್ಲಿ (ಕಾಲ್ ಡೀಟೆಲ್ಸ್ ರೆಕಾರ್ಡ್ಸ್) ದೃಢಪಟ್ಟಿದೆ’ ಎಂದೂ ತಿಳಿಸಿದರು.

ಇದನ್ನು ಅಲ್ಲಗಳೆದ ಅರ್ಜಿದಾರರ ಪರ ವಕೀಲರು, ‘ಪತ್ನಿ ಈಗಾಗಲೇ ದಾಖಲಿಸಿರುವ ಕ್ರೌರ್ಯದ ಆರೋಪ ಕುರಿತಾದ ಪ್ರಕರಣದ ಬಗ್ಗೆ ಮಾತುಕತೆ ನಡೆಸಲು ಪತ್ನಿಯೇ ಪತಿಯನ್ನು ಮನೆಗೆ ಕರೆಸಿಕೊಂಡಿದ್ದಾರೆ ಮತ್ತು ಆ ವೇಳೆ ಲೈಂಗಿಕ ಕ್ರಿಯೆ ನಡೆದೇ ಇಲ್ಲ’ ಎಂದು ಪ್ರತಿಪಾದಿಸಿದರು.

ಡ್ರಗ್ಸ್ ಹಾವಳಿ ತಡೆಗೆ ಕಟ್ಟುನಿಟ್ಟಿನ ಕ್ರಮ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಹೊಸ ಪೊಲೀಸ್ ಠಾಣೆಗಳನ್ನು ನಿರ್ಮಿಸಲಾಗುತ್ತಿದೆ. ಪೊಲೀಸ್ ಸಿಬ್ಬಂದಿಗೆ ಪೊಲೀಸ್ ಗೃಹ ಯೋಜನೆ ಅಡಿ ಮನೆಗಳನ್ನು ಸಹ ಕಟ್ಟಿಕೊಡಲಾಗುತ್ತಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ಕರ್ನಾಟಕ ಪೊಲೀಸ್ ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ನಗರ ಪೊಲೀಸ್ ಕಮಿಷನರೇಟ್ ಸಹಯೋಗದಲ್ಲಿ ಚಿಕ್ಕಬಾಣಾವರ ಪೊಲೀಸ್ ಠಾಣೆ, ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣೆ ಮತ್ತು ಸಹಾಯಕ ಪೊಲೀಸ್ ಕಮಿಷನರ್ ಕಚೇರಿ (ಚಿಕ್ಕಬಾಣಾವರ ಉಪವಿಭಾಗ) ನಿರ್ಮಾಣ ಕಾಮಗಾರಿಗೆ ಗುರುವಾರ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಶಾಸಕ ಎಸ್. ಮುನಿರಾಜು ಮಾತನಾಡಿ, ‘₹8.60 ಕೋಟಿ ವೆಚ್ಚದಲ್ಲಿ ಪೊಲೀಸ್ ಠಾಣೆಗಳ ಕಟ್ಟಡಗಳು ನಿರ್ಮಾಣವಾಗುತ್ತಿದೆ. ಜಿ.ಪರಮೇಶ್ವರ ಅವರು ಗೃಹ ಸಚಿವರಾದ ಮೇಲೆ ನಮ್ಮ ಕ್ಷೇತ್ರಕ್ಕೆ ನಾಲ್ಕು ಪೊಲೀಸ್ ಠಾಣೆಗಳನ್ನು ನೀಡಿದ್ದಾರೆ. ಮಂಜುನಾಥ ನಗರದಲ್ಲಿ ಒಂದು ಎಕರೆ ಜಾಗವಿದೆ. ಅಲ್ಲಿ ಕೂಡ ಒಂದು ನೂತನ ಪೊಲೀಸ್ ಠಾಣೆ ತೆರೆದರೆ ಕಾನೂನು ಸುವ್ಯವಸ್ಥೆ ಕಾಪಾಡಲು ನೆರವು ಆಗಲಿದೆ’ ಎಂದು ಮನವಿ ಮಾಡಿದರು.

ಇದೇ ವೇಳೆ ಚಿಕ್ಕಬಾಣಾವರದ ದ್ವಾರಕಾ ನಗರದಲ್ಲಿ ಎಸಿಪಿ ಕಚೇರಿ ಉದ್ಘಾಟಿಸಲಾಯಿತು. ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ. ಮರಿಸ್ವಾಮಿ, ಪಾಲಿಕೆ ಮಾಜಿ ಸದಸ್ಯ ಕೆ. ನಾಗಭೂಷಣ್, ಪಾಲ್ಗೊಂಡಿದ್ದರು.

ಪೊಲೀಸ್ ಠಾಣೆಯ ನೂತನ ಕಟ್ಟಡ ಕಾಮಗಾರಿಗೆ ಗೃಹ ಸಚಿವ ಜಿ.ಪರಮೇಶ್ವರ, ಎಸ್‌.ಮುನಿರಾಜು, ಎಸ್‌.ಆರ್‌.ವಿಶ್ವನಾಥ್ ಹಾಗೂ ಎಂ.ಎ.ಸಲೀಂ ಶಂಕುಸ್ಥಾಪನೆ ನೆರವೇರಿಸಿದರು

ಟ್ರ್ಯಾಕ್ಟರ್ ಡಿಕ್ಕಿ ಮದುಮಗ ಸಾವು

ಬೆಂಗಳೂರು: ಹುಳಿಮಾವು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪಲ್ಲಕ್ಕಿ ಹೊತ್ತ ಟ್ರ್ಯಾಕ್ಟರ್‌ವೊಂದು ಡಿಕ್ಕಿ ಹೊಡೆದ ಪರಿಣಾಮ ಪೆಟ್ರೋಲ್ ಬಂಕ್ ಮಾಲೀಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬನಶಂಕರಿ ನಿವಾಸಿ ಹರ್ಷಿತ್ (27) ಮೃತ ಯುವಕ.ಹುಳಿಮಾವು ಗ್ರಾಮದಲ್ಲಿ ಗುರುವಾರ ಮುಂಜಾನೆ 5.30ರ ಸುಮಾರಿಗೆ ಈ ದುರ್ಘಟನೆ ನಡೆದಿದೆ. ಟ್ರ್ಯಾಕ್ಟರ್ ಚಾಲಕ ತಲೆಮರೆಸಿಕೊಂಡಿದ್ದು, ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಸಂಚಾರ ವಿಭಾಗದ ಪೊಲೀಸರು ಮಾಹಿತಿ ನೀಡಿದರು.

ಹರ್ಷಿತ್ ಅವರಿಗೆ ಏಪ್ರಿಲ್ 30ರಂದು ಮದುವೆ ನಿಶ್ಚಯವಾಗಿತ್ತು. ಹುಳಿಮಾವು ಗ್ರಾಮದಲ್ಲಿ ಇರುವ ಸ್ನೇಹಿತರಿಗೆ ಮದುವೆಯ ಆಮಂತ್ರಣ ಪತ್ರಿಕೆ ನೀಡಲು ಬುಧವಾರ ಬಂದಿದ್ದರು. ಗ್ರಾಮದಲ್ಲಿ ಪಲ್ಲಕ್ಕಿ ಉತ್ಸವ ನೋಡಲು ದೇವಸ್ಥಾನದ ಸಮೀಪ ಬಂದಿದ್ದರು. ಪಲ್ಲಕ್ಕಿ ಹೊತ್ತು ಬರುತ್ತಿದ್ದ ಟ್ರ್ಯಾಕ್ಟರ್ ಸಾರ್ವಜನಿಕರತ್ತ ನುಗ್ಗಿತ್ತು. ಹರ್ಷಿತ್ ತಪ್ಪಿಸಿಕೊಳ್ಳಲು ಕಾಂಪೌಂಡ್‌ನತ್ತ ಹೋಗಿದ್ದರು. ಆಗ ಟ್ರ್ಯಾಕ್ಟರ್ ಡಿಕ್ಕಿಯಾಗಿದೆ.

ನಗರದಲ್ಲಿ ಇಂದು

ವಿಶ್ವ ಬೌದ್ಧ ಮಹಾಸಮ್ಮೇಳನ, 888 ಅಡಿ ಎತ್ತರದ ಬುದ್ಧನ ಪ್ರತಿಮೆ ನಿರ್ಮಾಣ ಕಾಮಗಾರಿಗೆ ಚಾಲನೆ, ಪಂಚಶೀಲ ಪಾದಯಾತ್ರೆಯ ಉದ್ಘಾಟನೆ: ಸಾನ್ನಿಧ್ಯ: ಭಂತೆ ಈತಲ್ವೆತುನವೆವ ಜ್ಞಾನತಿಲಕ ಥೇರೋ, ನಿರ್ಮಲಾನಂದನಾಥ ಸ್ವಾಮೀಜಿ, ಭಂತೆ ಆನಂದ ಥೇರೋ, ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ, ಅಧ್ಯಕ್ಷತೆ: ಎಚ್. ಸಿ. ಮಹದೇವಪ್ಪ, ಅತಿಥಿಗಳು: ರಾಮಲಿಂಗಾರೆಡ್ಡಿ, ಸತೀಶ್ ಜಾರಕಿಹೊಳಿ, ಕೆ. ವೆಂಕಟೇಶ್, ಎನ್. ಚಲುವರಾಯಸ್ವಾಮಿ, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್, ಜಮೀರ್ ಅಹಮದ್ ಖಾನ್, ಶಿವರಾಜ್ ಕುಮಾರ್, ಜಿ.ಟಿ. ದೇವೇಗೌಡ, ಆಯೋಜನೆ: ವಿಶ್ವ ಬೌದ್ಧ ಮಹಾಸಮ್ಮೇಳನ ಸಮಿತಿ, ಉಪಾಸಿಕ ಆ್ಯಂಡ್ ಉಪಾಸಕ ಚಾರಿಟಬಲ್ ಟ್ರಸ್ಟ್, ಇಂಟರ್‌ನ್ಯಾಷನಲ್ ಬುದ್ಧಿಸ್ಟ್ ಮಾಂಕ್ಸ್ ಚಾರಿಟಬಲ್ ಟ್ರಸ್ಟ್, ಸ್ಥಳ: ನಾಗಸೇನ ಬುದ್ಧ ವಿಹಾರ, ಸದಾಶಿವನಗರ, ಬೆಳಿಗ್ಗೆ 10.30

ಶಿವರಾಜ್ ಕುಮಾರ್

ಕೃಷ್ಣನ್ ರಂಗರಾಜು ಅವರ ಕಲಾಕೃತಿಗಳ ಪ್ರದರ್ಶನ: ಉದ್ಘಾಟನೆ: ಚೂಡಾಮಣಿ ನಂದಗೋಪಾಲ್, ಉಪಸ್ಥಿತಿ: ಗಿರಿಧರ್ ಖಾಸನೀಸ್, ಶ್ರೀನಿವಾಸರಾಜು, ಸ್ಥಳ: ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರಬಾ ರಸ್ತೆ, ಬೆಳಿಗ್ಗೆ 11

ಕೆಪಿಎಸ್ ಶಾಲೆ ಯೋಜನೆ ವಿರುದ್ಧ ಜನ ಸಮಾವೇಶ: ಭಾಗವಹಿಸುವವರು: ಎ. ಮುರಿಗೆಪ್ಪ, ಕೆ. ಮರುಳಸಿದ್ಧಪ್ಪ, ಎಸ್.ಆರ್. ಹಿರೇಮಠ, ಸಿದ್ಧಲಿಂಗ ಪಟ್ಟಣಶೆಟ್ಟಿ, ಎಸ್.ಜಿ. ಸಿದ್ಧರಾಮಯ್ಯ, ಅಲ್ಲಮಪ್ರಭು ಬೆಟ್ಟದೂರು, ಹಂಪ ನಾಗರಾಜಯ್ಯ, ರಾಘವೇಂದ್ರ ಕುಷ್ಟಗಿ, ಹೇಮಲತಾ ಮಹಿಷಿ, ಚಾಮರಸ ಮಾಲಿಪಾಟೀಲ, ಕುಂ. ವೀರಭದ್ರಪ್ಪ, ಮೂಡ್ನಾಕೂಡು ಚಿನ್ನಸ್ವಾಮಿ, ಬಾನು ಮುಷ್ತಾಕ್, ಆಯೋಜನೆ: ಎಐಡಿಎಸ್‌ಒ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11.30



ಎಸ್‌.ಆರ್‌. ಹಿರೇಮಠ

‘ಸಾಮಾಜಿಕ ನ್ಯಾಯ ಪರಿಕಲ್ಪನೆಗೆ ಇಂದಿನ ಮಾಧ್ಯಮಗಳು ಸಂವೇದನಾಶೀಲವಾಗಿವೆಯೇ?’ ವಿಚಾರಸಂಕಿರಣ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ಕೆ.ವಿ. ಪ್ರಭಾಕರ್, ಅತಿಥಿಗಳು: ಪರುಷೋತ್ತಮ ಬಿಳಿಮಲೆ, ಕೆ. ಶಿವಕುಮಾರ್, ಬಿ. ರಮೇಶ್, ನವೀನ್ ಜೋಸೆಫ್, ಪ್ರಧಾನ ಭಾಷಣ: ಕೋಟಿಗಾನಹಳ್ಳಿ ರಾಮಯ್ಯ, ಅಧ್ಯಕ್ಷತೆ: ಆಯೇಶಾ ಖಾನುಂ, ‘ಕರ್ನಾಟಕ ಮಾಧ್ಯಮ ಅಕಾಡೆಮಿ ವಾರ್ಷಿಕ’ ಪ್ರಶಸ್ತಿ ಸ್ವೀಕರಿಸುವವರು: ಬನಶಂಕರ ಆರಾಧ್ಯ, ‘ಮೂಕನಾಯಕ ಡಾ.ಬಿ.ಆರ್. ಅಂಬೇಡ್ಕರ್ ದತ್ತಿ’ ಪ್ರಶಸ್ತಿ ಸ್ವೀಕರಿಸುವವರು: ಎ. ನಾರಾಯಣ, ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ಸ್ಥಳ: ಡಬ್ಲ್ಯುಬಿಸಿ ಸಭಾಂಗಣ, ಅಕಾಡೆಮಿಕ್ ಬ್ಲಾಕ್, ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಮಧ್ಯಾಹ್ನ 3

ಆಯೇಷಾ ಖಾನಂ

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಅಕ್ಷಯ್ ರಾಮನಾಥನ್ ಮತ್ತು ತಂಡ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ರಾಹುಲ್ ವೆಲ್ಲಾಲ್, ವಿನೋದ್ ಶ್ಯಾಮ್, ಓಂಕಾರ್, ಸುನಾದ್ ಆನೂರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5 ರಿಂದ

ಚೈತನ್ಯ ಸಂಜೆ ‘ಶರಣ ಅಲ್ಲಮಪ್ರಭು ಜಯಂತಿ’ ಉಪನ್ಯಾಸ: ಅರ್ಚನಾ ಆರ್., ಅಧ್ಯಕ್ಷತೆ: ಸುಧಾ ನಾಗರಾಜ್, ಉಪಸ್ಥಿತಿ: ಪಿ. ವಿಜಯಕುಮಾರ್, ರೇಖಾ ಬಸವರಾಜ್, ಶೋಭಾ ಮಹೇಶ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಜೆಎಸ್‌ಎಸ್ ಕಾಲೇಜಿನ ಸಭಾಂಗಣ, ಎಂಟನೇ ವಿಭಾಗ, ಜಯನಗರ, ಸಂಜೆ 5.30

ಸಾರ್ವಜನಿಕ ಉದ್ಯಮ ದಿನಾಚರಣೆ ಅಂಗವಾಗಿ ವಿಶೇಷ ಕಾರ್ಯಕ್ರಮ: ಅತಿಥಿಗಳು: ನಾಗೇಂದ್ರ ಶಾ, ಕವಿತಾ ಶರ್ಮ ಸಿ., ಉಪಸ್ಥಿತಿ: ಜಗದೀಶ ಕುಮಾರ್ ಜಿ., ಅಧ್ಯಕ್ಷತೆ: ಆರ್.ಪಿ. ಮೋಹನ್, ‘ಆದದ್ದೆಲ್ಲ ಒಳಿತೇ?’ ನಾಟಕ ಪ್ರದರ್ಶನ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 5.30

‘ಗಂಗೆ ಗೌರ ಅಥವಾ ಪಾರ್ವತಿ ಕಲ್ಯಾಣ’ ನಾಟಕ ಪ್ರದರ್ಶನ: ಅತಿಥಿಗಳು: ಎಸ್. ಶಾಂತರಾಜು, ವೀರಪ್ಪ, ಎಂ.ಎಲ್. ರವೀಶ್, ಡಬ್ಲ್ಯು.ಎಚ್. ಶಾಂತಕುಮಾರ್, ಸಿ. ಮುನಿರಾಜು, ಧನಲಕ್ಷ್ಮಿ, ವೀರಪ್ಪ, ಆಯೋಜನೆ: ಧನಸ್ಸು ಸಾಂಸ್ಕೃತಿಕ ಕಲಾ ಸಂಘ, ಸ್ಥಳ: ಕನ್ನಲ್ಲಿ ಗ್ರಾಮ, ಕೊಡಿಗೇಹಳ್ಳಿ, ಯಶವಂತಪುರ, ಸಂಜೆ 6

33ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಟಿ.ಎಸ್.ಎಸ್. ಕೃಷ್ಣ, ಪಿಟೀಲು: ಮತ್ತೂರು ಶ್ರೀನಿಧಿ, ಮೃದಂಗ: ಎಚ್.ಎಸ್. ಸುಧೀಂದ್ರ, ಘಟ್ಟ: ರಂಗನಾಥ್ ಚಕ್ರವರ್ತಿ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30

ಕನ್ನಡ ನಾಟಕೋತ್ಸವ–2026: ‘ಭಾಗವತರ ನಾಟಕ ಮಂಡಳಿ’ ನಾಟಕ ಪ್ರದರ್ಶನ, ಪ್ರಸ್ತುತಿ: ರಂಗ ಸಂಸ್ಕೃತಿ, ನಿರ್ದೇಶನ: ಕೆ.ಜಿ. ಸಂಪತ್‌ಕುಮಾರ್, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: ‘ದಶಮಸ್ಕಂದ ಉತ್ತರಾರ್ಧ’ ಉಪನ್ಯಾಸ: ಖೇಡಾ ವೇದವ್ಯಾಸಾಚಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಒಂಬತ್ತನೇ ಬಡಾವಣೆ, ಜಯನಗರ, ಸಂಜೆ 6.30

‘ತಪೋಹಂಸ’ ನೃತ್ಯ ನಾಟಕ ಪ್ರದರ್ಶನ: ಆಯೋಜನೆ: ಪ್ರಭಾತ್ ಆರ್ಟ್ಸ್ ಇಂಟರ್‌ನ್ಯಾಷನಲ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ
Dr. MANMOHAN SINGH BENGALURU CITY UNIVERSITY
Office of the Registrar (Admin), Jnana Jyothi Central College Campus,
Dr. B.R. Ambedkar Veedhi, Bengaluru – 560001. Ph. No. 080-22961016/22131385
E-Mail ID: registrar@bcu.ac.in / registrarbcu@gmail.com

ಸಂಖ್ಯೆ: ಡಾ.ಮ.ಸಿಂ.ಬೆಂ.ನ.ವಿ./ಶೈಕ್ಷಣಿಕ/ಸ್ನಾತಕ ಪ್ರವೇಶಾತಿ/2026–27 ದಿನಾಂಕ: 09.04.2026

ಪ್ರವೇಶಾತಿ ಅಧಿಸೂಚನೆ

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ “ಜ್ಞಾನಜ್ಯೋತಿ – ಸೆಂಟ್ರಲ್ ಕಾಲೇಜು ಕ್ಯಾಂಪಸ್”, ಮಲ್ಲೇಶ್ವರಂನ ಮಹಿಳಾ ಘಟಕ ಕಾಲೇಜು, ಬಾಗಲೂರಿನ ಪಿಜಿ ಕೇಂದ್ರ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ 2026–27ನೇ ಶೈಕ್ಷಣಿಕ ವರ್ಷದ ಸ್ನಾತಕ (UG) ಕೋರ್ಸುಗಳಿಗೆ ಪ್ರವೇಶ ಪ್ರಾರಂಭಿಸಲಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. "ಜ್ಞಾನಜ್ಯೋತಿ – ಸೆಂಟ್ರಲ್ ಕಾಲೇಜು ಕ್ಯಾಂಪಸ್"ನಲ್ಲಿ ಲಭ್ಯವಿರುವ ಪದವಿ ಕೋರ್ಸುಗಳು

ಕ್ರ. ಸಂ	ಕೋರ್ಸ್	ವಿಭಾಗ
1	ಬಿ.ಸಿ.ಎ.	ಕೃತಕ ಬುದ್ಧಿಮತ್ತೆ ಮತ್ತು ಮೆಷಿನ್ ಲರ್ನಿಂಗ್
2	ಬಿ.ಸಿ.ಎ.	ಡೇಟಾ ಸೈನ್ಸ್
3	ಬಿ.ಕಾಂ.	ಅಕೌಂಟಿಂಗ್ & ಫೈನಾನ್ಸ್
4	ಬಿ.ಕಾಂ.	ಫೈನಾನ್ಷಿಯಲ್ ಟೆಕ್ನಾಲಜಿ
5	ಬಿ.ಬಿ.ಎ.	ಬಿಸಿನೆಸ್ ಅನಾಲಿಟಿಕ್ಸ್
6	ಬಿ.ಎಸ್.ಸಿ.	ಕಂಪ್ಯೂಟರ್ ಸೈನ್ಸ್, ಗಣಿತ, ಸಂಖ್ಯಾಶಾಸ್ತ್ರ
7	ಬಿ.ಎಸ್.ಸಿ.	ಫ್ಯಾಷನ್ & ಅಪಾರಲ್ ಡಿಸೈನ್
8	ಬಿ.ಎ.	ಅರ್ಥಶಾಸ್ತ್ರ, ಇತಿಹಾಸ, ಪತ್ರಿಕೋದ್ಯಮ, ಸಾಮಾಜಿಕ ಕಾರ್ಯ, ಪತ್ರಿಕೋದ್ಯಮ, ಫ್ರೆಂಚ್, ಇಂಗ್ಲಿಷ್, ಪತ್ರಿಕೋದ್ಯಮ, ಫ್ರೆಂಚ್
ಲಭ್ಯ ಭಾಷೆಗಳು: ಕನ್ನಡ, ಇಂಗ್ಲಿಷ್, ಹಿಂದಿ, ಫ್ರೆಂಚ್, ಜರ್ಮನ್		

2. ಮಹಿಳಾ ಘಟಕ ಕಾಲೇಜು, ಮಲ್ಲೇಶ್ವರಂನಲ್ಲಿ ಲಭ್ಯವಿರುವ ಕೋರ್ಸುಗಳು

ಕ್ರ.ಸಂ	ಕೋರ್ಸ್	ಸ್ಪೆಷಲೈಸೇಶನ್
1	ಬಿ.ಸಿ.ಎ.	ಕಂಪ್ಯೂಟರ್ ಅಪ್ಲಿಕೇಶನ್ಸ್
2	ಬಿ.ಸಿ.ಎ.	ಕೃತಕ ಬುದ್ಧಿಮತ್ತೆ ಮತ್ತು ಮೆಷಿನ್ ಲರ್ನಿಂಗ್
3	ಬಿ.ಕಾಂ.	ಸಾಮಾನ್ಯ
4	ಬಿ.ಕಾಂ.	ಅಕೌಂಟಿಂಗ್ & ಫೈನಾನ್ಸ್
5	ಬಿ.ಎ.	ಅರ್ಥಶಾಸ್ತ್ರ, ಇತಿಹಾಸ, ಪತ್ರಿಕೋದ್ಯಮ
ಲಭ್ಯ ಭಾಷೆಗಳು: ಕನ್ನಡ, ಇಂಗ್ಲಿಷ್, ಫ್ರೆಂಚ್, ಜರ್ಮನ್, ಸಂಸ್ಕೃತ, ಹಿಂದಿ		

3. ಪಿಜಿ ಕೇಂದ್ರ, ಬಾಗಲೂರಿನಲ್ಲಿ ಲಭ್ಯವಿರುವ ಕೋರ್ಸುಗಳು.

ಕ್ರ.ಸಂ	ಕೋರ್ಸ್	ಸ್ಪೆಷಲೈಸೇಶನ್
1	ಬಿ.ಸಿ.ಎ.	ಕಂಪ್ಯೂಟರ್ ಅಪ್ಲಿಕೇಶನ್ಸ್
2	ಬಿ.ಸಿ.ಎ.	ಕೃತಕ ಬುದ್ಧಿಮತ್ತೆ ಮತ್ತು ಮೆಷಿನ್ ಲರ್ನಿಂಗ್
3	ಬಿ.ಕಾಂ.	ಸಾಮಾನ್ಯ
4	ಬಿ.ಕಾಂ.	ಅಕೌಂಟಿಂಗ್ & ಫೈನಾನ್ಸ್
ಲಭ್ಯ ಭಾಷೆಗಳು: ಕನ್ನಡ, ಇಂಗ್ಲೀಷ್, ಹಿಂದಿ		

4. ಸಂಯೋಜಿತ / ಸ್ವಾಯತ್ತ ಕಾಲೇಜುಗಳು

ಇದಲ್ಲದೇ ವಿ.ವಿ. ವ್ಯಾಪ್ತಿಯ 13 ವಿಧಾನಸಭಾ ಕ್ಷೇತ್ರಗಳಾದ **ಶಾಂತಿನಗರ, ಬ್ಯಾಟರಾಯನಪುರ, ಯಲಹಂಕ, ಮಲ್ಲೇಶ್ವರಂ, ಹೆಬ್ಬಾಳ, ಶಿವಾಜಿನಗರ, ಗಾಂಧಿನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಬಸವನಗುಡಿ, ಬಿಟಿಎಂ ಲೇಔಟ್, ಜಯನಗರ ಮತ್ತು ರಾಜಾಜಿನಗರದಲ್ಲಿನ** 219 ಸಂಯೋಜಿತ ಹಾಗೂ 11 ಸ್ವಾಯತ್ತ ಕಾಲೇಜುಗಳಲ್ಲಿಯು ಸ್ನಾತಕ ಪದವಿಯ ಪ್ರವೇಶಾತಿಯು ಪ್ರಾರಂಭವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಶ್ವವಿದ್ಯಾನಿಲಯದ ಜಾಲತಾಣಗಳಾದ **www.bcu.ac.in / www.bcu.karnataka.gov.in** ಗೆ ಭೇಟಿ ನೀಡುವಂತೆ ತಿಳಿಸಲಾಗಿದೆ.

- **ವಿದ್ಯಾರ್ಹತೆ :** ಮಾನ್ಯತೆ ಪಡೆದ ಮಂಡಳಿಯಿಂದ 12ನೇ ತರಗತಿ (10+2).
- **ಸಮಾನ ಅರ್ಹತೆ :** ತಾಂತ್ರಿಕ ಶಿಕ್ಷಣ ಮಂಡಳಿಯ ಡಿಪ್ಲೊಮಾ ಅಥವಾ ತತ್ಸಮಾನ ಪರೀಕ್ಷೆಗಳು.
- ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ **www.bcu.ac.in / www.bcu.karnataka.gov.in** ವೆಬ್‌ಸೈಟ್‌ಗೆ ಭೇಟಿ ನೀಡುವುದು.
- ಆನ್‌ಲೈನ್ ನೋಂದಣಿಗಾಗಿ ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ **https://uucms.karnataka.gov.in** ಗೆ ಭೇಟಿ ನೀಡುವುದು.
- ಮೇಲ್ಕಂಡ ವೆಬ್‌ಸೈಟ್‌ಗಳನ್ನು ನಿಯಮಿತವಾಗಿ ಪರಿಶೀಲಿಸುವಂತೆ ಸೂಚಿಸಲಾಗಿದೆ.

ಸೂಚನೆ: ಯಾವುದೇ ಕೋರ್ಸ್‌ಗೆ ಅಗತ್ಯ ಸಂಖ್ಯೆಯ ಅರ್ಜಿಗಳು ದೊರೆಯದಿದ್ದಲ್ಲಿ, ಆ ಕೋರ್ಸ್‌ಗೆ ಪ್ರವೇಶವನ್ನು ನೀಡದಿರುವ ಹಕ್ಕು ವಿಶ್ವವಿದ್ಯಾಲಯಕ್ಕಿದೆ.

ಸಹಿ/–
ಕುಲಸಚಿವರು

DIPR/CP/SHIRDI SAI/134/2026-27

‘ಇಂದು’: 11 ವರ್ಷಗಳಿಂದ ‘ಪ್ರಥಮ’

ಉತ್ತಮ ಸ್ಥಾನದ ಪಟ್ಟಿಯಲ್ಲಿ ಬಾಲಕಿಯರೇ ಮೇಲುಗೈ

ಪ್ರಜಾವಾಣಿ ವಾರ್ತೆ

ಕೊಟ್ಟೂರು (ವಿಜಯನಗರ ಜಿಲ್ಲೆ): ದ್ವಿತೀಯ ಪಿಯು ಕಲಾ ವಿಭಾಗದಲ್ಲಿ 10 ವರ್ಷಗಳಿಂದ ಪ್ರಥಮ ರ‍್ಯಾಂಕ್ ತನ್ನಲ್ಲೇ ಉಳಿಸಿಕೊಂಡು ಬಂದಿದ್ದ ಪಟ್ಟಣದ ‘ಇಂದು’ ಕಾಲೇಜ್, ಈ ಬಾರಿಯೂ ಅದನ್ನು ಸಾಧಿಸುವ ಮೂಲಕ ಸತತ 11 ವರ್ಷಗಳಿಂದ ತನ್ನ ಹಿರಿಮೆಯನ್ನು ಮೆರೆದಿದೆ. ಜತೆಗೆ ಇಲ್ಲಿ ಬಾಲಕಿಯರೇ ರ‍್ಯಾಂಕ್ ಪಟ್ಟಿಯಲ್ಲಿ ಮುನ್ನಡೆ ಸಾಧಿಸಿದ್ದಾರೆ.

ಈ ಕಾಲೇಜಿನಲ್ಲಿ ಇಂಗ್ಲಿಷ್ ವಿಷಯದ ಬದಲು ಸಂಸ್ಕೃತ ಹಾಗೂ ಐಚ್ಛಿಕ ಕನ್ನಡ ವಿಷಯಗಳನ್ನೊಳಗೊಂಡ ಸಂಯೋಜನೆ ಇರುವುದು ವಿದ್ಯಾರ್ಥಿಗಳು ರ‍್ಯಾಂಕ್ ಪಡೆಯಲು ಸಹಕಾರಿಯಾಗಿದೆ. 16 ವರ್ಷಗಳ ಇತಿಹಾಸ ಇರುವ ಈ ಕಾಲೇಜಿನಲ್ಲಿ ಇಂಗ್ಲಿಷ್ ವಿಷಯವಿಲ್ಲದ ಕಾರಣ ಉತ್ತಮ ಫಲಿತಾಂಶ ಬರಲು ಸಾಧ್ಯವಾಗಿದೆ ಎಂದು ಶಿಕ್ಷಣ ತಜ್ಞರು ಅಂದಾಜಿಸಿದ್ದಾರೆ.

‘ವಿದ್ಯಾರ್ಥಿಗಳ ಪರಿಶ್ರಮ, ಉಪನ್ಯಾಸಕರ ಕೌಶಲಭರಿತ ಪಾಠ ಹಾಗೂ ಪಾಲಕರ ಸಹಕಾರದಿಂದ ಈ ಸಾಧನೆ ಸಾಧ್ಯವಾಗಿದೆ’ ಎಂದು ಸಂಸ್ಥೆಯ ಆಡಳಿತಾಧಿಕಾರಿ ಎಚ್.ಎನ್. ವೀರಭದ್ರಪ್ಪ ಪ್ರತಿಕ್ರಿಯಿಸಿದ್ದಾರೆ.

‘ಪ್ರತಿ ವರ್ಷ ರ‍್ಯಾಂಕ್ ಬರುವುದರಿಂದ ರಾಜ್ಯದ ವಿವಿಧ ಕಡೆಗಳಿಂದ ವಿದ್ಯಾರ್ಥಿಗಳು ಇಲ್ಲಿ ಪ್ರವೇಶ ಪಡೆಯಲು ಬಯಸುತ್ತಾರೆ. ಉತ್ತಮ ಹಾಸ್ಟೆಲ್ ಸೌಲಭ್ಯ ಇದೆ. ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ವಿದ್ಯಾರ್ಥಿಗಳಿಗೆ ಇಲ್ಲಿ ತರಬೇತಿ ನೀಡಲಾಗು ತ್ತಿದೆ. ಹೀಗಾಗಿ ಉತ್ತಮ ಫಲಿತಾಂಶ ಬರುತ್ತಿದೆ. ಇಲ್ಲಿ ಕಲಿತ ನಾಲ್ಕು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಇಂದು ಗ್ರಾಮ ಲೆಕ್ಕಿಗರು ಹಾಗೂ ಇತರ ಹಲವು ಇಲಾಖೆಗಳಲ್ಲಿ ಉದ್ಯೋಗ ಪಡೆದುಕೊಂಡಿದ್ದಾರೆ’ ಎಂದು ಅವರು ಹೇಳಿದರು.

ಈ ಬಾರಿಯ ವಿಶೇಷವೆಂದರೆ ಮೊದಲ 30 ಟಾಪರ್‌ಗಳ ಪಟ್ಟಿಯಲ್ಲಿ ಕಾಲೇಜಿನ 9 ವಿದ್ಯಾರ್ಥಿಗಳ ಹೆಸರು ಇದೆ. ಕಲಾ ವಿಭಾಗದಲ್ಲಿ ಗರಿಷ್ಠ ಅಂಕ ಗಳಿಸಿದ 10 ಟಾಪರ್‌ಗಳ ಪಟ್ಟಿಯಲ್ಲಿ ಕಾಲೇಜಿನ 23 ವಿದ್ಯಾರ್ಥಿಗಳ ಹೆಸರು ಇದೆ. ಕಳೆದ 11 ವರ್ಷಗಳಲ್ಲಿ ಹೀಗೆ ಟಾಪರ್ ಪಟ್ಟಿಯಲ್ಲಿ ಸೇರಿದ್ದ 200ಕ್ಕೂ ಅಧಿಕ ವಿದ್ಯಾರ್ಥಿಗಳು ಇದ್ದಾರೆ.

ಈ ಬಾರಿ ಇಬ್ಬರು ರಾಜ್ಯಕ್ಕೆ ಪ್ರಥಮ

ಕೊಟ್ಟೂರು: ಕೊಟ್ಟೂರು ಪಟ್ಟಣದ ‘ಇಂದು’ ಕಾಲೇಜಿನ ವಿದ್ಯಾರ್ಥಿನಿಯರಾದ ಡಿ.ಎಂ.ಅರ್ಚನಾ ಮತ್ತು ಸಂಗೀತಾ ಅವರು 598 ಅಂಕ ಗಳಿಸಿ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ.

ಅರ್ಚನಾ ಅವರು ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಬಳಗನೂರು ಗ್ರಾಮದವರು. ಅವರ ತಂದೆ ಹನುಮಂತಪ್ಪ ದೊಡ್ಡಮನಿ ಕೃಷಿಕ, ತಾಯಿ ರೇಣುಕಮ್ಮ ಗೃಹಿಣಿ. ಸಂಗೀತಾ ಅವರು ಕೊಪ್ಪಳ ಜಿಲ್ಲೆ ಕುಕನೂರು ತಾಲ್ಲೂಕಿನ ಮಂಗಳೂರು ಗ್ರಾಮದವರು. ಅವರ ತಂದೆ ಶೇಖರಗೌಡ ಪೊಲೀಸ್ ಪಾಟೀಲ್ ಕೃಷಿಕರು ಹಾಗೂ ತಾಯಿ ಶ್ವೇತಾ ಅಂಗನವಾಡಿ ಕಾರ್ಯಕರ್ತೆ.

ತಹಶೀಲ್ದಾರ್ ಆಗುವ ಬಯಕೆ: ‘ಅಪ್ಪ, ಅಮ್ಮ ನನ್ನನ್ನು ಕಷ್ಟಪಟ್ಟು ಓದಿಸಿದ್ದಾರೆ. ಕೆಎಎಸ್ ಪಾಸ್ ಮಾಡಿ ತಹಶೀಲ್ದಾರ್ ಆಗಿ ತಂದೆ, ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂಬ ಆಸೆಯಿದೆ’ ಎಂದು ಅರ್ಚನಾ ಹೇಳಿದರು.

ನ್ಯಾಯಾಧೀಶೆ ಆಗಬೇಕು: ‘ತಂದೆ, ತಾಯಿ ಹಾಗೂ ಪರಿಶ್ರಮದಿಂದ ಮೊದಲ ಸ್ಥಾನ ಪಡೆಯಲು ಸಾಧ್ಯವಾಯಿತು. ಎಲ್‌ಎಲ್‌ಬಿ ಮಾಡಿ ವಕೀಲಿ ವೃತ್ತಿ ನಡೆಸುತ್ತಾ, ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ಉದ್ದೇಶವಿದೆ. ನ್ಯಾಯಾಧೀಶೆ ಆಗುವ ಗುರಿಯಿದೆ’ ಎಂದು ಸಂಗೀತಾ ತಿಳಿಸಿದರು.

ಅಮ್ಮನನ್ನು ಕಳೆದುಕೊಂಡ ನೋವಿನಲ್ಲೂ ದಿಶಾ ಸಾಧನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವಾಣಿಜ್ಯ ವಿಭಾಗದಲ್ಲಿ 600ಕ್ಕೆ 600 ಅಂಕ ಪಡೆದ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿನಿ

ಮೂಡುಬಿದಿರೆ (ದಕ್ಷಿಣ ಕನ್ನಡ): ದ್ವಿತೀಯ ಪಿಯುಸಿ ಪರೀಕ್ಷೆ ನಡೆಯುತ್ತಿರುವಾಗಲೇ ಅಮ್ಮನನ್ನು ಕಳೆದುಕೊಂಡರೂ ಧೃತಿಗೆಡದೆ ಅಭ್ಯಾಸ ಮಾಡಿದ ಮೂಡುಬಿದಿರೆ ಆಳ್ವಾಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ದಿಶಾ ಕೋಟ್ಯಾನ್, ವಾಣಿಜ್ಯ ವಿಭಾಗದಲ್ಲಿ 600ಕ್ಕೆ 600 ಅಂಕ ಗಳಿಸಿದ್ದಾರೆ.

‘ಮೂರು ವಿಷಯಗಳ ಪರೀಕ್ಷೆಗಳು ಮುಗಿದಿದ್ದವು ಅಷ್ಟೆ, ಜೀವನ ಪರೀಕ್ಷೆಯ ಆಘಾತ ಬರಸಿಡಿಲಿನಂತೆ ಎರಗಿತು. ಅಮ್ಮ ನಮ್ಮನ್ನು ಬಿಟ್ಟು ಹೊರಟೇ ಬಿಟ್ಟರು. ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡಿದ್ದ ಅಮ್ಮನನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆ ಕ್ಷಣದ ನನ್ನೊಳಗಿನ ಸಂಘರ್ಷವೇ ಸಾಧನೆಯ ದಾರಿಯಲ್ಲಿ ಕೈ ಹಿಡಿದು ಮುನ್ನಡೆಸಿತು. ಒಂದನ್ನು ಕಳೆದು ಕೊಂಡಿದ್ದಾಯಿತು, ಇನ್ನೊಂದನ್ನು ಕಳೆದುಕೊಳ್ಳುವುದು ಬೇಡವೆಂದು ಪರೀಕ್ಷೆಯೆಡೆಗೆ ಹೆಚ್ಚು ಗಮನ ಹರಿಸಿದೆ’ ಎನ್ನುತ್ತ ದಿಶಾ ಗದ್ಗದಿತರಾದರು.

‘ನಾನು ಚೆನ್ನಾಗಿ ಓದಬೇಕು ಎಂಬುದೇ ಅಮ್ಮನ ಆಸೆಯಾಗಿತ್ತು. ಅಮ್ಮನನ್ನು ಮನದಲ್ಲಿ ತುಂಬಿಕೊಂಡು ಅಭ್ಯಾಸದಲ್ಲಿ ಲಕ್ಷ್ಯವನ್ನು ಕೇಂದ್ರೀಕರಿಸಿದೆ. ಪರಿಶ್ರಮಕ್ಕೆ ಫಲಿತಾಂಶ ದೊರೆತಿದೆ. ರ‍್ಯಾಂಕ್ ಗಳಿಸಬೇಕೆಂದು ಸಾಕಷ್ಟು ಶ್ರಮಪಟ್ಟಿದ್ದೇನೆ. ಇಂಗ್ಲಿಷ್‌ನಲ್ಲಿ ಅಂಕ ಕಡಿಮೆಯಾಗಬಹುದೆಂಬ ಭಯದಲ್ಲಿ ಇಂಗ್ಲಿಷ್ ಓದಿಗೆ ಹೆಚ್ಚು ಸಮಯ ಮೀಸಲಿಟ್ಟಿದ್ದೆ. ರ‍್ಯಾಂಕ್ ಬರುವ ನಿರೀಕ್ಷೆ ಇತ್ತು ಹಾಗೂ ಪೂರ್ಣ ಅಂಕ ಬರುವ ನಿರೀಕ್ಷೆಯೂ ಇತ್ತು’ ಎನ್ನುವಾಗ ಅವರ ಮಾತಿನಲ್ಲಿ ಆತ್ಮವಿಶ್ವಾಸವಿತ್ತು.

‘ಸಿ.ಎ ಮಾಡುವ ಗುರಿ ಇದೆ. ಸಿ.ಎ. ಫೌಂಡೇಷನ್ ಪರೀಕ್ಷೆಗೆ ಸಿದ್ಧತೆ ನಡೆಸಿದ್ದೇನೆ. ಕಾಲೇಜಿನಲ್ಲಿ ಆಗಾಗ ನಡೆಸುವ ಪರೀಕ್ಷೆಗಳು, ವಿಷಯಗಳ ಪುನರಾವರ್ತನೆ ಉತ್ತಮ ಅಂಕ ಗಳಿಕೆಗೆ ಪೂರಕವಾದವು. ದಿನದಲ್ಲಿ ಎಷ್ಟು ಅವಧಿ ಅಭ್ಯಾಸ ಮಾಡಿದ್ದೇವೆ ಎನ್ನುವುದಕ್ಕಿಂತ ಎಷ್ಟು ಹೊತ್ತು ಗಮನವಿಟ್ಟು ಓದುತ್ತೇವೆ ಎನ್ನುವುದು ಮುಖ್ಯವಾಗುತ್ತದೆ’ ಎಂದು ದಿಶಾ ಹೇಳಿದರು. ಈಕೆ ಮೂಡುಬಿದಿರೆ ಪುತ್ತಿಗೆ ಪದವು ದಿನೇಶ್ ಕೋಟ್ಯಾನ್ ಅವರ ಪುತ್ರಿ.

‘ತಾಯಿಯನ್ನು ಕಳೆದುಕೊಂಡ ದಿಶಾಳನ್ನು ನಾವು ನಮ್ಮ ಸುಪರ್ದಿಯಲ್ಲಿಟ್ಟುಕೊಂಡು ವಿಶೇಷ ಲಕ್ಷ್ಯವಹಿಸಿ ಪರೀಕ್ಷೆಗೆ ಅಣಿಗೊಳಿಸಿದ್ದೆವು. ಇಂಗ್ಲಿಷ್ ವಿಷಯದಲ್ಲಿ ಆಕೆಗಿದ್ದ ಭಯವನ್ನು ದೂರ ಮಾಡಲು ಸಾಕಷ್ಟು ಶ್ರಮ ಹಾಕಿದೆವು. ಎಲ್ಲದರ ಫಲವಾಗಿ ಆಕೆ ಉತ್ತಮ ಸಾಧನೆ ಮಾಡಿದ್ದಾಳೆ. ಆಳ್ವಾಸ್ ಶಿಕ್ಷಣ ಸಂಸ್ಥೆಯ 95 ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ 10ರೊಳಗಿನ ರ‍್ಯಾಂಕ್ ಪಡೆದಿದ್ದಾರೆ. ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದು, ಸಾಧನೆ ಮಾಡಿರುವ 75 ವಿದ್ಯಾರ್ಥಿಗಳು ಶೈಕ್ಷಣಿಕವಾಗಿಯೂ ಉತ್ತಮ ಸಾಧನೆ ತೋರಿದ್ದಾರೆ’ ಎಂದು ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಮೋಹನ್ ಆಳ್ವ ‘ಪ್ರಜಾವಾಣಿ’ಗೆ ತಿಳಿಸಿದರು.

ಕಲಾವಿಭಾಗ: ಸೃಷ್ಟಿ ರಾಜ್ಯಕ್ಕೆ ಟಾಪರ್

ಪ್ರಜಾವಾಣಿ ವಾರ್ತೆ

ಕಲಬುರಗಿ: ನಗರದ ಎಚ್‌ಕೆಇ ಸೊಸೈಟಿಯ ವೀರಮ್ಮ ಗಂಗಸಿರಿ ಮಹಿಳಾ ಪಿಯು ಕಾಲೇಜಿನ ಸೃಷ್ಟಿ ಮಲ್ಲಿನಾಥ ಪಾಟೀಲ ದ್ವಿತೀಯ ಪಿಯು ಕಲಾ ವಿಭಾಗದಲ್ಲಿ 598 ಅಂಕ ಗಳಿಸುವ ಮೂಲಕ ರಾಜ್ಯಕ್ಕೆ ಟಾಪರ್ ಆಗಿ ಹೊರಹೊಮ್ಮಿದ್ದಾರೆ.

ವಿ.ಜಿ. ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯೊಬ್ಬರು ಕಾಲೇಜಿನ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪಿಯುಸಿಯಲ್ಲಿ ಟಾಪರ್ ಆಗಿದ್ದಾರೆ.

ನಗರದ ಗಾಜಿಪುರದ ನಿವಾಸಿ, ಹೋಟೆಲ್ ನಡೆಸುತ್ತಿರುವ ಮಲ್ಲಿನಾಥ ಪಾಟೀಲ–ಸವಿತಾ ದಂಪತಿಯ ಪುತ್ರಿ ಸೃಷ್ಟಿ ಈ ಸಾಧನೆ ಮಾಡಿದ್ದಾರೆ. ಪಿಯು ಫಲಿತಾಂಶದಲ್ಲಿ ಹಿಂದುಳಿದಿದ್ದ ಜಿಲ್ಲೆಗೆ ಸೃಷ್ಟಿ ಪಾಟೀಲ ಸಾಧನೆ ಹೊಸ ಉತ್ಸಾಹ ಮೂಡಿಸಿದೆ. ‘ಎಸ್ಸೆಸ್ಸೆಲ್ಸಿಯಲ್ಲಿ ಶೇ 95.3 ಫಲಿತಾಂಶ ದಾಖಲಿಸಿದ್ದೆ. ಪಿಯುಸಿಯಲ್ಲಿ ರಾಜ್ಯಕ್ಕೆ ಟಾಪರ್ ಆಗಿರುವ ವಿಚಾರ ಕೇಳಿದಾಗ ನಂಬಲಿಲ್ಲ. ನಂತರ ಕಾಲೇಜಿನ ಆಡಳಿತ ಮಂಡಳಿಯವರೇ ಈ ವಿಷಯ ತಿಳಿಸಿದಾಗ ಖುಷಿಯಾಯಿತು’ ಎಂದು ವಿದ್ಯಾರ್ಥಿನಿ ಸೃಷ್ಟಿ ‘ಪ್ರಜಾವಾಣಿ’ ಜೊತೆಗೆ ಸಂತಸ ಹಂಚಿಕೊಂಡರು.

ಕಾರ್ಮಿಕನ ಮಗ 2ನೇ ರ‍್ಯಾಂಕ್

ಬೆಳಗಾವಿ: ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ನಿಡಸೋಸಿಯ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಅಂಕಿತ್ ಭೀಮಪ್ಪ ಕಾರತಗಿ ಪಿಯು ವಿಜ್ಞಾನ ವಿಭಾಗದಲ್ಲಿ ಶೇ 99.66 ಫಲಿತಾಂಶ ಪಡೆದು, ರಾಜ್ಯಕ್ಕೆ ದ್ವಿತೀಯ ರ‍್ಯಾಂಕ್ ಗಳಿಸಿದ್ದಾರೆ.

ಗೋಕಾಕ ತಾಲ್ಲೂಕಿನ ರಾಜಾಪುರ ಗ್ರಾಮದ ಅಂಕಿತ್ ಅವರು ಭೌತ ವಿಜ್ಞಾನ, ರಸಾಯನ ವಿಜ್ಞಾನ, ಜೀವ ವಿಜ್ಞಾನ, ಗಣಿತ ಮತ್ತು ಕನ್ನಡ ವಿಷಯಗಳಲ್ಲಿ 100ಕ್ಕೆ ನೂರು ಅಂಕ, ಇಂಗ್ಲಿಷ್‌ನಲ್ಲಿ 98 ಅಂಕ ಪಡೆದಿದ್ದಾರೆ. ಅಂಕಿತ್ ತಂದೆ ಭೀಮಪ್ಪ ಚಿಕ್ಕೋಡಿಯ ಸಿಮೆಂಟ್ ಅಂಗಡಿಯೊಂದರಲ್ಲಿ ಕೂಲಿ ಕೆಲಸ ಮಾಡುತ್ತಿದ್ದು, ತಾಯಿ ಸುನೀತಾ ಗೃಹಿಣಿ. ‘600ಕ್ಕೆ 600 ಅಂಕ ಪಡೆಯುವ ನಿರೀಕ್ಷೆ ಇತ್ತು. ನಿರಂತರ ಓದು, ಕಾಲೇಜಿನ ಪ್ರಾಧ್ಯಾಪಕರ ಬೆಂಬಲ ಮತ್ತು ಪಾಲಕರ ಪ್ರೋತ್ಸಾಹದಿಂದ ಯಶಸ್ಸು ಸಿಕ್ಕಿದೆ’ ಎಂದು ಪ್ರತಿಕ್ರಿಯಿಸಿದರು.

ಕೈದಿಗೆ ಶೇ. 80ರಷ್ಟು ಅಂಕ

ಬಳ್ಳಾರಿ: ಜೀವಾವಧಿ ಶಿಕ್ಷೆಗೆ ಗುರಿಯಾಗಿ ಬಳ್ಳಾರಿಯ ಕೇಂದ್ರ ಕಾರಾಗೃಹದಲ್ಲಿರುವ ಕೈದಿ ಅಶೋಕ್ (27) ಪಿಯುಸಿ ಕಲಾ ವಿಭಾಗದಲ್ಲಿ ಶೇ 80.16 ಅಂಕ ಗಳಿಸಿದ್ದಾರೆ.

‘ಬೆಂಗಳೂರಿನ ಅಶೋಕ್ ಖಾಸಗಿ ಅಭ್ಯರ್ಥಿಯಾಗಿ ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದರು. ಕಾರಾಗೃಹದ ಭದ್ರತಾ ವ್ಯವಸ್ಥೆಯಡಿ ಪರೀಕ್ಷೆಗೆ ಹಾಜರಾಗಿದ್ದರು’ ಎಂದು ಜೈಲು ಅಧೀಕ್ಷಕಿ ಲತಾ ತಿಳಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಜೈಲು ಮತ್ತು ಸುಧಾರಣಾ ಸೇವೆಗಳ ಡಿಜಿಪಿ ಅಲೋಕ್ ಕುಮಾರ್, ‘ಜೈಲಿನ ಗೋಡೆಗಳು ಉತ್ತಮ ಭವಿಷ್ಯದ ಬಗೆಗಿನ ಅಶೋಕ್ ಭರವಸೆ ಹುಸಿಗೊಳಿಸಿಲ್ಲ ಎಂಬುದು ಸಂತೋಷ’ ಎಂದಿದ್ದಾರೆ.

‘ಶಿಸ್ತು ಅಧ್ಯಯನ ಅಂಕ ಗಳಿಕೆಗೆ ಪೂರಕ’

ಮಂಗಳೂರು: ದ್ವಿತೀಯ ಪಿಯು ವಿಜ್ಞಾನ ವಿಭಾಗದಲ್ಲಿ ನಗರದ ದಿ ಲರ್ನಿಂಗ್ ಸೆಂಟರ್ ಪಿಯು ಕಾಲೇಜಿನ (ಸಿಎಫ್‌ಎಎಲ್) ವಿದ್ಯಾರ್ಥಿನಿ ಪ್ರಿನ್ಸಿಲ್ಲಾ ಕಾರ್ಡೋಜ 599 ಅಂಕ ಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾಳೆ.

‘ಶಿಸ್ತುಬದ್ಧ ಅಧ್ಯಯನ, ವಿಷಯ ಅರ್ಥೈಸಿಕೊಳ್ಳುವಿಕೆ, ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆ ಬಿಡಿಸುವುದು ನನ್ನ ದಿನಚರಿಯಾಗಿತ್ತು. ಉತ್ತಮ ಅಂಕದ ನಿರೀಕ್ಷೆ ಇತ್ತು. ಆದರೆ, ಪ್ರಥಮ ಸ್ಥಾನ ನಿರೀಕ್ಷಿಸಿರಲಿಲ್ಲ. ತುಂಬಾ ಖುಷಿಯಾಗಿದೆ. ಕಾಲೇಜಿನಲ್ಲಿ ಉಪನ್ಯಾಸಕರ ನಿರಂತರ ಮಾರ್ಗದರ್ಶನವು ಉತ್ತಮ ಅಂಕಗಳಿಕೆಗೆ ಸಹಕಾರಿಯಾಯಿತು. ಮುಂದೆ ಎಂಜಿನಿಯರಿಂಗ್ ಕೋರ್ಸ್ ಮಾಡುವ ಕನಸಿದೆ’ ಎನ್ನುತ್ತಾರೆ ಪ್ರಿನ್ಸಿಲ್ಲಾ ಕಾರ್ಡೋಜ.

ಮಗಳೊಂದಿಗೆ ತಾಯಿಯೂ ಉತ್ತೀರ್ಣ

ಪ್ರಜಾವಾಣಿ ವಾರ್ತೆ

ಮೂಡಲಗಿ (ಬೆಳಗಾವಿ): ತಾಲ್ಲೂಕಿನ ಕಲ್ಲೋಳಿಯಲ್ಲಿ ತಾಯಿ ಹಾಗೂ ಮಗಳು ಬೇರೆ ಬೇರೆ ಕಾಲೇಜುಗಳಲ್ಲಿ ಪಿಯು ಪರೀಕ್ಷೆ ಬರೆದು ಉತ್ತೀರ್ಣರಾಗಿದ್ದಾರೆ.

ವಿದ್ಯಾರ್ಥಿನಿ ಪಲ್ಲವಿ ಪರಪ್ಪ ಗಿರೆಣ್ಣವರ ನಾಗನೂರಿನ ಅಥರ್ವ ಪಿಯು ಕಾಲೇಜಿನಲ್ಲಿ ವಾಣಿಜ್ಯ ವಿಭಾಗದಲ್ಲಿ ಶೇ 78 ಅಂಕ ಪಡೆದಿದ್ದಾರೆ. ಅವರ ತಾಯಿ ಶಿಲ್ಪಾ ಪರಪ್ಪ ಗಿರೆಣ್ಣವರ ವಡೇರಹಟ್ಟಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕಲಾ ವಿಭಾಗದಲ್ಲಿ ಬಾಹ್ಯವಾಗಿ ಪರೀಕ್ಷೆ ಬರೆದು ಶೇ 54 ಅಂಕ ಪಡೆದಿದ್ದಾರೆ.

ತಾಯಿ ಶಿಲ್ಪಾ ಮತ್ತು ಮಗಳು ಪಲ್ಲವಿ

‘16 ವರ್ಷಗಳಿಂದ ಅಂಗನವಾಡಿ ಕೇಂದ್ರಗಳ ಮೇಲ್ವಿಚಾರಿಕಿ ಆಗಿದ್ದೇನೆ. ಬಿ.ಕಾಂ ಮಾಡುವ ಹಂಬಲವಿದೆ. ಈ ಬಾರಿ ಪಿಯು ಉತ್ತೀರ್ಣಗೊಂಡಿದ್ದು, ಖುಷಿ ತಂದಿದೆ. ಮಗಳೊಂದಿಗೆ ನಾನೂ ಅಭ್ಯಾಸ ಮಾಡುತ್ತಿದ್ದೆ. ಅವಳು ಓದಿಗೆ ನೆರವಾದಳು’ ಎಂದು ಶಿಲ್ಪಾ ‘ಪ್ರಜಾವಾಣಿ’ಗೆ ತಿಳಿಸಿದರು.

ಸಿ.ಎ ಶಿಕ್ಷಣ ಉಚಿತ: ಮೋಹನ ಆಳ್ವ

ದಿಶಾಗೆ ಆಳ್ವಾಸ್‌ನಿಂದ ₹3 ಲಕ್ಷ ನಗದು ಘೋಷಣೆ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): 2026ರಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಆಳ್ವಾಸ್ ಕಾಲೇಜು ಅತ್ಯುತ್ತಮ ಸಾಧನೆ ಮಾಡಿದ್ದು, ಸಂಸ್ಥೆಯ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ದಿಶಾ 600ರಲ್ಲಿ 600 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾಳೆ. ವಿಜ್ಞಾನ ವಿಭಾಗದಲ್ಲಿ ರಕ್ಷಿತಾ ಮಂಜುನಾಥ್ ಎಸ್. 598 ಅಂಕ ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾಳೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದ್ವಿತೀಯ ಪಿಯು ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನಿಯಾದ ಆಳ್ವಾಸ್‌ನ ದಿಶಾಗೆ ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಸಿಹಿ ತಿನ್ನಿಸಿದರು

ಈ ವರ್ಷದ ಫಲಿತಾಂಶದಲ್ಲಿ 95 ವಿದ್ಯಾರ್ಥಿಗಳು ರಾಜ್ಯದ ಟಾಪ್ 10 ರ‍್ಯಾಂಕ್‌ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. 687 ಮಂದಿ ಶೇ 95ಕ್ಕಿಂತ ಹೆಚ್ಚು ಅಂಕ ಗಳಿಸಿದ್ದು, 1,557 ವಿದ್ಯಾರ್ಥಿಗಳು ಶೇ 90ಕ್ಕಿಂತ ಅಧಿಕ, 1,892 ಮಂದಿ ಶೇ 85ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. 285 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

‘ದ್ವಿತೀಯ ಪಿ.ಯು ಅಂತಿಮ ಪರೀಕ್ಷೆ ನಡೆಯುತ್ತಿದ್ದ ಸಂದರ್ಭ ದಿಶಾಳ ತಾಯಿ ಸವಿತಾ ಮೃತಪಟ್ಟಿದ್ದರು. ತಾಯಿಯನ್ನು ಕಳೆದುಕೊಂಡ ದುಃಖದಲ್ಲೂ ದಿಶಾ ಪರೀಕ್ಷೆ ಬರೆದು ಅತ್ಯುನ್ನತ ಸಾಧನೆ ತೋರಿದ್ದಾಳೆ’ ಎಂದು ಶ್ಲಾಘಿಸಿದರು.

ದಿಶಾಳನ್ನು ಅಭಿನಂದಿಸಿದ ಮೋಹನ ಆಳ್ವ, ಆಕೆಗೆ ₹3 ಲಕ್ಷ ನಗದು ಪುರಸ್ಕಾರ ಪ್ರಕಟಿಸಿದ್ದು, ಸಂಸ್ಥೆಯಲ್ಲಿ ಸಂಪೂರ್ಣ ಉಚಿತ ಶಿಕ್ಷಣ ಯೋಜನೆಯಡಿ ಸಿ.ಎ ವ್ಯಾಸಂಗ ಮಾಡಲು ನೆರವು ನೀಡಲಾಗುವುದು ಎಂದರು.

ಪರೀಕ್ಷೆ–2: ಏಪ್ರಿಲ್ 30ರಿಂದ ಆರಂಭ

ಪ್ರಜಾವಾಣಿ ವಾರ್ತೆ

ದ್ವಿತೀಯ ಪಿಯು ಪರೀಕ್ಷೆ–2 ಏ.30ರಿಂದ ಮೇ 13ರವರೆಗೆ ನಡೆಯಲಿದೆ. ಫಲಿತಾಂಶ ಉತ್ತಮಪಡಿಸಿಕೊಳ್ಳಲು, ಮರು ಪರೀಕ್ಷೆ ಬರೆಯಲು ಏ.10ರಿಂದ 17ರವರೆಗೆ ನೋಂದಣಿ ಮಾಡಿಕೊಳ್ಳಬಹುದು.

ಫಲಿತಾಂಶ ಉತ್ತಮಪಡಿಸಿಕೊಳ್ಳಲು ಬಯಸುವವರು ಪ್ರತಿ ವಿಷಯಕ್ಕೆ ₹175 ಪಾವತಿಸಬೇಕು. ಉತ್ತರ ಪತ್ರಿಕೆಯ ಛಾಯಾ ಪ್ರತಿಗಾಗಿ ಅರ್ಜಿ ಸಲ್ಲಿಸಲು ಏ.15, ಡೌನ್‌ಲೋಡ್ ಮಾಡಿಕೊಳ್ಳಲು ಏ.17 ಮರು ಮೌಲ್ಯಮಾಪನ, ಮರು ಎಣಿಕೆಗೆ ಅರ್ಜಿ ಸಲ್ಲಿಸಲು ಏ.19 ಕೊನೆಯ ದಿನ. ಛಾಯಾ ಪ್ರತಿ ಪಡೆಯಲು ಪ್ರತಿ ವಿಷಯಕ್ಕೆ ₹530, ಮರುಮೌಲ್ಯಮಾಪನಕ್ಕೆ ₹1,670 ಶುಲ್ಕ ನಗದಿ ಮಾಡಲಾಗಿದೆ.

ಕಲಾ ವಿಭಾಗ (ದ್ವಿತೀಯ ಸ್ಥಾನ)

ಫಾತಿಮತ್ ಎಸ್. 595	ಶಾರದಾ ಮಹಿಳಾ ಪಿಯು ಕಾಲೇಜು, ದಕ್ಷಿಣ ಕನ್ನಡ
ಮಹಮದ್‌ಯಾನ್ ನದಾಫ್ 595	ಬಿಎಚ್‌ಎಸ್ ಆರ್ಟ್ಸ್ ಆ್ಯಂಡ್ ಟಿಜಿಪಿ ಸೈನ್ಸ್ ಪಿಯು ಕಾಲೇಜು, ಬಾಗಲಕೋಟೆ
ಸನಿಕಾ ಮೆಟಗಾರ್ 595	ಎಸ್‌ಎಸ್ ಪಿಯು ಕಾಲೇಜು, ವಿಜಯಪುರ
ಶಿವಾನಂದ ಎಂ. ಬುರ್ಲಟ್ಟಿ 595	ಜಿ.ಎ. ಕಾಂಪೊಸಿಟ್ ಪಿಯು ಕಾಲೇಜು, ಬೆಳಗಾವಿ
ಶ್ರಾವಣಿ ಪಾಟೀಲ 595	ಜೆಎಸ್‌ಎಸ್ ಎಸ್‌ಎಂ ಸೈನ್ಸ್ ಪಿಯು ಕಾಲೇಜು, ಧಾರವಾಡ

ವಾಣಿಜ್ಯ ವಿಭಾಗ (ದ್ವಿತೀಯ ಸ್ಥಾನ)

ಧ್ವನಿ ಎಸ್.ಕುಲಕರ್ಣಿ 599	ಗೋಗ್ಟೆ ವಾಣಿಜ್ಯ ಪಿಯು ಕಾಲೇಜು, ಬೆಳಗಾವಿ
ರಚೇಲ್ ಡಿಸೋಜಾ 599	ಸೆಂಟ್ ಅಲೋಶಿಯಸ್ ಪಿಯು ಕಾಲೇಜು, ಮಂಗಳೂರು

ವಿಜ್ಞಾನ ವಿಭಾಗ (ದ್ವಿತೀಯ ಸ್ಥಾನ)

ಅಭಿರಾಮ್ ವಿ ಭಟ್ 598	ವಿವೇಕಾನಂದ ಪಿಯು ಕಾಲೇಜು, ದಕ್ಷಿಣ ಕನ್ನಡ,
ಎಂಜೆಲ್ ತಿವಾರಿ 598	ಬೇಸ್ ಪಿಯು ಕಾಲೇಜು, ಬೆಂಗಳೂರು
ಅಂಕಿತ ಭೀಮಪ್ಪಾ ಕಾರತಗಿ 598	ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ
ಧನುಷ್ ಗುತ್ತಿ 598	ನ್ಯೂ ವೈಬ್ರೆಂಟ್ ಪಿಯು ಕಾಲೇಜು, ದಕ್ಷಿಣ ಕನ್ನಡ
ಮೀನಾಕ್ಷಿ ಉನ್ನಿತನ್ 598	ದಿ ಲರ್ನಿಂಗ್ ಸೆಂಟರ್ ಪಿಯು ಕಾಲೇಜು, ಮಂಗಳೂರು
ನಂದನ್ ನಾಯಕ್ 598	ಎಕ್ಸ್‌ಪರ್ಟ್ ಪಿಯು ಕಾಲೇಜು, ದಕ್ಷಿಣ ಕನ್ನಡ
ರಕ್ಷಿತಾ ಎಂ.ಸಂಗನಪೇಟ್ 598	ಆಳ್ವಾ ಪಿಯು ಕಾಲೇಜು, ದಕ್ಷಿಣ ಕನ್ನಡ
ರಶ್ಮಿ 598	ಜನತಾ ಐಎನ್‌ಡಿಪಿ ಪಿಯು ಕಾಲೇಜು, ಉಡುಪಿ
ಸಾಯಿ ರಾಘವ ವಿಶ್ವೇಶ್ 598	ಆಕ್ಸ್‌ಫರ್ಡ್ ಪಿಯು ಕಾಲೇಜು, ಬೆಂಗಳೂರು
ಸಮನ್ಯು ಶೆಟ್ಟಿ 598	ಎಕ್ಸ್‌ಪರ್ಟ್ ಪಿಯು ಕಾಲೇಜು, ದಕ್ಷಿಣ ಕನ್ನಡ
ಯು ಶ್ರಾವಣಿ 598	ಶ್ರೀ ವಿದ್ಯಾನಿಕೇತನ ಪಿಯು ಕಾಲೇಜು, ಕೊಪ್ಪಳ
ವೈಭವಿ ಎಸ್.ಕೆ. 598	ಶಾರದಾ ಪಿಯು ಕಾಲೇಜು, ಮಂಗಳೂರು

ಪರೀಕ್ಷೆ–2ರ ವೇಳಾಪಟ್ಟಿ

ಏ. 30	ಕನ್ನಡ, ಅರೇಬಿಕ್
ಮೇ 2	ಐಚ್ಛಿಕ ಕನ್ನಡ, ತರ್ಕಶಾಸ್ತ್ರ, ಲೆಕ್ಕಶಾಸ್ತ್ರ, ರಸಾಯನ ವಿಜ್ಞಾನ
ಮೇ 4	ಇಂಗ್ಲಿಷ್
ಮೇ 5	ವ್ಯವಹಾರ ಅಧ್ಯಯನ, ಭೌತ ವಿಜ್ಞಾನ, ಶಿಕ್ಷಣಶಾಸ್ತ್ರ
ಮೇ 6	ಅರ್ಥಶಾಸ್ತ್ರ, ಜೀವ ವಿಜ್ಞಾನ,
ಮೇ 7	ಇತಿಹಾಸ, ಗಣಿತ, ಗೃಹವಿಜ್ಞಾನ
ಮೇ 8	ರಾಜ್ಯಶಾಸ್ತ್ರ, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸೈನ್ಸ್
ಮೇ 9	ಹಿಂದಿ
ಮೇ 11	ಸಮಾಜಶಾಸ್ತ್ರ, ಸಂಖ್ಯಾಶಾಸ್ತ್ರ
ಮೇ 12	ಭೂಗೋಳ, ಮನೋವಿಜ್ಞಾನ, ಭೂಗರ್ಭ ವಿಜ್ಞಾನ, ಮೂಲ ಗಣಿತ
ಮೇ 13	(ಬೆಳಗ್ಗೆ) ತಮಿಳು, ತೆಲುಗು, ಮಲಯಾಳ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್
ಮೇ 13	(ಮಧ್ಯಾಹ್ನ) ಹಿಂದೂಸ್ತಾನಿ ಸಂಗೀತ, ಎನ್‌ಎಸ್‌ಕ್ಯೂಎಫ್ ಕೋರ್ಸ್‌ಗಳು

ಮೊದಲ 10 ಸ್ಥಾನ ಪಡೆದ ಜಿಲ್ಲೆಗಳು

ಉಡುಪಿ	96.39
ದಕ್ಷಿಣ ಕನ್ನಡ	96.35
ಕೊಡಗು	92.34
ವಿಜಯಪುರ	92.00
ಉತ್ತರ ಕನ್ನಡ	91.78
ಬೆಂಗಳೂರು ಗ್ರಾಮಾಂತರ	91.00
ಚಿಕ್ಕಮಗಳೂರು	90.80
ಬೆಂಗಳೂರು ದಕ್ಷಿಣ	90.55
ಚಿಕ್ಕಬಳ್ಳಾಪುರ	90.24
ಬೆಂಗಳೂರು ಉತ್ತರ	90.05

47 ಕಾಲೇಜುಗಳಿಗೆ ಶೂನ್ಯ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 47 ಪದವಿಪೂರ್ವ ಕಾಲೇಜುಗಳು ಶೂನ್ಯ ಫಲಿತಾಂಶ ಪಡೆದಿವೆ. 37 ಖಾಸಗಿ ಕಾಲೇಜುಗಳಲ್ಲಿ ಒಬ್ಬ ವಿದ್ಯಾರ್ಥಿಯೂ ತೇರ್ಗಡೆಯಾಗಿಲ್ಲ. ಅನುದಾನಿ ಕಾಲೇಜುಗಳಲ್ಲಿ 7, ವಸತಿ ಕಾಲೇಜು 2 ಹಾಗೂ 1 ಸರ್ಕಾರಿ ಪಿಯು ಕಾಲೇಜು ಶೂನ್ಯ ಫಲಿತಾಂಶ ದಾಖಲಿಸಿವೆ.

265 ಖಾಸಗಿ ಕಾಲೇಜುಗಳು ಸೇರಿ 409 ಕಾಲೇಜುಗಳು ಶೇ 100ರಷ್ಟು ಫಲಿತಾಂಶ ಪಡೆದಿವೆ. 74 ಸರ್ಕಾರಿ ಕಾಲೇಜುಗಳು, 64 ವಸತಿ ಕಾಲೇಜು, 6 ಅನುದಾನಿತ ಕಾಲೇಜುಗಳು ಶೇ 100ರ ಫಲಿತಾಂಶದ ಶ್ರೇಯಕ್ಕೆ ಪಾತ್ರವಾಗಿವೆ.

ಶೇಕಡವಾರು ಫಲಿತಾಂಶ

ಕಲಾ	72.86
ವಾಣಿಜ್ಯ	88.04
ವಿಜ್ಞಾನ	91.69
ನಗರ	85.95
ಗ್ರಾಮೀಣ	87.62
ಸರ್ಕಾರಿ ಕಾಲೇಜು	78.72
ಅನುದಾನಿತ	82.91
ಖಾಸಗಿ	90.73
ಜಿಬಿಎ	77.78
ವಸತಿಯುತ	93.99

ಪರೀಕ್ಷೆಗೆ ಹಾಜರಾದವರು

ಬಾಲಕರು	2,78,458
ಉತ್ತೀರ್ಣರಾದವರು	2,32,928
ಬಾಲಕಿಯರು	3,53,742
ಉತ್ತೀರ್ಣರಾದವರು	3,13,770

‘ಕ್ಷೇತ್ರ ಪುನರ್ ವಿಂಗಡಣೆ: ದಕ್ಷಿಣಕ್ಕೆ ಅನ್ಯಾಯ’

ಬೆಂಗಳೂರು: ‘ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯಿಂದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾದರೆ, ರಾಜಕೀಯ ಅಸ್ತಿತ್ವಕ್ಕೆ ಸಂಚಕಾರ ಬರಲಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕಳವಳ ವ್ಯಕ್ತಪಡಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಪುನರ್ ವಿಂಗಡಣೆ ಕುರಿತಂತೆ ನರೇಂದ್ರ ಮೋದಿ ಅವರ ಮಾತನ್ನು ನಂಬಿ ಹೋದರೆ ಮುಂದೆ ದಕ್ಷಿಣದ ರಾಜ್ಯಗಳಿಗೆ ಬೆಲೆಯೇ ಇರುವುದಿಲ್ಲ ಎಂದರು.

ಆರ್‌ಸಿ: ಮೂಲ ಮಾಲೀಕನೇ ಹೊಣೆ

ಬೆಂಗಳೂರು: ‘ವಾಹನ ಮಾರಾಟದ ಬಳಿಕ ಅದರ ನೋಂದಣಿ ಪ್ರಮಾಣ ಪತ್ರದಲ್ಲಿ (ಆರ್‌ಸಿ) ಮಾಲೀಕರ ಹೆಸರು ಅಧಿಕೃತವಾಗಿ ಬದಲಾಗುವ ತನಕ ಆ ವಾಹನದ ಸಂಪೂರ್ಣ ಜವಾಬ್ದಾರಿಯನ್ನು ನೋಂದಾಯಿತ ಮಾಲೀಕನೇ ಹೊರಬೇಕಾಗುತ್ತದೆ’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ವಿಶದಪಡಿಸಿದೆ.

ಪರಿಹಾರ ಪಾವತಿಗೆ ಸಂಬಂಧಿಸಿದಂತೆ ನಿರ್ದೇಶನ ನೀಡಿದ್ದ ಮೋಟಾರು ಅಪಘಾತ ಕ್ಲೇಮ್ (ಪರಿಹಾರ ಪಡೆಯುವ ಹಕ್ಕು) ನ್ಯಾಯಮಂಡಳಿ (ಎಂಎಸಿಟಿ) ಆದೇಶವನ್ನು ಪ್ರಶ್ನಿಸಿ ವಾಹನದ ಮಾಲೀಕ ಮಾರತ್ತಹಳ್ಳಿಯ ವಿ.ಸುನಿಲ್ ಕುಮಾರ್, ವಾಹನ ಖರೀದಿಸಿದ್ದ ಶಬ್ರೇಜ್ ಮತ್ತು ಪರಿಹಾರ ಹೆಚ್ಚಳ ಕೋರಿ ಮೃತರ ಕುಟುಂಬಸ್ಥರು ಸಲ್ಲಿಸಿದ್ದ ಮಿಶ್ರಿತ ಮೊದಲ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಲಾಗಿದೆ.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಜಿ.ಪಂಡಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಇತ್ತೀಚೆಗೆ ಆದೇಶಿಸಿದ್ದು, ‘ಅಪಘಾತಕ್ಕೆ ಈಡಾದ ಬೈಕ್ ನೋಂದಣಿ ಇನ್ನೂ ಸುನಿಲ್ ಕುಮಾರ್ ಅವರ ಹೆಸರಿನಲ್ಲೇ ಇರುವುದರಿಂದ ಪರಿಹಾರ ಪಾವತಿ ಜವಾಬ್ದಾರಿ ಅವರದ್ದೇ ಆಗಿರುತ್ತದೆ’ ಎಂದು ಸ್ಪಷ್ಟಪಡಿಸಿದೆ.

‘ಪರಿಹಾರದ ಮೊತ್ತ ನಿಗದಿ ಪಡಿಸುವಾಗ ನ್ಯಾಯಮಂಡಳಿ ತೆಗೆದುಕೊಂಡಿರುವ ನಿರ್ಧಾರ ಸಮಂಜಸವಾಗಿಲ್ಲ. ಹೀಗಾಗಿ, ಪರಿಹಾರ ಮೊತ್ತದ ₹33.07 ಲಕ್ಷಕ್ಕೆ ₹14 ಲಕ್ಷ ಹೆಚ್ಚುವರಿಯಾಗಿ ಸೇರಿಸಬೇಕು ಮತ್ತು ಒಟ್ಟು ₹47.15 ಲಕ್ಷ ಪಾವತಿಸಬೇಕು. ಈ ಮೊತ್ತವನ್ನು ವಾಹನದ ಮೂಲ ಮಾಲೀಕ ಸುನಿಲ್ ಕುಮಾರ್ ಅವರೇ ಪಾವತಿಸಬೇಕು’ ಎಂದು ಪೀಠ ಆದೇಶಿಸಿದೆ.

ಪ್ರಕರಣವೇನು?: ಸುನಿಲ್ ಕುಮಾರ್ ಬೈಕ್ ಅನ್ನು ಶಬ್ರೇಜ್‌ಗೆ ಮಾರಾಟ ಮಾಡಿದ್ದರು. 2020ರ ಜೂನ್ 18ರಂದು ಬೈಕ್ ಡಿಕ್ಕಿ ಹೊಡೆದು ದೇವನಹಳ್ಳಿ ತಾಲ್ಲೂಕಿನ ಆವತಿ ಗ್ರಾಮದ ವೈ.ಹನುಮಂತ (42) ಮೃತಪಟ್ಟಿದ್ದರು. ‘ಮೃತರ ಕುಟುಂಬಕ್ಕೆ ನ್ಯಾಯಮಂಡಳಿ ₹33 ಲಕ್ಷವನ್ನು ಸುನಿಲ್ ಕುಮಾರ್ ಮತ್ತು ಶಬ್ರೇಜ್ ಜಂಟಿಯಾಗಿ ಪಾವತಿ ಮಾಡಬೇಕು’ ಎಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಸುನಿಲ್ ಕುಮಾರ್ ಮತ್ತು ಶಬ್ರೇಜ್ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಅಂತೆಯೇ, ಮೃತ ಹನುಮಂತ ಅವರ ಕುಟುಂಬದ ಸದಸ್ಯರು ಪರಿಹಾರದ ಮೊತ್ತ ಹೆಚ್ಚಿಸುವಂತೆ ಕೋರಿ ಪ್ರತ್ಯೇಕ ಮೇಲ್ಮನವಿ ಸಲ್ಲಿಸಿದ್ದರು.

ಲೇಖಕಿಯರ ಸಂಘದಿಂದ 2024 ಮತ್ತು 2025ನೇ ಸಾಲಿನ ದತ್ತಿ ಪ್ರಶಸ್ತಿಗಳ ಪ್ರದಾನ

ಲೇಖಕಿಯರಿಗಾಗಿ ‘ಕಲೇಸಂ’ ವೆಬ್‌ಸೈಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಧುನಿಕ ಯುಗಕ್ಕೆ ತೆರೆದುಕೊಳ್ಳಲು ಹಾಗೂ ಲೇಖಕಿಯರ ಜತೆಗೆ ಡಿಜಿಟಲ್ ವೇದಿಕೆಯ ನೆರವಿನಲ್ಲಿ ಸಂಪರ್ಕ ಸಾಧಿಸಲು ಕರ್ನಾಟಕ ಲೇಖಕಿಯರ ಸಂಘವು (ಕಲೇಸಂ) ನೂತನ ವೆಬ್‌ಸೈಟ್ ರೂಪಿಸಿದೆ.

ಸಂಘವು ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ 2024 ಮತ್ತು 2025ನೇ ಸಾಲಿನ ವಾರ್ಷಿಕ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ವೆಬ್‌ಸೈಟ್ ಜನಾರ್ಪಣೆಗೊಂಡಿತು.

ವೆಬ್‌ಸೈಟ್ ಉದ್ದೇಶದ ಬಗ್ಗೆ ತಿಳಿಸಿದ ಲೇಖಕಿ ಜಯಲಕ್ಷ್ಮಿ ಪಾಟೀಲ, ‘ಇನ್ನುಮುಂದೆ ಅಂಗೈನಲ್ಲಿ ಸಂಘದ ಚಟುವಟಿಕೆಗಳ ಬಗ್ಗೆ ಮಾಹಿತಿ ದೊರೆಯಲಿದೆ. ಸಂಘ ಹೊರತರುವ ತ್ರೈಮಾಸಿಕ ಸಂಚಿಕೆಯು ಅಂಚೆ ಮೂಲಕ ತಲುಪುವವರೆಗೆ ಕಾಯದೆ ಇ ಆವೃತ್ತಿಯಲ್ಲಿ ಓದಬಹುದಾಗಿದೆ. ಸದಸ್ಯತ್ವ ಪಡೆಯುವ ಅವಕಾಶವನ್ನೂ ಒದಗಿಸಲಾಗಿದೆ. ಈ ವೆಬ್‌ಸೈಟ್ ಮೂಲಕವೇ ಇ ಮತದಾನ ವ್ಯವಸ್ಥೆ ರೂಪಿಸಬೇಕು ಅಂದುಕೊಂಡಿದ್ದೇವೆ. ಇದರಿಂದ ಅಡ್ಡ ಮತದಾನ ತಪ್ಪಿ, ಪಾರದರ್ಶಕ ಚುನಾವಣೆ ಸಾಧ್ಯವಾಗಲಿದೆ. ಲೇಖಕಿಯರು ಈ ವೆಬ್‌ಸೈಟ್‌ನ ಪ್ರಯೋಜನ ಪಡೆದುಕೊಳ್ಳಬೇಕು’ ಎಂದರು.

ಸಮಾರಂಭದಲ್ಲಿ ‘ಡಾ. ನಳಿನಿ ಮೂರ್ತಿ ದತ್ತಿ ಪ್ರಶಸ್ತಿ’ಯನ್ನು ಬಿ.ಎಸ್. ಶೈಲಜಾ ಮತ್ತು ನೇಮಿಚಂದ್ರ ಅವರಿಗೆ ಪ್ರದಾನ ಮಾಡಲಾಯಿತು. ಎಸ್.ಜಿ. ಸಿದ್ಧರಾಮಯ್ಯ, ಆರ್. ಸುನಂದಮ್ಮ, ಸಬಿಹಾ ಭೂಮಿಗೌಡ, ಆರ್.ಕೆ. ಸರೋಜಾ ಮತ್ತು ಎನ್. ಗಾಯತ್ರಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಸಂಘದ ಅಧ್ಯಕ್ಷೆ ಆರ್. ಸುನಂದಮ್ಮ, ‘ಕೆಲ ಲೇಖಕಿಯರು ಆರ್ಥಿಕ ನೆರವು ನೀಡಿದ ಪರಿಣಾಮ ವೆಬ್‌ಸೈಟ್ ವಿನ್ಯಾಸ ಮಾಡಲಾಗಿದೆ. ಇದರಿಂದಾಗಿ ಲೇಖಕಿಯರು ತಾವಿರುವ ಸ್ಥಳದಲ್ಲೇ ಕ್ಷಣ ಮಾತ್ರದಲ್ಲಿ ಸಂಘದ ಮಾಹಿತಿಯನ್ನು ಪಡೆಯಬಹುದಾಗಿದೆ’ ಎಂದು ಹೇಳಿದರು.

ಬೈ–ಲಾ ತಿದ್ದುಪಡಿ: ‘ಸಂಘಕ್ಕೆ ಶಕ್ತಿ ತುಂಬಲು ಬೈ–ಲಾ ತಿದ್ದುಪಡಿ ಅನಿವಾರ್ಯವಾಗಿದೆ. ಈಗಾಗಲೇ ಕರಡು ಸಿದ್ಧವಾಗಿದ್ದು, ತಿದ್ದುಪಡಿಯಿಂದ ಜಿಲ್ಲಾ ಘಟಕಗಳಿಗೆ ಸ್ವಾಯತ್ತತೆ ದೊರೆಯಲಿದೆ. ಸರ್ವ ಸದಸ್ಯರ ಸಭೆಯಲ್ಲಿ ಉದ್ದೇಶಿತ ತಿದ್ದುಪಡಿಗೆ ಅನುಮೋದನೆ ಸಿಗುವ ನಿರೀಕ್ಷೆಯಿದೆ. ಇದರಿಂದ ಜಿಲ್ಲಾ ಘಟಕಗಳು ಆರ್ಥಿಕವಾಗಿ ಸದೃಢವಾಗಲು ಸಾಧ್ಯ’ ಎಂದು ಅವರು ಅಭಿಪ್ರಾಯಪಟ್ಟರು.

‘ಸಂಘದ ಕಟ್ಟಡಕ್ಕಾಗಿ ನಿವೇಶನ ಅಗತ್ಯವಿದ್ದು, ಸರ್ಕಾರಕ್ಕೆ ಈ ಬಗ್ಗೆ ಬೇಡಿಕೆ ಸಲ್ಲಿಸಲಾಗಿದೆ. ಅಕ್ಟೋಬರ್‌ನಲ್ಲಿ ರಾಜ್ಯಮಟ್ಟದ ಲೇಖಕಿಯರ ಸಮ್ಮೇಳನ ನಡೆಸಲು ನಿರ್ಧರಿಸಿದ್ದೇವೆ’ ಎಂದರು.

ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಅವರು ಲೇಖಕಿಯರಿಗೆ ವಿವಿಧ ವಾರ್ಷಿಕ ದತ್ತಿ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಲೇಖಕಿಯರಾದ ಸಬಿಹಾ ಭೂಮಿಗೌಡ, ಎನ್. ಗಾಯತ್ರಿ, ಪತ್ರಕರ್ತ ಜಿ.ಎನ್. ಮೋಹನ್ ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ
ನಂ. 32, 3ನೇ ಮಹಡಿ, ಡಿ. ದೇವರಾಜ ಅರಸು ರಸ್ತೆ (ರೇಸ್‌ಕೋರ್ಸ್ ರಸ್ತೆ), ಬೆಂಗಳೂರು–560 001. ದೂ: 080–22268018–19
ಸಂಖ್ಯೆ: ತವಿ/312–ಎ/2025–26 ದಿನಾಂಕ: 09.04.2026
ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಕೆ.ಐ.ಸಿ.ಎಂ.ಗಳ ಮೂಲಕ ನಡೆಸುತ್ತಿರುವ ಸಹಕಾರ ಡಿಪ್ಲೊಮಾ ತರಬೇತಿಗೆ ಅವಶ್ಯಕವಾದ ಅಧ್ಯಯನ ಸಾಹಿತ್ಯ ಪುಸ್ತಕಗಳನ್ನು (ಕನ್ನಡ) ಮುದ್ರಿಸಲು ಅರ್ಹ ಮುದ್ರಣ ಸಂಸ್ಥೆಗಳಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ. ಮೊತ್ತ ರೂ. 75,000/–ಗಳಾಗಿರುತ್ತದೆ. ಟೆಂಡರ್‌ನ ವಿವರಗಳನ್ನು ಏಕೀಕೃತ ಇ–ಸಂಗ್ರಹಣಾ ವೇದಿಕೆ https://kppp.karanataka.gov.in ನಲ್ಲಿ ದೊರೆಯುವುದು. ಟೆಂಡರನ್ನು ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸಬಹುದಾಗಿದೆ.
1. ಆನ್‌ಲೈನ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 24.04.2026ರಂದು 17:00 ಗಂಟೆ.
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27.04.2026ರಂದು 11:00 ಗಂಟೆ.
3. ಫೈನಾನ್ಷಿಯಲ್ ಬಿಡ್ ತೆರೆಯುವ ದಿನಾಂಕ: 29.04.2026ರಂದು 11:00 ಗಂಟೆ.
ಹೆಚ್ಚಿನ ಮಾಹಿತಿ ಹಾಗೂ ಮುದ್ರಿಸುವ ಅಧ್ಯಯನ ಸಾಹಿತ್ಯದ ಮಾದರಿ ಪುಸ್ತಕಗಳನ್ನು ಮೇಲ್ಕಂಡ ವಿಳಾಸದ ಕಛೇರಿಯಲ್ಲಿ ಪರಿಶೀಲಿಸಲು ಸಂಪರ್ಕಿಸಬಹುದಾಗಿದೆ.
ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ
ಅರಣ್ಯ ಸಂಚಾರಿ ದಳ ಬೆಂಗಳೂರು ರವರ ಕಛೇರಿ,
ಜಾರಕ್‌ಬಂಡೆ ಅರಣ್ಯ ವಸತಿ ಸಂಕೀರ್ಣ, ಕಮ್ಮಗೊಂಡನಹಳ್ಳಿ, ಬೆಂಗಳೂರು–560 015.
ಫೋನ್: 080-28387672 | ಇ–ಮೇಲ್: dcffms@gmail.com
ಸಂ.: KFD/2026-27/IND0361 ದಿನಾಂಕ: 06.04.2026
ಟೆಂಡರ್ ಅಧಿಸೂಚನೆ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಬೆಂಗಳೂರು ರವರು "Design, supply, commissioning and maintenance of digital VHF Radio communication Network at Kodagu Circle" ನಿಸ್ತಂತು ಉಪಕರಣಗಳ ನಿರ್ವಹಣೆಗಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮುಖಾಂತರ ಟೆಂಡರ್ ಆಹ್ವಾನಿಸಿರುತ್ತಾರೆ.
ಈ ಟೆಂಡರ್‌ನಲ್ಲಿ ಭಾಗವಹಿಸಲು ಸಿದ್ಧರಿರುವ ನಿರೀಕ್ಷಿತ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in) ಅವಶ್ಯಕ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.
ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ ಬೆಂಗಳೂರು ಮತ್ತು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ
ವಾಸಾಸಂಇ/ವಾ.ಪ್ರ/ಜಿಎ/128/2026–27

ಶಾಲಾ ಶಿಕ್ಷಣ ಇಲಾಖೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003
E-mail:mdktbs.tender@gmail.com Website:https://textbooks.karnataka.gov.in
ಸಂಖ್ಯೆ: A8/KTBS/ADM/CAUT/1/2026 E-90795 ದಿನಾಂಕ:09.04.2026
ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
2026–27ನೇ ಸಾಲಿನಿಂದ 2028–29ನೇ ಸಾಲಿನವರೆಗೆ ಕರ್ನಾಟಕ ಪಠ್ಯಪುಸ್ತಕ ಸಂಘದ ಕಛೇರಿಯ ಆಂತರಿಕ ಲೆಕ್ಕಪರಿಶೋಧನೆಗಾಗಿ ಮಹಾಲೇಖಪಾಲರು, ಕರ್ನಾಟಕ ರಾಜ್ಯ ರವರಿಂದ ಅನುಮೋದಿತ ಹಾಗೂ ಬೆಂಗಳೂರಿನಲ್ಲಿ ಮುಖ್ಯ ಕಛೇರಿ ಹೊಂದಿರುವ ಲೆಕ್ಕಪರಿಶೋಧಕರನ್ನು (ಚಾರ್ಟೆಡ್ ಅಕೌಂಟೆಂಟ್) ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)ದ ಕೇಂದ್ರ ಕಛೇರಿ ಜಿಲ್ಲಾ ಮತ್ತು ತಾಲ್ಲೂಕು ಪಠ್ಯಪುಸ್ತಕ ಮಳಿಗೆಗಳು ಹಾಗೂ ವಿಭಾಗೀಯ ಪಠ್ಯಪುಸ್ತಕ ಮಳಿಗೆ, ಬೆಂಗಳೂರು ಕಛೇರಿಗಳ ಆಂತರಿಕ ಲೆಕ್ಕಪರಿಶೋಧನೆಗೆ ಅರ್ಹ ಸಂಸ್ಥೆಗಳಿಂದ ಇ–ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಆಸಕ್ತ ಅರ್ಹ ಸಂಸ್ಥೆಗಳು ತಮ್ಮ ಬಿಡ್‌ಗಳನ್ನು ದಿನಾಂಕ: 24.04.2026ರಂದು ಸಂಜೆ 5:30 ರವರೆಗೂ ಇ–ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿರುತ್ತದೆ.
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ: https://kppp.karnataka.gov.in ಸಹಾಯವಾಣಿ: 080–46010000/ 68948777
ಇಲಾಖೆ ವೆಬ್‌ಸೈಟ್:https://textbooks.karnataka.gov.in
ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ನಂ.2 ಹಾರಂಗಿ ಬಲದಂಡೆ ನಾಲಾ ವಿಭಾಗ, ಹುಣಸೂರು,
ಮೈಸೂರು ಜಿಲ್ಲೆ– 571 105.
Ph: 08222-252211 Fax: 252211 Email: eeharangi@yahoo.co.in
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಸಂಖ್ಯೆ: 01/2026–27, ದಿ: 07.04.2026
ಕೆ.ಪಿ.ಪಿ ಪೋರ್ಟ್‌ಲ್ ಮೂಲಕ
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ KTPP ಅಧಿನಿಯಮ–1999 ನಿಯಮಗಳು 2000ರ ನಿಯಮಗಳಂತೆ ಸ್ಟಾಂಡರ್ಡ ಡಾಕ್ಯುಮೆಂಟ್ KW-1 ರನ್ವಯ 60 ಕಾಮಗಾರಿಗಳನ್ನು, KC-4 ರನ್ವಯ 9 ಕಾಮಗಾರಿಯನ್ನು ಅರ್ಹ ವರ್ಗದ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಅಹ್ವಾನಿಸಲಾಗಿದೆ ಕೆ.ಪಿ.ಪಿ.ಪಿ ನಲ್ಲಿ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕಡೆಯ ದಿ: 21.04.2026ರ ಅಪರಾಹ್ನ 4.00ಗಂಟೆಯವರೆಗೆ ಮತ್ತು ಬಿಡ್ಡು ತೆರೆಯುವ ದಿ: 22.04.2026ರ ಅಪರಾಹ್ನ ಸಾ:4.30 ಗಂಟೆ ನಂತರ ನಿಗಧಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/kppp ನಿಂದ ದಿ: 08.04.2026ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಸರ್ಕಾರದ ಪತ್ರ ಸಂಖ್ಯೆ. ಜಸಂಇ 94, ಎಂಬಿಐ 2017 ದಿ: 29.07.2017ರ ಅಧಿಸೂಚನೆಯನ್ವಯ ಅನುಸೂಚಿತ ಜಾತಿ, ಅನುಸೂಚಿತ ಪಂಗಡ, CAT-II(A), CAT-I ವರ್ಗಕ್ಕೆ ಕೆ.ಪಿ.ಪಿ.ಪಿನಲ್ಲಿ ರ‍್ಯಾಂಡಮೈಜೇಷನ್ ಮೂಲಕ ಮೀಸಲಾತಿ ನಿಯಮ ಪಾಲಿಸಲಾಗಿದೆ. ಮೀಸಲು ಕಾಮಗಾರಿಗಳಿಗೆ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ವಿತರಿಸಿರುವ ಖಅ ಸಂಖ್ಯೆಯ ಜಾತಿ ಪ್ರಮಾಣ ಪತ್ರವನ್ನು ಮತ್ತು ವಾಸಸ್ಥಳ ದೃಢೀಕರಣ ಪತ್ರವನ್ನು ಕೆ.ಪಿ.ಪಿ.ಪಿನಲ್ಲಿ ಅಪ್ಲೋಡ್ ಮಾಡತಕ್ಕದ್ದು ಖಅ ಸಂಖ್ಯೆ ಇಲ್ಲದ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯ ಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್,
ನಂ.2 ಹಾರಂಗಿ ಬಲದಂಡೆ ನಾಲಾ ವಿಭಾಗ, ಹುಣಸೂರು
DIPR/DDMYS/32/KSMCA/31/2026-27

14 ಲಕ್ಷ ಬಿಪಿಎಲ್ ಕಾರ್ಡ್ ಎಪಿಎಲ್‌ಗೆ

ಆಟೊ ಗ್ಯಾಸ್ ಕೊರತೆಗೆ ಕೇಂದ್ರವೇ ಹೊಣೆ: ಆಹಾರ ಸಚಿವ ಕೆ.ಎಚ್.ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಹತೆ ಇಲ್ಲದೇ ಇದ್ದರೂ ಬಿಪಿಎಲ್ ಪಟ್ಟಿಯಲ್ಲಿರುವ 14 ಲಕ್ಷ ಕಾರ್ಡ್‌ದಾರರನ್ನು ಹಂತ ಹಂತವಾಗಿ ಎಪಿಎಲ್‌ಗೆ ವರ್ಗಾಯಿಸಲಾಗುವುದು ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಿಯಮ ಮೀರಿ ಸುಮಾರು 7 ಲಕ್ಷ ಎಪಿಎಲ್ ಕಾರ್ಡ್‌ದಾರರು ಬಿಪಿಎಲ್ ಕಾರ್ಡ್ ಮಾಡಿಸಿಕೊಂಡಿದ್ದಾರೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ. ಅರ್ಹ ಬಿಪಿಎಲ್ ಕಾರ್ಡ್‌ದಾರರನ್ನು ಯಾವುದೇ ಕಾರಣಕ್ಕೂ ಬಿಪಿಎಲ್‌ನಿಂದ ಕೈಬಿಡುವುದಿಲ್ಲ. ಒಂದು ವೇಳೆ ಬಿಪಿಎಲ್‌ನಿಂದ ತೆಗೆದು ಹಾಕಿದ್ದರೆ, ತಹಶೀಲ್ದಾರ್ ಅವರಿಗೆ ಅರ್ಜಿ ಸಲ್ಲಿಸಬೇಕು. ಅವರಿಗೆ ಮತ್ತೆ ಬಿಪಿಎಲ್ ಕಾರ್ಡ್ ಕೊಡುತ್ತೇವೆ' ಎಂದರು.

ಆಟೊ ಗ್ಯಾಸ್–ಕೇಂದ್ರಕ್ಕೆ ಮನವಿ: 'ಆಟೊ ಗ್ಯಾಸ್ ಅನ್ನು ಆದ್ಯತೆ ಮೇರೆಗೆ ನೀಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಆಟೊ ಓಡಿಸಿಕೊಂಡು ಜೀವನ ನಡೆಸುವವರು ಸಂಕಷ್ಟದಲ್ಲಿದ್ದಾರೆ. ಅವರಿಗೆ ಅನಿವಾರ್ಯವಾಗಿ ಆದ್ಯತೆ ಮೇಲೆ ಗ್ಯಾಸ್ ನೀಡಬೇಕು ಎಂಬುದನ್ನು ಕೇಂದ್ರಕ್ಕೆ ತಿಳಿಸಿದ್ದೇವೆ. ಕೇಂದ್ರದ ಉತ್ತರಕ್ಕಾಗಿ ಕಾಯುತ್ತಿದ್ದೇವೆ' ಎಂದು ಮುನಿಯಪ್ಪ ತಿಳಿಸಿದರು.

'ಗ್ಯಾಸ್ ಸಿಗದ ಕಾರಣಕ್ಕೆ ಆಟೊ ಚಾಲಕರು ರಾಜ್ಯ ಸರ್ಕಾರದ ಮೇಲೆ ಆಕ್ರೋಶಗೊಂಡಿದ್ದಾರೆ. ಇದರಲ್ಲಿ ರಾಜ್ಯ ಸರ್ಕಾರದ ಪಾತ್ರ ಏನೂ ಇಲ್ಲ. ಪೆಟ್ರೋಲ್, ಡೀಸೆಲ್, ಗ್ಯಾಸ್ ಎಲ್ಲವೂ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಎಲ್ಲದ್ದಕ್ಕೂ ಅವರೇ ಹೊಣೆ' ಎಂದು ಹೇಳಿದರು.

'ಗ್ಯಾಸ್ ಸಿಲಿಂಡರ್‌ಗಳು ಕಾಳಸಂತೆಗೆ ಹೋಗದಂತೆ ತಡೆಯುವುದು, ಏಜೆನ್ಸಿಗಳು ಸರಿಯಾಗಿ ವಿತರಣೆ ಮಾಡುತ್ತಿವೆಯೋ ಇಲ್ಲವೋ ಎಂಬುದನ್ನು ಗಮನಿಸುವುದು ನಮ್ಮ ಕೆಲಸ. ಈ ವಿಚಾರ ಗೃಹ ಸಚಿವರ ಜತೆ ಮಾತನಾಡಿ ಕಟ್ಟು ನಿಟ್ಟಿನ ಕ್ರಮ ತೆಗೆದುಕೊಳ್ಳಲು ಮನವಿ ಮಾಡಿದ್ದೇನೆ' ಎಂದರು.

'ಅಕ್ಕಪಕ್ಕದ ರಾಜ್ಯಗಳಲ್ಲಿ ಗ್ಯಾಸ್ ಕೊರತೆ ಇಲ್ಲ. ನಮ್ಮಲ್ಲಿ ಗ್ಯಾಸ್ ಕೊರತೆಯಿಂದ ಸಾವಿರಾರು ಉದ್ಯಮಗಳು ಬೀದಿಗೆ ಬಂದಿವೆ. ನಮ್ಮ ರಾಜ್ಯಕ್ಕೆ ತಾರತಮ್ಯ ಆಗಿದೆ. ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾದ ನಿರ್ಮಲಾ ಸೀತಾರಾಮನ್ ಅವರೇ ಹೀಗೆ ಮಾಡಿದ್ದಾರೆ. ಬೆಂಗಳೂರಿನಲ್ಲಿ ಹೊರ ರಾಜ್ಯದವರು ಹೆಚ್ಚಿದ್ದಾರೆ. ಅವರು ಊಟ, ವಸತಿಗಾಗಿ ಹೋಟೆಲ್‌ಗಳನ್ನೇ ಅವಲಂಬಿಸಿದ್ದಾರೆ. ಹೋಟೆಲ್‌ನವರಿಗೆ ಗ್ಯಾಸ್ ಕೊಡದಿದ್ದರೆ ಅವರು ಎಲ್ಲಿಗೆ ಹೋಗಬೇಕು' ಎಂದು ಪ್ರಶ್ನಿಸಿದರು.

ಕರ್ಫ್ಯೂ ನಡುವೆಯೇ ಪ್ರತಿಭಟನೆ

ಇಂಫಾಲ್ (ಪಿಟಿಐ): ಬಿಷ್ಣುಪುರ ಜಿಲ್ಲೆಯಲ್ಲಿ ಇಬ್ಬರು ಮಕ್ಕಳ ಸಾವಿಗೆ ಕಾರಣವಾದ ಬಾಂಬ್ ದಾಳಿಯನ್ನು ಖಂಡಿಸಿ ಮಣಿಪುರದ ಐದು ಕಣಿವೆ ಜಿಲ್ಲೆಗಳಲ್ಲಿ ಸಾವಿರಾರು ಪ್ರತಿಭಟನಕಾರರು ಕರ್ಫ್ಯೂ ಧಿಕ್ಕರಿಸಿ ಪ್ರತಿಭಟನಾ ರ್‍ಯಾಲಿಗಳನ್ನು ನಡೆಸಿದರು ಮತ್ತು ಟೈರ್‌ಗಳನ್ನು ಸುಟ್ಟರು.

ಇಂಫಾಲ್ ಪಶ್ಚಿಮ ಜಿಲ್ಲೆಯ ಟಿಡ್ಡಿಮ್ ಲೈನ್‌ನಲ್ಲಿ, ಆಲ್ ಮಣಿಪುರ ಯುನೈಟೆಡ್ ಕ್ಲಬ್ಸ್ ಆರ್ಗನೈಸೇಶನ್ ನೇತೃತ್ವದಲ್ಲಿ ನೂರಾರು ಜನರು ಕ್ವಾಕಿಥೆಲ್ ಬಳಿಯ ಅದರ ಕಚೇರಿಯಿಂದ ರ್‍ಯಾಲಿ ನಡೆಸಿ, ಹತ್ಯೆಗಳನ್ನು ಖಂಡಿಸಿದರು ಮತ್ತು ದುಷ್ಕರ್ಮಿಗಳನ್ನು ತಕ್ಷಣ ಬಂಧಿಸಬೇಕೆಂದು ಒತ್ತಾಯಿಸಿದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಅಂತರ ನಿಗಮ ವರ್ಗ: ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯುಆರ್‌ಟಿಸಿಗಳ ನಡುವಿನ 2026ನೇ ಸಾಲಿನ ಅಂತರ ನಿಗಮ ವರ್ಗಾವಣೆಯ ಅಭ್ಯರ್ಥಿಗಳ ಪಟ್ಟಿಯನ್ನು ksrtc.karnataka.gov.in ವೆಬ್‌ಸೈಟ್‌ನಲ್ಲಿ ಗುರುವಾರ ಪ್ರಕಟಿಸಲಾಗಿದೆ.

ಮೇಲ್ವಿಚಾರಕರು (ದರ್ಜೆ–3), ನೌಕರರು (ದರ್ಜೆ–4) ಸಾಮಾನ್ಯ ವರ್ಗಾವಣೆ, ಪತಿ–ಪತ್ನಿ, ಶೇ 40 ಕ್ಕಿಂತ ಹೆಚ್ಚಿನ ಅಂಗವೈಕಲ್ಯ ಹೊಂದಿರುವವರು, ತೀವ್ರ ತರಹದ ಅನಾರೋಗ್ಯ ಹೊಂದಿರುವ ನೌಕರರು ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಪರಸ್ಪರ ವರ್ಗಾವಣೆಗೂ ಅವಕಾಶ ಕಲ್ಪಿಸಲಾಗಿತ್ತು.

ಆಕ್ಷೇಪಣೆಗಳಿದ್ದಲ್ಲಿ ಏಪ್ರಿಲ್ 16ರ ಸಂಜೆ 5.30ರ ಒಳಗೆ ಲಿಖಿತವಾಗಿ ಸಲ್ಲಿಸಲು ಅವಕಾಶವನ್ನು ನೀಡಲಾಗಿದೆ. ನೌಕರರು ಆಕ್ಷೇಪಣೆಗಳನ್ನು ಸಂಬಂಧಪಟ್ಟ ವಿಭಾಗದ ಆಡಳಿತಾಧಿಕಾರಿಗಳಿಗೆ ಸಲ್ಲಿಸಿ ಸ್ವೀಕೃತಿ ಪಡೆಯಬೇಕು. ವೈಯಕ್ತಿಕವಾಗಿ ಅಥವಾ ಅಂಚೆಯ ಮೂಲಕ ಕೇಂದ್ರ ಕಚೇರಿಗೆ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ತಿಳಿಸಿದ್ದಾರೆ.

ಕೆಇಎ ಪರೀಕ್ಷಾ ವೇಳಾಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ನಿಗಮ–ಮಂಡಳಿ, ವಿಶ್ವವಿದ್ಯಾಲಯ ಮತ್ತು ಇಲಾಖೆಗಳ ಹಲವು ಹುದ್ದೆಗಳ ನೇಮಕಕ್ಕೆ ಲಿಖಿತ ಪರೀಕ್ಷೆಗಳ ವೇಳಾಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಜಲಮಂಡಳಿ, ಕೃಷಿ ಮಾರುಕಟ್ಟೆ ಇಲಾಖೆ ಅಲ್ಲದೆ ವಿವಿಧ ನಿಗಮ–ಮಂಡಳಿಗಳ ಹುದ್ದೆಗಳಿಗೆ ಪರೀಕ್ಷೆ ನಡೆಯುತ್ತಿದೆ. ಮೂಲ ವೃಂದದ ಹುದ್ದೆಗಳಿಗೆ ಏಪ್ರಿಲ್ 26 ಮತ್ತು ಮೇ 10ರಂದು ಪರೀಕ್ಷೆ ನಡೆಯಲಿದೆ.

ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳಿಗೆ ಏಪ್ರಿಲ್ 27ಮತ್ತು ಮೇ 9ರಂದು ಪರೀಕ್ಷೆ ನಡೆಯಲಿದೆ. ಹೆಚ್ಚಿನ ವಿವರಗಳಿಗೆ ಪ್ರಾಧಿಕಾರದ ಜಾಲತಾಣವನ್ನು ನೋಡಬಹುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಕಾನ್‌ಸ್ಟೆಬಲ್ ಪಿಎಸ್‌ಐ, ಶೀಘ್ರ ನೇಮಕ

ದೇವನಹಳ್ಳಿ: ರಾಜ್ಯದಲ್ಲಿ ಶೀಘ್ರ ಸಾವಿರ ಸಬ್ ಇನ್‌ಸ್ಪೆಕ್ಟರ್ ಮತ್ತು 8 ಸಾವಿರ ಕಾನ್‌ಸ್ಟೆಬಲ್‌ಗಳ ನೇಮಕ ನಡೆಯಲಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ತಿಳಿಸಿದ್ದಾರೆ.

ಪಟ್ಟಣದಲ್ಲಿ ಗುರುವಾರ ಮಾತನಾಡಿದ ಅವರು, ನೇಮಕಾತಿಗೆ ಮುಖ್ಯಮಂತ್ರಿ ಹಾಗೂ ಹಣಕಾಸು ಇಲಾಖೆ ಅನುಮೋದನೆ ದೊರೆತಿದ್ದು, ಶೀಘ್ರ ನೇಮಕಾತಿ ಪ್ರಕ್ರಿಯೆ ಆರಂಭವಾಗಲಿದೆ ಎಂದರು.

ಪಿಎಸ್‌ಐ ಹಗರಣ ಬಗೆಹರಿಸಿದ ಬಳಿಕ 545 ಮಂದಿ ಈಗಾಗಲೇ ತರಬೇತಿ ಪಡೆದು ಸೇವೆಗೆ ಸೇರ್ಪಡೆಯಾಗಿದ್ದಾರೆ ಎಂದು ತಿಳಿಸಿದರು.

ನಿಧನ ವಾರ್ತೆ

ಕೋಣಿ ವೆಂಕಟೇಶ ನಾಯಕ್



ಕುಂದಾಪುರ: ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಕಾರ್ಮಿಕ ಸಂಘಟನೆಗಳ ಮುಖಂಡ ಕೋಣಿ ವೆಂಕಟೇಶ ನಾಯಕ್ (74) ಗುರುವಾರ ನಿಧನರಾದರು.

ತಾಲ್ಲೂಕಿನ ಕೋಣಿ ಗ್ರಾಮದವರಾದ ವೆಂಕಟೇಶ ನಾಯಕ್, ಎರಡು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೃತರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ದೇಹದಾನದ ಘೋಷಣೆ ಮಾಡಿದ್ದರಿಂದ ಅವರ ಮೃತದೇಹವನ್ನು ಕೆಎಂಸಿ ಆಸ್ಪತ್ರೆಗೆ ನೀಡಲಾಗುತ್ತಿದೆ.

ವೆಂಕಟೇಶ ನಾಯಕ್ ಕಮ್ಯುನಿಸ್ಟ್ ಚಳವಳಿಗಾಗಿ ತಮ್ಮ ಜೀವನವನ್ನು ಮುಡುಪಾಗಿರಿಸಿದ್ದರು. ಉಡುಪಿ ಜಿಲ್ಲಾ ಸಿಪಿಐ (ಎಂ) ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿಯೂ ಕೆಲಸ ನಿರ್ವಹಿಸಿದ್ದರು. ವಿದ್ಯಾರ್ಥಿ ದಿಶೆಯಲ್ಲಿ ಸಾಮಾಜಿಕ ಹೋರಾಟಗಳಲ್ಲಿ ತೊಡಗಿಕೊಂಡಿದ್ದರು. ಭೂ ಮಾಲೀಕರ ದೌರ್ಜನ್ಯಗಳ ವಿರುದ್ಧ ನಡೆದ ಹೋರಾಟದ ಸಂದರ್ಭದಲ್ಲಿ ಅವರ ಮೇಲೆ ಆ್ಯಸಿಡ್ ದಾಳಿ ನಡೆದಿತ್ತು.

ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಲಿ.
ಪ್ರಧಾನ ಕಛೇರಿ : ಸರ್ದಾರ ಪಟೇಲ್ ಮುಖ್ಯ ರಸ್ತೆ, ಪಟೇಲ್ ನಗರ, ಹೊಸಪೇಟೆ - 583201 ವಿಜಯನಗರ ಜಿಲ್ಲೆ

ನೇಮಕಾತಿಗೆ ಅರ್ಜಿ

ಮೇಲ್ಕಂಡ ಬ್ಯಾಂಕಿನಲ್ಲಿ ಕೆಳಗಿನ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದು, ಆಸಕ್ತರು ದಿನಾಂಕ 24.04.2026 ರೊಳಗೆ ನಿಗದಿತ ನಮೂನೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

ಹುದ್ದೆಗಳ ವಿವರ

1	ವ್ಯವಸ್ಥಾಪಕರು/ಹಿರಿಯ ಅಧಿಕಾರಿ (Manager/Sr. Officer)	10 ಹುದ್ದೆ
2	ಲೆಕ್ಕ ಪರಿಶೋಧಕರು (Auditor)	4 ಹುದ್ದೆ
3	ಕಾನೂನು ಅಧಿಕಾರಿ (Law officer)	2 ಹುದ್ದೆ
4	ಪರಿಕ್ಷಾರ್ಥ ಅಧಿಕಾರಿ (Prob. Officer)	20 ಹುದ್ದೆ
5	ವಸೂಲಾತಿ ಸಹಾಯಕ / ಕಿರಿಯ ಸಹಾಯಕ (Recovery Assistant / Junior Assistant)	10 ಹುದ್ದೆ

ಹುದ್ದೆಗಳಿಗೆ ಅಗತ್ಯವಿರುವ ವಿದ್ಯಾರ್ಹತೆ, ವಯೋಮಿತಿ, ಅನುಭವ, ಪರಿಣಿತಿ ಮತ್ತು ಶುಲ್ಕ ಇತ್ಯಾದಿ ವಿವರಗಳನ್ನು ಬ್ಯಾಂಕಿನ **ವೆಬ್‌ಸೈಟ್** vikas.bank.in ನಲ್ಲಿ ಪ್ರಕಟಿಸಲಾಗಿದೆ. ಪರೀಕ್ಷಾರ್ಥ ಅಭ್ಯರ್ಥಿಗಳಿಗೆ ಮಾತ್ರ ಲಿಖಿತ ಪರೀಕ್ಷೆ ದಿನಾಂಕ 26.04.2026 ರವಿವಾರ ಹೊಸಪೇಟೆಯಲ್ಲಿ, ಲಿಖಿತ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನ ದಿನಾಂಕ 27.04.2026 ಸೋಮವಾರ ಬ್ಯಾಂಕಿನ ಪ್ರಧಾನ ಕಛೇರಿ, ಹೊಸಪೇಟೆಯಲ್ಲಿ. ಉಳಿದ ಹುದ್ದೆಗಳ ಅರ್ಹ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನದ ದಿನಾಂಕವನ್ನು ತಿಳಿಸಲಾಗುವುದು.

ಸ್ಥಳ: ಹೊಸಪೇಟೆ ಸಹಿ/–
ದಿನಾಂಕ: 09–04–2026 ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರ್ಕಾರ
(ಕೃಷಿ ಮಾರಾಟ ಇಲಾಖೆ)
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ಬೀದರ
ಜಿಲ್ಲೆ: ಬೀದರ ರಾಜ್ಯ: ಕರ್ನಾಟಕ
ದೂರವಾಣಿ : 08482–226424 ಇ–mail : apmcbidar@gmail.com

ಸಂಖ್ಯೆ:ಕೃಉಮಾಸ: ಬೀ/ಅಭಿಕೆ/ಭಸಿ/03 /2026–27. ದಿನಾಂಕ: 01–04–2026

:: ಸಂಕ್ಷಿಪ್ತ ಇ–ಪ್ರಕ್ಯೂರಮೆಂಟ್ ಟೆಂಡರ್ ಪ್ರಕಟಣೆ ಕರೆ ::

2026–27ನೇ ಸಾಲಿಗಾಗಿ (ಕಾರ್ಯಾದೇಶ ನೀಡಿದ ದಿನಾಂಕದಿಂದ ದಿ: 31–05–2027 ರ ವರೆಗೆ) ಈ ಸಮಿತಿಯ ಭದ್ರತಾ ವ್ಯವಸ್ಥೆ ಹಾಗೂ ಮಾರುಕಟ್ಟೆ ಪ್ರಾಂಗಣದ ಸ್ವಚ್ಛತಾ ಕಾರ್ಯಕ್ಕಾಗಿ ಅರ್ಹ ಹಾಗೂ ಅನುಭವ ಹೊಂದಿದ ಮತ್ತು ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಸಂಸ್ಥೆ/ಏಜೆನ್ಸಿಯವರಿಂದ ನಿಯಾಮನುಸಾರ ಕನಿಷ್ಠ ವೇತನ ಕಾಯ್ದೆಯನ್ವಯ ಈ ಕೆಳಗಿನ ಸೇವೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರನ್ನು ಅಹ್ವಾನಿಸಲಾಗಿದೆ. ಅರ್ಹ ಸಂಸ್ಥೆ/ಏಜೆನ್ಸಿಯವರು ವೆಬ್‌ಸೈಟ್ https://eproc.karnataka.gov.in ನಲ್ಲಿ ಪ್ರಕಟಿಸಿದಂತೆ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ಗಾಗಿ ಭಾಗವಹಿಸಬಹುದು. ವಿವರಗಳು ಈ ಕೆಳಕಂಡಂತೆ ಇರುತ್ತದೆ.
01. ಖಾಲಿ ಟೆಂಡರ್ ಫಾರಂ ನೀಡುವ ಕೊನೆಯ **ದಿನಾಂಕ 24–04–2026 04.00** ಗಂಟೆಯ ವರೆಗೆ,
02. ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ 27–04–2026 04.00** ಗಂಟೆಗೆ ,
03. ಟೆಂಡರ್ ತೆರೆಯುವ **ದಿನಾಂಕ 29–04–2026 04.00 ಗಂಟೆಗೆ,**
1) ಕೆಲಸದ ಹೆಸರು:–ಭದ್ರತಾ ಸಿಬ್ಬಂದಿ ಪೂರೈಸುವುದು, 2) ಪೂರೈಸ ಬೇಕಾದ ಸಿಬ್ಬಂದಿ ಸಂಖ್ಯೆ:– **34,** 3) ಭದ್ರತಾ ಠೇವಣಿ:–**2,50,000–00,**4) ಟೆಂಡರ್ ಪ್ರೋಸೆಸಿಂಗ್ ಶುಲ್ಕ:– As per eportal, 5) ವಿವರ:– 1) ಭದ್ರತಾ ಸಿಬ್ಬಂದಿ ಮೇಲ್ವಿಚಾರಕರು: **01,**2) ವಾಹನ ಚಾಲಕ: **05,** 3) ಕಂಪ್ಯೂಟರ್ ಆಪರೇಟರ್: **03,** 4) ಡಾಟಾ ಎಂಟ್ರಿ ಆಪರೇಟರ್: **04,** 5) ಭದ್ರತಾ ಸಿಬ್ಬಂದಿಗಳು: **13,** 6) ಸ್ವಚ್ಛತಾ ಸಿಬ್ಬಂದಿ ಮೇಲ್ವಿಚಾರಕ: **01,** 7) ಸ್ವಚ್ಛತಾ ಸಿಬ್ಬಂದಿ: **07, ಒಟ್ಟು 34,** 1) ಮೇಲ್ಕಂಡ ಸೇವೆಗಳನ್ನು ಕಾರ್ಮಿಕ ಇಲಾಖೆಯಲ್ಲಿ ನೊಂದಣಿ ಜೊತೆಗೆ ಲೈಸೆನ್ಸ್‌ನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. 2) ಭದ್ರತಾ ಸೇವೆಯನ್ನು ಒದಗಿಸಲು ಸಂಸ್ಥೆಯು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ. HD 170 8ST 2009(P) ಬೆಂಗಳೂರು, ದಿನಾಂಕ: 23–07–2009 ರಲ್ಲಿ ಸೂಚಿಸಿದಂತೆ ಕರ್ನಾಟಕ ಪ್ರೈವೇಟ್ ಸೆಕ್ಯೂರಿಟಿ ಏಜೇನ್ಸಿಸ್ ನಿಯಮ 2008 ರಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಸಂಬಂಧಿಸಿದ ಇಲಾಖೆಯಿಂದ ಲೈಸೆನ್ಸ್ ಹೊಂದಿರಬೇಕಲ್ಲದೇ ಭದ್ರತಾ ಸಿಬ್ಬಂದಿ ಹಾಗೂ ಮೇಲ್ವಿಚಾರಕರಿಗೆ ಸಂಬಂಧಿಸಿದಂತೆ ನಿಯಮ 6 ಮತ್ತು 7 ರ ಅಡಿಯಲ್ಲಿ ನಿಗದಿಪಡಿಸಿರುವ ಅರ್ಹತೆಯನ್ನು ಹೊಂದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ ಮಾತ್ರ ಟೆಂಡರ್‌ನ್ನು ಪರಿಗಣಿಸಲಾಗುವುದು. 3) ಉಳಿದ ಷರತ್ತು–ವ–ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ https://eproc.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ಬೀದರ
ಸಹಿ/– ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ಬೀದರ
ವಾ.ಸಾ.ಸಂ.ಇ/ಬೀದರ/07/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಸರ್ಕಾರ
ಕರ್ನಾಟಕ ಜಲಸಾರಿಗೆ ಮಂಡಳಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಚೇರಿ, ಕರ್ನಾಟಕ ಜಲಸಾರಿಗೆ ಮಂಡಳಿ
ಖನಿಜ ಭವನ, ನಂ. 49, ಪಶ್ಚಿಮ ಪ್ರವೇಶ ದ್ವಾರ, 3ನೇ ಮಹಡಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001
ದೂರವಾಣಿ ಸಂಖ್ಯೆ: 080–29577444 ಇ–ಮೇಲ್: ceokmb2019@gmail.com

ಅಧಿಸೂಚನೆ

ವಿಷಯ: ಕರ್ನಾಟಕ ಜಲಸಾರಿಗೆ ಮಂಡಳಿ– ಒಪ್ಪಂದದ ಆಧಾರದ ಮೇಲೆ ನಿರ್ದೇಶಕರು, ಬಂದರು ಮತ್ತು ಸದಸ್ಯರು (ಜಲಸಾರಿಗೆ ಮತ್ತು ಒಳನಾಡು ಜಲಸಾರಿಗೆ ನಿರ್ವಹಣೆ) ಹುದ್ದೆಯ ನೇಮಕಾತಿ ಕುರಿತು.

ಕರ್ನಾಟಕ ಜಲಸಾರಿಗೆ ಮಂಡಳಿಯಲ್ಲಿ ನಿರ್ದೇಶಕರು, ಬಂದರು ಮತ್ತು ಸದಸ್ಯರು (ಜಲಸಾರಿಗೆ ಮತ್ತು ಒಳನಾಡು ಜಲಸಾರಿಗೆ ನಿರ್ವಹಣೆ) ಒಪ್ಪಂದದ ಆಧಾರದ ಮೇಲೆ ಒಂದು (1) ವರ್ಷದ ಆರಂಭಿಕ ಅವಧಿಗೆ ನೇಮಿಸಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ, ಗರಿಷ್ಠ ಎರಡು (2) ವರ್ಷಗಳ ಅವಧಿಗೆ ವಾರ್ಷಿಕ ಕಾರ್ಯಕ್ಷಮತೆಯ ಆಧಾರದ ಮೇಲೆ ವಿಸ್ತರಿಸಬಹುದಾಗಿದೆ.

ಕ್ರ ಸಂ	ಪದನಾಮ	ಹುದ್ದೆಯ ಸಂಖ್ಯೆ	ವೇತನ ಶ್ರೇಣಿ	ವಿದ್ಯಾರ್ಹತೆ
1	ನಿರ್ದೇಶಕರು, ಬಂದರು ಮತ್ತು ಸದಸ್ಯರು (ಜಲಸಾರಿಗೆ ಮತ್ತು ಒಳನಾಡು ಜಲಸಾರಿಗೆ ನಿರ್ವಹಣೆ)	01	ರೂ. 1,75,000 – 2,00,000 (ಪ್ರತಿ ತಿಂಗಳಿಗೆ ಕ್ರೂಢೀಕರಿಸಲಾಗಿದೆ)	1. ಮರ್ಚೆಂಟ್ ಶಿಪ್ಪಿಂಗ್ ಆಕ್ಟ್, 1958 ರ ಅಡಿಯಲ್ಲಿ ನೀಡಲಾದ, ಕಾಮನ್ ವೆಲ್ತ್‌ನಾದ್ಯಂತ ವಿದೇಶಿ ಸಾಗಣೆ ಹಡಗಿನಲ್ಲಿ ಮಾಸ್ಟರ್ ಆಗಿ ಮಾನ್ಯತೆ ಹೊಂದಿರುವ ಸಾಮರ್ಥ್ಯ ಪ್ರಮಾಣ ಪತ್ರವನ್ನು ಹೊಂದಿರಬೇಕು; 2. ಹಡಗಿನ ಮಾಸ್ಟರ್ ಆಗಿ ಸೇವೆ ಸಲ್ಲಿಸಿರಬೇಕು; 3. ಭಾರತದ ಯಾವುದೇ ಕಡಲ ರಾಜ್ಯಗಳು ಅಥವಾ ಭಾರತ ಸರ್ಕಾರದ ಅಡಿಯಲ್ಲಿ ಒಳನಾಡಿನ ಜಲಸಾರಿಗೆಯ ಬಂದರು ಅಧಿಕಾರಿಗೆ ಸಮಾನವಾದ ಗ್ರೂಪ್–ಎ ಹುದ್ದೆಯಲ್ಲಿ ಕನಿಷ್ಠ ಹತ್ತು ವರ್ಷಗಳ ಕಾಲ ಬಂದರು ಆಡಳಿತದಲ್ಲಿ ಅನುಭವ ಹೊಂದಿರಬೇಕು; 4. ಕನ್ನಡಕ ಇದ್ದರೂ ಅಥವಾ ಇಲ್ಲದಿದ್ದರೂ ಈ ಕೆಳಗಿನ ದೃಶ್ಯ ಮಾನದಂಡವನ್ನು ಹೊಂದಿರಬೇಕು: (ದೂರ ದೃಷ್ಟಿ – ಬಲ ಕಣ್ಣು V: 6/6, ಎಡ ಕಣ್ಣು V: 6/6; ಸಮೀಪ ದೃಷ್ಟಿ – ಬಲ ಕಣ್ಣು 0.6, ಎಡ ಕಣ್ಣು 0.6) ಪ್ರತಿಯೊಂದು ಕಣ್ಣಿನಲ್ಲಿ ಪೂರ್ಣ ದೃಷ್ಟಿಕ್ಷೇತ್ರವಿರಬೇಕು; ಯಾವುದೇ ಕಣ್ಣಿನಲ್ಲಿ ಓರೆಗಣ್ಣು (Squint) ಅಥವಾ ಕಣ್ಣಿನ ಅಥವಾ ರೆಪ್ಪೆಗಳ ಯಾವುದೇ ರೋಗ ಸ್ಥಿತಿ (ಟ್ರಕೋಮ ರೀತಿಯ) ಇದ್ದರೇ ಅನರ್ಹತೆ ಎಂದು ಪರಿಗಣಿಸಲಾಗುವುದು; ಮತ್ತು 5. ನಲವತ್ತೈದು ವರ್ಷ ವಯಸ್ಸನ್ನು ಮೀರಿರಬಾರದು.

	ಬಲ ಕಣ್ಣು	ಎಡ ಕಣ್ಣು
ದೂರ ದೃಷ್ಟಿ	V: 6/6	V: 6/6
ಸಮೀಪ ದೃಷ್ಟಿ	0.6	0.6

ಮೇಲಿನ ಹುದ್ದೆಗೆ ಅರ್ಹರಿರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ದಿನಾಂಕ 27.04.2026 ರಂದು ಅಥವಾ ಅದಕ್ಕೂ ಮೊದಲು kmb.recruitments@gmail.com ಗೆ ಕಳುಹಿಸಲು ತಿಳಿಸಲಾಗಿದೆ, ಅವರ ಬಯೋಡೇಟಾ ಮತ್ತು ಪ್ರಮಾಣಪತ್ರಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಗೆಜೆಟ್ ಅಧಿಕಾರಿಯಿಂದ ದೃಢೀಕರಿಸಲ್ಪಟ್ಟ ಪಾಸ್‌ಪೋರ್ಟ್ ಗಾತ್ರದ ಬಣ್ಣದ ಛಾಯಾಚಿತ್ರದೊಂದಿಗೆ ಲಗತ್ತಿಸಿ ಸಲ್ಲಿಸಬೇಕು. **(ANNEXURE IN DUPLICATE)**

ಅಭ್ಯರ್ಥಿಗಳು ತಮ್ಮ ಅರ್ಹತೆ, ಪದವಿ ಪ್ರಮಾಣ ಪತ್ರಗಳು, ಜನ್ಮ ದಿನಾಂಕ, ಅನುಭವ ಮತ್ತು ಪ್ರಶಸ್ತಿಗಳು ಇತ್ಯಾದಿಗಳಿಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲೆಗಳನ್ನು ಸಂದರ್ಶನದ ಸಮಯದಲ್ಲಿ ಸಂದರ್ಶನ ಸಮಿತಿಯ ಮುಂದೆ ಒದಗಿಸತಕ್ಕದ್ದು. ಕರ್ನಾಟಕ ಸರ್ಕಾರ (GoK) ಒದಗಿಸಿದ ಸಂಬಂಧಿತ ಅರ್ಹತೆ, ಅನುಭವ ಮತ್ತು ರೋಸ್ಟರ್ ಅಂಕಗಳ ಆಧಾರದ ಮೇಲೆ ಸಂದರ್ಶನ ಪ್ರಕ್ರಿಯೆಯು ಆಧರಿಸಿದೆ.

ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ TA ಮತ್ತು DA ಪಾವತಿಸಲಾಗುವುದಿಲ್ಲ. ಈ ನೇಮಕಾತಿಯು ಸಂಪೂರ್ಣವಾಗಿ ಒಂದು (1) ವರ್ಷದ ಆರಂಭಿಕ ಅವಧಿಗೆ ಒಪ್ಪಂದದ ಆಧಾರದ ಮೇಲೆ ನಡೆಯಲಿದ್ದು, ವಾರ್ಷಿಕ ಕಾರ್ಯಕ್ಷಮತೆಯ ಪರಿಶೀಲನೆಯ ಆಧಾರದ ಮೇಲೆ ಗರಿಷ್ಠ ಎರಡು (2) ವರ್ಷಗಳ ಅವಧಿಗೆ ವಿಸ್ತರಿಸಬಹುದಾಗಿದೆ ಮತ್ತು ಈ ಅಧಿಸೂಚನೆಯ ಅಡಿಯಲ್ಲಿ ನೇಮಕಾತಿಯು ಕರ್ನಾಟಕ ಜಲಸಾರಿಗೆ ಮಂಡಳಿಯಲ್ಲಿ ಯಾವುದೇ ನೇಮಕಾತಿಗಾಗಿ ಅಭ್ಯರ್ಥಿಗಳಿಗೆ ಯಾವುದೇ ಹಕ್ಕುಗಳಿಗೆ ಬದ್ಧರಾಗಿರುವುದಿಲ್ಲ.

ಸಹಿ/–, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ಜಲಸಾರಿಗೆ ಮಂಡಳಿ
DIPR/KWR/KSMCA/21/26-27 dt.08.04.2026

ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ
ನಿರ್ದೇಶಕರು & ಸದಸ್ಯ ಕಾರ್ಯದರ್ಶಿರವರ ಕಚೇರಿ, ಬಹುಮಹಡಿಗಳ ಕಟ್ಟಡ, ಗೇಟ್–4, ಪಿ.ಬಿ.ನಂ.5257, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–01.
ದೂರವಾಣಿ: 080–22258988, 22353974, 22353976, ಫ್ಯಾಕ್ಸ್ : 080–22389519,
ಇ–ಮೇಲ್ : mskstpb@karnataka.gov.in। ವೆಬ್‌ಸೈಟ್ : www.kstpb.dtcp.gov.in

No. KSTPB/03/Tender- Experts/2025-26 DATE:08.04.2026

ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ [ಕೆಪಿಪಿ] ಪೋರ್ಟಲ್ ಮೂಲಕ ಮಾತ್ರ)

ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಗೇಟ್ ನಂ:04, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು–560001 ಈ ಕಛೇರಿಯ ಕಾರ್ಯನಿರ್ವಹಣೆಗಾಗಿ **Outsourced Agency for Hiring of Experts (Urban Planners & GIS Consultants) (Tender No:DTCP/2026-27/SE0096, Tender Name: Outsourced Agency for Hiring of Experts (Urban Planners & GIS Consultants)"** ಸೇವೆ ಪೂರೈಸಲು ಸಂಬಂಧಿಸಿದ ಅನುಭವ ಹೊಂದಿರುವ ಸಂಸ್ಥೆಗಳಿಂದ **http://kppp.karnataka.gov.in** ಪೋರ್ಟಲ್‌ನಲ್ಲಿ **ದಿ:08.04.2026**ರಂದು ಟೆಂಡರ್ ಅನ್ನು ಆಹ್ವಾನಿಸಲಾಗಿದೆ. **ದಿ:26.04.2026 ರಂದು 15.00 ಗಂಟೆಯೊಳಗೆ** ಬಿಡ್ ಸಲ್ಲಿಸುವುದು. **ದಿ:27.04.2026 ರಂದು 15.30 ಗಂಟೆಗೆ** ತಾಂತ್ರಿಕ ಬಿಡ್ ತೆರೆಯಲಾಗುವುದು. **ದಿ:29.04.2026 ರಂದು 16.00 ಗಂಟೆಗೆ** ಹಣಕಾಸು ಬಿಡ್ ತೆರೆಯಲಾಗುವುದು.
ನಿಗಧಿತ ಟೆಂಡರ್ ನಮೂನೆ ಹಾಗೂ ಟೆಂಡರ್ ಆಹ್ವಾನಿಸುವ ಸೂಚನೆ ಪತ್ರ ನಿಯಮ ಮತ್ತು ಷರತ್ತುಗಳು, ಇತ್ಯಾದಿಗಳನ್ನು **http://kppp.karnataka.gov.in** ರಲ್ಲಿ ಪಡೆದು ಸಲ್ಲಿಸಬಹುದಾಗಿದೆ.

ಸಹಿ/– ಉಪ ನಿರ್ದೇಶಕರು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು.
DIPR/CP/123/NR/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಗ್ರಾಮೀಣ ಅಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಕಲಬುರಗಿ
ಸಂಖ್ಯೆ: ಕಾನಿಅ/ಪಂರಾಇಂಯೋವಿಕ/ತಾಶಾ/ಟೆಂಡರ/2026–27/28 ದಿನಾಂಕ : 07/04/2026

ಇ–ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ಏಕ-ಲಕೋಟೆ ಪದ್ಧತಿಯಲ್ಲಿ

1.	ಕಾಮಗಾರಿಗಳ ಇಂಡೆಂಟ್ ಸಂಖ್ಯೆ ಮತ್ತು ಟೆಂಡರಿಗಿಟ್ಟ ಅಂದಾಜು ಮೊತ್ತ	1) KRRDA/2025-26/RD/WORK_INDENT 326/ CALL-3 APT-Rs. 4629836.83
2.	ಲೆಕ್ಕ ಶೀರ್ಷಿಕೆ	2025–26ನೇ ಸಾಲಿನ 5054
3.	ಗುತ್ತಿಗೆದಾರರ ಅರ್ಹತೆ	3ನೇ ದರ್ಜೆ ಮತ್ತು ಮೇಲ್ಪಟ್ಟು
4.	ಟೆಂಡರ ಫಾರಂ ಪಡೆಯುವ ದಿನಾಂಕ	07–04–2026 ರಿಂದ 17–04–2026 ಸಾಯಂಕಾಲ 04:00 ಗಂಟೆವರೆಗೆ
5.	ಟೆಂಡರ ಅರ್ಜಿ ಬೆಲೆ	KPPP ನಿಯಮಾನುಸಾರ
6.	ಇ.ಎಂ.ಡಿ.	KPPP ಪೋರ್ಟಲ್ ನಲ್ಲಿ ದೊರೆಯುತ್ತದೆ.
7.	ಟೆಂಡರ ಸಲ್ಲಿಸುವ ದಿನಾಂಕ	07–04–2026 ರಿಂದ 17–04–2026 ಸಾಯಂಕಾಲ 04:00 ಗಂಟೆವರೆಗೆ
8.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	20–04–2026 ಬೆಳಿಗ್ಗೆ 11:00 ಗಂಟೆ ನಂತರ
9.	ಆರ್ಥಿಕ ಬಿಡ್ ತೆರೆಯುವ ದಿನಾಂಕ	20–04–2026 ಬೆಳಿಗ್ಗೆ 11:00 ಗಂಟೆ ನಂತರ
10.	ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ	ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಗ್ರಾಮಿಣಾಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಅಂಬೇಡ್ಕರ ವಸತಿ ನಿಲಯದ ಎದುರಿಗೆ ರಾಜಾಪೂರ ರಸ್ತೆ ಕಲಬುರಗಿ E-mail : kn-gul-1@pmgsy.nic.in
11.	ಅಂತರಜಾಲ ತಾಣದ ವಿಳಾಸ	www.kppp.karnataka.gov.in

ಸಹಿ/– ಉದಯಕುಮಾರ ಹೌದೆ
ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಅಭಿವೃದ್ಧಿ ಪಂಚಾಯತ ರಾಜ್ ಇಂಜನೀಯರಿಂಗ್ ಯೋಜನಾ ವಿಭಾಗ ಕಲಬುರಗಿ

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
#05, 2ನೇ ಮಹಡಿ, ಲೂಪ್‌ಲೇನ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560009
ದೂರವಾಣಿ: 080 – 22341230/35, ಇ–ಮೇಲ್: bmicapa@gmail.com
ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–01/122/2025–26 ದಿನಾಂಕ: 09.04.2026

ಸಾರ್ವಜನಿಕ ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ)

ಅರ್ಜಿದಾರರಾದ **ಶ್ರೀಮತಿ ಕಲಾವತಿ.ಎಸ್ ಕೋಂ ಅಜಯ್ ಪ್ರಸಾದ್.ಜಿ** ಇವರು ಬೆಂಗಳೂರು ದಕ್ಷಿಣ ತಾಲ್ಲೂಕು. ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ: 68/3ರ 01ಎ–24½ ಗು, 68/4ರ 01ಎ–09 ಗು ಮತ್ತು ಸರ್ವೆ ಸಂಖ್ಯೆ: 68/5ರ 01ಎ–6½ ಗು ಒಟ್ಟು 04 ಎಕರೆ ವಿಸ್ತೀರ್ಣದ ಜಮೀನುಗಳನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "**ವ್ಯವಸಾಯ**" ವಲಯದಿಂದ "**ವಸತಿ**" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಅನುಮೋದಿತ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.
1) ಈ ಜಮೀನಿನಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸುವುದರಿಂದ, ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ದೊರಕುತ್ತವೆ. 2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. 3) ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. 4) ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು, ಒಳಚರಂಡಿ, ವಿದ್ಯುತ್ ಸೌಲಭ್ಯ ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ.
ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.
DIPR/CP/117/SA/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನೀಯರವರ ಕಛೇರಿ ಕರ್ನಾಟಕ ನೀರಾವರಿ ನಿಗಮ ನಿಯಮಿತ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್:01/26–27 ದಿ: 02.04.2026
(ದ್ವಿ ಟೆಂಡರ್ ದಾಖಲೆ & ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ KPWD Class-IV & above ದರ್ಜೆಯ ಗುತ್ತಿಗೆದಾರರಿಂದ (ಕ್ರಮ ಸಂಖ್ಯೆ 01 ರ ಕಾಮಗಾರಿಗೆ SC Category, ಕ್ರಮ ಸಂಖ್ಯೆ 02 ಮತ್ತು 03 ರ ಕಾಮಗಾರಿಗಳಿಗೆ ST Category, ಕ್ರಮ ಸಂಖ್ಯೆ 04 ಮತ್ತು 05 ರ ಕಾಮಗಾರಿಗಳಿಗೆ Category II A ಹಾಗೂ ಕ್ರಮ ಸಂಖ್ಯೆ 06 ರ ಕಾಮಗಾರಿಗೆ Category I ಗುತ್ತಿಗೆದಾರರು ಮಾತ್ರ ಭಾಗವಹಿಸತಕ್ಕದ್ದು) ಕೆ.ಪಿ.ಪಿ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.
ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ವ್ಯಾಪ್ತಿಯಲ್ಲಿ ಕಾಲು ಸಂಕ (Foot Bridge) ಅಭಿವೃದ್ಧಿ ಕಾಮಗಾರಿಗಳ (06 ಸಂಖ್ಯೆ) ಟೆಂಡರಿಗಿಟ್ಟ ಮೊತ್ತ ರೂ.9.96 ಲಕ್ಷಗಳಿಂದ ರೂ.44.92 ಲಕ್ಷಗಳು & ಇ.ಎಂ.ಡಿ ಮೊತ್ತ ರೂ. 0.11 ಲಕ್ಷಗಳಿಂದ ರೂ.0.38 ಲಕ್ಷಗಳು.
1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ: 08.04.2026 ರಿಂದ 16.04.2026 ಸಂಜೆ 5.30 ರವರೆಗೆ 2) ಟೆಂಡರ್ ಸ್ಪಷ್ಟಿಕರಣಕ್ಕೆ ಕೊನೆಯ ದಿನಾಂಕ: 15.04.2026 ಸಂಜೆ 5.30 ರ ವರೆಗೆ 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 18.04.2026 ಸಂಜೆ 05.30 ಗಂಟೆಗೆ. 4) ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು.
ಹೆಚ್ಚಿನ ಮಾಹಿತಿಗಾಗಿ (www.kppp.karnataka.gov.in) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ.
ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/26–27/53/04/58

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ & ಗು.ಅ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು-560009.

ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
ಬಿಡಬ್ಲ್ಯೂ& ಪಿಎಸ್–2	ಬೆಂಜಮಂ/ಕಾನಿಅ ಬಿಡಬ್ಲ್ಯೂಪಿಎಸ್–2/8291/ 2025–26 ದಿನಾಂಕ: 01.04.2026	ರೂ. 67.50 ಲಕ್ಷಗಳು / ರೂ. 1.35 ಲಕ್ಷಗಳು	17.04.2026ರ ಬೆಳಿಗ್ಗೆ 11.00 ಗಂಟೆಯವರೆಗೆ	18.04.2026ರ ಬೆಳಿಗ್ಗೆ 11.15 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಬಿಡಬ್ಲ್ಯೂ&ಪಿಎಸ್–2)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/130/NR/2026-27

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ
ನಂ.32, 3ನೇ ಮಹಡಿ, ಡಿ. ದೇವರಾಜ ಅರಸ್ ರಸ್ತೆ (ರೇಸ್ ಕೋರ್ಸ್ ರಸ್ತೆ), ಬೆಂಗಳೂರು–560 001. ದೂರವಾಣಿ : 080–22268018/19.
ಸಂಖ್ಯೆ: ಸಿವಿ/448/3/2026–27 ದಿನಾಂಕ: 09.04.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇದರ ಕೇಂದ್ರ ಕಛೇರಿ ಮತ್ತು ಕೆ.ಐ.ಸಿ.ಎಂ.ಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಅರ್ಹ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇಎಂಡಿ: **ರೂ. 80,000/–** ಗಳಾಗಿದ್ದು, ಟೆಂಡರ್‌ನ ವಿವರಗಳು **http://kppp.karnataka.gov.in** ನಲ್ಲಿ ದೊರೆಯುವುದು. ಟೆಂಡರನ್ನು ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸಬಹುದಾಗಿದೆ.
1. ಆನ್‌ಲೈನ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **24.04.2026 ಸಂಜೆ 5.30 ಗಂಟೆವರೆಗೆ.**
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **27.04.2026 ಬೆಳಿಗ್ಗೆ 11.30 ಗಂಟೆಗೆ.**
3. ಆರ್ಥಿಕ ಬಿಡ್ ತೆರೆಯುವ ದಿನಾಂಕ: **28.04.2026 ಮಧ್ಯಾಹ್ನ 3.00 ಗಂಟೆಗೆ.**

ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಯಾವುದೇ ಕಾರಣವನ್ನು ನೀಡದೇ ಟೆಂಡರನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಅಧಿಕಾರವನ್ನು ಮಹಾಮಂಡಳವು ಹೊಂದಿರುತ್ತದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ್ ಗದಗ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಕೊಠಡಿ ಸಂಖ್ಯೆ 101, ಜಿಲ್ಲಾ ಆಡಳಿತ ಭವನ, ಗದಗ
ಇ–ಮೇಲ್ : dhogadag@gmail.com ದೂರವಾಣಿ : 08372-233996
ಕ್ರ.ಸಂ:ಪೂರೈಕೆ/ಇ–ಟೆಂಡರ್/2026–27 ದಿನಾಂಕ : 08.04.2026

ಟೆಂಡರ್ ಪ್ರಕಟಣೆ

2026–27 ನೇ ಸಾಲಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಅಧೀನ ಕಚೇರಿ ಹಾಗೂ ಅಧೀನ ಆರೋಗ್ಯ ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರದ ವಿವಿಧ ವೃಂದದ ನೌಕರರ ಸೇವೆಯನ್ನು ಹೊರ ಸಂಪನ್ಮೂಲದಿಂದ ಒದಗಿಸುವ ಕುರಿತು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹಾಗೂ ಟೆಂಡರ್‌ನಲ್ಲಿ ಭಾಗವಹಿಸಲು ದಿನಾಂಕ : **18.04.2026** ರಂದು ಸಾಯಂಕಾಲ ಸಮಯ 04:30 ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/ಮೂಲಕ Tender Reference No–DHFWS/2025-26/SE2107 ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ. **ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಗದಗ**
ವಾಸಾಸಂಇ/ಗದಗ/ಕೆಎಸ್ಎಂಸಿಎ/11/2026–27

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆವಿಕಂರವರು 63 ಕೆವಿಎ, ಸ್ಟಾರ್ 1 (4 ಸ್ಟಾರ್) ವಿತರಣಾ ಪರಿವರ್ತಕದ ಖರೀದಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಿವರ	ವಿಚಾರಣೆ ಸಂಖ್ಯೆ
1	63ಕೆವಿಎ ಸ್ಟಾರ್ 1 (4 ಸ್ಟಾರ್) ವಿತರಣಾ ಪರಿವರ್ತಕ ಲಾಟ್–1	BESCOM/2026-27/IND0227
2	63ಕೆವಿಎ ಸ್ಟಾರ್ 1 (4 ಸ್ಟಾರ್) ವಿತರಣಾ ಪರಿವರ್ತಕ ಲಾಟ್–2	BESCOM/2026-27/IND0228
3	63ಕೆವಿಎ ಸ್ಟಾರ್ 1 (4 ಸ್ಟಾರ್) ವಿತರಣಾ ಪರಿವರ್ತಕ ಲಾಟ್–3	BESCOM/2026-27/IND0229

ಬಿಡ್ ದಾಖಲೆಗಳು ದೊರೆಯುವ ದಿನಾಂಕ: **10.04.2026** ರಿಂದ. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **11.05.2026ರ 17:00** ಗಂಟೆಯವರೆಗೆ. ಬಿಡ್‌ಗಳನ್ನು ತೆರೆಯುವ ದಿನಾಂಕ: **12.05.2026ರ 17:15 ಗಂಟೆಗೆ.**
ಟೆಂಡರ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ಮೂಲಕ ಪಡೆಯಬಹುದು. ಆಸಕ್ತ ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಹಾಯವಾಣಿ ಸಂಖ್ಯೆ +91–8046010000 +91–8068948777, 09240214000 & 09240214001 ಗಳಿಂದ ಅಥವಾ **support@eprochelpdesk.com** ಗೆ ಇಮೇಲ್ ಮಾಡಿ ಹೆಚ್ಚಿನ ಮಾಹಿತಿಗಳನ್ನು ಪಡೆಯಬಹುದು.

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ), ಖರೀದಿ ಶಾಖೆ, ಬೆವಿಕಂ, 4ನೇ ಮಹಡಿ, ಕೆ.ಆರ್. ವೃತ್ತ, ಬೆಂಗಳೂರು – 560 001.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile App ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ಲೆ.ಶೀ /ಟೆಂಡರು /2026–27/30
ದಿನಾಂಕ 06–04–2026

ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025–26 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆ, 2025–26 ನೇ ಸಾಲಿನ ಸಿ.ಐ.ಎಮ್.ಡಿ.ಪಿ,2025–26 ನೇ ಸಾಲಿನ 5054 ಎಸ್.ಸಿ.ಪಿ/ಟಿ.ಎಸ್.ಪಿ ಒಟ್ಟು 11 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.
ಕಾಮಗಾರಿಗಳ ಇಂಡೆಂಟ್ ಸಂಖ್ಯೆ–
1.RDPR/2025-26/BD/WORK_INDENT25783
2.RDPR/2025-26/BD/WORK_INDENT25817
3.RDPR/2025-26/BD/WORK_INDENT25784
4.RDPR/2025-26/RD/WORK_INDENT25813
5.RDPR/2025-26/RD/WORK_INDENT25818
6.RDPR/2025-26/BD/WORK_INDENT24269/CALL-4
7.RDPR/2025-26/BD/WORK_INDENT24141/CALL-4
8.RDPR/2025-26/BD/WORK_INDENT24442/CALL-4
9.RDPR/2025-26/RD/WORK_INDENT25657/CALL-2
10.RDPR/2025-26/RD/WORK_INDENT24749/CALL-3
11.RDPR/2025-26/BD/WORK_INDENT24441/CALL-4

ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ ದಿನಾಂಕ 06–04–2026 ರಿಂದ ದಿನಾಂಕ 13–04–2026 ರಂದು ಸಂಜೆ 4.30 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ ದಿನಾಂಕ: 13–04–2026 ರ 16.30 ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ ದಿನಾಂಕ: 15–04–2026 ರಂದು ಬೆಳ್ಳಗೆ 10.30 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್ಎಂಸಿಎ/ಆರ್.ಓ.ಸಂಖ್ಯೆ/41

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಯಾವ ಒಂದು ದಾರಿಯೂ ಎಲ್ಲರಿಗೂ ಹಿಡಿಸುವುದಿಲ್ಲ.
–ಸ್ವಾಮಿ ವಿವೇಕಾನಂದ

ಸಂಪಾದಕೀಯ

ಮಣಿಪುರದಲ್ಲಿ ಶಾಂತಿ ಮರೀಚಿಕೆ ಸಾಗಬೇಕಿರುವ ಹಾದಿ ಬಹು ದೂರ

ಮಣಿಪುರದಲ್ಲಿ ಯಾವ ಕ್ಷಣದಲ್ಲಾದರೂ ಒಡೆಯಬಹುದಾದ ನೀರಿನ ಗುಳ್ಳೆಯಂತೆ ಶಾಂತಿ ನೆಲೆಗೊಂಡಿತ್ತು. ಬಾಂಬ್ ದಾಳಿಯಲ್ಲಿ ಇಬ್ಬರು ಮಕ್ಕಳ ಹತ್ಯೆ ಹಾಗೂ ಅದರ ನಂತರ ಆ ರಾಜ್ಯದ ವಿಷ್ಣುಪುರ ಜಿಲ್ಲೆಯಲ್ಲಿ ನಡೆದ ಹಿಂಸಾಚಾರದಲ್ಲಿ ಮೂವರ ಪ್ರಾಣಹಾನಿ ವರದಿ ಆಗುವುದರೊಂದಿಗೆ ಆ ಶಾಂತಿ ಕದಡಿದೆ. ಮಕ್ಕಳನ್ನು ಹತ್ಯೆ ಮಾಡಿರುವುದು, ಜನರನ್ನು ಉದ್ರಿಕ್ತರನ್ನಾಗಿ ಮಾಡಿ ಇನ್ನಷ್ಟು ಹಿಂಸಾಚಾರ ಉಂಟಾಗುವಂತೆ ಮಾಡುವ ಉದ್ದೇಶದ ಕೃತ್ಯವಾಗಿ ಈ ಘಟನೆ ಕಾಣುತ್ತಿದೆ. ಮಕ್ಕಳ ಹತ್ಯೆಯನ್ನು ಪ್ರತಿಭಟಿಸಿದ ಗುಂಪು, ಭದ್ರತಾ ಸಿಬ್ಬಂದಿಯ ಶಿಬಿರದ ಮೇಲೆ ಮುತ್ತಿಗೆ ಹಾಕಲು ಯತ್ನಿಸಿದಾಗ, ಭದ್ರತಾ ಸಿಬ್ಬಂದಿ ಹಾರಿಸಿದ ಗುಂಡಿಗೆ ಮೂವರು ಬಲಿಯಾಗಿದ್ದಾರೆ. ಬಾಂಬ್ ದಾಳಿ ನಡೆಸಿದವರನ್ನು ಪತ್ತೆಮಾಡಿ, ಅವರನ್ನು ಶಿಕ್ಷಿಸಲಾಗುತ್ತದೆ ಎಂದು ರಾಜ್ಯದ ಮುಖ್ಯಮಂತ್ರಿ ವೈ. ಖೇಮಚಂದ್ ಎಚ್ಚರಿಕೆ ನೀಡಿದ್ದಾರೆ. ಬಾಂಬ್ ದಾಳಿಯ ಬಗ್ಗೆ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ತನಿಖೆ ನಡೆಸುತ್ತಿದೆ. ಆದರೆ ಈವರೆಗೆ ಯಾರನ್ನೂ ಬಂಧಿಸಿಲ್ಲ. ಮಣಿಪುರದಲ್ಲಿನ ಹಿಂಸಾಚಾರವನ್ನು ಈಗ ಬಿಡಿ ಘಟನೆಗಳನ್ನಾಗಿ ಕಾಣಲು ಆಗದು, ಅದು ಸಂಘಟಿತವಾದ ಉಗ್ರ ಕೃತ್ಯಗಳಾಗಿವೆ. ಏಕೆಂದರೆ, ಅಲ್ಲಿ ಹಿಂಸಾಚಾರಕ್ಕೆ ವ್ಯಕ್ತಿಗಳು ಕಾರಣವಾಗುತ್ತಿಲ್ಲ; ಗುಂಪುಗಳು ಆ ಕೆಲಸ ಮಾಡುತ್ತಿವೆ. ಕೃತ್ಯ ಎಸಗುವವರನ್ನು ಪತ್ತೆ ಮಾಡುವುದು ಕೂಡ ಕಷ್ಟವಾಗುತ್ತಿದೆ.

ಕೆಲವು ಜಿಲ್ಲೆಗಳಲ್ಲಿ ಇಂಟರ್ನೆಟ್ ಸೇವೆಯನ್ನು ಅಮಾನತಿನಲ್ಲಿ ಇರಿಸಿರುವ ಸರ್ಕಾರವು ಪರಿಸ್ಥಿತಿಯನ್ನು ನಿಯಂತ್ರಿಸಲು ಹೆಚ್ಚಿನ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿದೆ. ವಿಷ್ಣುಪುರದಲ್ಲಿ ಹಿಂದೆ ಹಲವು ಹಿಂಸಾ ಕೃತ್ಯಗಳು ನಡೆದಿದ್ದರೂ, ಹೊಸ ಸರ್ಕಾರ ರಚನೆ ಆದ ನಂತರದಲ್ಲಿ ಅಲ್ಲಿ ಹೀಗೆ ಆಗಿರುವುದು ಇದೇ ಮೊದಲು. ಈಚಿನ ವಾರಗಳಲ್ಲಿ ದುಷ್ಕರ್ಮಿಗಳನ್ನು ಗುರಿ ಆಗಿಸಿಕೊಂಡು ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಸರ್ಕಾರ ಹೇಳಿದೆ. ಆದರೆ, ಅಲ್ಲಿ ಶಸ್ತ್ರಸಜ್ಜಿತ ಆಕ್ರಮಣಗಳು ನಡೆಯುತ್ತಿರುವುದು ಹಾಗೂ ಶಸ್ತ್ರಾಸ್ತ್ರ ಇರುವ ಗುಂಪುಗಳ ನಡುವೆ ಘರ್ಷಣೆ ನಡೆಯುತ್ತಿರುವುದು ವಿಧ್ವಂಸಕ ಕೃತ್ಯ ನಡೆಸುವವರು ಈಗಲೂ ಸಕ್ರಿಯರಾಗಿ ಇದ್ದಾರೆ ಎಂಬುದನ್ನು ತೋರಿಸುತ್ತಿದೆ. ಪೊಲೀಸ್ ಠಾಣೆಗಳಿಂದ, ಸರ್ಕಾರಿ ಶಸ್ತ್ರಾಗಾರಗಳಿಂದ ಲೂಟಿ ಮಾಡಲಾದ ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ಮತ್ತೆ ವಶಕ್ಕೆ ಪಡೆಯುವ ಸರ್ಕಾರದ ಯತ್ನಗಳಿಗೆ ಫಲ ಸಿಕ್ಕಿಲ್ಲ. ಇಂತಹ ಶಸ್ತ್ರಾಸ್ತ್ರಗಳು ಜನರ ಕೈಯಲ್ಲಿ ಇರುವವರೆಗೆ ಅಲ್ಲಿ ಹಿಂಸಾಚಾರ ಮುಂದುವರಿಯುತ್ತದೆ. ಇಂಫಾಲ್ ನಗರ ಸೇರಿದಂತೆ ರಾಜ್ಯದ ಹಲವೆಡೆ ಕರ್ಫ್ಯೂ ನಡುವೆಯೂ ಹಿಂಸಾಚಾರವನ್ನು ವಿರೋಧಿಸಿ ಸಾರ್ವಜನಿಕರು ಪ್ರತಿಭಟನೆ ನಡೆಸಿದ್ದಾರೆ. ಇದು ರಾಜ್ಯ ಯಾವುದಕ್ಕಾಗಿ ಹಂಬಲಿಸುತ್ತಿದೆ ಎನ್ನುವುದರ ಸಂಕೇತದಂತಿದೆ.

ಬೂದಿ ಮುಚ್ಚಿದ ಕೆಂಡದಂತಿದ್ದ ಮಣಿಪುರದಲ್ಲಿ ಮತ್ತೆ ಶಾಂತಿ ಕದಡುವ ಪ್ರಯತ್ನ ನಡೆದಿದೆ. ಶಾಂತಿ ಸ್ಥಾಪನೆಯ ದಾರಿ ದೂರದ್ದು ಮಾತ್ರವಲ್ಲ, ಕಠಿಣವಾದುದೂ ಹೌದು.

ಮಕ್ಕಳ ಹತ್ಯೆ ಹಾಗೂ ನಂತರ ನಡೆದ ಹಿಂಸಾಚಾರವು ಅಲ್ಲಿ ಹೊಸ ಸರ್ಕಾರ ರಚನೆಯಾದ ನಂತರವೂ ಪರಿಸ್ಥಿತಿ ಎಷ್ಟು ಸೂಕ್ಷ್ಮವಾಗಿದೆ ಎಂಬುದನ್ನು ತೋರಿಸುತ್ತಿದೆ. ಮೈತೇಯಿ ಹಾಗೂ ಕುಕಿ ಸಮುದಾಯಗಳ ಜನರ ನಡುವೆ ಅಪನಂಬಿಕೆ ಅದೆಷ್ಟು ಆಳವಾಗಿದೆ ಎಂಬುದನ್ನೂ ಇದು ತೋರಿಸುತ್ತಿದೆ. 2023ರ ಮೇ ತಿಂಗಳ ನಂತರದಲ್ಲಿ ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರಗಳಿಗೆ ಈ ಅಪನಂಬಿಕೆ ಮುಖ್ಯ ಕಾರಣ. ಆದರೆ, ಈಗಿನ ಸರ್ಕಾರವು ಎನ್. ಬಿರೇನ್ ಸಿಂಗ್ ನೇತೃತ್ವದ ಹಿಂದಿನ ಸರ್ಕಾರದಂತೆ ವರ್ತಿಸುತ್ತಿಲ್ಲ; ಈಗಿನ ಸರ್ಕಾರವು ಪರಿಸ್ಥಿತಿಯನ್ನು ನಿರ್ವಹಿಸುವಲ್ಲಿ ನ್ಯಾಯಸಮ್ಮತವಾಗಿ, ನಿಷ್ಪಕ್ಷಪಾತವಾಗಿ ವರ್ತಿಸಲು ಯತ್ನಿಸುತ್ತಿದೆ. ಎಲ್ಲ ಸಮುದಾಯಗಳ ವಿಶ್ವಾಸ ಗಳಿಸಲು ಖೇಮಚಂದ್ ಅವರು ಕುಕಿ ಸಮುದಾಯದವರು ಸೇರಿದಂತೆ ಹಲವರ ಜೊತೆ ಮಾತುಕತೆ ನಡೆಸಲು ಯತ್ನಿಸಿದ್ದಾರೆ. ಆದರೂ ಸಹಸ್ರಾರು ಕುಟುಂಬಗಳು ಈಗಲೂ ಆಶ್ರಯ ಕೇಂದ್ರಗಳಲ್ಲಿ ವಾಸ ಮಾಡುತ್ತಿವೆ. ರಾಜ್ಯವು ಎರಡು ವಲಯಗಳಾಗಿ ವಿಭಜನೆಗೊಂಡಿದೆ. ಒಂದು ವಲಯದಲ್ಲಿ ಇನ್ನೊಂದು ವಲಯದ ಜನ ಪ್ರವೇಶಿಸುವುದು ಸ್ವೀಕಾರಾರ್ಹ ಆಗುತ್ತಿಲ್ಲ. ರಾಜ್ಯದಲ್ಲಿ ಶಾಂತಿ ಸ್ಥಾಪನೆ ಇನ್ನೂ ದೂರದ ಮಾತು, ಅದಕ್ಕಾಗಿ ಬಹಳ ಕಠಿಣ ಶ್ರಮದ ಅಗತ್ಯವಿದೆ ಎಂಬುದನ್ನು ಇವೆಲ್ಲವೂ ಹೇಳುತ್ತಿವೆ.

ಚಾಟಿಡಂಗಿ

ಸಿಸಿಟಿವಿ ಕ್ಯಾಮೆರಾಗಳ ಪಕ್ಷಪಾತ

ನಮ್ಮ ದೇಶದಲ್ಲಿರುವ ಸಿಸಿಟಿವಿ ಕ್ಯಾಮೆರಾಗಳು ರಾಜಕೀಯ ಮಾಡುತ್ತಿವೆ; ರಸ್ತೆಯಲ್ಲಿ ವಾಹನಗಳನ್ನು ಅತಿವೇಗವಾಗಿ ಓಡಿಸಿದರೆ ಪೊಲೀಸರಿಗೆ ವರದಿ ಮಾಡುತ್ತವೆ. ಆದರೆ, ರಸ್ತೆಗಳಲ್ಲಿನ ಗುಂಡಿಗಳ ಬಗ್ಗೆ ಕಂಡೂ ಕಾಣದಂತೆ ಇರುತ್ತವೆ!

ರಂಗಸ್ವಾಮಿ ಎನ್., 'ಎಕ್ಸ್'ನಿಂದ

ಕಿಡಿನುಡಿ

ಬಿಜೆಪಿ, ಆರ್‌ಎಸ್‌ಎಸ್ ವಿಷಸರ್ಪಗಳಿದ್ದಂತೆ; ಅವುಗಳನ್ನು ಸೈದ್ಧಾಂತಿಕವಾಗಿ ಹೊಡೆಯಬೇಕೆಂಬ ಭಾವನೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡಿದ್ದಾರೆ. ಅವರೇನು ಬಿಜೆಪಿಯವರಿಗೆ ಹೊಡೆಯಿರಿ ಎಂದು ಹೇಳಿದ್ದಾರೆಯೆ?

ಡಾ. ಶರಣಪ್ರಕಾಶ ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 10-4-2001

• ಸಾಮೂಹಿಕ ನಿರ್ಧಾರದ ಮೇಲೆ ಹೊಸ ನೇಮಕ

ನವದೆಹಲಿ, ಏ. 9– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಮುಂದಿನ ಅಧ್ಯಕ್ಷರನ್ನು ಸಾಮೂಹಿಕ ನಿರ್ಧಾರದ ಮೂಲಕ ನೇಮಕ ಮಾಡಲು ನಿರ್ಧರಿಸಿರುವ ಪಕ್ಷದ ಅಧ್ಯಕ್ಷರಾದ ಸೋನಿಯಾ ಗಾಂಧಿ ಅವರು, ಇದಕ್ಕಾಗಿ ಸಂಪುಟದ ಹಿರಿಯ ಸಚಿವರ ಜತೆ ಸಮಾಲೋಚನೆ ನಡೆಸಿ ಅವರ ಅಭಿಪ್ರಾಯವನ್ನು ತಮಗೆ ತಿಳಿಸುವಂತೆ ಮುಖ್ಯಮಂತ್ರಿ ಅವರಿಗೆ ಸೂಚನೆ ನೀಡಿದ್ದಾರೆಂದು ತಿಳಿದುಬಂದಿದೆ.

ಇಂದು ಮಧ್ಯಾಹ್ನ ನಡೆದ ಭೇಟಿಯ ಸಂದರ್ಭದಲ್ಲಿ ಸೋನಿಯಾ ಗಾಂಧಿ ಅವರು ಈ ಅಭಿಪ್ರಾಯವನ್ನು ಮುಖ್ಯಮಂತ್ರಿ ಅವರಿಗೆ ತಿಳಿಸಿದರು. ಈ ಸೂಚನೆಯ ಮೇರೆಗೆ ರಾಜ್ಯದ ಕೆಲವು ಹಿರಿಯ ಸಚಿವರು ಮತ್ತು ಲೋಕಸಭಾ ಸದಸ್ಯರು ನಾಳೆ ದೆಹಲಿಗೆ ಆಗಮಿಸಲಿದ್ದಾರೆ.

• ದಳ (ಯು) ಜೊತೆ ಸ್ಥಳೀಯ ಹೊಂದಾಣಿಕೆಗೆ ದೇವೇಗೌಡ ಕರೆ

ಬೆಂಗಳೂರು, ಏ. 9– ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ದೂಳೀಪಟ ಮಾಡಲು ಸ್ಥಳೀಯವಾಗಿ ಜನತಾದಳ (ಯು) ಜೊತೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಜನತಾದಳ (ಎಸ್) ಅಧ್ಯಕ್ಷರಾದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಇಂದು ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರಿಗೆ ಸೂಚನೆ ನೀಡಿದರು.

ಬೆಳಗ್ಗೆ ನಡೆದ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರು ಮತ್ತು ಚುನಾವಣಾ ವೀಕ್ಷಕರ ಸಭೆಯಲ್ಲಿ ಅವರು, ಮುಂಬರುವ ರಾಜ್ಯದ 148 ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಸೋಲಿಸುವುದೇ ನಮ್ಮ ಗುರಿಯಾಗಬೇಕು ಎಂದು ತಿಳಿಸಿದರು.

75 ವರ್ಷಗಳ ಹಿಂದೆ

ಮಂಗಳವಾರ, 10-4-1951

• ಕಾರ್ಡು, ಕವರು ಬಿಟ್ಟು ಇತರ ಅಂಚೆಗಳ ಧಾರಣೆ ಏರಿಕೆ

ನವದೆಹಲಿ, ಏ. 9– ಪೋಸ್ಟ್ ಕಾರ್ಡು ಮತ್ತು ಕವರುಗಳನ್ನು ಬಿಟ್ಟು ಉಳಿದ ಕೆಲವು ವಸ್ತುಗಳ ಮೇಲಿನ ಧಾರಣೆಯನ್ನು ಏರಿಸುವ ಪ್ರಶ್ನೆಯನ್ನು ಅಂಚೆ ಮತ್ತು ತಂತಿಶಾಖೆ ಪರಿಶೀಲಿಸುತ್ತಿದೆ ಎಂಬುವುದಾಗಿ ಸಂಪರ್ಕ ಶಾಖಾ ಸಚಿವ ರಫಿ ಅಹ್ಮದ್ ಕಿದ್ವಾಯ್ ಅವರು ತಮ್ಮ ಸಚಿವ ಶಾಖೆಯ ಬೇಡಿಕೆಗಳ ಮಂಡಿತವಾದ ಕಾಲದಲ್ಲಿ ಪ್ರಕಟಿಸಿದರು.

1947ರ ಆಗಸ್ಟ್ 15ರಿಂದೀಚೆಗೆ 12,491 ಹೊಸ ಅಂಚೆ ಕಚೇರಿಗಳನ್ನು ತೆರೆಯಲಾಗಿದೆ. ಇದರಿಂದ ವಾರ್ಷಿಕ ವೆಚ್ಚ 14,40,000 ರೂ.ಗಳಷ್ಟು ಹೆಚ್ಚಾಗಿದೆ. ಈ ಮಧ್ಯೆ ವ್ಯವಹಾರ ಬಹಳ ಹೆಚ್ಚಾದ್ದರಿಂದ 1947ರ ಆಗಸ್ಟ್ 15ರಂದೇ ಇದ್ದ ಕಚೇರಿಗಳಲ್ಲಿ ಹೆಚ್ಚಿಗೆ ನೌಕರರುಗಳನ್ನು ನೇಮಿಸಿಕೊಳ್ಳಬೇಕಾಗಿ ಬಂದು, ಆ ಬಗ್ಗೆ ವೆಚ್ಚ ವರ್ಷಕ್ಕೆ ಒಂದು ಕೋಟಿ ಮೂವತ್ತೈದು ಲಕ್ಷದಷ್ಟು ಹೆಚ್ಚಿತು ಎಂದು ವಿವರಿಸಿದರು.

ಒಂದು ಆಣೆ ಬೆಲೆಯ ಪತ್ರಗಳನ್ನು ಈಗ ಕೊಡುತ್ತಿರುವುದರಿಂದ ಸ್ಥಳೀಯ ರಿಯಾಯಿತಿಯ ಕವರುಗಳನ್ನು ರದ್ದುಗೊಳಿಸಲಾಗುವುದು. ಆದರೆ ಸ್ಥಳೀಯ ಕಾರ್ಡುಗಳು ಮಾತ್ರ ಇರುವುವು.

ಊಟದ ತಟ್ಟೆಗೆ 'ಭಾರ' ಲೋಹ'!

ವಿಶ್ಲೇಷಣೆ

ಟಿ.ಎನ್. ಪ್ರಕಾಶ್ ಕಮ್ಮರಡಿ

> ಸಮರ್ಪಕವಾಗಿ ಸಂಸ್ಕರಿಸದ ತ್ಯಾಜ್ಯ ನೀರನ್ನು ಕೃಷಿಗೆ ಬಳಸಲಾಗುತ್ತಿದೆ. ಇದರ ಪರಿಣಾಮವಾಗಿ, ಕೃಷಿಯಲ್ಲಿ ಬಳಸುವ ಕೀಟನಾಶಕಗಳಿಗಿಂತಲೂ ಹೆಚ್ಚು ಅಪಾಯಕಾರಿಯಾದ ಭಾರ ಲೋಹಗಳು ಆಹಾರದ ಮೂಲಕ ನಮ್ಮ ದೇಹ ಪ್ರವೇಶಿಸುತ್ತಿವೆ. ಆದರೆ, ಇದರ ಬಗ್ಗೆ ಅರಿವು ಮೂಡಿಸಬೇಕಾದ ಸಂಸ್ಥೆಗಳೇ ಗೊಂದಲ ಸೃಷ್ಟಿಸುವ ಕೆಲಸ ಮಾಡುತ್ತಿವೆ.

ತರಕಾರಿಗಳನ್ನು ಉಪ್ಪು ನೀರು ಅಥವಾ ವಿನೆಗರ್‌ನಲ್ಲಿ ತೊಳೆದರೆ ವಿಷಮುಕ್ತವಾಗುತ್ತವೆ ಎಂಬುದು ಬಹುತೇಕ ಗೃಹಿಣಿಯರ ನಂಬಿಕೆ ಮತ್ತು ಎಚ್ಚರಿಕೆಯ ಪರಿಪಾಠ. ಆದರೆ, ಕೃಷಿಯಲ್ಲಿ ಬಳಸುವ ಕೀಟನಾಶಕಗಳಿಗಿಂತಲೂ ಅಪಾಯಕಾರಿಯಾದ 'ಭಾರ ಲೋಹ'ಗಳು ಈಗ ಸದ್ದಿಲ್ಲದೆ ನಮ್ಮ ತಟ್ಟೆಯನ್ನು ಸೇರುತ್ತಿವೆ. ತೊಳೆಯುವುದರಿಂದ ಅಥವಾ ಬೇಯಿಸುವುದರಿಂದಲೂ ದೂರವಾಗದ ಈ 'ಅದೃಶ್ಯ ವಿಷ'ವು ಮಣ್ಣು–ನೀರು–ಬೆಳೆಗಳ ಸರಪಳಿಯ ಮೂಲಕ ಆಹಾರದೊಳಗೆ ನಿರಂತರವಾಗಿ ಸೇರುತ್ತಿದೆ; ಸಾರ್ವಜನಿಕ ಸ್ವಾಸ್ಥ್ಯಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

ಸಮರ್ಪಕವಾಗಿ ಸಂಸ್ಕರಿಸದ ಕೈಗಾರಿಕಾ ಮತ್ತು ನಗರದ ತ್ಯಾಜ್ಯ ನೀರನ್ನು ಕೃಷಿಗೆ ಬಳಸುತ್ತಿರುವುದು ಸೀಸ, ಕ್ಯಾಡ್ಮಿಯಂ, ನಿಕ್ಕಲ್ ಮತ್ತು ಕ್ರೋಮಿಯಂ ರೀತಿಯ ಹಾನಿಕಾರಕ ಲೋಹಗಳು ಆಹಾರ ಸರಪಳಿಯೊಳಗೆ ನುಗ್ಗಲು ಪ್ರಮುಖ ಕಾರಣವಾಗಿದೆ. ಸಂಶೋಧನೆಗಳು ಹೊರಹಾಕುತ್ತಿರುವ ಈ ಕಟು ವಾಸ್ತವವು ಆಹಾರ ಸುರಕ್ಷತೆಯ ಆತಂಕಗಳನ್ನು ತೀವ್ರಗೊಳಿಸಿದೆ. ಮತ್ತೊಂದೆಡೆ, ಕೆಲವು ಪ್ರತಿಷ್ಠಿತ ವಿಜ್ಞಾನ ಸಂಸ್ಥೆಗಳ ವಿರೋಧಾಭಾಸದ ವರದಿಗಳು ಗ್ರಾಹಕರನ್ನು ಗೊಂದಲಕ್ಕೆ ತಳ್ಳಿವೆ.

ಕೆರೆಗೆ ತ್ಯಾಜ್ಯ ನೀರನ್ನು ತುಂಬಿಸಿ ಕೃಷಿಗೆ ಬಳಸುವುದು ಒಳ್ಳೆಯ ಯೋಚನೆ. ಆದರೆ, ಆ ನೀರಿನಲ್ಲಿರುವ ಭಾರ ಲೋಹಗಳು ಹೆಚ್ಚಿನ ಪರಮಾಣು ತೂಕವನ್ನು ಹೊಂದಿದ್ದು, ಮಣ್ಣಿನಲ್ಲಿ ಕರಗದೆ ದೀರ್ಘಕಾಲ ಉಳಿಯುತ್ತವೆ. ಇಂತಹ ನೀರನ್ನು ಸೂಕ್ತ ರೀತಿಯಲ್ಲಿ ಸಂಸ್ಕರಿಸದೆ ಕೃಷಿಗೆ ಬಳಸಿದಾಗ, ವಿಷಕಾರಿ ಅಂಶಗಳು ಬೆಳೆಗಳ ಮೂಲಕ ಆಹಾರ ಸರಪಳಿಯನ್ನು ಪ್ರವೇಶಿಸುತ್ತವೆ. ತದನಂತರ ಮಾನವ ದೇಹವನ್ನು ತಲಪುವ ಇವು, ಅಂಗಾಂಶಗಳಲ್ಲಿ ಹಂತ ಹಂತವಾಗಿ ಶೇಖರಣೆಗೊಳ್ಳುವ 'ಜೈವಿಕ ಸಂಗ್ರಹ' ಪ್ರಕ್ರಿಯೆಗೆ ಕಾರಣವಾಗುತ್ತವೆ. ಇದು ನರಮಂಡಲದ ಹಾನಿ, ಮಕ್ಕಳಲ್ಲಿ ಬುದ್ಧಿಮತ್ತೆ ಕುಸಿತ, ಮೂತ್ರಪಿಂಡ ವೈಫಲ್ಯದಿಂದ ಹಿಡಿದು, ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳಿಗೆ ಕಾರಣವಾಗಬಹುದು. ವಿಶ್ವಸಂಸ್ಥೆ ವರದಿಯ ಪ್ರಕಾರ, ಸೀಸ ಮಾಲಿನ್ಯವೊಂದರಿಂದಲೇ ಜಗತ್ತಿನಾದ್ಯಂತ ವರ್ಷಕ್ಕೆ ಸುಮಾರು 15 ಲಕ್ಷಕ್ಕೂ ಹೆಚ್ಚು ಸಾವುಗಳು ಸಂಭವಿಸುತ್ತಿವೆ.

ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಕೃಷಿ ವಿಶ್ವವಿದ್ಯಾಲಯ ಹಾಗೂ 'ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ' ಈ ಹಿಂದೆ ನಡೆಸಿದ ಸರಣಿ ಅಧ್ಯಯನಗಳು ಈ ಆತಂಕವನ್ನು ದೃಢಪಡಿಸಿವೆ. ನಗರದ ತ್ಯಾಜ್ಯ ನೀರನ್ನು ಬಳಸುವ ಕೃಷಿ ಪ್ರದೇಶಗಳ ಮಣ್ಣಿನಲ್ಲಿ ಸೀಸ, ಕ್ಯಾಡ್ಮಿಯಂ ಮತ್ತು ನಿಕ್ಕಲ್ ಪ್ರಮಾಣ ಅಪಾಯಕಾರಿ ಮಟ್ಟಕ್ಕೆ ಏರಿರುವುದು ದೃಢಪಟ್ಟಿದೆ. ನಗರದ ಪ್ರಮುಖ ಮಾರುಕಟ್ಟೆಗಳಿಂದ ಸಂಗ್ರಹಿಸಿದ ಸೊಪ್ಪು, ಗೆಡ್ಡೆ ಮತ್ತು ಇತರೆ ತರಕಾರಿಗಳನ್ನು ಪರೀಕ್ಷಿಸಿದಾಗ, ಅವುಗಳಲ್ಲಿನ ಭಾರ ಲೋಹಗಳ ಸಂಗ್ರಹವು ಮಾನವ ಬಳಕೆಗೆ ಅನುಮತಿಸಿರುವ ಸುರಕ್ಷಿತ ಮಿತಿಯನ್ನು ಮೀರಿರುವುದು ವರದಿಗಳಲ್ಲಿ ದಾಖಲಾಗಿದೆ.

ಕರ್ನಾಟಕ ಸರ್ಕಾರದ 'ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ' (ಇಎಂಪಿಆರ್‌ಐ) 2022–23ರಲ್ಲಿ ಬೆಂಗಳೂರಿನಾದ್ಯಂತ ಸುಮಾರು 400 ತರಕಾರಿ ಮಾದರಿಗಳನ್ನು ಸಮಗ್ರವಾಗಿ ವಿಶ್ಲೇಷಿಸಿದೆ. ಅವುಗಳಲ್ಲಿ ಭಾರ ಲೋಹಗಳ ಪ್ರಮಾಣವು 'ಅಂತರರಾಷ್ಟ್ರೀಯ ಆಹಾರ ಮತ್ತು ಕೃಷಿ ಸಂಸ್ಥೆ' ನಿಗದಿಪಡಿಸಿದ ಸುರಕ್ಷಿತ ಮಿತಿ ಮೀರಿರುವುದನ್ನು ಅಧ್ಯಯನವು ಅಧಿಕೃತವಾಗಿ ಎತ್ತಿ ತೋರಿಸಿದೆ. ಇದರರ್ಥ, ಕೈಗಾರಿಕಾ ಮಾಲಿನ್ಯ ಮತ್ತು ನಗರದ ತ್ಯಾಜ್ಯ ನಿರ್ವಹಣೆಯ ವೈಫಲ್ಯದ ಹೊರೆಯನ್ನು ಇಂದು ಸಾಮಾನ್ಯ ಗ್ರಾಹಕರು ತಮ್ಮ ಅಸ್ವಾಸ್ಥ್ಯದ ರೂಪದಲ್ಲಿ ಭರಿಸುವಂತಾಗಿದೆ.

ಬೆಂಗಳೂರಿನ ತರಕಾರಿಗಳಲ್ಲಿ ಭಾರ ಲೋಹಗಳ ಮಾಲಿನ್ಯದ ಕುರಿತು ಮಾಧ್ಯಮಗಳಲ್ಲಿ ಚರ್ಚೆ ಆಗುತ್ತಿದ್ದಂತೆಯೇ, ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು 2023ರ ಅಕ್ಟೋಬರ್‌ನಲ್ಲಿ ಈ ಬಗ್ಗೆ ಸ್ವಯಂಪ್ರೇರಿತ ವಿಚಾರಣೆ ಆರಂಭಿಸಿತು. ನ್ಯಾಯಾಧಿಕರಣದ ಸೂಚನೆಯಂತೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು 2024 ಮತ್ತು 2025ರ ಅವಧಿಯಲ್ಲಿ ವಿವಿಧ ಹಂತದ ಪರೀಕ್ಷೆಗಳನ್ನು ನಡೆಸಿದೆ ಹಾಗೂ ಆ ಪರೀಕ್ಷೆಗಳು ಬೆಚ್ಚಿಬೀಳಿಸುವ ಸತ್ಯವನ್ನು ಬಯಲು ಮಾಡಿವೆ. ಅಧ್ಯಯನದ ವರದಿಯ ಪ್ರಕಾರ, ಬೆಂಗಳೂರಿನ ಮಾರುಕಟ್ಟೆಗಳಿಗೆ ಪೂರೈಕೆಯಾಗುವ ತರಕಾರಿಗಳಲ್ಲಿ ಸೀಸದ ಪ್ರಮಾಣವು ಸುರಕ್ಷಿತ ಮಿತಿಗಿಂತ 15ರಿಂದ 20 ಪಟ್ಟು ಹೆಚ್ಚಿದೆ. ಈ ವರದಿ ಹೊರಬೀಳುತ್ತಿದ್ದಂತೆಯೇ, ಬೆಂಗಳೂರು ನಗರದ ತ್ಯಾಜ್ಯ ನೀರನ್ನು ಸಂಸ್ಕರಿಸಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆ ತುಂಬಿಸುವ ಮಹತ್ವಾಕಾಂಕ್ಷೆಯ 'ಕೆ.ಸಿ. (ಕೋರಮಂಗಲ–ಚಲ್ಲಘಟ್ಟ) ವ್ಯಾಲಿ' ಯೋಜನೆಯ ಸುತ್ತಲಿನ ಆತಂಕಗಳು ಇನ್ನಷ್ಟು ಗಾಢವಾಗತೊಡಗಿವೆ.

ಕೆ.ಸಿ. ವ್ಯಾಲಿ ನೀರಿನಿಂದ ಬೆಳೆಯಲಾಗುವ ಟೊಮೆಟೊ, ಕೋಸುಗೆಡ್ಡೆ, ಹೂಕೋಸು, ಪಾಲಕ್ ಮತ್ತು ದಂಟಿನಂತಹ ಸೊಪ್ಪುಗಳಲ್ಲಿ ಅಪಾಯಕಾರಿ ಭಾರ ಲೋಹಗಳ ಅಂಶ ಪತ್ತೆಯಾಗಿರುವುದು, ಬೆಂಗಳೂರಿನ ಬಳಕೆದಾರರನ್ನು ಆತಂಕಕ್ಕೆ ತಳ್ಳಿದೆ. ಅತ್ಯಂತ ಗಂಭೀರ ವಿಚಾರವೆಂದರೆ, 'ಸಾವಯವ' ಹಣೆಪಟ್ಟಿಯಡಿ ಮಾರಾಟವಾಗುತ್ತಿರುವ ಕೃಷಿ ಉತ್ಪನ್ನಗಳ ಮಾದರಿಯಲ್ಲೂ ಭಾರ ಲೋಹಗಳು ಪತ್ತೆಯಾಗಿರುವುದು!

ಈ ಕಟು ವಾಸ್ತವದ ನಡುವೆಯೂ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಇತ್ತೀಚಿನ ವರದಿಯು 'ಕೆ.ಸಿ. ವ್ಯಾಲಿ ತ್ಯಾಜ್ಯ ನೀರಿನಲ್ಲಿ ಯಾವುದೇ ಹಾನಿಕಾರಕ ಲೋಹಗಳ ಅಂಶಗಳು ಪತ್ತೆಯಾಗಿಲ್ಲ ಮತ್ತು ಇದು ಕೃಷಿ, ಜಾನುವಾರು ಅಥವಾ ಮಾನವನ ಆರೋಗ್ಯದ ಮೇಲೆ ಯಾವುದೇ ನಕಾರಾತ್ಮಕ ಪರಿಣಾಮ ಬೀರಿಲ್ಲ' ಎಂದು ಯೋಜನೆಗೆ ಕ್ಲೀನ್ ಚಿಟ್ ನೀಡಿರುತ್ತದೆ. ಈ ಷರಾ, ಕೆ.ಸಿ. ವ್ಯಾಲಿ ಪ್ರದೇಶಗಳ ತರಕಾರಿಗಳ ಮೇಲೆ ಅಧಿಕ ಅವಲಂಬನೆಯಾಗಿರುವ ಬೆಂಗಳೂರಿಗರಿಗೆ ತೀವ್ರ ಅಚ್ಚರಿ ಮತ್ತು ಗೊಂದಲ ಮೂಡಿಸಿದೆ.

ಐಐಎಸ್‌ಸಿ ಸಂಸ್ಥೆಯ ಹಿರಿಯ ವಿಜ್ಞಾನಿ ಟಿ.ವಿ. ರಾಮಚಂದ್ರ ಮತ್ತು ತಂಡವು 2018ರ ಸಂಶೋಧನೆಯಲ್ಲಿ, ಕೆ.ಸಿ. ವ್ಯಾಲಿ ಯೋಜನೆಯ ಮೂಲವಾದ ಬೆಳ್ಳಂದೂರು ಮತ್ತು ವರ್ತೂರು ಕೆರೆಗಳ ನೀರಿನಲ್ಲಿ ಕ್ಯಾಡ್ಮಿಯಂ, ಕ್ರೋಮಿಯಂ, ಸೀಸ ಮತ್ತು ನಿಕ್ಕಲ್‌ನಂತಹ ಭಾರ ಲೋಹಗಳು ಸುರಕ್ಷಿತ ಮಿತಿಗಿಂತ ಹೆಚ್ಚಾಗಿವೆ ಎಂದು ದಾಖಲಿಸಿದ್ದರು. ದ್ವಿತೀಯ ಹಂತದ ಸಂಸ್ಕರಣೆಯು ಈ ಲೋಹಗಳನ್ನು ತೆಗೆದುಹಾಕಲು ಅಸಮರ್ಥವಾಗಿದ್ದು, ಇವು ಅಂತರ್ಜಲವನ್ನು ಕಲುಷಿತಗೊಳಿಸಿ 'ಜೈವಿಕ ಸಂವರ್ಧನೆ' ಮೂಲಕ ಆಹಾರ ಸರಪಳಿ ಸೇರಬಹುದು ಎಂಬ ಎಚ್ಚರಿಕೆಯನ್ನು ಈ ವರದಿ ಕಡೆಗಣಿಸಿರುವಂತಿದೆ. ಇದಕ್ಕೆ ಪೂರಕವಾಗಿ, 'ಪ್ರಜಾವಾಣಿ' ವಿಡಿಯೊ ಸಮೀಕ್ಷೆಯು ಈ ತ್ಯಾಜ್ಯ ನೀರು ಹರಿದ ಕಡೆಯ ಜಮೀನುಗಳಲ್ಲಿನ ಸ್ಥಳೀಯ ರೈತರು ಎದುರಿಸುತ್ತಿರುವ ಬವಣೆ, ಚರ್ಮವ್ಯಾಧಿಯಂತಹ ಆರೋಗ್ಯ ಸಂಕಟ, ಜಾನುವಾರುಗಳ ಅಕಾಲಿಕ ಮರಣ, ಇತ್ಯಾದಿ ಸತ್ಯಗಳನ್ನು ಸಾಕ್ಷ್ಯಚಿತ್ರದಂತೆ ದಾಖಲಿಸಿದೆ.

ವೈಜ್ಞಾನಿಕ ವರದಿಗಳು ಬರೀ ಅಂಕಿ–ಅಂಶಗಳ ಸಮರ್ಥನೆಯಾಗದೆ, ಸಾರ್ವಜನಿಕ ಸ್ವಾಸ್ಥ್ಯದ ಪ್ರಾಮಾಣಿಕ ಕನ್ನಡಿಯಾಗಬೇಕೆಂಬ ನೈತಿಕತೆ ಇಲ್ಲಿ ಬದಿಗೆ ಸರಿಸಲಾಗಿರುವುದು ದುರದೃಷ್ಟಕರ. ಕಾರ್ಪೊರೇಟ್ ವ್ಯವಸ್ಥೆಯ ಲಾಭದಾಹಿ ಉದ್ದೇಶಗಳ ಮುಂದೆ ಇಂತಹ ಮಾನವೀಯ ಮತ್ತು ಪರಿಸರ ಕಾಳಜಿಗಳು ಗೌಣವಾಗುತ್ತಿರುವುದು ವಿಷಾದನೀಯ.

ಅಭಿವೃದ್ಧಿ ಹೊಂದಿದ ದೇಶಗಳ ಮಾದರಿಯಲ್ಲಿ, ಕೆ.ಸಿ. ವ್ಯಾಲಿ ಯೋಜನೆಯು ಬರೀ ನೀರು ಹರಿಸುವುದಕ್ಕೆ ಸೀಮಿತವಾಗದೆ, 'ಮೂಲದಲ್ಲೇ ತ್ಯಾಜ್ಯ ನಿಯಂತ್ರಣ', ನೀರು ಹರಿಯುವೆಡೆ ತ್ಯಾಜ್ಯ ಮತ್ತೆ ಸೇರದಂತೆ ಕಟ್ಟುನಿಟ್ಟಿನ ಕ್ರಮ ಮತ್ತು ಕಡ್ಡಾಯ ತೃತೀಯ ಹಂತದ ಶುದ್ಧೀಕರಣ ಪ್ರಕ್ರಿಯೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು.

ಪ್ರತಿ ಋತುವಿನ ತ್ಯಾಜ್ಯ ನೀರು ಹಾಗೂ ಅದರ ಸಂಪರ್ಕಕ್ಕೆ ಬರುವ ಮಣ್ಣು ಮತ್ತು ತರಕಾರಿಗಳ ಪರೀಕ್ಷಾ ವರದಿ ಪ್ರಕಟಿಸುವ ಪಾರದರ್ಶಕತೆ ಇರಲೇಬೇಕು. ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವ ಭಾರ ಲೋಹಗಳ ಮಾಲಿನ್ಯದ ವಿಚಾರದಲ್ಲಿ, 'ಭಾರತೀಯ ವಿಜ್ಞಾನ ಸಂಸ್ಥೆಯು' ತನ್ನ ಇತ್ತೀಚಿನ ಸಂಶೋಧನೆಯ ಸಂಪೂರ್ಣ ವಿವರ ಮತ್ತು ದತ್ತಾಂಶಗಳನ್ನು ತಕ್ಷಣ ಬಹಿರಂಗಪಡಿಸಿ, ಉದ್ಭವಿಸಿರುವ ಗೊಂದಲಗಳಿಗೆ ಸ್ಪಷ್ಟೀಕರಣ ನೀಡಬೇಕಾದ ಅಗತ್ಯವಿದೆ.

ಎಲ್ಲಕ್ಕಿಂತ ಮುಖ್ಯವಾಗಿ, ಪರಿಸರ ಅರ್ಥಶಾಸ್ತ್ರದ ನಿಯಮಗಳಂತೆ, ಇಂತಹ ಅಗೋಚರ 'ಬಾಹ್ಯ ಪರಿಣಾಮ'ಗಳನ್ನು ಮೂಲದೊಳಗೇ ಅಂತರ್ಗತಗೊಳಿಸುವುದು ಅಂತಿಮ ಗುರಿಯಾಗಬೇಕು. ಅಂದರೆ, ಮಾಲಿನ್ಯದ ದುಷ್ಪರಿಣಾಮಗಳನ್ನು ಅನುಭವಿಸುತ್ತಿರುವ ರೈತರು ಅಥವಾ ಗ್ರಾಹಕರ ಬದಲಿಗೆ, ಆ ತ್ಯಾಜ್ಯವನ್ನು ಉತ್ಪಾದಿಸುವ ಮೂಲಗಳೇ (ಕೈಗಾರಿಕೆಗಳು) ಅದರ ಆರ್ಥಿಕ ಮತ್ತು ಪರಿಸರ ಹೊಣೆಗಾರಿಕೆಯನ್ನು ಹೊರಬೇಕು. ಇದಕ್ಕಾಗಿ 'ಮಾಲಿನ್ಯ ಸೃಷ್ಟಿಸುವವನೇ ಪಾವತಿಸಲಿ' (Polluter Pays Principle) ಎಂಬ ತತ್ತ್ವದಡಿ ಕಟ್ಟುನಿಟ್ಟಾದ ದಂಡ ಮತ್ತು ಕರವ್ಯವಸ್ಥೆಯನ್ನು ರೂಪಿಸುವುದು ಅನಿವಾರ್ಯ.

ಬರ ನೀಗಿಸುವುದು ಅಥವಾ ಕೆರೆ ತುಂಬಿಸುವುದು ಬರೀ ಅಂಕಿ–ಅಂಶಗಳ ಆಟವಾಗಬಾರದು. ರೈತನ ಮಣ್ಣು, ಗ್ರಾಹಕನ ತಟ್ಟೆ ಹಾಗೂ ಮುಂದಿನ ಪೀಳಿಗೆಯ ಆರೋಗ್ಯವನ್ನು ರಕ್ಷಿಸುವ 'ವಿಷಮುಕ್ತ ಅಭಿವೃದ್ಧಿ' ಸರ್ಕಾರದ ಅಂತಿಮ ಗುರಿಯಾದಲ್ಲಿ ಅದೇ ಜನಕಲ್ಯಾಣದ ನಿಜವಾದ ಹಾದಿಯಾಗಲಿದೆ.

ಲೇಖಕ: ಕೃಷಿ ಆರ್ಥಿಕ ತಜ್ಞ, ಕರ್ನಾಟಕ ನೀತಿ ಮತ್ತು ಯೋಜನಾ ಆಯೋಗದ ಸದಸ್ಯ

ವಾಚಕರ ವಾಣಿ

ವಿದ್ಯುತ್ ಸಂಪರ್ಕಕ್ಕೆ ನೂರಾರು ಸಬೂಬು

ಗ್ರಾಮ ಪಂಚಾಯಿತಿ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕಚೇರಿಗಳಲ್ಲಿ ಇ-ಸ್ವತ್ತು ಪಡೆಯಲು ಜನರು ಪರದಾಡುತ್ತಿದ್ದಾರೆ. ಸಿಬ್ಬಂದಿ ಕೊರತೆ, ತಂತ್ರಾಂಶದ ದೋಷ, ಹೀಗೆ ಕಚೇರಿಯಲ್ಲಿ ಹಲವು ಸಬೂಬುಗಳು ಎದುರಾಗುತ್ತವೆ. ಈಗ ಜನಗಣತಿಯು ಹೊಸದೊಂದು ಸಬೂಬಾಗಿದೆ. ತಾತ್ಕಾಲಿಕ ವಿದ್ಯುತ್ ಸಂಪರ್ಕ ಸಿಗದೆ ಮನೆಗಳ ನಿರ್ಮಾಣ ಸ್ಥಗಿತಗೊಂಡಿದೆ. ಇ-ಖಾತೆ, ಒಸಿ ಹಾಗೂ ನಕ್ಷೆ ಮಂಜೂರಾತಿ ದಾಖಲೆಗಳಿಲ್ಲದೆ, ವಿದ್ಯುತ್ ಸಂಪರ್ಕ ದೊರೆಯುತ್ತಿಲ್ಲ. ಶಾಶ್ವತ ವಿದ್ಯುತ್ ಸಂಪರ್ಕ ಪಡೆಯುವಾಗ ಈ ದಾಖಲೆಗಳನ್ನು ಹಾಜರುಪಡಿಸುವಂತೆ ಲಿಖಿತ ಕರಾರುಪತ್ರ ಪಡೆದು ತಾತ್ಕಾಲಿಕ ಸಂಪರ್ಕ ನೀಡಿದರೆ, ಕಟ್ಟಡ ನಿರ್ಮಾಣದ ಕೆಲಸಗಳು ಸುಗಮವಾಗಲಿವೆ. ಕಾರ್ಮಿಕರ ತುತ್ತಿನ ಚೀಲವೂ ತುಂಬಲಿದೆ.

ಉದಂತ ಶಿವಕುಮಾರ, ಬೆಂಗಳೂರು

ಮೆಚ್ಚಿಸುವ ಹಂಗು; ವಂಚನೆಯ ಸೋಂಕು

ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯದ ಹಸ್ತಕ್ಷೇಪ ಹೆಚ್ಚುತ್ತಿರುವುದು ಆತಂಕಕಾರಿ. ಪಠ್ಯಕ್ರಮ, ನೀತಿಗಳು ಮತ್ತು ನೇಮಕಾತಿಯು ರಾಜಕೀಯ ಪ್ರಭಾವಕ್ಕೆ ಒಳಗಾಗಿವೆ. ಇದರಿಂದ ವಿದ್ಯಾರ್ಥಿಗಳ ಭವಿಷ್ಯ ಬಲಿಯಾಗುತ್ತದೆ. ಶಿಕ್ಷಣವು ಜ್ಞಾನ ನೀಡುವ ಕ್ಷೇತ್ರವಾಗಿರಬೇಕು. ಆದರೆ, ಈಗ ರಾಜಕೀಯ ಪ್ರಚಾರದ ವೇದಿಕೆಯಾಗಿ ಬದಲಾಗಿದೆ. ಶಿಕ್ಷಣ ನೀತಿಗಳು ವಿದ್ಯಾರ್ಥಿಗಳ ಹಿತಕ್ಕಾಗಿ ರೂಪುಗೊಳ್ಳಬೇಕೇ ಹೊರತು, ರಾಜಕೀಯ ಪಕ್ಷಗಳ ಲಾಭಕ್ಕಾಗಿ ಅಲ್ಲ. ರಾಜಕೀಯದ ನೆರಳು ಶಿಕ್ಷಣದ ಮೇಲೆ ಬಿದ್ದಾಗ ಸಮಾನತೆ ಮತ್ತು ಗುಣಮಟ್ಟ ಎರಡೂ ಹದಗೆಡುತ್ತದೆ. ಶಿಕ್ಷಣವನ್ನು ರಾಜಕೀಯದಿಂದ ದೂರ ಇಡುವುದು ಅನಿವಾರ್ಯ ಹಾಗೂ ಅವಶ್ಯಕ.

ಕೆ.ಎಂ. ಪವಿತ್ರಾ, ಮುರ್ಡೇಶ್ವರ

ಶಬರಿಮಲೆ: ಸಮಾನತೆಗೆ ಚ್ಯುತಿ ಬೇಡ

ಶಬರಿಮಲೆಗೆ ಮಹಿಳೆಯರ ಪ್ರವೇಶ ಕುರಿತ ಪ್ರಕರಣದ ವಿಚಾರಣೆಯ ವೇಳೆ 'ಭಕ್ತರಲ್ಲದವರೂ ಪಿಐಎಲ್ ಸಲ್ಲಿಸಬಹುದೇ?' ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ. ಶಬರಿಮಲೆ ದೇವಾಲಯ ಮಂಡಳಿಯ ಆಚರಣೆ ಪದ್ಧತಿಯು ಸಂವಿಧಾನದ ಸಮಾನತೆಯ ಹಕ್ಕನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತದೆ. ಇದನ್ನು ಪ್ರಶ್ನಿಸಲು ಪ್ರತಿಯೊಬ್ಬರಿಗೂ ಹಕ್ಕಿದೆ. ಪ್ರಶ್ನಿಸಲು ಭಕ್ತರೇ ಆಗಿರಬೇಕೆಂಬ ನಿಯಮವೇನೂ ಇಲ್ಲ. ಅಷ್ಟಕ್ಕೂ ಭಕ್ತರು ಪ್ರಶ್ನಿಸುವ ನೈತಿಕತೆ ಹೊಂದಿದ್ದರೆ ಮಹಿಳೆಯರ ಪ್ರವೇಶಕ್ಕೆ ಇಲ್ಲಿಯವರೆಗೂ ಕಾಯುವ ಪರಿಸ್ಥಿತಿ ಇರುತ್ತಿರಲಿಲ್ಲ. ಸುಪ್ರೀಂ ಕೋರ್ಟ್ ಮೂಲಭೂತ ಹಕ್ಕುಗಳ ರಕ್ಷಕನಾಗಿದೆ. ಹಾಗಾಗಿ, ಮಹಿಳೆಯರಿಗೆ ಸಂವಿಧಾನಬದ್ಧ ಹಕ್ಕನ್ನು ನೀಡಬೇಕಿದೆ.

ಶ್ರೀಧರ್ ಕಾಳೆ, ಧಾರವಾಡ

ಹೂಗಳ ಸೌಂದರ್ಯಕ್ಕೆ ಜಿಬಿಎ ಕುರುಡು

ಜಪಾನ್‌ನಲ್ಲಿ ಚೆರ್ರಿ ಹೂಗಳು ಅರಳುವ ಕಾಲವನ್ನು ರಾಷ್ಟ್ರೀಯ ಹಬ್ಬದಂತೆ ಆಚರಿಸಲಾಗುತ್ತದೆ. ಆ ದೇಶದಲ್ಲಿ ಚೆರ್ರಿ ಹೂಗಳನ್ನು ನೋಡಲು ಜನರು ದೇಶವಿಡೀ ಸುತ್ತುತ್ತಾರೆ. ವಿದೇಶಗಳಿಂದಲೂ ಪ್ರವಾಸಿಗರು ಬರುತ್ತಾರೆ. ಆ ಕುರಿತು ನಾಟಕಗಳು, ಕವಿತೆಗಳು ಇವೆ. ಬೆಂಗಳೂರಿನಲ್ಲೂ ಚೆರ್ರಿ ಹೂಗಳನ್ನು ಮೀರಿಸುವಂತೆ ತಬೂಬಿಯಾ ಮರಗಳು ಹೂ ಅರಳಿಸಿ ಕಣ್ಮನ ತಣಿಸುತ್ತಿವೆ. ಈ ಸಂದರ್ಭವನ್ನು ಜನರಲ್ಲಿ ಸೌಂದರ್ಯಪ್ರಜ್ಞೆ, ಪರಿಸರ ಕಾಳಜಿ ಬೆಳೆಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಬಳಸಬಹುದು. ಆದರೆ, ಅಂತಹ ಕಾರ್ಯ ನಡೆಯುತ್ತಿಲ್ಲ. ಅಭಿವೃದ್ಧಿಯ ಹೊಡೆತಕ್ಕೆ ಬಹುಪಾಲು ಮರಗಳು ನೆಲಕ್ಕುರುಳಿವೆ. ಐವತ್ತು ವರ್ಷದ ಹಿಂದೆಯೇ ಆಗಿನ ಮುಖ್ಯಮಂತ್ರಿ ದೇವರಾಜ ಅರಸುರವರು ಮನೆ ಕಟ್ಟುವಾಗ ಗಿಡ ನೆಡುವುದನ್ನು ಕಡ್ಡಾಯಗೊಳಿಸಿದ್ದರು. ಈಗಿನ ಪರಿಸ್ಥಿತಿ ಅಯೋಮಯವಾಗಿದೆ.

ಮಧುಸೂದನ್ ಬಿ.ಎಸ್., ಬೆಂಗಳೂರು

ವನ್ಯಜೀವಿಗಳಿಗೆ ಬದುಕುವ ಹಕ್ಕು ಇಲ್ಲವೆ?

'ವನ್ಯಜೀವಿಗಳ ಸಂತಾನಶಕ್ತಿ ಹರಣಕ್ಕೆ ಚರ್ಚೆ' ವರದಿ (ಪ್ರ.ವಾ., ಏ. 9) ಓದಿ ಆಘಾತವಾಯಿತು. ಮಾನವ-ವನ್ಯಜೀವಿ ಸಂಘರ್ಷ ತಡೆಗೆ ಇದು ಪರಿಹಾರವಲ್ಲ; ಸರ್ಕಾರವು ಈ ಕುರಿತ ಚಿಂತನೆ ನಿಲ್ಲಿಸಿದರೆ ವನ್ಯಜೀವಿ ಸಂಕುಲಕ್ಕೆ ಒಳಿತು. ಅಭಿವೃದ್ಧಿ ಹೆಸರಿನಡಿ ನಡೆಯುವ ಅರಣ್ಯ ಪ್ರದೇಶದ ಒತ್ತುವರಿ ನಿಯಂತ್ರಿಸುವುದೇ ಸಂಘರ್ಷ ತಡೆಗಿರುವ ಮದ್ದು. ಆವಾಸ ನಾಶ, ಕಳ್ಳಬೇಟೆಯಿಂದಾಗಿ ವನ್ಯಜೀವಿಗಳು ನಲುಗಿವೆ. ನಮ್ಮಂತೆ ಭೂಪರಿಸರದಲ್ಲಿ ಅವುಗಳಿಗೂ ಬದುಕುವ ಹಕ್ಕಿದೆ; ಆದರೆ, ಓಟಿನ ಹಕ್ಕಿರದ ಅವುಗಳ ಬದುಕು ಅತಂತ್ರಗೊಂಡಿದೆ. ಸರ್ಕಾರದ ಚಿಂತನೆಯು ಮೇಲ್ನೋಟಕ್ಕೆ ಸರಿಕಂಡರೂ ಇದರಿಂದ ಉದ್ಭವಿಸುವ ಸಮಸ್ಯೆಗಳಿಗೆ ಪರಿಹಾರ ಕಷ್ಟಕರ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

ಡಿಜಿಟಲ್ ಹೊಣೆ: ಅಪರಾಧಿಗಿರಲಿ ಶಿಕ್ಷೆ

ಐಟಿ ನಿಯಮಗಳಿಗೆ ತಿದ್ದುಪಡಿಯಿಂದ ಆಗುವ ಆತಂಕಗಳ ಬಗ್ಗೆ ಸಂಪಾದಕೀಯ ತೆರೆದಿಟ್ಟಿದೆ (ಪ್ರ.ವಾ., ಏ. 9). ಸೇಫ್ ಹಾರ್ಬರ್ ರಕ್ಷಣೆಯು ಕೇವಲ ಕಂಪನಿಗಳ ಲಾಭಕ್ಕಲ್ಲ, ಬದಲಾಗಿ ಇಂಟರ್ನೆಟ್‌ನ ಮುಕ್ತ ವಾತಾವರಣ ಕಾಪಾಡಲು ಇರುವ ಕವಚ. ರಸ್ತೆ ಅಪಘಾತವಾದಾಗ ನಾವು ರಸ್ತೆ ನಿರ್ಮಿಸಿದ ಎಂಜಿನಿಯರ್ ಅಥವಾ ಸರ್ಕಾರವನ್ನು ಹೊಣೆ ಮಾಡದೆ ಅಜಾಗರೂಕತೆಯಿಂದ ವಾಹನ ಚಲಾಯಿಸಿದ ವ್ಯಕ್ತಿಯನ್ನು ಹೇಗೆ ಶಿಕ್ಷಿಸುತ್ತೇವೆಯೋ, ಅದೇ ತರ್ಕ ಡಿಜಿಟಲ್ ಲೋಕಕ್ಕೂ ಅನ್ವಯವಾಗಬೇಕು. ಸಾಮಾಜಿಕ ಜಾಲತಾಣಗಳ ಸೇಫ್ ಹಾರ್ಬರ್ ತತ್ತ್ವವು ಇದೇ ಸತ್ಯದ ಮೇಲೆ ನಿಂತಿದೆ. ಮಧ್ಯವರ್ತಿ ವೇದಿಕೆಗಳನ್ನೇ ಹೊಣೆಗಾರರನ್ನಾಗಿ ಮಾಡಿದರೆ, ಕಂಪನಿಗಳು ಕಾನೂನು ಸಂಘರ್ಷಕ್ಕೆ ಹೆದರಿ ಪ್ರತಿಯೊಂದು ಪೋಸ್ಟ್ ಅನ್ನು ಕಟ್ಟುನಿಟ್ಟಾಗಿ ಸೆನ್ಸಾರ್ ಮಾಡಲು ಪ್ರಾರಂಭಿಸುತ್ತವೆ. ಅವು ಪರೋಕ್ಷವಾಗಿ ಬಲಿಷ್ಠರ ಪರವಾಗಿ ಕೆಲಸ ಮಾಡುವ 'ಸೆನ್ಸಾರ್‌ಶಿಪ್' ಕೇಂದ್ರಗಳಾಗಿ ಬದಲಾಗುತ್ತವೆ. ಇದರಿಂದ ಜನರ ನೈಜ ದನಿ, ವಿಮರ್ಶಾತ್ಮಕ ಆಲೋಚನೆಗಳು ಪ್ರಕಟವಾಗುವ ಮೊದಲೇ ಹತ್ತಿಕ್ಕಲ್ಪಡುತ್ತವೆ. ಇದು ಜನತಂತ್ರದ ಆಶಯಕ್ಕೆ ವಿರುದ್ಧವಾದುದು.

ಪ್ರವೀಣ ನಾಗಪ್ಪ ಯಲವಿಗಿ, ಮುಂಡಗೋಡು

ಚುರುಮುರಿ



ಬುಟ್ಟಿಯೊಳಗಿನ ಹಾವು!

• ಬಿ.ಎನ್. ಮಲ್ಲೇಶ್

ಜಾತ್ರೆಯಲ್ಲಿ ಹಾವಾಡಿಗ ಡೋಲು ಬಾರಿಸುತ್ತ ಜನರನ್ನು ಕೂಗಿ ಕರೆಯುತ್ತಿದ್ದ. 'ಅರೆ, ಬನ್ನಿ ಅಣ್ಣ, ಬನ್ನಿ ಅಕ್ಕ, ನಮ್ದುಕೆ ಪಾಸ್ ಹೆಬ್ಬಾವು, ನಾಗರಾವು, ಮಾತಾಡೋ ಇಸ್ಪೆಷಲ್ ಹಾವು ಎಲ್ಲ ಐತೆ... ಎಲ್ಲನೂ ಮೈದಾನಕ್ಕೆ ಬಿಡ್ತೀನಿ... ಬನ್ನಿ ಅಣ್ಣ, ಬನ್ನಿ ಅಕ್ಕ...'

ಜಾತ್ರೆಗೆ ಬಂದಿದ್ದ ತೆಪರೇಸಿಗೆ ಆಶ್ಚರ್ಯವಾಯಿತು. ಇವನತ್ರ ಮಾತಾಡೋ ಹಾವೈತಾ? ಅದೆಂಥದಪ, ನೋಡೇಬಿಡಾಣ ಅಂತ ನಿಂತುಕೊಂಡ. ಜನರೂ ಸೇರಿದರು.

'ಅರೇ ಸುನೋ, ನಮ್ದುಕೆ ಪಾಸ್ ಇಪ್ಪತ್ತು ಅಡಿದು ಹೆಬ್ಬಾವು ಐತೆ, ಸುಂಗೇರಿ ಕಾಡಲ್ಲಿ ಹಿಡಿದದ್ದು. ನಿನ್ನೆ ರಾತ್ರಿ ಚಿಕ್ಕಮಂಗ್ಳೂರ್ ಕಾಡಲ್ಲಿ ಹಿಡಿದ ಕಾಳಿಂಗ ಸರ್ಪ ಐತೆ, ಬಾಳ ರೋಷ ಅದಕ್ಕೆ. ಅದ್ನ ಮುಂಗುಸಿ ಜತೆ ಹೊಡೆದಾಟಕ್ಕೆ ಬಿಡ್ತೀನಿ, ಎಲ್ಲ ಹಿಂದೆ ಸರೀರಿ' ಎಂದ ಹಾವಾಡಿಗ.

'ರೀ ಸ್ವಾಮಿ, ಮೊದ್ಲು ಮಾತಾಡೋ ಹಾವು ತೋರ್ಸಿ...' ಎಂದ ತೆಪರೇಸಿ.

'ಸ್ವಾಮಿ ಅದು ಕೊಳಕಮಂಡಲ, ಈಗ್ಲೇ ತೋರ್ಸಾಕೆ ಆಗಲ್ಲ, ಅದ್ರ ಮೂಡ್ ನೋಡಿ ಹೊರಕ್ಕೆ ತೆಗೀಬೇಕು. ಅದು ಬಾಳ ಇಚಿತ್ರ, ಇದ್ದಕ್ಕಿದ್ದಂತೆ ಬುಸ್ ಅನ್ನುತ್ತೆ, ಏನೇನೋ ಮಾತಾಡುತ್ತೆ, ಆಮೇಲೆ ತೆಪ್ಪಗಾಗುತ್ತೆ...'

'ಹೌದಾ? ಅದು ನಮ್ ತರ ಮಾತಾಡುತ್ತಾ?'

'ಮಾತಾಡುತ್ತೆ ಸ್ವಾಮಿ, ಅದ್ಕೆ ಮೂರು ನಾಲಿಗೆ, ಆರು ಹಲ್ಲು... ಎತ್ತೆತ್ಲಾಗೋ ಕಚ್ಚಿಬಿಡುತ್ತೆ, ಹುಚ್ಚುಚ್ಚಾಗಿ ಆಡುತ್ತೆ, ನನ್ ಬಿಟ್ರೆ ಯಾರೂ ಇಲ್ಲ ಅನ್ನುತ್ತೆ... ಸದ್ಯ 14 ದಿನ ಕಾವಿಗೆ ಕೂತ್ಕಂಡೇತೆ. ಅದರ ಮೂಡ್ ನೋಡಿ ಮೈದಾನಕ್ಕೆ ಬಿಡ್ತೀನಿ' ಎಂದ ಹಾವಾಡಿಗ.

'ಅಲ್ಲ, ಅದನ್ನ ಅಮೆರಿಕ ಕಾಡಲ್ಲಿ ಹಿಡಿದಿದ್ದಾ?' ತೆಪರೇಸಿ ಅನುಮಾನದಿಂದಲೇ ಕೇಳಿದ.

'ಅರೆ ಹೌದು ಸ್ವಾಮಿ, ಆಪ್ಕೋ ಕೈಸೆ ಮಾಲುಮ್ ಹುವಾ? ನಿಮ್ಗೆ ಹೆಂಗ್ ಗೊತ್ತಾತು?' ಹಾವಾಡಿಗನಿಗೆ ಆಶ್ಚರ್ಯ!

ತೆಪರೇಸಿ ಒಳಗೇ ನಗುತ್ತ ಅಲ್ಲಿಂದ ಜಾಗ ಖಾಲಿ ಮಾಡಿದ.

ಸಂಗತ

ದೊಡ್ಡವರ ಪೋಷಾಕು ಮಕ್ಕಳಿಗೆ ಅಪಾಯಕರ

ಮನರಂಜನೆಯ ಹೆಸರಿನಲ್ಲಿ ಮಕ್ಕಳ ಬಾಲ್ಯವನ್ನು ಗಾಸಿಗೊಳಿಸುವ ಪ್ರಯತ್ನಗಳು ರಿಯಾಲಿಟಿ ಶೋಗಳಲ್ಲಿ ನಡೆಯುತ್ತಿವೆ. ಬಾಲ್ಯ ಕಸಿಯುವ ಹಕ್ಕು ಯಾರಿಗೂ ಇಲ್ಲ.

• ಹುಲಿಕಲ್ ನಟರಾಜ್

ಮಕ್ಕಳನ್ನು ಬಳಸಿಕೊಂಡು ರೂಪಿಸುತ್ತಿರುವ ಕಿರುತೆರೆಯಲ್ಲಿನ ರಿಯಾಲಿಟಿ ಶೋಗಳ ಕುರಿತು ಮರು ಚಿಂತನೆ ನಡೆಯಬೇಕಾಗಿದೆ. ಈ ಶೋಗಳಲ್ಲಿ, ಮಕ್ಕಳ ಅರಿವಿನ ಮಟ್ಟವನ್ನು ಮೀರಿ ಅವರಿಂದ ಸಂಭಾಷಣೆ ಹೇಳಿಸುತ್ತಿರುವುದು ಹಾಗೂ ನಟನೆ ಮಾಡಿಸುತ್ತಿರುವುದು ಆತಂಕಕಾರಿಯಾಗಿದೆ. ಇತ್ತೀಚೆಗೆ, ಪುಟ್ಟ ಹುಡುಗನೊಬ್ಬ ಕೈಯಲ್ಲಿ ಲಾಂಗ್ ಹಿಡಿದು ಅಭಿನಯಿಸುತ್ತಿದ್ದುದನ್ನು ಜನಪ್ರಿಯ ನಾಯಕ, ನಾಯಕಿಯರು ಪ್ರಶಂಸಿಸಿ ಸಂಭ್ರಮಿಸುತ್ತಿದ್ದ ದೃಶ್ಯ ಕಂಡು ಗಾಬರಿ ಆಯಿತು.

ಬಸವರಾಜ ಕಟ್ಟಿಮನಿ ಅವರ ಕಾದಂಬರಿ ಆಧರಿಸಿದ, ಕೆ.ಎಂ. ಶಂಕರಪ್ಪ ಅವರ ನಿರ್ದೇಶನದ 'ಮಾಡಿ ಮಡಿದವರು' ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯ ಕಥಾವಸ್ತು ಒಳಗೊಂಡಿರುವ ಅನನ್ಯ ಸಿನಿಮಾ. ಆ ಸಿನಿಮಾದ ಚಿತ್ರೀಕರಣದ ಸಂದರ್ಭದಲ್ಲಿ ರೈಲುಗಳಿಗೆ ಗ್ರೀಸ್ ಹಚ್ಚುವ ದೃಶ್ಯವನ್ನು ಚಿತ್ರಿಸಲು ನಿರ್ದೇಶಕರು ನಿರಾಕರಿಸಿ, ಅದನ್ನು ಬದಲಾಯಿಸಿದರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಆ ಘಟನೆ ನಡೆದಿದ್ದರೂ, ಪ್ರಸ್ತುತ ಸಿನಿಮಾ ನೋಡುವ ಯುವಜನರಿಗೆ ಅದು ಮಾದರಿ ಆಗಬಾರದು ಎನ್ನುವುದು ನಿರ್ದೇಶಕರ ಕಾಳಜಿಯಾಗಿತ್ತು. ಆದರೆ, ಈಗಿನ ಮನರಂಜನೆ ಸ್ವರೂಪದ ಎಲ್ಲ ಕಟ್ಟುಪಾಡುಗಳನ್ನು ದಾಟಿ, ಹಿಂಸೆಗೆ ಪ್ರಚೋದನೆಗೆ ನೀಡುವಂತಿದೆ; ಮತ್ತೊಬ್ಬರ ಅವಹೇಳನಕ್ಕೆ ಆಸ್ಪದ ಕಲ್ಪಿಸುವಂತಿದೆ. ಇದರ ಭಾಗವಾಗಿಯೇ ರಿಯಾಲಿಟಿ ಶೋಗಳಲ್ಲಿ ಮಕ್ಕಳಿಂದ ಅಸಂಬದ್ಧ ದೃಶ್ಯಗಳ ಸೃಷ್ಟಿ ನಡೆಯುವುದನ್ನು ಗಮನಿಸಬೇಕಾಗಿದೆ.

ರಿಯಾಲಿಟಿ ಶೋಗಳ ಹೆಸರಿನಲ್ಲಿ ಮಕ್ಕಳ ಮುಗ್ಧತೆಯನ್ನು ಹರಾಜಿಗಿಡುತ್ತಿರುವುದು ಆತಂಕಕಾರಿ ವಿಷಯ. ಇತ್ತೀಚಿನ ಕೆಲವು ಹಾಸ್ಯ ಮತ್ತು ನೃತ್ಯದ ರಿಯಾಲಿಟಿ ಶೋಗಳಲ್ಲಿ ಎಂಟರಿಂದ ಹತ್ತು ವರ್ಷದ ಮಕ್ಕಳು ಪ್ರೇಮಿಗಳಂತೆ ನಟಿಸುವುದು, ವಿರಹದ ಹಾಡುಗಳಿಗೆ ಹೆಜ್ಜೆ ಹಾಕುವುದು ಅಥವಾ ರೌಡಿಗಳಂತೆ ಅಬ್ಬರಿಸುವ ಸಂಭಾಷಣೆಗಳನ್ನು ಒಪ್ಪಿಸುವುದು ಸರ್ವೇ ಸಾಮಾನ್ಯವಾಗಿದೆ. ಇದು ಅವರಲ್ಲಿ ಅಕಾಲಿಕವಾಗಿ ಮಾನಸಿಕ ಪ್ರೌಢಿಮೆಯನ್ನು ತುರುಕುವ ಪ್ರಯತ್ನವಾಗಿದೆ. ಇದರಿಂದ ಅವರ ಸಹಜ ಬಾಲ್ಯ ತೀವ್ರವಾಗಿ ಗಾಸಿಗೊಳ್ಳುತ್ತದೆ.

ಮಕ್ಕಳು ದೊಡ್ಡವರಂತೆ ಮಾತನಾಡುವುದನ್ನು ನೋಡಿ ತೀರ್ಪುಗಾರರು ಮತ್ತು ವೀಕ್ಷಕರು 'ಎಷ್ಟು ಮುದ್ದಾಗಿದೆ' ಎಂದು ಸಂಭ್ರಮಿಸುತ್ತಾರೆ. ಆದರೆ, ಆ ಸಂಭ್ರಮದ ಹಿಂದೆ ಮಗುವಿನ ಮನೋವಿಕಾಸಕ್ಕೆ ಮಾರಕವಾದ ಅಂಶಗಳು ಇರುವುದನ್ನು ಅವರು ಮರೆಯುತ್ತಾರೆ ಅಥವಾ ನಿರ್ಲಕ್ಷ್ಯ ಮಾಡುತ್ತಾರೆ.

ಅಬ್ಬರದ ಸಂಭಾಷಣೆ ಹೇಳುವುದು, ಮಚ್ಚು–ಲಾಂಗುಗಳ ಬಗ್ಗೆ ಮಾತನಾಡುವುದು ಮಗುವಿನ ಅಂತರಾಳದಲ್ಲಿ ಹಿಂಸೆ ಎಂಬುದು 'ಮನರಂಜನೆ' ಎಂಬ ತಪ್ಪು ತಿಳಿವಳಿಕೆ ಬಿತ್ತುವ ಸಾಧ್ಯತೆಯಿದೆ. ಪ್ರೇಮಿಗಳಂತೆ ನಟಿಸುವುದರಿಂದ ಮಗುವಿಗೆ ಸ್ನೇಹ ಮತ್ತು ಪ್ರೇಮದ ನಡುವಿನ ವ್ಯತ್ಯಾಸ ತಿಳಿಯುವ ಮೊದಲೇ ಲೈಂಗಿಕಭಾವಗಳ ನೆರಳು ಸೋಕುತ್ತದೆ.

ವರನಟ ರಾಜ್‌ಕುಮಾರ್ ಅವರ ಸಿನಿಮಾಗಳಲ್ಲಿ ಧೂಮಪಾನ ಅಥವಾ ಮದ್ಯಪಾನದ ದೃಶ್ಯಗಳು ಇರುತ್ತಿರಲಿಲ್ಲ. ಅದಕ್ಕೆ ಕಾರಣ, 'ನನ್ನನ್ನು ಅನುಕರಿಸುವ ಲಕ್ಷಾಂತರ ಅಭಿಮಾನಿಗಳು ತಪ್ಪುದಾರಿ ಹಿಡಿಯಬಾರದು' ಎಂಬ ಅವರ ಕಳಕಳಿ. ಅವರು ತೆರೆಯ ಮೇಲೆ ಎಂದೂ ಕೆಟ್ಟ ಮಾದರಿ ಸೃಷ್ಟಿಸಲಿಲ್ಲ. ಸಿನಿಮಾ ಸಮಾಜವನ್ನು ತಿದ್ದುವ ಸಾಧನ ಎನ್ನುವುದು ಅವರ ನಂಬಿಕೆಯಾಗಿತ್ತು. ಆದರೆ, ಇಂದಿನ ರಿಯಾಲಿಟಿ ಶೋಗಳು ಟಿಆರ್‌ಪಿ ಗಳಿಸುವ ಭರಾಟೆಯಲ್ಲಿ ಸಮಾಜದ ಸ್ವಾಸ್ಥ್ಯವನ್ನು ಮರೆಯುತ್ತಿವೆ. ಬಾಲ ಪ್ರತಿಭೆಯನ್ನು ಗುರ್ತಿಸುವ ನೆಪದಲ್ಲಿ, ಮಕ್ಕಳ ಬಾಲ್ಯವನ್ನು ವಿಕಾರಗೊಳಿಸುವ ಹಕ್ಕು ಯಾರಿಗೂ ಇಲ್ಲ.

ಮಕ್ಕಳು ಮಣ್ಣಿನ ಮುದ್ದೆಯಿದ್ದಂತೆ, ನಾವು ನೀಡುವ ಆಕಾರವೇ ಅವರ ವ್ಯಕ್ತಿತ್ವವಾಗಿ ರೂಪುಗೊಳ್ಳುತ್ತದೆ. ಮಕ್ಕಳನ್ನು ನಟನೆಯ ಹೆಸರಿನಲ್ಲಿ 'ಅತಿ ಬುದ್ಧಿವಂತ'ರನ್ನಾಗಿ ಪ್ರದರ್ಶಿಸುವ ಧಾವಂತದಲ್ಲಿ, ನಾವು ಅವರಲ್ಲಿ ನೈತಿಕ ನಿರ್ವಾತ ಸೃಷ್ಟಿಸುತ್ತಿದ್ದೇವೆ. ಈ ಅಪಾಯದ ಬಗ್ಗೆ ಸಮಾಜ ಯೋಚಿಸಬೇಕು. ಮಕ್ಕಳು ಮಕ್ಕಳಾಗಿಯೇ ಯಾವುದಾದರೂ ಕಾರ್ಯಕ್ರಮದಲ್ಲಿ ಭಾಗಿಯಾದರೆ ತೊಂದರೆಯೇನಿಲ್ಲ. ಆದರೆ, ದೊಡ್ಡವರ ಪೋಷಾಕಿನಲ್ಲಿ ಅವರನ್ನು ತುರುಕುವ ಪ್ರಯತ್ನಗಳು ಸರಿಯಲ್ಲ.

ರಿಯಾಲಿಟಿ ಶೋಗಳಿಗೆ ಮಕ್ಕಳನ್ನು ಕರೆತರುವ ಪೋಷಕರದೂ ಜವಾಬ್ದಾರಿ ಇದೆ. ಅವರು, ಪ್ರಸಿದ್ಧಿಗಾಗಿ ಮಕ್ಕಳನ್ನು ಅಸಭ್ಯ ನಟನೆಗೆ ಪ್ರೇರೇಪಿಸಬಾರದು. ಮಕ್ಕಳ ಸಹಜ ಮುಗ್ಧತೆಯನ್ನು ಪೋಷಕರು ಹಾಗೂ ವಾಹಿನಿಗಳು ಗೌರವಿಸಬೇಕು. ಮುಗ್ಧತೆ ಮಕ್ಕಳ ಶಕ್ತಿ, ಅದನ್ನು ಮಾರುಕಟ್ಟೆ ವಸ್ತುವನ್ನಾಗಿ ಮಾಡದಿರೋಣ. ಹಣ ಹಾಗೂ ಜನಪ್ರಿಯತೆ ಎರಡೂ ಇರುವ ರಿಯಾಲಿಟಿ ಶೋಗಳ ಜನಪ್ರಿಯತೆಯ ಆಕರ್ಷಣೆಯಿಂದ ತಪ್ಪಿಸಿಕೊಳ್ಳುವುದು ಸುಲಭವಲ್ಲ. ಆದರೆ, ಮಕ್ಕಳ ಭವಿಷ್ಯದ ಮೇಲೆ ಪರಿಣಾಮ ಬೀರುವ ಶೋಗಳಿಂದ ಅಂತರ ಕಾಪಾಡಿಕೊಳ್ಳುವ ಬಗ್ಗೆ ಪೋಷಕರು ಯೋಚಿಸಬೇಕಾಗಿದೆ.

ಮಕ್ಕಳ ಮನೋವಿಕಾಸಕ್ಕಾಗಿ ಅವರನ್ನು ಜಾನಪದ ಚಟುವಟಿಕೆಗಳಲ್ಲಿ ತೊಡಗಿಸಬಹುದಾಗಿದೆ. ಸಿನಿಮಾದ ಅಬ್ಬರದ ಸಂಭಾಷಣೆಗಳಿಗಿಂತಲೂ ನಮ್ಮ ಮಣ್ಣಿನ ಆಟಗಳು ಮಕ್ಕಳಿಗೆ ಶಿಸ್ತು ಮತ್ತು ಸಾಮಾಜಿಕ ನಡವಳಿಕೆಯನ್ನು ಕಲಿಸುತ್ತವೆ. ಲಗೋರಿ, ಬುಗುರಿ, ಗಿಲ್ಲಿದಾಂಡು (ಚಿನ್ನಿ–ದಾಂಡು), ಕುಂಟೋಬಿಲ್ಲೆ, ಕಣ್ಣಾಮುಚ್ಚಾಲೆಯಂಥ ಆಟಗಳು ದೈಹಿಕ ಕಸರತ್ತಿನ ಜೊತೆಗೆ ಏಕಾಗ್ರತೆಯನ್ನು ಹೆಚ್ಚಿಸುತ್ತವೆ.

ಆಟ ಮಾತ್ರವಲ್ಲ, ನೈತಿಕ ಪಾಠವೂ ಮುಖ್ಯ. ಮಕ್ಕಳಿಗೆ ಕಥೆಗಳನ್ನು ಹೇಳುವುದರಿಂದ ಅವರಿಗೆ ರಂಜನೆ ದೊರೆಯುವುದರ ಜೊತೆಗೆ, ಪರೋಕ್ಷವಾಗಿ ನೈತಿಕತೆಯ ಪಾಠವೂ ಆಗುತ್ತದೆ. ಮಕ್ಕಳನ್ನು ಪ್ರಕೃತಿಯ ಸನ್ನಿಧಾನಕ್ಕೆ ಕರೆದೊಯ್ಯುವುದು, ಗಿಡಗಳನ್ನು ಬೆಳೆಸಲು ಉತ್ತೇಜಿಸುವುದು, ಹಕ್ಕಿಗಳನ್ನು ಗುರ್ತಿಸಲು ಕಲಿಸುವುದು, ಕಲೆಗಳೊಂದಿಗೆ ಒಡನಾಟಕ್ಕೆ ಹಚ್ಚುವುದು, ಇವೆಲ್ಲವೂ ಮಕ್ಕಳ ಮನೋವಿಕಾಸಕ್ಕೆ ಪೂರಕ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಣ ಕೊಟ್ಟು ಹುದ್ದೆ ಪಡೆಯಿರಿ...

ಕೆಪಿಎಸ್‌ಸಿ ಒಳಗಿನವರಿಂದಲೇ ನಿರಂತರ ಅಕ್ರಮ; ಸರ್ಕಾರದಿಂದ ಇಲ್ಲ ಕ್ರಮ

• ರಾಜೇಶ್ ರೈ ಚಟ್ಲ

'ಅಮೃತ ಮಹೋತ್ಸವ' ಸಂಭ್ರಮದಲ್ಲಿರುವ ಕೆಪಿಎಸ್‌ಸಿ, ಕಳೆದ ಐದು ದಶಕಗಳಲ್ಲಿ ಹೆಚ್ಚು ಸುದ್ದಿಯಾಗಿರುವುದು, ಸದ್ದು ಮಾಡಿರುವುದು ವಿವಾದಗಳಿಂದಲೇ. ಈ ಸಾಂವಿಧಾನಿಕ ಸಂಸ್ಥೆ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಕ್ರಮ ನೇಮಕಗಳ ಆರೋಪಗಳಿಂದ ಈಗಾಗಲೇ ತನ್ನ ಘನತೆಯನ್ನು ಮಣ್ಣುಪಾಲು ಮಾಡಿಕೊಂಡಿದೆ. ಇದರ ಚರಿತ್ರೆಯನ್ನು ಕೆದಕಿದರೆ ಒಳಗಿಂದ ಕಟ್ಟಿದ್ದೇ ಹೆಚ್ಚು ಕಾಣಿಸುತ್ತದೆ. ಜೈಲು ಸೇರಿದ ಅಧ್ಯಕ್ಷರು, ಅಮಾನತುಗೊಂಡ ಸದಸ್ಯರು, ಒಳಗಿನವರಿಂದಲೇ ಪ್ರಶ್ನೆಪತ್ರಿಕೆ ಸೋರಿಕೆ, ಹುದ್ದೆಗಳ ಬಿಕರಿ, ಕೋರ್ಟ್ ಮೆಟ್ಟಿಲೇರಿದ ವ್ಯಾಜ್ಯಗಳು... ಹೀಗೆ, ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಂತೂ ಸದಾ ಕಾಲ ಗೊಂದಲಗಳ ಗೂಡು; ವಿವಾದಗಳ ಬೀಡು. ಅದರಲ್ಲೂ 1998ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ 383 ಹುದ್ದೆಗಳ ನೇಮಕಾತಿಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರವೇ ನಡೆದಿದೆ. ನಂತರದ ಅವಧಿಗಳಲ್ಲಿ ಅಧ್ಯಕ್ಷ-ಸದಸ್ಯರಾಗಿ ಅಧಿಕಾರ ಅನುಭವಿಸಿದ ಬಹುತೇಕರು ತಿಂದು ತೇಗಿದ್ದೇ ಹೆಚ್ಚು.

ಕೆಎಟಿ, ಹೈಕೋರ್ಟ್, ಸುಪ್ರೀಂ ಕೋರ್ಟ್‌ನ ಅಡಕತ್ತರಿಯಲ್ಲಿ ಸಿಲುಕಿದ್ದ 1998ರ ಸಾಲಿನ ಅಂತಿಮ ಆಯ್ಕೆ ಪಟ್ಟಿ ಮೂರು ಬಾರಿ ಪರಿಷ್ಕರಣೆಯಾಗಿದೆ. ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಕಾರಣ, ಅನರ್ಹರನ್ನು ಕೈಬಿಟ್ಟು ಅರ್ಹರಿಗೆ ನೇಮಕಾತಿ ಆದೇಶ ನೀಡುವಂತೆ ಹೈಕೋರ್ಟ್ ತೀರ್ಪು ನೀಡಿತ್ತು. ಅದನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿತ್ತು. ಪಟ್ಟಿ ಪರಿಷ್ಕರಣೆಯಾದ ಸಂದರ್ಭಗಳಲ್ಲೆಲ್ಲ ಪಟ್ಟಿಯಲ್ಲಿದ್ದ ಅಭ್ಯರ್ಥಿಗಳ ಪೈಕಿ, ಕೆಲವರು ಹುದ್ದೆ ಕಳೆದುಕೊಂಡರೆ ಇನ್ನೂ ಕೆಲವರ ಸ್ಥಾನಪಲ್ಲಟ ಆಗಿದ್ದವು. ಹೊರಗುಳಿದವರು ಮತ್ತು ಹುದ್ದೆ ಬದಲಾದವರು ಕೋರ್ಟ್ ಮೆಟ್ಟಿಲೇರಿದ ಪರಿಣಾಮ ನೇಮಕಾತಿ ಪ್ರಕ್ರಿಯೆ ತಾರ್ಕಿಕ ಅಂತ್ಯ ಕಾಣಲೇ ಇಲ್ಲ. ಈ ಸಾಲಿನ ಕೆಲವು ಆಯ್ಕೆದಾರರು ಉಪವಿಭಾಗಾಧಿಕಾರಿಗಳಾಗಿ (ಎ.ಸಿ) ನೇಮಕಗೊಂಡು ಐಎಎಸ್ ಹುದ್ದೆಗೇರಿದ್ದವರು ನಿವೃತ್ತರಾದರೂ, ಪ್ರಕರಣ ಇನ್ನೂ ಹೈಕೋರ್ಟ್‌ನಲ್ಲಿದೆ.

ಮೊದಲ ಅಂತಿಮ ಆಯ್ಕೆ ಪಟ್ಟಿಯಲ್ಲಿ ಎ.ಸಿ ಹುದ್ದೆಗೆ ಆಯ್ಕೆಯಾಗಿದ್ದ ಒಂದಷ್ಟು ಅಭ್ಯರ್ಥಿಗಳು, ಹೈಕೋರ್ಟ್‌ನ ನಿರ್ದೇಶನದ ಅನ್ವಯ 2021ರ ಜ.30ರಂದು ಮೂರನೇ ಬಾರಿಗೆ ಕೆಪಿಎಸ್‌ಸಿ ಪರಿಷ್ಕರಿಸಿದ್ದ ಅಂತಿಮ ಆಯ್ಕೆ ಪಟ್ಟಿಯಲ್ಲಿ ಎ.ಸಿ ಹುದ್ದೆ ಕಳೆದುಕೊಂಡಿದ್ದರು. ಆಗ ಆಯ್ಕೆಯಾಗಿದ್ದವರಲ್ಲೊಬ್ಬ ಐಎಎಸ್ ಹುದ್ದೆಗೆ ಬಡ್ತಿ ಪಡೆದಿದ್ದು, ಈ ಪೈಕಿ ಇಬ್ಬರು ಈಗಾಗಲೇ ನಿವೃತ್ತರಾಗಿದ್ದಾರೆ. ಎ.ಸಿ ಹುದ್ದೆ ಕಳೆದುಕೊಂಡವರ ಪ್ರಕರಣ ಹೈಕೋರ್ಟ್‌ನಲ್ಲಿದ್ದು, ಕೋರ್ಟ್ ನೀಡಿರುವ 'ಯಥಾಸ್ಥಿತಿ' ಆದೇಶ ಐದು ವರ್ಷಗಳಿಂದ ಮುಂದುವರಿದಿದೆ.

1998ನೇ ಸಾಲಿನ ವಿವಾದಿತ ನೇಮಕಾತಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ್ದ ಹೈಕೋರ್ಟ್, 'ಕೆಪಿಎಸ್‌ಸಿಯನ್ನು ಮುಚ್ಚಲು ಇದು ಸಕಾಲ' ಎಂದು ಚಾಟಿ ಬೀಸಿತ್ತು. ಆದರೆ, ನ್ಯಾಯಾಲಯದ ಇಂತಹ ಕಟು ಮಾತುಗಳು ಕೂಡಾ ಆಯೋಗದ ಕಾರ್ಯವೈಖರಿಯನ್ನು ಸುಧಾರಿಸಿದಂತೆ ಕಾಣಿಸುತ್ತಿಲ್ಲ.

ಪ್ರಸ್ತಾವವನ್ನೇ ಕೈಬಿಟ್ಟ ಸರ್ಕಾರ

2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆ ಪ್ರಕ್ರಿಯೆ ವೇಳೆ ನಡೆದಿದೆ ಎನ್ನಲಾದ ಅಕ್ರಮಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿದ್ದ ಕೆಪಿಎಸ್‌ಸಿ ಅಂದಿನ ಅಧ್ಯಕ್ಷರಾಗಿದ್ದ ಗೋನಾಳ್ ಭೀಮಪ್ಪ, ಸದಸ್ಯರಾಗಿದ್ದ ಮಂಗಳಾ ಶ್ರೀಧರ್, ಎಸ್. ಆರ್.ರಂಗಮೂರ್ತಿ, ಬಿ.ಎಸ್.ಕೃಷ್ಣಪ್ರಸಾದ್, ಎಸ್. ಮಹದೇವ್, ಎಚ್.ವಿ.ಪಾರ್ಶ್ವನಾಥ್, ಎಸ್.ದಯಾಶಂಕರ್, ಎಚ್.ಡಿ.ಪಾಟೀಲ, ಎನ್.ರಾಮಕೃಷ್ಣ ಹಾಗೂ ಬಿ.ಪಿ.ಕನಿರಾಮ್ ಅವರ ವಿರುದ್ಧ ವಿಚಾರಣೆಯ ಪ್ರಸ್ತಾವವನ್ನೇ ಸಿದ್ದರಾಮಯ್ಯ ಸರ್ಕಾರ ಕೈಬಿಟ್ಟಿದೆ.

'ಕೆಪಿಎಸ್‌ಸಿ ಸಾಂವಿಧಾನಿಕ ಸಂಸ್ಥೆಯಾಗಿದ್ದು, ನಾವು ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಒಂದು ವೇಳೆ ಆರೋಪ ಹೊತ್ತವರು ಅಧಿಕಾರದಲ್ಲಿ ಇದ್ದಿದ್ದರೆ, ಅಲ್ಲಿಂದ ಇಳಿಸುವುದಕ್ಕೆ ಮಾತ್ರ ಸಾಧ್ಯವಿತ್ತು. ಈಗ ಯಾರೂ ಅಧಿಕಾರದಲ್ಲಿ ಇಲ್ಲ. ಆದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ' ಎನ್ನುವುದು ಪ್ರಸ್ತಾವ ಕೈಬಿಡಲು ಸರ್ಕಾರ ನೀಡಿರುವ ಕಾರಣ.

ಅಭ್ಯರ್ಥಿಗಳ ವ್ಯಕ್ತಿತ್ವವನ್ನು (ಸಂದರ್ಶನ) ಅಳೆಯುವುದಕ್ಕೆ ಕೆಪಿಎಸ್‌ಸಿ ಬಳಸುವ ಮಾನದಂಡಕ್ಕೆ ಯಾವ ಪ್ರಮಾಣವೂ ಇಲ್ಲ. ಖಚಿತ ವಿಧಾನವೂ ಇಲ್ಲ. ರೂಪುರೇಷೆಗಳು ಮೊದಲೇ ಇಲ್ಲ. ಈ ಸಾಲಿನ ಆಯ್ಕೆಯಲ್ಲಿ ಅಕ್ರಮ ನಡೆದಿದೆ ಎಂದು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ದೂರಿನ ಮೇಲೆ ತನಿಖೆ ನಡೆಸಿದ್ದ ಸಿಐಡಿ, ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಅನೇಕ ಅಭ್ಯರ್ಥಿಗಳು ಎ.ಸಿ ಹುದ್ದೆಗೆ ₹1.5 ಕೋಟಿ, ಡಿವೈಎಸ್‌ಪಿ ಹುದ್ದೆಗೆ ₹80 ಲಕ್ಷ, ತಹಶೀಲ್ದಾರ್ ಹುದ್ದೆಗೆ ₹60 ಲಕ್ಷ ಲಂಚ ನೀಡಿದ್ದರು ಎಂದು ತನ್ನ ವರದಿಯಲ್ಲಿ ಸಿಐಡಿ ಹೇಳಿತ್ತು. ಕರಡು ದೋಷಾರೋಪ ಪಟ್ಟಿಯನ್ನೂ ಸಿದ್ಧಪಡಿಸಿದ್ದ ಸಿಐಡಿ, ಆರೋಪಿಗಳನ್ನು ವಿವಿಧ ಕಲಂಗಳಡಿ ಪ್ರಾಸಿಕ್ಯೂಷನ್‌ಗೆ ಒಳಪಡಿಸಲು ರಾಷ್ಟ್ರಪತಿಯ ಅನುಮೋದನೆ ಪಡೆಯಲು ಸರ್ಕಾರಕ್ಕೆ ಪ್ರಸ್ತಾವವನ್ನೂ ಸಲ್ಲಿಸಿತ್ತು. ವಿಪರ್ಯಾಸವೆಂದರೆ, ಅಕ್ರಮದ ಕಾರಣಕ್ಕೆ ಹೈಕೋರ್ಟ್, ಸುಪ್ರೀಂ ಕೋರ್ಟ್‌ನಿಂದ ರದ್ದುಗೊಂಡಿದ್ದ ಈ ಸಾಲಿನ ಆಯ್ಕೆ ಪಟ್ಟಿಯನ್ನು 2022ರಲ್ಲಿ ಕಾಯ್ದೆ ರೂಪಿಸಿ 'ಸಕ್ರಮ'ಗೊಳಿಸಿರುವ ರಾಜ್ಯ ಸರ್ಕಾರ, ಸಿಐಡಿ ತನಿಖೆಯಲ್ಲಿ ಕಳಂಕಿತರೆಂದು ಗುರುತಿಸಿಕೊಂಡಿದ್ದ 46 ಅಭ್ಯರ್ಥಿಗಳನ್ನೂ ಸೇರಿಸಿ ಅಂತಿಮ ಆಯ್ಕೆ ಪಟ್ಟಿಯಲ್ಲಿದ್ದ ಎಲ್ಲರಿಗೂ ನೇಮಕಾತಿ ಆದೇಶ ನೀಡಿತ್ತು.

ಈ ಸಾಲಿನ ಹಗರಣದ ಆರೋಪಿ ಮಂಗಳಾ ಶ್ರೀಧರ್ 20 ಅಭ್ಯರ್ಥಿಗಳಿಗೆ 450ಕ್ಕೂ ಹೆಚ್ಚು ಕರೆಗಳನ್ನು ಮಾಡಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಸಿಐಡಿ ತನ್ನ ತನಿಖಾ ವರದಿಯಲ್ಲಿ ಉಲ್ಲೇಖಿಸಿತ್ತು. ಈ ಕಾರಣಕ್ಕೆ ಸರ್ಕಾರದ ಶಿಫಾರಸು ಆಧರಿಸಿ ಮಂಗಳಾ ಅವರನ್ನು ಹಿಂದಿನ ರಾಜ್ಯಪಾಲ ಎಚ್.ಆರ್.ಭಾರದ್ವಾಜ್ ಅವರು ಕೆಪಿಎಸ್‌ಸಿ ಸದಸ್ಯ ಸ್ಥಾನದಿಂದ ಅಮಾನತುಗೊಳಿಸಿದ್ದರು. ಸಾಂವಿಧಾನಿಕ ಹುದ್ದೆಯಲ್ಲಿರುವ ತನ್ನನ್ನು ಅಮಾನತುಗೊಳಿಸುವ ಅಧಿಕಾರ ರಾಜ್ಯಪಾಲರಿಗೆ ಇಲ್ಲ ಎಂದು ಮಂಗಳಾ ಹೈಕೋರ್ಟ್ ಮೊರೆಹೋಗಿದ್ದರು. ಏಕಸದಸ್ಯ ಪೀಠ ರಾಜ್ಯಪಾಲರ ಕ್ರಮ ಸರಿ ಎಂದು ಆದೇಶ ನೀಡಿತ್ತು. ಅದನ್ನು ಪ್ರಶ್ನಿಸಿ ಮಂಗಳಾ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್‌ನ ಅಂದಿನ ಮುಖ್ಯ ನ್ಯಾಯಮೂರ್ತಿ ಎಸ್.ಕೆ.ಮುಖರ್ಜಿ ನೇತೃತ್ವದ ವಿಭಾಗೀಯ ಪೀಠ, ರಾಜ್ಯಪಾಲರ ಆದೇಶವನ್ನು ರದ್ದುಪಡಿಸಿತ್ತು.

ರಾಷ್ಟ್ರಪತಿ ಮಾತ್ರ ಆದೇಶಿಸಬಹುದು: 'ಸಂವಿಧಾನದ 317(1) ವಿಧಿ ಅನ್ವಯ ಯಾವುದೇ ಲೋಕಸೇವಾ ಆಯೋಗದ ಸದಸ್ಯರನ್ನು ವಜಾಗೊಳಿಸಬೇಕಾದರೆ, ಅದಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿ ಮಾತ್ರ ಆದೇಶ ಹೊರಡಿಸಬೇಕು. ದುರ್ನಡತೆ ಮತ್ತಿತರ ಕಾರಣಗಳನ್ನು ಮುಂದಿಟ್ಟುಕೊಂಡು ರಾಷ್ಟ್ರಪತಿ ವಜಾ ಮಾಡಬಹುದು. ಆದರೆ, ಅದಕ್ಕೂ ಮೊದಲು ಸದಸ್ಯರ ಮೇಲಿನ ಆರೋಪದ ಬಗ್ಗೆ ತನಿಖೆ ನಡೆಸುವಂತೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗೆ ಉಲ್ಲೇಖ (ರೆಫರೆನ್ಸ್) ಕಳುಹಿಸಬೇಕು. ತನಿಖೆಯಲ್ಲಿ ಆರೋಪ ಸಾಬೀತಾದರೆ ಸದಸ್ಯರನ್ನು ವಜಾಗೊಳಿಸಬಹುದು' ಎಂದು ನ್ಯಾಯಪೀಠ ಹೇಳಿತ್ತು.

ನೌಕರರೇ 'ಸೋರಿಕೆ'ಧಾರರು

2021ರಲ್ಲಿ 1,112 ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆಗಳ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಕೆಪಿಎಸ್‌ಸಿಯ ಇಬ್ಬರು ನೌಕರರು ಸಿಕ್ಕಿಬಿದ್ದಿದ್ದರು. ಪ್ರಶ್ನೆ ಪತ್ರಿಕೆ ಕದ್ದು ಮಾರಾಟ ಮಾಡಿದ್ದ ಆ ಹಗರಣದಲ್ಲಿ ಅವರೇ ಸಂಚುಕೋರರು ಎನ್ನುವುದು ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಪೊಲೀಸರ ತನಿಖೆಯಲ್ಲಿ ಬಹಿರಂಗವಾಗಿತ್ತು. ಪರೀಕ್ಷಾ ನಿಯಂತ್ರಕರ ವಿಭಾಗದ ಶೀಘ್ರಲಿಪಿಗಾರ್ತಿ, ಅದೇ ಪರೀಕ್ಷೆ ಬರೆಯಲು ಮುಂದಾಗಿದ್ದ ಮತ್ತೊಂದು ವಿಭಾಗದ ದ್ವಿತೀಯ ದರ್ಜೆ ಸಹಾಯಕನ (ಎಸ್‌ಡಿಎ) ಆಮಿಷಕ್ಕೆ ಬಲಿಯಾಗಿ ಪರೀಕ್ಷೆಗೂ ಎರಡು ದಿನ ಮುನ್ನ ಪ್ರಶ್ನೆಪತ್ರಿಕೆಯ ದತ್ತಾಂಶವನ್ನು ಕದ್ದು ಪೆನ್‌ಡ್ರೈವ್‌ನಲ್ಲಿ ಸಂಗ್ರಹಿಸಿ ಕೊಟ್ಟಿದ್ದಳು. ಪೆನ್‌ಡ್ರೈವ್ ಕೈಗೆ ಸಿಗುತ್ತಿದ್ದಂತೆ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸಿದ್ದ ಆತ ತನ್ನ ಪರಿಚಯಸ್ಥರಿಗೆ ₹24 ಲಕ್ಷಕ್ಕೆ ಮಾರಿದ್ದ. ಹೀಗೆ ಮಾರಾಟ ಮಾಡಿದವನ ಮನೆ ಮೇಲೆ ಪರೀಕ್ಷೆಯ ಹಿಂದಿನ ದಿನ ದಾಳಿ ನಡೆಸಿದಾಗಲೇ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ ಬಯಲಿಗೆ ಬಂದಿತ್ತು. ಈ ಅಕ್ರಮದ ನಂತರ ಪರೀಕ್ಷೆಯನ್ನು ರದ್ದುಗೊಳಿಸಿ, ಮರುಪರೀಕ್ಷೆ ನಡೆಸಲಾಗಿತ್ತು. ಆದರೆ, ಒಂದೇ ತಿಂಗಳ ಒಳಗೆ ನಡೆದಿದ್ದ ಮರುಪರೀಕ್ಷೆಯ ಬಳಿಕ ಕೆಪಿಎಸ್‌ಸಿ ಪ್ರಕಟಿಸಿದ್ದ ಅರ್ಹತಾ ಪಟ್ಟಿಯಲ್ಲಿ ಒಂದೇ ಸಮುದಾಯಕ್ಕೆ ಸೇರಿದ 70ಕ್ಕೂ ಹೆಚ್ಚು ಅಭ್ಯರ್ಥಿಗಳ ಹೆಸರಿರುವ ಬಗ್ಗೆ ಕೆಲವು ಅಭ್ಯರ್ಥಿಗಳು ಅನುಮಾನ ವ್ಯಕ್ತಪಡಿಸಿ ದೂರು ನೀಡಿದ್ದರು.

ಆಪ್ತ ಸಹಾಯಕ, ಚಾಲಕರಿಂದಲೂ ದಂಧೆ

ಕೆಪಿಎಸ್‌ಸಿಯ ಪರೀಕ್ಷಾ ವಿಭಾಗದಲ್ಲಿ ಹಲವು ವರ್ಷಗಳಿಂದ ಸಿಬ್ಬಂದಿ ಬೇರೂರಿದ್ದಾರೆ. ಮಾಹಿತಿ ಸೋರಿಕೆಯಲ್ಲಿ ಈ ಸಿಬ್ಬಂದಿಯ ದೊಡ್ಡ ಪಾಲಿದೆ ಎನ್ನುವುದು ಸೂರ್ಯಸ್ಪಷ್ಟ. ಈ ಬಗ್ಗೆ ಹಲವು ದೂರುಗಳು ಬಂದಿದ್ದರೂ ಕೆಪಿಎಸ್‌ಸಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇತ್ತೀಚಿನ ಬೆಳವಣಿಗೆಯೆಂದರೆ, ಕೆಪಿಎಸ್‌ಸಿ ಸಿಬ್ಬಂದಿಯೇ ಪಶುಸಂಗೋಪನಾ ಇಲಾಖೆಯ ಪಶು ವೈದ್ಯಾಧಿಕಾರಿ ತಾತ್ಕಾಲಿಕ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಕರೆ ಮಾಡಿ ಹುದ್ದೆಯನ್ನು ಬಿಕರಿಗೆ ಇಟ್ಟಿರುವುದು. ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಸದಸ್ಯರ ಹೆಸರಿನಲ್ಲಿ ಅವರ ವಾಹನ ಚಾಲಕರೂ ದಂಧೆಗೆ ಇಳಿದಿದ್ದಾರೆ. ಸದ್ಯ ನೇಮಕಾತಿ ಪ್ರಕ್ರಿಯೆ ನಡೆಯುತ್ತಿರುವ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳನ್ನು ಸಂಸ್ಥೆಯ ಗುರುತಿನ ಚೀಟಿ ಬಳಸಿಕೊಂಡು ಆಪ್ತ ಸಹಾಯಕರು, ಚಾಲಕರು ಸಂಪರ್ಕಿಸಿ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ ಕೆಪಿಎಸ್‌ಸಿಗೆ ಪೋಷಕರೇ ದೂರು ನೀಡಿದ್ದಾರೆ.

ಆಯೋಗವೇ ಪತ್ತೆ ಹಚ್ಚಿದ ತನ್ನೊಳಗಿನ ಹುಳುಕು

2024ರಲ್ಲಿ ನಡೆದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ಹುದ್ದೆಗಳ ನೇಮಕಾತಿಯಲ್ಲಿ ಅಭ್ಯರ್ಥಿಗಳು ಒಎಂಆರ್ ಶೀಟ್ ತಿದ್ದಿ ಹುದ್ದೆ ಗಿಟ್ಟಿಸಿಕೊಂಡಿರುವ ಭಾರಿ ಅಕ್ರಮವನ್ನು ಕೆಪಿಎಸ್‌ಸಿ ಸದಸ್ಯರ ಆಂತರಿಕ ತನಿಖಾ ಸಮಿತಿಯೇ ಪತ್ತೆ ಹಚ್ಚಿತ್ತು. ಆದರೆ, ಆಯೋಗ ಮತ್ತು ಆಯೋಗದ ಒಳಗಿನ ಸಿಬ್ಬಂದಿಯ ಕೈವಾಡ ಇಲ್ಲದೆ ಇಂಥದ್ದೊಂದು ಅಕ್ರಮ ಸಾಧ್ಯ ಇಲ್ಲ ಎನ್ನುವುದನ್ನು ನಂತರದ ಬೆಳವಣಿಗೆಗಳು ಸಾಬೀತುಪಡಿಸಿದ್ದವು. ಎಇಇ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ವ್ಯಕ್ತಪಡಿಸಿ ಮತ್ತು ಅಕ್ರಮ ನಡೆದಿದೆ ಎಂದು ಅನುಮಾನ ವ್ಯಕ್ತಪಡಿಸಿ ಪಟ್ಟಿಯಲ್ಲಿಲ್ಲದ ಅಭ್ಯರ್ಥಿಯೊಬ್ಬರು ಸಲ್ಲಿಸಿದ್ದ ದೂರಿನಲ್ಲಿದ್ದ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿದ್ದ ಕೆಪಿಎಸ್‌ಸಿ, ತನಿಖೆಗೆ ಸಮಿತಿ ರಚಿಸಿತ್ತು. ಈ ಸಮಿತಿಯು ಆಯೋಗಕ್ಕೆ ಸಲ್ಲಿಸಿರುವ 500ಕ್ಕೂ ಹೆಚ್ಚು ಪುಟಗಳ ತನಿಖಾ ವರದಿಯಲ್ಲಿ ಪರೀಕ್ಷಾ ಅಕ್ರಮ ನಡೆದಿರುವುದನ್ನು ಸಾಕ್ಷ್ಯಗಳ ಸಹಿತ ಉಲ್ಲೇಖಿಸಿದೆ. ಈ ಪ್ರಕರಣದಲ್ಲಿ ಕಳಂಕಿತ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಪಡಿಸಲು ನಿರ್ಧರಿಸಿದ್ದ ಕೆಪಿಎಸ್‌ಸಿ, ಪೊಲೀಸ್ ದೂರು ದಾಖಲಿಸಲು ಮತ್ತು ಇಡೀ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸುವಂತೆ ರಾಜ್ಯ ಸರ್ಕಾರಕ್ಕೆ ಕೋರಿಕೆ ಸಲ್ಲಿಸಲು ಆಯೋಗದ ಸಭೆಯಲ್ಲಿ ನಿರ್ಧರಿಸಿತ್ತು. ಆದರೆ, ಪ್ರಕರಣ ಕೋರ್ಟ್‌ನಲ್ಲಿದ್ದು, ಕಳಂಕಿತರೂ ಸೇರಿದಂತೆ ಆಯ್ಕೆಯಾದ ಎಲ್ಲ ಅಭ್ಯರ್ಥಿಗಳು ಹುದ್ದೆಯಲ್ಲಿದ್ದಾರೆ. ಈ ಪ್ರಕರಣದಲ್ಲಿ ಹೈಕೋರ್ಟ್, 'ಎರಡು ದಶಕಗಳಿಂದ ಈಚೆಗೆ ನಡೆದಿರುವ ಕೆಪಿಎಸ್‌ಸಿಯಲ್ಲಿನ ನೇಮಕಾತಿ ಪ್ರಕ್ರಿಯೆಗಳು ಅದರ ಗೌರವವನ್ನು ಅಧೋಗತಿಗೆ ತಂದುನಿಲ್ಲಿಸಿವೆ' ಎಂದು ಸಿಡಿಮಿಡಿಗೊಂಡಿತ್ತು.

ಇದು 'ಚಮತ್ಕಾರ'

ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಎಂಜಿನಿಯರ್ ಸೇರಿದಂತೆ ವಿವಿಧ ಇಲಾಖೆಗಳ ಗ್ರೂಪ್ 'ಬಿ' ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ ಇತ್ತೀಚೆಗೆ ನಡೆಸಿದ ಪರೀಕ್ಷೆಯಲ್ಲಿ 600 ಅಂಕಗಳಿಗೆ 500ಕ್ಕೂ ಹೆಚ್ಚು ಅಂಕ ಪಡೆದು ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಗಳು ಸ್ಥಾನ ಪಡೆದಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಶೇ 50ರಿಂದ ಶೇ 70 ಅಂಕಗಳು ಗಳಿಸುವುದೇ ಕಷ್ಟ. ಅಂಥದ್ದರಲ್ಲಿ ಶೇ 80 ಅಂಕಕ್ಕೂ ಹೆಚ್ಚು ಪಡೆಯಲು ಹೇಗೆ ಸಾಧ್ಯ ಎನ್ನುವುದು ಚೋದ್ಯ. ಜೊತೆಗೆ, ಜಲಸಂಪನ್ಮೂಲ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್, ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪತ್ರಾಂಕಿತ ವ್ಯವಸ್ಥಾಪಕರು, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಹಾಯಕ ನಿರ್ದೇಶಕರ ಹುದ್ದೆಗಳಿಗೆ ನಡೆದ ಪರೀಕ್ಷೆಗಳಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಗಳಿಸಿದ ಅಂಕಗಳೂ ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿವೆ. ಅಭ್ಯರ್ಥಿಗಳ ಜೊತೆ ಕೆಪಿಎಸ್‌ಸಿ ಕೈಜೋಡಿಸಿದರಷ್ಟೆ ಈ ರೀತಿಯ ಅಕ್ರಮ ಸಾಧ್ಯ ಎನ್ನುವುದು ಪ್ರತಿಭಾವಂತ ವಿದ್ಯಾರ್ಥಿಗಳ ಆಕ್ರೋಶ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸುವ ವಿವಿಧ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಿ ಎರಡಂಕಿ, ಅದಕ್ಕೂ ಕಡಿಮೆ ಅಂಕ ಪಡೆದ ಅಭ್ಯರ್ಥಿಗಳು, ಕೆಪಿಎಸ್‌ಸಿ ನಡೆಸಿದ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಪಡೆದು ಆಯ್ಕೆಯಾಗುವ 'ಪವಾಡ' ಇತರ ಅಭ್ಯರ್ಥಿಗಳ ಶಂಕೆಗೆ ಕಾರಣವಾಗಿದೆ. ವಾಣಿಜ್ಯ ತೆರಿಗೆ ಪರಿವೀಕ್ಷಕ (ಸಿಟಿಐ) ಹುದ್ದೆಗಳ ಆಯ್ಕೆಗೆ 2024ರ ಜನವರಿಯಲ್ಲಿ ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿತ್ತು. ವಿವಿಧ ನಿಗಮಗಳಲ್ಲಿನ ವಿವಿಧ ವೃಂದಗಳ ಹುದ್ದೆಗಳಿಗೆ ಕೆಇಎ 2023ರ ಅಕ್ಟೋಬರ್‌ನಲ್ಲಿ ಪರೀಕ್ಷೆ ನಡೆಸಿತ್ತು. ಕೆಇಎ ಪರೀಕ್ಷೆಯಲ್ಲಿ 95 ಸಾವಿರಕ್ಕೂ ಕೆಳಗಿನ ಸ್ಥಾನ ಪಡೆದ ಅಭ್ಯರ್ಥಿಗಳು ಸಿಟಿಐ ಪರೀಕ್ಷೆಯಲ್ಲಿ ಉನ್ನತ ಅಂಕ ಪಡೆದು ಆಯ್ಕೆ ಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. ಕೇವಲ ಎರಡು ತಿಂಗಳ ಅಂತರದಲ್ಲಿ ಈ ಚಮತ್ಕಾರ ಹೇಗೆ ಸಾಧ್ಯ? 'ಈ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಹೀಗಾಗಿ, ಅಭ್ಯರ್ಥಿಗಳ ಒಎಂಆರ್ ಶೀಟ್ ಮತ್ತು ಅವರು ಪರೀಕ್ಷೆ ಬರೆದ ಕೇಂದ್ರದ ವಿಡಿಯೊ ತುಣುಕು ಪರಿಶೀಲಿಸಬೇಕು' ಎನ್ನುವುದು ಅಭ್ಯರ್ಥಿಗಳ ಆಗ್ರಹ.

ರಾಷ್ಟ್ರಪತಿ ಅಂಗಳದಲ್ಲಿ ಮಸೂದೆ

ಸಂಪೂರ್ಣ ಹದಗೆಟ್ಟಿರುವ ಕೆಪಿಎಸ್‌ಸಿಗೆ ತಕ್ಷಣದ 'ಚಿಕಿತ್ಸೆ' ನೀಡಲು ರಾಜ್ಯ ಸರ್ಕಾರ 'ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ಕಾಯ್ದೆ–1959ಕ್ಕೆ ತಿದ್ದುಪಡಿ ತರಲು ವರ್ಷದ ಹಿಂದೆಯೇ ಮಸೂದೆಯನ್ನು ರೂಪಿಸಿತ್ತು. ಈ ತಿದ್ದುಪಡಿ ಮಸೂದೆಯಲ್ಲಿ ಕಾಯ್ದೆಯ ಸೆಕ್ಷನ್ 18 ಅನ್ನು ಕೈಬಿಡುವುದೂ ಸೇರಿದಂತೆ ಕೆಲವು ಮಹತ್ವದ ಪ್ರಸ್ತಾವಗಳಿದ್ದವು. ಸೆಕ್ಷನ್ 18 ಅನ್ನು ಕೈಬಿಟ್ಟರೆ, ಕೆಪಿಎಸ್‌ಸಿ ಜೊತೆ ಸಮಾಲೋಚನೆ ನಡೆಸದೆ ಸರ್ಕಾರ ನಿಯಮಗಳನ್ನು ರೂಪಿಸಲು ಅಧಿಕಾರ ಸಿಗುತ್ತಿತ್ತು. ಆದರೆ, ಪ್ರಸ್ತಾವಿತ ಈ ತಿದ್ದುಪಡಿಯು ಸಂವಿಧಾನದ 320ನೇ ವಿಧಿಗೆ ವ್ಯತಿರಿಕ್ತವಾಗಿದ್ದು, ಆಯೋಗದ ಸ್ವಾಯತ್ತೆಯನ್ನು ಮೊಟಕುಗೊಳಿಸಲಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ರಾಷ್ಟ್ರಪತಿ ಅಂಕಿತಕ್ಕೆ ಕಾದಿರಿಸಿದ್ದರು. ಈ ತಿದ್ದುಪಡಿ ಮಸೂದೆ ಹಲವು ತಿಂಗಳುಗಳಿಂದ ರಾಷ್ಟ್ರಪತಿ ಅಂಗಳದಲ್ಲಿದೆ. ಕೆಪಿಎಸ್‌ಸಿಯ ಒಟ್ಟು ಸದಸ್ಯ ಬಲವನ್ನು ತಗ್ಗಿಸುವುದು, ಆಯೋಗದ ಸದಸ್ಯರ ನೇರ ನೇಮಕದ ಹಾಲಿ ವ್ಯವಸ್ಥೆ ಬದಲಿಗೆ ಆಯ್ಕೆಗೆ ಶೋಧನಾ ಸಮಿತಿ ರಚಿಸುವುದು, ಆಯೋಗದ ಕಾರ್ಯದರ್ಶಿ ಹಾಗೂ ಪರೀಕ್ಷಾ ನಿಯಂತ್ರಕರಿಗೆ ಹೊಣೆಗಾರಿಕೆ ನಿಗದಿ ಸೇರಿ ಕೆಲವು ಪ್ರಮುಖ ಅಂಶಗಳು ಈ ತಿದ್ದುಪಡಿ ಮಸೂದೆಯಲ್ಲಿವೆ.

ಪ್ರತಿಕ್ರಿಯೆಗಳು

'ಗೋಪ್ಯ ಶಾಖೆಯ ನೌಕರರ ವರ್ಗಾವಣೆ ಅಗತ್ಯ'

ಕೆಪಿಎಸ್‌ಸಿ ಅಧಿಕಾರಿ ವರ್ಗದಿಂದ ಸಂಭವಿಸುವ ಎಡವಟ್ಟುಗಳಿಂದ, ಮರುಪರೀಕ್ಷೆಗಳಿಂದ ಉಂಟಾಗುವ ಮಾನಸಿಕ ಒತ್ತಡಗಳು ಅಭ್ಯರ್ಥಿಗಳನ್ನು ಮತ್ತಷ್ಟು ಕಠಿಣ ಪರಿಸ್ಥಿತಿಗೆ ದೂಡುತ್ತಿವೆ. ಹೀಗಾಗಿ ಉತ್ತಮ ಗುಣಮಟ್ಟದ ಹಾಗೂ ಸ್ಪಷ್ಟವಾಗಿ ತರ್ಜುಮೆ ಮಾಡಿದಂತಹ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವ ಕ್ಷಮತೆ ಇರುವಂತಹ ಅಧಿಕಾರಿಗಳನ್ನು ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕ ಸ್ಥಾನಕ್ಕೆ ನಿಯೋಜಿಸಲು ಸರ್ಕಾರ ಮುತುವರ್ಜಿ ವಹಿಸಬೇಕಾಗಿದೆ. ಕೆಪಿಎಸ್‌ಸಿಯ ಗೋಪ್ಯ ವಿಭಾಗದಲ್ಲಿ ಕೆಲಸ ನಿರ್ವಹಿಸುವ ನೌಕರರೇ ಪ್ರಶ್ನೆಪತ್ರಿಕೆ ಸೋರಿಕೆ ಜಾಲದ ಸಂಚುಕೋರರು ಎಂಬುದು ರಹಸ್ಯ ಸಂಗತಿ ಏನಲ್ಲ. ಒಎಂಆರ್ ಶೀಟ್ ತಿದ್ದುಪಡಿಗಳಂತಹ ಕಾರ್ಯಗಳಲ್ಲೂ ಈ ನೌಕರರ ಕೈವಾಡವನ್ನು ಅಲ್ಲಗಳೆಯಲಾಗದು. ಈ ಜಾಲವನ್ನು ಸಂಪೂರ್ಣವಾಗಿ ಭೇದಿಸಿ, ಯುವಜನರಲ್ಲಿ ಪಾರದರ್ಶಕ ನೇಮಕಾತಿಯ ಭರವಸೆ ಮೂಡಿಸಬೇಕಾದರೆ ಹಲವು ವರ್ಷಗಳಿಂದ ಲೋಕಸೇವಾ ಆಯೋಗದಲ್ಲೇ ನೆಲೆಯೂರಿರುವ ನೌಕರರ ವರ್ಗಾವಣೆ ಮತ್ತು ಅವರ ಒಟ್ಟು ಆಸ್ತಿ ವಿವರಗಳ ಪರಿಶೀಲನೆ ಅತ್ಯಗತ್ಯ. ಪ್ರತಿ ಎರಡು ವರ್ಷಗಳಿಗೊಮ್ಮೆ ಗೋಪ್ಯ ಶಾಖೆಯ ನೌಕರರನ್ನು ವರ್ಗಾವಣೆ ಮಾಡಲೇಬೇಕು ಎಂಬುದು ಹೋಟಾ ಸಮಿತಿಯ ಪ್ರಮುಖ ಶಿಫಾರಸುಗಳಲ್ಲೊಂದು. ಹಾಗಿದ್ದರೂ, ಸರ್ಕಾರ ಈ ಬಗ್ಗೆ ನಿರ್ಲಕ್ಷ್ಯ ತೋರಿಸುತ್ತಿರುವುದು ಸರ್ಕಾರದ ಮೇಲೆಯೇ ಅನುಮಾನ ಮೂಡಲು ಕಾರಣವಾಗುತ್ತಿದೆ. ಧರೆಯೇ ಹತ್ತಿ ಉರಿದೊಡೆ ನಿಲಬಹುದೇ ಎಂಬ ಬಸವವಾಣಿಯನ್ನು ಇದು ನೆನಪಿಸುತ್ತದೆ.

ಹರಿಣಿ, ವಿಜಯನಗರ ಜಿಲ್ಲೆ

ಇದು 'ಉದ್ಯೋಗ ಸೌಧ'ವಲ್ಲ 'ನಿರುದ್ಯೋಗ ಸೌಧ'

ಕೆಪಿಎಸ್‌ಸಿ ಪ್ರತಿ ಬಾರಿ ನಡೆಸುವ ಕೆಎಎಸ್ ಹಾಗೂ ವಿವಿಧ ಹುದ್ದೆಗಳ ನೇಮಕಾತಿ ವಿಚಾರದಲ್ಲಿ ಅಕ್ರಮದ ಆರೋಪ ಬಂದಾಗ ವಿರೋಧ ಪಕ್ಷ ಹಾಗೂ ಆಡಳಿತ ಪಕ್ಷದ ಎಲ್ಲ ನಾಯಕರು ಸದನದಲ್ಲಿ ಧ್ವನಿ ಎತ್ತುತ್ತಾರೆ. ಇದಕ್ಕೆ ಪ್ರತಿಯಾಗಿ ಸರ್ಕಾರ ದೊಡ್ಡ ಮಟ್ಟದಲ್ಲಿ ಬದಲಾವಣೆ ತಂದು ಆಯೋಗವನ್ನು ಸುಧಾರಣೆ ಮಾಡುತ್ತೇವೆಂದು ಹೇಳಿಕೆ ನೀಡಿ ಕೈ ತೊಳೆದುಕೊಂಡು ಬಿಡುತ್ತದೆ. ಕಳೆದ ವರ್ಷದ ಬಜೆಟ್ ಅಧಿವೇಶನದಲ್ಲಿ ಎರಡೂ ಸದನಗಳಲ್ಲಿ 384 ಕೆಎಎಸ್ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿನ ಲೋಪದೋಷದ ಬಗ್ಗೆ ಸುದೀರ್ಘ ಚರ್ಚೆ ಆಯಿತು. ಅದಕ್ಕೆ ಸರ್ಕಾರ ಹೇಳಿಕೆ ನೀಡಿ ವರ್ಷ ಕಳೆದರೂ ಇದುವರೆಗೂ ಯಾವುದೇ ಬದಲಾವಣೆ ಆಗದಿರುವುದು ದುರಂತ. ಯಾವುದೇ ಸರ್ಕಾರ ಬಂದರೂ ಕೆಪಿಎಸ್‌ಸಿಯ ಸುಧಾರಣೆ ಮರೀಚಿಕೆಯಾಗಿದೆ. ಆದ್ದರಿಂದ, ರಾಜ್ಯದ ಲಕ್ಷಾಂತರ ಅಭ್ಯರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಇನ್ನು ಮುಂದೆ ರಾಜ್ಯ ಸರ್ಕಾರದ ಎಲ್ಲ ಗ್ರೂಪ್ 'ಬಿ' ಮತ್ತು ಗ್ರೂಪ್ 'ಸಿ' ಹುದ್ದೆಗಳ ನೇಮಕಾತಿ ಜವಾಬ್ದಾರಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ನೀಡಿ (ಕೆಇಎ) ಹಾಗೂ ಕೆಎಎಸ್ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಹೊಣೆಯನ್ನು ಕೇರಳ ಲೋಕ ಸೇವಾ ಆಯೋಗದಂಥ ಉತ್ತಮವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಇರುವ ಆಯೋಗಕ್ಕೆ ಅಥವಾ ಕೇಂದ್ರ ಲೋಕ ಸೇವಾ ಆಯೋಗಕ್ಕೆ ನೀಡಿ 'ಉದ್ಯೋಗ ಸೌಧ'ವಾದ ಕೆಪಿಎಸ್‌ಸಿಯನ್ನು 'ನಿರುದ್ಯೋಗ' ಸೌಧವನ್ನಾಗಿ ಮಾಡಿ ಶಾಶ್ವತವಾಗಿ ಮುಚ್ಚುವುದು ಒಳ್ಳೆಯದು.

ಎಚ್.ರಾಧಾ, ಬೆಂಗಳೂರು, ಕೆಎಎಸ್ ಅಭ್ಯರ್ಥಿ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

❌ **ಪಶ್ಚಿಮ ಬಂಗಾಳದಲ್ಲಿ** ಟಿಎಂಸಿ ಪಕ್ಷದ ಮುಸ್ಲಿಂ ಮುಖಂಡರೊಬ್ಬರ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಪ್ರತಿಪಾದಿಸುತ್ತಾ ವಿಡಿಯೊ ತುಣುಕೊಂದನ್ನು 'ಎಕ್ಸ್'ನಲ್ಲಿ ಹಂಚಿಕೊಳ್ಳಲಾಗುತ್ತಿದೆ. ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣಾ ಪ್ರಕ್ರಿಯೆ ಈಗ ನಡೆಯುತ್ತಿರುವುದರಿಂದ ಈ ವಿಡಿಯೊ ಗಮನ ಸೆಳೆದಿದೆ. ಆದರೆ, ಇದು ಸುಳ್ಳು ಸುದ್ದಿ.

✅ **ವಿಡಿಯೊದ** ಕೀಫ್ರೇಮ್ ಒಂದನ್ನು ರಿವರ್ಸ್ ಸರ್ಚ್ ವಿಧಾನದಲ್ಲಿ ಗೂಗಲ್‌ನಲ್ಲಿ ಹಾಕಿ ಹುಡುಕಿದಾಗ, ಇದೇ ವಿಡಿಯೊ ತುಣುಕು 2022ರ ಜೂನ್‌ನಿಂದಲೂ ಆನ್‌ಲೈನ್ ವೇದಿಕೆಯಲ್ಲಿರುವುದು ಕಂಡು ಬಂತು. 2022ರ ಜೂನ್‌ನಲ್ಲಿ ಈ ವಿಡಿಯೊವನ್ನು ಆರ್ಗನೈಸರ್ ವೀಕ್ಲಿಯ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಲಾಗಿತ್ತು. 'ಬನಾರಸ್‌ನಲ್ಲಿ ಅಂಗಡಿಗಳನ್ನು ಮುಚ್ಚಲು ಯತ್ನಿಸಿದ ಉದ್ರಿಕ್ತರನ್ನು ಸ್ಥಳೀಯರು ಥಳಿಸಿದರು' ಎಂದು ಆ ಪೋಸ್ಟ್‌ನಲ್ಲಿ ಹೇಳಲಾಗಿತ್ತು. ಅಗ್ನಿಪಥ್, ಅಗ್ನಿವೀರ್ ಎಂಬ ಹ್ಯಾಷ್‌ಟ್ಯಾಗ್‌ಗಳನ್ನೂ ಪೋಸ್ಟ್ ಹೊಂದಿತ್ತು. ವಿಡಿಯೊವನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿದಾಗ, ವಿಡಿಯೊದಲ್ಲಿ ಕಂಡ ಕಟ್ಟಡವೊಂದರಲ್ಲಿ ಹಿಂದಿಯಲ್ಲಿ ಬರೆದ ಫಲಕ ಇತ್ತು. ಅದನ್ನು ಇಂಗ್ಲಿಷ್‌ಗೆ ಭಾಷಾಂತರ ಮಾಡಿದಾಗ, 'ಟೆಲಿಫೋನ್ ಕಾಲೊನಿ, ನಗರ್ ನಿಗಮ್ ವಾರಾಣಸಿ' ಎಂದು ತಿಳಿಯಿತು. ಈಗ ಪೋಸ್ಟ್ ಮಾಡಲಾಗಿರುವ ವಿಡಿಯೊದಲ್ಲೂ ಇದೇ ದೃಶ್ಯಾವಳಿ ಇದೆ. ಇದೇನು ಘಟನೆ ಎನ್ನುವುದನ್ನು ಸ್ವತಂತ್ರವಾಗಿ ದೃಢಪಡಿಸಲು ಆಗದಿದ್ದರೂ, ವಿಡಿಯೊ ಪಶ್ಚಿಮ ಬಂಗಾಳಕ್ಕೆ ಸಂಬಂಧಪಟ್ಟಿದ್ದಲ್ಲ, ಉತ್ತರ ಪ್ರದೇಶದಲ್ಲಿ ನಾಲ್ಕು ವರ್ಷಗಳ ಹಿಂದೆ ನಡೆದ ಘಟನೆಯ ವಿಡಿಯೊ ಎಂಬುದು ಸ್ಪಷ್ಟ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಕುರುಡು ಆಚರಣೆಗಳಿಗಿಂತ ಕಾಯಕ ಮೇಲು



ರೇಣುಕಾ ನಿಡಗುಂದಿ

ಗುರು ನಾನಕರು ಒಮ್ಮೆ ಗಂಗಾ ನದಿಯ ತೀರದಲ್ಲಿ ಒಬ್ಬ ಬ್ರಾಹ್ಮಣನನ್ನು ಭೇಟಿಯಾದರು. ಆ ಬ್ರಾಹ್ಮಣನು ನದಿಯಲ್ಲಿ ಸ್ನಾನ ಮಾಡಿ, ತನ್ನ ಪೂರ್ವಜರಿಗೆ ಶಾಂತಿಯನ್ನು ಕೋರಿ ಸೂರ್ಯನಿಗೆ ಅರ್ಘ್ಯ ಅರ್ಪಿಸುತ್ತಿದ್ದನು. ಗುರು ನಾನಕರು ಅವನ ಬಳಿಗೆ ಹೋಗಿ, ತಾವೂ ಸ್ನಾನ ಮಾಡಿ, ಸೂರ್ಯನ ವಿರುದ್ಧ ದಿಕ್ಕಿನಲ್ಲಿ ನೀರನ್ನು ಎಸೆಯಲಾರಂಭಿಸಿದರು. ಬ್ರಾಹ್ಮಣನು ಆಶ್ಚರ್ಯಗೊಂಡು, 'ನೀವು ಏಕೆ ತಪ್ಪು ದಿಕ್ಕಿನಲ್ಲಿ ನೀರನ್ನು ಎಸೆಯುತ್ತಿರುವಿರಿ?' ಎಂದು ಕೇಳಿದನು. ಗುರು ನಾನಕರು 'ನಾನು ನನ್ನ ಕ್ಷೇತ್ರಕ್ಕೆ ನೀರನ್ನು ಕೊಡುತ್ತಿದ್ದೇನೆ, ಅದು ಪಂಜಾಬ್‌ನಲ್ಲಿದೆ' ಎನ್ನುತ್ತಾರೆ. ಬ್ರಾಹ್ಮಣನು ನಕ್ಕು, 'ಅದು ಹೇಗೆ ಸಾಧ್ಯ' ಎಂದು ಪರಿಹಾಸ್ಯ ಮಾಡುತ್ತಾನೆ. ಗುರು ನಾನಕರು, 'ನೀವು ಸೂರ್ಯನಿಗೆ ಅರ್ಪಿಸುವಾಗ ಅದು ಸಾವಿರಾರು ಮೈಲಿಗಳ ದೂರದ ನಿಮ್ಮ ಪಿತೃಗಳಿಗೆ ತಲುಪುತ್ತದೆಂದು ಭಾವಿಸುವಿರಿ. ಹಾಗಿರುವಾಗ, ನನ್ನ ಕ್ಷೇತ್ರಕ್ಕೆ ಏಕೆ ತಲುಪಲಾರದು?' ಎನ್ನುತ್ತಾರೆ. ಈ ಮಾತಿನಿಂದ ಬ್ರಾಹ್ಮಣನಿಗೆ ತನ್ನ ಆಚರಣೆಯ ಅರ್ಥವಿಲ್ಲದಿರುವಿಕೆ ತಿಳಿಯಿತು. ಅಂದಿನಿಂದ ಅವನು ಗುರು ನಾನಕರ ಶಿಷ್ಯನಾಗುತ್ತಾನೆ.

ನಾಮ್ ಜಪೋ (ದೇವರನ್ನು ಸ್ಮರಿಸು), ಕಿರತ್ ಕರೋ (ಪ್ರಾಮಾಣಿಕವಾಗಿ ಪರಿಶ್ರಮದಿಂದ ದುಡಿದು ಜೀವನೋಪಾಯ ಮಾಡಬೇಕು), ವಂಡ್ ಛಕೋ (ತನ್ನ ಆದಾಯವನ್ನು ಅಗತ್ಯವಿರುವವರೊಂದಿಗೆ ಹಂಚಿಕೊಳ್ಳಬೇಕು)– ಇವು ಗುರು ನಾನಕರು ಉಪದೇಶಿಸಿದ ಮೂರು ಮಂತ್ರಗಳು.

ಯಾವುದೇ ದೇವಸ್ಥಾನವನ್ನು ನೋಡಿ ತೀರ್ಥಸ್ಥಾನಗಳಿಗೆ ಹೋಗಿ ಕಾಲಿಡಲೂ ಆಗದ ಜನಜಂಗುಳಿ ನೆರೆದಿರುತ್ತದೆ. ಅದಕ್ಕಿಂತ ಹೆಚ್ಚಾಗಿ ಭಕ್ತಿಯ ಹೆಸರಲ್ಲಿ, ದೇವರ ದರ್ಶನದ ಹೆಸರಿನಲ್ಲಿ ವ್ಯಾಪಾರ ನಡೆಸಿರುವವರೇ ಸಿಗುತ್ತಾರೆ. 'ನಿಮಗೆ ವಿಐಪಿ ದರ್ಶನ ಮಾಡಿಸ್ತೇನೆ. ಸರತಿಗಾಗಿ ಕಾದು ನಿಲ್ಲಬೇಕಾಗಿಲ್ಲ. ನನ್ನೊಂದಿಗೆ ಬನ್ನಿ' ಎನ್ನುವ ದಲ್ಲಾಳಿಗಳ ದಂಡೇ ನಿಂತಿರುತ್ತದೆ. ಅದಕ್ಕಾಗಿ ಐದುನೂರು ರೂಪಾಯಿಯಿಂದ ಸಾವಿರ ರೂಪಾಯಿವರೆಗಿನ ಹೆಚ್ಚಿನ ಶುಲ್ಕ ಬೇರೆ ತೆರಬೇಕು. ದೇವರನ್ನು ಹುಡುಕಿಕೊಂಡು ಹೋದವರಿಗೆ ದೇವರು ಸಿಗುತ್ತಾನೆಯೇ? ಸರಿಯಾಗಿ ದರ್ಶನವೂ ಆಗುವುದಿಲ್ಲ.

ಇನ್ನು ಜ್ಯೋತಿಷ್ಯ, ಮಂತ್ರ ತಂತ್ರವೆಂದು ಕುರುಡು ನಂಬಿಕೆ, ಮೋಸಕ್ಕೆ ಬಲಿಯಾಗಿ ಕೂಡಿಟ್ಟಿದ್ದ ಅಲ್ಪಸ್ವಲ್ಪ ಸಂಪತ್ತನ್ನೂ ಕಳಕೊಳ್ಳುವವರಿದ್ದಾರೆ. ಜೀವಕ್ಕೆ ಹಾನಿಮಾಡಿಕೊಳ್ಳುವವರಿದ್ದಾರೆ. 'ಆ ಪೂಜೆ ಮಾಡಿಸಿದರೆ, ಈ ಹೋಮ ಮಾಡಿಸಿದರೆ ನಿಮ್ಮ ಎಲ್ಲ ಕಾರ್ಯಗಳು ಸಿದ್ಧಿಸುತ್ತವೆ' ಎನ್ನುವ ಕಪಟ ಜ್ಯೋತಿಷಿಗಳಿಗೆ ಅದು ಜೀವನೋಪಾಯದ ಮಾರ್ಗವಷ್ಟೇ. 'ಕುಳಿತು ಉಣ್ಣುವವನಿಗೆ ಕುಡಿಕೆ ಹೊನ್ನೂ ಸಾಲದು' ಎಂಬ ಗಾದೆಯೇ ಇದೆ. ಎಲ್ಲವೂ ನಮ್ಮ ಪ್ರಾರಬ್ಧ, ಗ್ರಹಗತಿಗಳ ಪ್ರಕಾರ ಲಭಿಸುವಂತಿದ್ದರೆ ಮನುಷ್ಯ ಇಷ್ಟು ಕಷ್ಟಪಡುತ್ತಿದ್ದನೇ? ನಾವು ಬದುಕನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ದೋಷವಿದೆ. ನಮ್ಮ ಆಲೋಚನಾಕ್ರಮದಲ್ಲಿ ದೋಷವಿದೆ.

ಅನೇಕ ಖ್ಯಾತ ವಿಜ್ಞಾನಿಗಳು ಬಾಲ್ಯದಲ್ಲಿ ಸಾಧಾರಣ ವಿದ್ಯಾರ್ಥಿಗಳಾಗಿದ್ದರು. ಅಲ್ಬರ್ಟ್ ಐನ್‌ಸ್ಟೀನ್ ಬಾಲ್ಯದಲ್ಲಿ ಮಾತು ತಡವಾಗಿ ಕಲಿತನಂತೆ. ಶಿಕ್ಷಕರು ಇವನಿಂದ ಏನೂ ಆಗುವುದಿಲ್ಲವೆಂದು ತೀರ್ಪು ಕೊಟ್ಟಿದ್ದರು. ವಿದ್ಯುತ್ ದೀಪವನ್ನು ಕಂಡುಹಿಡಿದ ಥಾಮಸ್ ಆಲ್ವಾ ಎಡಿಸನ್ ಮೂರು ತಿಂಗಳಷ್ಟೆ ಶಾಲೆಗೆ ಹೋಗಿದ್ದನಂತೆ. ಹೀಗೆ ಯಾವ ವೈಫಲ್ಯವೂ ಅಂತಿಮವಲ್ಲ. ಅದು ಯಶಸ್ಸಿನ ಮೆಟ್ಟಿಲಾಗಿರುತ್ತದೆ. ಮೇಲಿನ ಕತೆಯಲ್ಲಿ ಗುರು ನಾನಕರು ಕುರುಡು ಆಚರಣೆಗಳಿಗಿಂತ ಶುದ್ಧ ಭಕ್ತಿ, ದುಡಿದು ಉಣ್ಣುವ, ಇದ್ದುದನ್ನು ಹಂಚಿಕೊಂಡು ಬಾಳುವ ಮಹತ್ವವನ್ನು ಕಲಿಸಿದ್ದಾರೆ.

ಗುಂಡಣ್ಣ



ಪದಬಂಧ 6369

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೇಸಾಯವನ್ನು ಹೀಗೂ ಹೇಳುವರು (4)
3.ಹಣವಿರುವ ಅಗಲವಾದ ತಟ್ಟೆ (4)
5.ಮೈಸೂರಿನಲ್ಲಿ ಅರಳಿದ ಘಮಘಮಿಸುವ ಹೂ (3)
6.ನನಗದು ಬೇಕು ಎಂದು ತೆಗೆದುಕೊಂಡ ಹಣ (3)
8.ಮಲಗುವಾಗ ಕಾಣಿಸಿದ ಸೇವಕ (3)
9.ಹೊಕ್ಕಳು ಇಲ್ಲಿ ಕಾಣುತ್ತಿದೆ (2)
10.ಹಸುವಿನ ಮರಿಯಿದು (2)
11.ಮನ್ನಣೆಯನ್ನು ಹೀಗೆನ್ನಿ (3)
12.ಮೂಲೆ ಮನೆಯ ಮಾದರಿ ಇಲ್ಲಿದೆ (3)
14.ನಸುಕಿನಲ್ಲಿ ಬಿದ್ದ ಸ್ವಪ್ನ (3)
16.ಕಲೆಯಿಂದ ಕೂಡಿದ ಆಹ್ವಾನ ಪತ್ರ (4)
17.ವಿಧಿಯುಕ್ತ ಶಾಸ್ತ್ರಗಳನ್ನು ಮಾಡಿಸುವವ ತಿರುಗಿದ್ದಾನಲ್ಲಾ? (4)

ಮೇಲಿಂದ ಕೆಳಕ್ಕೆ
1.ವ್ಯವಸಾಯಗಾರನು ತೋಡಿಕೊಂಡಿರುವ ದುಃಖ (3)
2.ಮೃತ್ಯು ದೇವತೆಯಿದು (2)
3.ಹಲಗೆ ಸಲುವಾಗಿ ಮೂಡಿದ ದ್ವೇಷ (2)
4.ತಿರುಗಿದಾಗ ಕಾಣಿಸಿದ ಸಾವು (3)
7.ಕೆಟ್ಟ ಅಹಂಕಾರವಿದು (5)
8.ಗುಣವನ್ನು ಹೊಗಳುವುದು (5)
11.ಸಭೆಯಲ್ಲಿ ಕುಳಿತಿರುವವ (3)
13.ಒನಪು ತೋರಿದಾಗ ಬಂದ ಸ್ಮರಣೆ (3)
14.ಲಲಿತ ವಿದ್ಯೆಯಿದು (2)
15.ಹರಸುತಲಿದ್ದಾಗ ಬಂದಿರುವ ಮಗ (2)



6368ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಸ್ವಾರ 3.ಪರಿತ್ಯಾಗ 5.ಮಸಣ 7.ಪತಿ 8.ಕತೆ 11.ಮಸ 13.ಶಂಕೆ 14.ರಕುತ 16.ರಿಕ್ತಹಸ್ತ 17.ತಿರಸ್ಕಾರ

ಮೇಲಿಂದ ಕೆಳಕ್ಕೆ:
1.ಅತಿರೇಕ 2.ರಮ 3.ಪಣ 4.ಗರತಿ 6.ಸಲ್ಲಾಪ 7.ಪರಂಧಾಮ 9.ತೆಗಳಿಕೆ 10.ಚಬುಕು 12.ಸಬಕಾರ 13.ಶಂಕರಿ 14.ರಸ್ತ 15.ತತಿ

ಸುಡೊಕು 6752

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4	3			1		2	6
8				3				9
		5			9		8	
	6			4		3		8
	7	4	1		3			
3						5		1
	8		3		4			5
		1		9		8		4
4			5			2		

6751 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

10 ಏಪ್ರಿಲ್ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಅಷ್ಟಮಿ ಗಂ. 23-16 ನಕ್ಷತ್ರ: ಪೂರ್ವಾಷಾಢ ಗಂ 11-28 ಯೋಗ: ಶಿವ ಗಂ. 18-31 ಕರಣ: ಬಾಲವ ಗಂ 10-22 ಮೀನ ಮಾಸದ 27 ನೇ ದಿನ. ಮಳೆ ನಕ್ಷತ್ರ : ರೇವತಿ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-24 ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 21 ಶವ್ವಾಲ್, ಅದೃಷ್ಟ ಸಂಖ್ಯೆ : 8, 11

ಮೇಷ: ಪರಿಶ್ರಮದ ಫಲಕ್ಕಿಂತ ಅದೃಷ್ಟದ ಫಲವೇ ಅಧಿಕವಾಗಿ ಅನುಭವಕ್ಕೆ ಬರಲಿದೆ. ಸಾಮಾಜಿಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುವಿರಿ. ನಾಯಕತ್ವದ ಗುಣವಿರುವ ನಿಮಗೆ ಅವಕಾಶ ಮತ್ತು ಸಹಚರರ ಒತ್ತಡ ಅನುಭವಕ್ಕೆ ಬರಲಿದೆ.

ವೃಷಭ: ವಿವಿಧ ಮೂಲಗಳಿಂದ ಆದಾಯ ವೃದ್ಧಿ. ವೈವಾಹಿಕ ಮಾತುಕತೆಗಳು ಪ್ರಗತಿ ಪಥದತ್ತ ಸಾಗಲಿವೆ. ಷೇರು ವ್ಯವಹಾರಗಳಿಂದ ನಿರೀಕ್ಷಿಸಿದ ಲಾಭ ಬರುವುದು. ಉದರ, ಶಿರೋ ಸಂಬಂಧಿ ಅನಾರೋಗ್ಯ ಬರುವ ಸಾಧ್ಯತೆ ಇದೆ.

ಮಿಥುನ: ಕೆಲಸಗಳ ಬಗ್ಗೆ ಅನುಭವಸ್ಥರೊಂದಿಗೆ ಮಾತುಕತೆ ನಡೆಸುವುದರಿಂದ ತಿಳಿವಳಿಕೆ ವೃದ್ಧಿ. ಕಾನೂನಾತ್ಮಕ ಹೋರಾಟ ಅಥವಾ ಕೋರ್ಟು ವ್ಯವಹಾರಗಳ ಓಡಾಟಕ್ಕೆ ಮುಕ್ತಾಯ ಸಿಗಲಿದೆ.

ಕರ್ಕಾಟಕ: ಇತರರ ಮಾತನ್ನು ತಪ್ಪಾಗಿ ಅರ್ಥೈಸಿ ಸಂಬಂಧಿಕರಲ್ಲಿ ಭಿನ್ನಾಭಿಪ್ರಾಯ ಸೃಷ್ಟಿಸಿಕೊಳ್ಳಬೇಡಿ. ಮಕ್ಕಳ ದೈನಂದಿನ ಚಟುವಟಿಕೆಯತ್ತ ಗಮನ ನೀಡಿ. ಭೂಮಿ ಸಂಬಂಧ ವ್ಯವಹರಿಸುವಾಗ ಬುದ್ಧಿವಂತಿಕೆ ಅಗತ್ಯ.

ಸಿಂಹ: ಮಕ್ಕಳ ಶಿಕ್ಷಣದ ವಿಚಾರವಾಗಿ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ. ವ್ಯವಹಾರದಲ್ಲಿ ಇನ್ನೊಬ್ಬರ ಹಸ್ತಕ್ಷೇಪ ನಿಮ್ಮ ನಷ್ಟಕ್ಕೆ ಮುಖ್ಯ ಕಾರಣ. ಹಿರಿಯರ ಮನಸ್ಸನ್ನು ನೋಯಿಸುವಂತೆ ನಡೆದುಕೊಳ್ಳಬೇಡಿ.

ಕನ್ಯಾ: ಕ್ರೀಡಾ ಕ್ಷೇತ್ರದವರಿಗೆ ಉತ್ತಮ ಸಾಧನೆಗೆ ಅವಕಾಶವಿದೆ. ಮಕ್ಕಳು ವ್ಯಸನಗಳಿಗೆ ಒಳಗಾಗಿ ಮನಸ್ಸು ಮತ್ತು ಆರೋಗ್ಯವನ್ನು ಹಾಳು ಮಾಡಿಕೊಳ್ಳುವ ಲಕ್ಷಣವಿದೆ. ಮಕ್ಕಳ ಚಟುವಟಿಕೆಯಲ್ಲಿ ಗಮನವಹಿಸಿ.

ತುಲಾ: ಕೃಷಿ ಕ್ಷೇತ್ರದವರಿಗೆ ಕೆಲಸ ಅಧಿಕ. ಲಾರಿ ಹಾಗೂ ಟ್ಯಾಂಕರ್‌ನಂಥ ದೊಡ್ಡ ಪ್ರಮಾಣದ ವಾಹನಗಳ ಮಾಲೀಕರಿಗೆ ಒಳ್ಳೆಯ ದಿನ. ಅಧಿಕಾರಿಗಳ ಪರಿಚಯವಾಗಲಿದೆ.

ವೃಶ್ಚಿಕ: ಬಟ್ಟೆ ಉದ್ಯಮದವರಿಗೆ ಲಾಭ ಬರುವುದು. ಪುಸ್ತಕ ಪ್ರಕಾಶಕರಿಗೆ ನೂತನ ಕಾರ್ಯಭಾರ ಹೊರೆಯಾಗಬಹುದು. ವಿನೋದ ಸ್ವಭಾವ, ಧರ್ಮ-ಕರ್ಮಗಳಲ್ಲಿ ಆಸಕ್ತಿ ಇತರರನ್ನು ಆಕರ್ಷಿಸುವುದು.

ಧನು: ಸರ್ಕಾರಿ ಸಂಬಂಧ ವ್ಯವಹಾರಗಳಿಂದ ನಿರೀಕ್ಷೆಗೂ ಮೀರಿದ ಲಾಭ ಅನುಭವಿಸುತ್ತೀರಿ. ಹಣಕಾಸು ಸಂಸ್ಥೆಗಳ ನೆರವಿನಿಂದ ಬಹು ದಿನದ ಸ್ವಂತ ಉದ್ದಿಮೆ ಪ್ರಾರಂಭಿಸುವ ಯೋಜನೆ ಕೈಗೂಡುವುದು.

ಮಕರ: ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧಕ್ಕೆ ಪೌಷ್ಟಿಕತೆ ಸಿಕ್ಕಿ ಮುಂದುವರಿಯಲಿ. ಪ್ರವಾಸ, ಮನರಂಜನೆಗೂ ಸಾಕಷ್ಟು ಸಮಯವನ್ನು ಮೀಸಲಿಡುವುದರಿಂದ ನೆಮ್ಮದಿ ಇರಲಿದೆ.

ಕುಂಭ: ವ್ಯವಹಾರಿಕ ಸಂಬಂಧಗಳು ವಿಸ್ತಾರಗೊಳ್ಳುವ ಸಮಯ ಇದಾಗಿದೆ. ಅಭಿವೃದ್ಧಿಯ ವಿಚಾರದಲ್ಲಿ ಸ್ವಪ್ರಯತ್ನದೊಂದಿಗೆ ದೈವ ಬಲವೂ ಇರುತ್ತದೆ. ರಾಜಕೀಯ ಚಟುವಟಿಕೆಗಳು ಹೆಚ್ಚಾಗಲಿವೆ.

ಮೀನ: ರಾಜಕೀಯ ರಂಗದಲ್ಲಿ ಬಹಳ ದಿನಗಳ ನಂತರ ಯಶಸ್ಸು ದೊರೆಯಲಿದೆ. ಇಂದಿನ ದಿನಚರಿಯು ಸಂತೋಷ ಮೂಡಿಸುತ್ತದೆ. ಎಲ್ಲವನ್ನೂ ನಿಭಾಯಿಸುವ ಸಾಮರ್ಥ್ಯವಿದ್ದರೂ ಸೋಮಾರಿತನ ಕಾಡಬಹುದು.

ಸಿನಿಮಾ ರಂಜನೆ

‘ಸಿನಿಮಾಗೆ ಶಾಪವಾದ ಡಿಜಿಟಲ್ ರೂಪ’

ಆದಿತ್ಯ

ಅಪ್ಪನ ಮೂಲಕ, ಖುದ್ದಾಗಿ ಚಿತ್ರರಂಗವನ್ನು ಬಹಳ ಹತ್ತಿರದಿಂದ ಕಂಡಿರುವ ನಟ ಆದಿತ್ಯ ಅವರನ್ನು ಚಂದನವನದ ರೌಡಿ, ಪೊಲೀಸ್ ಅಧಿಕಾರಿ ಪಾತ್ರಕ್ಕೆ ಸೀಮಿತಗೊಳಿಸಿರುವುದೇ ಹೆಚ್ಚು. ಅವರು ನಟಿಸಿರುವ ‘ಟೆರರ್’ ಇಂದು(ಏ.10) ಬಿಡುಗಡೆಯಾಗುತ್ತಿದೆ. ಈ ಸಂದರ್ಭದಲ್ಲಿ ಚಿತ್ರರಂಗದ ಸದ್ಯದ ಸ್ಥಿತಿ, ಬದಲಾವಣೆಯ ಅಭಿಲಾಷೆಯನ್ನು ಬಿಚ್ಚಿಟ್ಟಿದ್ದಾರೆ...

• ಅಭಿಲಾಷ್ ಪಿ.ಎಸ್.

• ಪ್ರೇಕ್ಷಕರಲ್ಲಿ, ಚಿತ್ರರಂಗದಲ್ಲಿ ನೀವು ಗಮನಿಸಿದ ಬದಲಾವಣೆಗಳೇನು?

ಬದಲಾವಣೆ ಜಗದ ನಿಯಮ. ಪ್ರೇಕ್ಷಕರು ಹಿಂದಿನಂತಿಲ್ಲ. ಒಟಿಟಿ ಬಂದ ಮೇಲೆ ಅವರು ವಿಶ್ವದ ಸಿನಿಮಾಗಳಿಗೆ ತೆರೆದುಕೊಂಡಿದ್ದಾರೆ. ಇದಕ್ಕೆ ತಕ್ಕಂತೆ ಚಿತ್ರರಂಗವೂ ಆಧುನೀಕರಣಗೊಳ್ಳಬೇಕಿದೆ. ನಾವು ನಾಯಕರಾಗಿ ಹೆಜ್ಜೆ ಇಟ್ಟ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಸಿನಿಮಾಗಳನ್ನು ನೋಡುತ್ತಿದ್ದವರು ವಿರಳ. ಈಗ ಸದಭಿರುಚಿಯ ಸಿನಿಮಾ ಕೊಟ್ಟರಷ್ಟೇ ಜನ ಒಪ್ಪಿಕೊಳ್ಳುತ್ತಾರೆ.

ಇವತ್ತಿನ ಕಾಲದಲ್ಲಿ ಸಿನಿಮಾ ಮಾಡುವುದು ಸುಲಭವಾಗಿದೆ. ಸಿನಿಮಾ ಯಾವಾಗ ಡಿಜಿಟಲ್ ಆಯಿತೋ ಆಗಲೇ ಅದು ಬಹುತೇಕ ಸತ್ತಿತು. ಡಿಜಿಟಲ್ ಆಗಿರುವುದು ವರಕ್ಕಿಂತ ಶಾಪವೇ ಹೆಚ್ಚು. ಪೈರಸಿಗೂ ಸುಲಭವಾಯಿತು. ನೆಗೆಟಿವ್‌ನಲ್ಲಿ ಶೂಟ್ ಮಾಡುವಾಗ ಒಂದು ನಿಯಂತ್ರಣವಿತ್ತು. ಎಲ್ಲರೂ ಸಿನಿಮಾ ಮಾಡುವುದು ಸುಲಭವಾಗಿರಲಿಲ್ಲ. ಒಂದು ಕ್ಯಾನ್ ರೀಲ್ ₹11 ಸಾವಿರವಿತ್ತು. ಈಗ ಇವುಗಳಿಗೆ ಖರ್ಚು ಕಡಿಮೆ. ಮೊಬೈಲ್, ಡಿಜಿಟಲ್ ಕ್ಯಾಮೆರಾದಲ್ಲಿ ಶೂಟ್ ಮಾಡುತ್ತಾರೆ. ಯಾರು ಬೇಕಾದರೂ ಸಿನಿಮಾ ಮಾಡಬಹುದು ಎನ್ನುವ ಸ್ಥಿತಿಗೆ ಬಂದಿದ್ದೇವೆ. ಹೀಗಾಗಿ ಐದಾರು ಸಿನಿಮಾಗಳು ವಾರಕ್ಕೆ ಬಿಡುಗಡೆಯಾಗುತ್ತಿವೆ. ಇದರ ನಡುವೆ ಒಳ್ಳೆಯ ಸಿನಿಮಾಗಳು ಕಳೆದು ಹೋಗುತ್ತವೆ. ಜನಕ್ಕೆ ಈಗ ಬೇಡಿಕೆಗಿಂತ ಪೂರೈಕೆ ಹೆಚ್ಚಿದೆ. ಸಿನಿಮಾ ನಿರ್ಮಾಣದ ಬಗ್ಗೆ ತಿಳಿದುಕೊಳ್ಳದೇ ಕೆಲವರು ಸಿನಿಮಾ ಮಾಡುತ್ತಾರೆ. ಒಂದೆರಡು ಸಿನಿಮಾಗಳಿಗೆ ಸಹಾಯಕ ನಿರ್ದೇಶಕರಾಗಿದ್ದವರು ಏಕಾಏಕಿ ನಿರ್ದೇಶಕರಾಗುತ್ತಿದ್ದಾರೆ. ನಮ್ಮ ಕಾಲದಲ್ಲಿದ್ದ ನಿರ್ದೇಶಕರು ಅವರ ಗುರುಗಳ ಬಳಿ ಹತ್ತಾರು ಸಿನಿಮಾಗಳಲ್ಲಿ ಕೆಲಸ ಮಾಡಿ ಅನುಭವ ಹೊಂದಿದ್ದರು. ಈಗ ಬಹಳ ಕಡಿಮೆ ಜನ ಇದನ್ನು ಅಳವಡಿಸಿಕೊಂಡಿದ್ದಾರೆ. ‘ಟೆರರ್’ ಸಿನಿಮಾದ ನಿರ್ದೇಶಕರಾದ ರಂಜನ್ 17 ವರ್ಷ ಸಹಾಯಕ ನಿರ್ದೇಶಕರಾಗಿದ್ದರು. ಇಂಥ ಶಿಸ್ತಿನ ಕಲಿಕೆಯ ಪಯಣ ಅಗತ್ಯ. ನಮ್ಮ ಚಿತ್ರರಂಗದಲ್ಲಿ ಸಿನಿಮಾ ನಿಯಂತ್ರಣಕ್ಕೆ ಬೇಕಾದ ಮಾರ್ಗಸೂಚಿಗಳು, ನಿಯಂತ್ರಕರು ಇಲ್ಲ. ನಿರ್ಮಾಪಕರ ತಲೆಕೆಡಿಸಿ ಸಿನಿಮಾ ಮಾಡುವವರೂ ಇದ್ದಾರೆ.

• ಸಿನಿಮಾ ನಿಲ್ಲಿಸಲು ಪ್ರಯತ್ನಿಸಿದರು ಎಂಬ ಮಾತು ನಿಮ್ಮ ಬಾಯಲ್ಲಿ ಬಂತು...

ಹೊಟ್ಟೆಕಿಚ್ಚು ಅಷ್ಟೇ. ಹಿಂದೆಯೂ ಹಲವು ಬಾರಿ ನನಗೆ ಇಂಥ ಅನುಭವ ಆಗಿದೆ. ಹಿಂದೆ ನಾನು ಮಾಡಬೇಕಿದ್ದ ಸಿನಿಮಾಗಳು ರಾತ್ರೋರಾತ್ರಿ ಬೇರೆ ಹೀರೊಗೆ ಹೋಗಿರುವ ಉದಾಹರಣೆಗಳೂ ಇವೆ. ಅವುಗಳಿಗೆ ಅಡ್ವಾನ್ಸ್ ಕೂಡಾ ಕೊಟ್ಟಿದ್ದರು. ಇವುಗಳಲ್ಲಿ ಕೆಲವು ಗೆದ್ದಿವೆ, ಕೆಲವು ಸೋತಿವೆ.

• ‘ಟೆರರ್’ನಲ್ಲಿ ನಿಮ್ಮ ಪಾತ್ರ...

ಒಂದು ಭಿನ್ನವಾದ ಪಾತ್ರ. ಆತನಿಗೆ ಅವನದ್ದೇ ಆದ ಸಿದ್ಧಾಂತವಿದೆ. ಆತ ನಾಯಕನೋ, ಖಳನಾಯಕನೋ, ಆತ ಮಾಡುತ್ತಿರುವ ಕೆಲಸಗಳು ಒಳ್ಳೆಯದಕ್ಕೋ ಅಥವಾ ಅವನ ಸ್ವಾರ್ಥಕ್ಕೋ ಎನ್ನುವುದನ್ನು ಸಿನಿಮಾದಲ್ಲೇ ನೋಡಬೇಕು. ಸಿನಿಮಾದ ಕಥೆಗೆ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವಿದೆ.

• ಪೊಲೀಸ್ ಅಧಿಕಾರಿ ಪಾತ್ರದಲ್ಲೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದೀರಿ...

ನಾನು ಪೊಲೀಸ್ ಅಧಿಕಾರಿ ಪಾತ್ರ ಮಾಡಲು ಸಿದ್ಧ, ಆದರೆ ರೌಡಿ ಪಾತ್ರ ಬೇಡ. ‘ವೀರ ಕಂಬಳ’ದಲ್ಲಿನ ನನ್ನ ಡಾನ್ ಪಾತ್ರವನ್ನು ನೋಡಿದ ಬಳಿಕ ಆ ಡಾನ್‌ನ ಜೀವನ ಚರಿತ್ರೆ ಮಾಡಲು ಮಾತುಕತೆ ನಡೆಯುತ್ತಿದೆ. ಆ ಕಥೆಯ ಸ್ಕ್ರಿಪ್ಟ್ ಕೇಳಿ ಬಳಿಕ ನಿರ್ಧರಿಸುತ್ತೇನೆ.

ಕಳೆದ ವಾರ ಇಬ್ಬರು ಹೊಸಬರು ಕಥೆ ಹೇಳಲು ಬಂದಿದ್ದರು. ನನ್ನ ಬಳಿ ಒಂದೋ ಭೂಗತಲೋಕದ ರೌಡಿಸಂ ಕಥೆ ಇಲ್ಲವೇ ಸಸ್ಪೆನ್ಸ್ ಥ್ರಿಲ್ಲರ್ ತರುತ್ತಾರೆ. ಇದನ್ನು ಹೊರತುಪಡಿಸಿ ಹೊಸ ಕಥೆಗಳ ಯೋಚನೆಯೇ ಬರುತ್ತಿಲ್ಲವಲ್ಲ ಎಂಬ ಬೇಸರವಿದೆ.

ಬೇರೆ ಚಿತ್ರರಂಗದಲ್ಲಿ ತಮ್ಮ ಹೀರೊಗಳಿಗೆ ಭಿನ್ನ ಭಿನ್ನವಾದ ಪಾತ್ರಗಳನ್ನು ನಿರ್ದೇಶಕರು ಆಲೋಚಿಸುತ್ತಿದ್ದಾರೆ. ಮಾಡುವ ಪಾತ್ರಗಳಲ್ಲಿ ಬದಲಾವಣೆ ಬೇಕು ಎಂದು ಖಂಡಿತಾ ಅನಿಸಿದೆ. ನಮ್ಮಲ್ಲೇ ಎಷ್ಟೊಂದು ಕಥೆಗಳಿವೆ. ನಮ್ಮ ಮಕ್ಕಳಿಗೆ ನಮ್ಮ ರಾಜ್ಯದ ಇತಿಹಾಸ, ನಮ್ಮ ಮಣ್ಣಿನ ಪೌರಾಣಿಕ ಕಥೆಗಳ ಬಗ್ಗೆ ತಿಳಿದೇ ಇಲ್ಲ. ತೆನಾಲಿ ರಾಮನ ಕಥೆಗಳ ಸಾರಾಂಶಗಳನ್ನು ಬಳಸಿಕೊಂಡು ಎಷ್ಟೊಂದು ಕಥೆಗಳನ್ನು ಹುಟ್ಟು ಹಾಕಬಹುದು. ನಮ್ಮಲ್ಲಿನ ಕಥೆಗಾರರನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕಿದೆ. ನಮ್ಮತನವಿಲ್ಲದ ಸಿನಿಮಾಗಳು ಖಂಡಿತಾ ಯಶಸ್ಸು ಕಾಣುವುದಿಲ್ಲ. ‘ಧುರಂಧರ್’ ಸಿನಿಮಾ ಕಥೆಯ ಆಲೋಚನೆಯನ್ನು ಗಮನಿಸಿ. ನಮ್ಮ ಕನ್ನಡ ಮಣ್ಣಿನಲ್ಲಿ ಹುಟ್ಟಿದ ಹೋರಾಟಗಾರರು ಇಲ್ಲವೇ? ಇಂಥ ಕಥೆಗಳನ್ನು ಹುಡುಕಬೇಕಿದೆ.

ನಿರ್ದೇಶನದತ್ತ ಆದಿತ್ಯ ಹೆಜ್ಜೆ...

ನಾನು ನಟಿಸಿರುವ ‘ಕಿಲ್’ ಎನ್ನುವ ಸಿನಿಮಾ ಬಿಡುಗಡೆಗೆ ಸಿದ್ಧವಿದೆ. ಇದರಲ್ಲಿ ಒಂದು ಸೂಕ್ಷ್ಮವಾದ ಕಥೆ ಇದೆ. ಓಂ ಪ್ರಕಾಶ್ ಅವರ ‘ಇಲಾಖೆ’ ಸಿದ್ಧವಿದೆ. ಇನ್ನೆರಡು ಸಿನಿಮಾಗಳು ಮಾತುಕತೆ ಹಂತದಲ್ಲಿವೆ. ನಟನೆ ಜೊತೆ ನಿರ್ದೇಶನದತ್ತ ಚಿತ್ತ ಹರಿಸಿದ್ದೇನೆ. ಕಥೆಯ ಮೊದಲ ಕರಡು ಪ್ರತಿ ಸಿದ್ಧವಾಗಿದೆ. ಈ ಕಥೆಯ ವಿಷಯದ ಮೇಲೆ ಇನ್ನೂ ಬಹಳ ಕೆಲಸ ಮಾಡಬೇಕಿದೆ.

4ನೇ ಆವೃತ್ತಿ

ಸಿನಿ ಸಮ್ಮಾನಕ್ಕೆ ಸಿನಿಮಾಗಳ ಆಹ್ವಾನ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’- ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ ವೇದಿಕೆ ಇದೀಗ ನಾಲ್ಕನೇ ಆವೃತ್ತಿಯನ್ನು ಆಯೋಜಿಸಲು ಸಜ್ಜಾಗುತ್ತಿದೆ.

ಅಸಾಧಾರಣ ಪ್ರತಿಭೆಗಳನ್ನು ಪ್ರಶಂಸಿಸಿ, ಕನ್ನಡ ಚಿತ್ರರಂಗದ ಬೆಳವಣಿಗೆಗೆ ಉತ್ತೇಜನ ನೀಡುತ್ತಾ ಕಳೆದ ಮೂರು ಆವೃತ್ತಿಗಳಲ್ಲಿ ಎಲ್ಲರೂ ಮೆಚ್ಚುವಂತಹ ವರ್ಣರಂಜಿತ, ಅದ್ದೂರಿ, ಅರ್ಥಗರ್ಭಿತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗುವುದು. ಇಲ್ಲಿ ನೀಡಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಚಿತ್ರತಂಡಗಳು ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.

ನೋಂದಣಿಗೆ ಏಪ್ರಿಲ್ 15 ಕೊನೆಯ ದಿನ

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಏ.15ಕ್ಕೆ ‘ಪಳ್ಳಿಚಟ್ಟಂಬಿ’ ರಿಲೀಸ್

ಟೊವಿನೊ, ಕಯಾದು, ಡಿಜೊ ಜೋಸ್

‘ಜನ ಗಣ ಮನ’ ಸಿನಿಮಾ ಖ್ಯಾತಿಯ ನಿರ್ದೇಶಕ ಡಿಜೊ ಜೋಸ್ ಆ್ಯಂಟನಿ ನಿರ್ದೇಶನದ, ಟೊವಿನೋ ಥಾಮಸ್ ನಟನೆಯ ‘ಪಳ್ಳಿಚಟ್ಟಂಬಿ’ ಸಿನಿಮಾ ಬಿಡುಗಡೆ ಮುಂದೂಡಲಾಗಿದ್ದು, ಏ.10ರ ಬದಲಾಗಿ ಏ.15ಕ್ಕೆ ಚಿತ್ರವು ತೆರೆಕಾಣಲಿದೆ.

ಸಿನಿಮಾವನ್ನು ಕರ್ನಾಟಕದಲ್ಲಿ ಹೊಂಬಾಳೆ ಫಿಲಂಸ್ ಹಂಚಿಕೆ ಮಾಡುತ್ತಿದೆ. ಕನ್ನಡದ ‘ಮುಗಿಲ್‌ಪೇಟೆ’ ಸಿನಿಮಾ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟ ಕಯಾದು ಲೋಹರ್ ಈ ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿದ್ದಾರೆ. ಮಲಯಾಳ, ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಸಿನಿಮಾ ತೆರೆಕಾಣಲಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟೊವಿನೋ, ‘ನನ್ನ ಸಿನಿಮಾಗಳು ಕರ್ನಾಟಕದಲ್ಲೂ ಮೆಚ್ಚುಗೆ ಪಡೆದಿವೆ. ಕರ್ನಾಟಕ ನನಗೆ ಹೊಸದಲ್ಲ. ಶಾಲಾ ದಿನಗಳಲ್ಲಿ ಪ್ರವಾಸಕ್ಕೆಂದು ಬೆಂಗಳೂರು ಹಾಗೂ ಮೈಸೂರಿಗೆ ಕರೆದುಕೊಂಡು ಬರುತ್ತಿದ್ದರು. ‘ಡಿಯರ್ ಫ್ರೆಂಡ್’ ಸಿನಿಮಾದ ಶೂಟಿಂಗ್ ಸಂದರ್ಭದಲ್ಲಿ ಒಂದು ತಿಂಗಳು ಬೆಂಗಳೂರಿನಲ್ಲಿದ್ದೆ. ಈ ಸಿನಿಮಾದಲ್ಲಿ ಯಕ್ಷಗಾನದ ಝಲಕ್ ಕೂಡಾ ಇದೆ. ಕನ್ನಡದ ಸಂಭಾಷಣೆಯೂ ಸಿನಿಮಾದಲ್ಲಿದೆ’ ಎಂದರು.

1950ರ ಕಾಲಘಟ್ಟದ ಕಥೆ ಸಿನಿಮಾದಲ್ಲಿದ್ದು, ಚಿತ್ರಕ್ಕೆ ಎಸ್. ಸುರೇಶ್ ಬಾಬು ಕಥೆ ಬರೆದಿದ್ದಾರೆ. ಟಿಜೋ ಟಾಮಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ನೌಫಲ, ಬ್ರಿಜೇಶ್, ಚಾಣಕ್ಯ ಚೈತನ್ಯ, ಚರಣ್ ಸೇರಿ ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಶ್ರುತಿ ಹರಿಹರನ್ ಆತ್ಮವಿಶ್ವಾಸದ ಹೆಜ್ಜೆ

• ಎಪಿಎಸ್

ಮಗಳ ಆರೈಕೆಗಾಗಿ ತೆರೆಯಿಂದ ಕೊಂಚ ಬಿಡುವು ಪಡೆದುಕೊಂಡಿದ್ದ ನಟಿ ಶ್ರುತಿ ಹರಿಹರನ್ ‘ಹೆಡ್‌ಬುಷ್’ ಸಿನಿಮಾ ಮೂಲಕ ತೆರೆಗೆ ಮರಳಿದ್ದರು. ಈ ಚಿತ್ರದ ಬಳಿಕ ತಮ್ಮ ದೈಹಿಕ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ನೀಡಿರುವ ಅವರು, ಉದ್ಯಮವೊಂದನ್ನೂ ಆರಂಭಿಸಿದ್ದಾರೆ. ವೃತ್ತಿ ಮತ್ತು ಪ್ರವೃತ್ತಿಯ ಪಯಣದ ಬಗ್ಗೆ ಶ್ರುತಿ ‘ಸಿನಿಮಾ ರಂಜನೆ’ ಜೊತೆ ಮಾತಿಗಿಳಿದಾಗ...

‘ನನ್ನ ವ್ಯಕ್ತಿತ್ವದಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಹಿಂದಿನಂತೆಯೇ ಬಹಳ ಲವಲವಿಕೆಯಿಂದಲೇ ಇದ್ದೇನೆ’ ಎಂದು ಮಾತು ಆರಂಭಿಸಿದ ಅವರು, ‘ನಾಲ್ಕೈದು ವರ್ಷಗಳ ಹಿಂದೆ ‘ಹೆಡ್‌ಬುಷ್’ ಪ್ರಾಜೆಕ್ಟ್ ಮಾಡುತ್ತಿರುವಾಗ ನನ್ನ ಮಗಳಿಗೆ ಆರೇಳು ತಿಂಗಳಷ್ಟೇ. ಆ ಅವಧಿಯಲ್ಲಿ ನಾನು ನನ್ನ ದೇಹದ ಬಗ್ಗೆ ಅಷ್ಟೊಂದು ಆಲೋಚಿಸುತ್ತಿರಲಿಲ್ಲ. ಪ್ರತಿಯೊಂದು ಹೆಣ್ಣಿಗೂ ಈ ಹಂತದಲ್ಲಿ ದೈಹಿಕ ಬದಲಾವಣೆ ಸಾಮಾನ್ಯ. ಸಾಕಷ್ಟು ಕಾರಣಗಳಿಂದ ದೇಹದ ಮೇಲೆ ನಮ್ಮ ನಿಯಂತ್ರಣ ಸಾಧ್ಯವಾಗುವುದಿಲ್ಲ. ನನಗೂ ಇದು ಬಾಧಿಸಿತ್ತು. ಆದರೆ ನನಗಾಗಿ ಬದಲಾವಣೆ ಬಯಸಿ ಹೆಜ್ಜೆ ಇಟ್ಟೆ’ ಎಂದು ಮಾತು ಮುಂದುವರಿಸಿದರು.

‘ಮಗಳಿಗೆ ಮೂರು ವರ್ಷವಿದ್ದಾಗ ನನ್ನ ಸ್ನೇಹಿತೆಯೊಬ್ಬಳು ಸಿನಿಮಾದ ಪಾತ್ರವೊಂದಕ್ಕಾಗಿ ಕರೆ ಮಾಡಿದ್ದಳು. ಆ ಪಾತ್ರವು ದೈಹಿಕವಾಗಿ ತೆಳ್ಳಗಿರುವ ಹೆಣ್ಣಿನದ್ದಾಗಿತ್ತು. ಆ ಸಂದರ್ಭದ ಮಾತುಕತೆಯಲ್ಲಿ ಆಕೆ ‘ಯಾವುದೇ ನೆಪಗಳನ್ನು ಹೇಳಬೇಡ. ಕನಿಷ್ಠ ವರ್ಕ್‌ಔಟ್ ಮಾಡಲು ಪ್ರಯತ್ನಿಸು’ ಎಂದಿದ್ದಳು. ಇದು ನನ್ನ ಮನಸ್ಸನ್ನು ಗಾಢವಾಗಿ ತಟ್ಟಿತು. ಬಳಿಕ ಬೆಳಗಿನ ಜಾವ 4ಕ್ಕೆ ಎದ್ದು ವರ್ಕ್‌ಔಟ್ ಮಾಡಲು ಆರಂಭಿಸಿದೆ. ತಾಯ್ತನದಿಂದಾಗಿ ಏರಿಕೆಯಾಗಿದ್ದ ನನ್ನ ದೇಹದ ತೂಕವನ್ನು ಕಡಿಮೆ ಮಾಡಲು ಒಂದು ವರ್ಷ ಹಿಡಿಯಿತು. ಇದು ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿತು. ನನ್ನನ್ನು ನಾನು ನೋಡುತ್ತಿದ್ದ ರೀತಿಯೇ ಬದಲಾಯಿತು. ನನ್ನ ಜೀವನವನ್ನು, ನನ್ನ ದೇಹವನ್ನು ನಾನು ನಿಯಂತ್ರಣದಲ್ಲಿ ಇಡಬಹುದು ಎನ್ನುವ ವಿಶ್ವಾಸ ಮೂಡಿತು. ಸದ್ಯ ನಿರಂತರವಾಗಿ ನನ್ನ ಆರೋಗ್ಯದ ಕಡೆಗೆ ಹೆಚ್ಚಿನ ಗಮನಹರಿಸಿದ್ದೇನೆ. ನನಗಾಗಿ ಸಮಯ ಮೀಸಲಿಡುತ್ತಿದ್ದೇನೆ’ ಎಂದರು ಶ್ರುತಿ.

‘ನಮ್ಮ ಕೆಲಸವನ್ನು, ನಮಗೆ ನಿರ್ವಹಿಸಿದ ಪಾತ್ರವನ್ನು ಸೂಕ್ತವಾಗಿ ನಿರ್ವಹಿಸಿದರೆ ಯಾವ ನ್ಯೂನತೆಗಳೂ ಅಡ್ಡಿಯಾಗುವುದಿಲ್ಲ. ನಿಮ್ಮ ದೇಹದ ಬಗ್ಗೆ ನಿಮಗೆ ಆತ್ಮವಿಶ್ವಾಸ ವಿದ್ದರೆ, ಅಳುಕಿಲ್ಲದೇ ಇದ್ದರೆ ಯಾವ ಪಾತ್ರವನ್ನಾದರೂ ನಿಭಾಯಿಸಬಹುದು’ ಎನ್ನುತ್ತಾರೆ ಅವರು.

ತಮ್ಮ ಮುಂದಿನ ಸಿನಿಮಾಗಳ ಬಗ್ಗೆ ಮಾತು ಹೊರಳಿಸಿದ ಅವರು, ‘ನಾನು ಕೂಡಾ ‘ಸ್ಟ್ರಾಬೆರಿ’ ಸಿನಿಮಾಗಾಗಿ ಕಾಯುತ್ತಿದ್ದೇನೆ. ಬಹಳ ಇಷ್ಟಪಟ್ಟು ಮಾಡಿದ ಸಿನಿಮಾ ಇದು. ಒಳ್ಳೆಯ ಕಥೆ ಹಾಗೂ ತಂಡ ಇದರಲ್ಲಿತ್ತು. ಇದರ ಜೊತೆಗೆ ‘ಚೀತಾ’, ಎರಡು ಕನ್ನಡ ಸಿನಿಮಾಗಳು ಪೂರ್ಣಗೊಂಡಿವೆ. ಇತ್ತೀಚೆಗೆ ‘ಎನ್‌ಎಚ್ 66’ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದೇನೆ. ಪ್ರಸ್ತುತ ಸಂದರ್ಭದಲ್ಲಿ ಸಿನಿಮಾ ಮಾಡುವುದು ಒಂದು ಹೆಜ್ಜೆಯಾದರೆ ಸಿನಿಮಾ ಬಿಡುಗಡೆ ಎನ್ನುವುದು ಅದಕ್ಕಿಂತ ಸವಾಲಿನ ಹೆಜ್ಜೆ. 2015–16ರಲ್ಲೂ ಇದೇ ರೀತಿಯ ಸಂದರ್ಭ ಬಂದಿತ್ತು. ಸಿನಿಮಾಗಳನ್ನು ಮಾಡುತ್ತಿದ್ದರೂ, ಯಾವುದೂ ಬಿಡುಗಡೆಯಾಗುತ್ತಿರಲಿಲ್ಲ. ಬಳಿಕದ ಒಂದೇ ವರ್ಷದಲ್ಲಿ ನಾಲ್ಕೈದು ಸಿನಿಮಾಗಳು ಬಂದವು. ಈಗ ಇದೇ ಸ್ಥಿತಿ ಇದೆ. ಮುಂದೆ ಸಾಲು ಸಾಲಾಗಿ ಸಿನಿಮಾಗಳು ಬರಲಿವೆ’ ಎಂದರು.

‘ನಿರ್ದೇಶನದ ಕನಸು ಇತ್ತು. ಆದರೆ ಅದಕ್ಕೆ ಸಮಯ ಕೂಡಿಬಂದಿಲ್ಲ. ನಾನು ಓದಿದ್ದು ಬಿಸ್‌ನೆಸ್. ನನ್ನ ಸ್ನೇಹಿತೆ ಯಶಸ್ವಿನಿ ಜೊತೆಗೂಡಿ ‘ಸಮ ವೆಲ್‌ನೆಸ್’ ಎಂಬ ಉದ್ಯಮ ಆರಂಭಿಸಿದ್ದೇನೆ. ಇದರ ಕೆಲಸದಲ್ಲೇ ತೊಡಗಿಸಿಕೊಂಡಿರುವ ಕಾರಣ ನಿರ್ದೇಶನದ ಕನಸನ್ನು ಸದ್ಯ ಬದಿಗಿರಿಸಿದ್ದೇನೆ’ ಎನ್ನುತ್ತಾ ಮಾತಿಗೆ ವಿರಾಮವಿತ್ತರು.

> ತಮಿಳಿನಲ್ಲಿ ಒಂದು ಹೊಸ ವೆಬ್‌ಸರಣಿಯಲ್ಲಿ ನಟಿಸುತ್ತಿದ್ದೇನೆ. ಎನ್‌ಎಚ್ 66 ಸೇರಿದಂತೆ ಎರಡು ಕನ್ನಡ ಸಿನಿಮಾಗಳನ್ನು ಒಪ್ಪಿಕೊಂಡಿದ್ದೇನೆ.
> –**ಶ್ರುತಿ ಹರಿಹರನ್**, ನಟಿ

ಐದು ಸಿನಿಮಾಗಳು ತೆರೆಗೆ

ಐಪಿಎಲ್ ಕ್ರಿಕೆಟ್ ಹಬ್ಬ ಬಂದಾಗ ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆ ಮಾಡಲು ನಿರ್ಮಾಪಕರು ಹಿಂದೇಟು ಹಾಕುತ್ತಾರೆ. ಆದರೆ ಈ ಬಾರಿ ಚಂದನ ವನದಲ್ಲಿ ಸಾಲು ಸಾಲು ಸಿನಿಮಾಗಳು ಬಿಡುಗಡೆಯಾಗುತ್ತಿವೆ. ಇಂದು (ಏ.10) ಐದು ಸಿನಿಮಾಗಳು ಬಿಡುಗಡೆಯಾಗಿವೆ.

ಕ್ಯಾಲೆಂಡರ್

‘ಸ್ವಾರ್ಥರತ್ನ’ ಸಿನಿಮಾದಲ್ಲಿ ನಾಯಕನಾಗಿ ನಟಿಸಿದ್ದ ಆದರ್ಶ ಗುಂಡುರಾಜ್ ಅಭಿನಯದ ಚಿತ್ರವಿದು. ಈ ಮಹಿಳಾ ಪ್ರಧಾನ ಚಿತ್ರವನ್ನು ನವೀನ್ ಶಕ್ತಿ ನಿರ್ದೇಶಿಸಿದ್ದು, ಆದರ್ಶ್ ಅವರೇ ನಿರ್ಮಿಸಿದ್ದಾರೆ. ನಾಯಕಿಯರಾಗಿ ನಿವಿಷ್ಕ ಪಾಟೀಲ್ ಹಾಗೂ ಸುಶ್ಮಿತ ನಟಿಸಿದ್ದಾರೆ. ಮಾಲಾಶ್ರೀ ಅವರು ವಿಶೇಷ ಪಾತ್ರದಲ್ಲಿದ್ದಾರೆ. ರಮೇಶ್ ಇಂದಿರಾ, ಪ್ರಮೋದ್ ಶೆಟ್ಟಿ, ಪ್ರಕಾಶ್ ತುಮಿನಾಡು, ಸುಚೇಂದ್ರ ಪ್ರಸಾದ್, ಚಂದ್ರಪ್ರಭ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಪೀಟರ್

ಪೃಥ್ವಿ ಅಂಬಾರ್ ನಟನೆಯ ‘ದೂರದರ್ಶನ’ ಸಿನಿಮಾ ನಿರ್ದೇಶಿಸಿದ್ದ ಸುಕೇಶ್ ಶೆಟ್ಟಿ ನಿರ್ದೇಶನದ ಸಿನಿಮಾವಿದು. ಚಿತ್ರದಲ್ಲಿ ಮಣ್ಣಿನ ಸೊಗಡಿನ ಕಥೆಯನ್ನ ಎಳೆಯನ್ನಾಗಿಸಿಕೊಂಡು ಕೌತುಕ ತುಂಬಿದ ಪ್ರೇಮಕಥೆಯನ್ನು ಸುಕೇಶ್ ತೆರೆಗೆ ತಂದಿದ್ದಾರೆ. ಮಡಿಕೇರಿಯ ಭಾಗಮಂಡಲದಲ್ಲಿ ನಡೆಯುವ ರೋಚಕ ಕಥೆ ಚಿತ್ರದಲ್ಲಿದ್ದು, ರಾಜೇಶ್ ಧ್ರುವ, ಜಾನ್ವಿ ಹಾಗೂ ರವೀಕ್ಷಾ ಶೆಟ್ಟಿ ಮುಖ್ಯಭೂಮಿಕೆಯಲ್ಲಿದ್ದಾರೆ. ರಘು ಪಾಂಡೇಶ್ವರ್, ಪ್ರತಿಮಾ ನಾಯಕ್, ರಾಮನಾಡ ಗೌಡ, ವರುಣ್ ಪಟೇಲ್, ಭರತ್, ದೀನಾ, ರಾಧಾಕೃಷ್ಣ ಕುಂಬ್ಳೆ, ರಕ್ಷಿತ್ ದೊಡ್ಡೇರಾ ತಾರಾಗಣದಲ್ಲಿದ್ದಾರೆ. ರಿತ್ವಿಕ್ ಮುರಳೀಧರ್ ಸಂಗೀತ ಸಂಯೋಜನೆ, ಗುರುಪ್ರಸಾದ್ ನಾರ್ನಾಡ್ ಛಾಯಾಚಿತ್ರಗ್ರಹಣ, ನವೀನ್ ಶೆಟ್ಟಿ ಸಂಕಲನ ಚಿತ್ರಕ್ಕಿದೆ. ರವಿ ಹೀರೇಮಠ್ ಮತ್ತು ರಾಕೇಶ್ ಹೆಗ್ಗಡೆ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಕೆವಿಎನ್ ಪ್ರೊಡಕ್ಷನ್ಸ್ ಈ ಚಿತ್ರವನ್ನು ವಿತರಿಸುತ್ತಿದೆ.

ಟೆರರ್

ಸಿಲ್ಕ್ ಮಂಜು, ರವಿ ಹಾಗೂ ಸ್ಮಿತಾ ವಸಿಷ್ಠ ನಿರ್ಮಾಣ ಮಾಡಿರುವ ಈ ಸಿನಿಮಾವನ್ನು ರಂಜನ್ ಶಿವರಾಮ್ ಗೌಡ ನಿರ್ದೇಶಿಸಿದ್ದಾರೆ. ಆದಿತ್ಯ ನಾಯಕರಾಗಿ ನಟಿಸಿದ್ದು, ದೇವರಾಜ್, ಶಶಿಕುಮಾರ್, ಕುಮಾರ್ ಬಂಗಾರಪ್ಪ, ಶರತ್ ಲೋಹಿತಾಶ್ವ, ರವಿಚೇತನ್, ಕೋಟೆ ಪ್ರಭಾಕರ್, ರವಿ ಭಟ್, ಅಶ್ವಿನ್ ಹಾಸನ್ ಮುಂತಾದವರು ತಾರಾಬಳಗದಲ್ಲಿದ್ದಾರೆ. 21 ವರ್ಷಗಳ ನಂತರ ಆದಿತ್ಯ ಹಾಗೂ ಶ್ರೀನಗರ ಕಿಟ್ಟಿ ಜೊತೆಯಾಗಿ ಈ ಸಿನಿಮಾ ಮೂಲಕ ಪರದೆ ಮೇಲೆ ಕಾಣಿಸಿಕೊಂಡಿದ್ದಾರೆ. ಹರ್ಷವರ್ಧನ್ ರಾಜ್ ಸಂಗೀತ ನಿರ್ದೇಶನ, ವಿ.ನಾಗೇಂದ್ರಪ್ರಸಾದ್ ಸಾಹಿತ್ಯ ಚಿತ್ರದ ಹಾಡುಗಳಿಗಿವೆ.

ನಟ ವಿಷ್ಣುವರ್ಧನ್ ಅವರ ‘ಕೋಟಿಗೊಬ್ಬ’ ಸಿನಿಮಾ ಬೆಂಗಳೂರಿನ ಪ್ರಸನ್ನ ಚಿತ್ರಮಂದಿರದಲ್ಲಿ ರೀರಿಲೀಸ್ ಆಗಿದೆ.

ಗ್ಯಾಂಗ್ಸ್ ಆಫ್ ಯುಕೆ

ರವಿ ಶ್ರೀವತ್ಸ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಸಿನಿಮಾ ಇದು. ರಂಗನಾಥ್ ರವೀಂದ್ರ ಈ ಚಿತ್ರದ ನಿರ್ಮಾಪಕರು. ಬಾಗಲಕೋಟೆಯ ಪಿಲ್ಲಾರಿ ಫಾಲ್ಸ್‌ನಲ್ಲಿ ನಡೆದ ರೋಚಕ ಘಟನೆಯನ್ನು ಆಧರಿಸಿ ಈ ಸಿನಿಮಾ ನಿರ್ಮಾಣವಾಗಿದೆ. ಉತ್ತರ ಕರ್ನಾಟಕದ ಹತ್ಯಾಕಾಂಡ ಎಂಬ ಟ್ಯಾಗ್‌ಲೈನ್ ಚಿತ್ರಕ್ಕಿದೆ.

ರವಿ ಶ್ರೀವತ್ಸ

ಕಾಡ

ಜಯರಾಮ್ ಕಾರ್ತಿಕ್ (ಜೆ.ಕೆ) ನಾಯಕರಾಗಿ ನಟಿಸಿರುವ ಈ ಚಿತ್ರವನ್ನು ವಿಶ್ರುತ್ ನಾಯಕ್ ನಿರ್ದೇಶಿಸಿದ್ದಾರೆ. ಸೈಕೊ ಥ್ರಿಲ್ಲರ್ ಜಾನರ್‌ನ ಈ ಚಿತ್ರದಲ್ಲಿ ಕಾವ್ಯ ಶೆಟ್ಟಿ ನಾಯಕಿಯಾಗಿ ನಟಿಸಿದ್ದಾರೆ. ಅಚ್ಯುತ್ ಕುಮಾರ್, ಉಗ್ರಂ ಮಂಜು, ಶ್ರೀರಾಮ್ ಮುಂತಾದವರು ನಟಿಸಿದ್ದಾರೆ.

ಜಯರಾಮ್ ಕಾರ್ತಿಕ್

ಏಕಕಾಲಕ್ಕೆ ಸೆಟ್ಟೇರಿದ 3 ಚಿತ್ರಗಳು

ಮೂರು ಚಿತ್ರಗಳ ಮುಹೂರ್ತದ ಸಂದರ್ಭ...

ಕನ್ನಡ ಚಿತ್ರರಂಗದ ಯಶಸ್ಸಿನ ಪ್ರಮಾಣ ಶೇಕಡ 2–3ರಷ್ಟೇ ಇದ್ದರೂ ಸೆಟ್ಟೇರುತ್ತಿರುವ ಸಿನಿಮಾಗಳ ಪ್ರಮಾಣಕ್ಕೆ ಇದು ಅಡ್ಡಿಯಾಗಿಲ್ಲ. ಇದಕ್ಕೆ ಉದಾಹರಣೆ ಎಂಬಂತೆ ಇತ್ತೀಚೆಗೆ ಒಬ್ಬರೇ ನಿರ್ಮಾಪಕರು ಮೂರು ಸಿನಿಮಾಗಳ ನಿರ್ಮಾಣಕ್ಕೆ ಏಕಕಾಲದಲ್ಲಿ ಚಾಲನೆ ನೀಡಿದ್ದಾರೆ.

ಅರುಣ ಕುಮಾರ್ ಮಾಲೀಕತ್ವದ ಮ್ಯಾಟ್ರಿಕ್ ಮೂವೀ ಮೇಕರ್ಸ್ ಈ ಸಾಹಸಕ್ಕೆ ಕೈಹಾಕಿದೆ. ಬೆಂಗಳೂರಿನ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ನಡೆದ ಮುಹೂರ್ತ ಕಾರ್ಯಕ್ರಮದಲ್ಲಿ ಕೀರ್ತಿ ಕೃಷ್ಣ ನಿರ್ದೇಶನದ ‘ಸೀತಾ ರಾಮ ರಾಜು’, ಸ್ವಸ್ತಿಕ್ ನಿರ್ದೇಶನದ ‘ದರ್ಶನ’ ಹಾಗೂ ‘ಲವ್ ಯು ಮುದ್ದು’ ಖ್ಯಾತಿಯ ಕುಮಾರ್ ನಿರ್ದೇಶನದ ಹೊಸ ಚಿತ್ರ ಪ್ರಾರಂಭವಾಯಿತು.

ಸೀತಾ ರಾಮ ರಾಜು: ಈ ಚಿತ್ರದಲ್ಲಿ ‘ಬಿಗ್‌ಬಾಸ್’ ಖ್ಯಾತಿಯ ಕಾರ್ತಿಕ್ ಮಹೇಶ್ ನಾಯಕರಾಗಿ ನಟಿಸುತ್ತಿದ್ದು, ನಾಯಕಿಯಾಗಿ ಪ್ರಿಯಾಂಕಾ ಕುಮಾರ್ ಜೊತೆಯಾಗಿದ್ದಾರೆ. ಆರ್ಮುಗಂ ರವಿಶಂಕರ್, ಜಗಪ್ಪ, ‘ಮಹಾನಟಿ’ ಖ್ಯಾತಿಯ ದೀಪಿಕಾ ತಾರಾಬಳಗದಲ್ಲಿದ್ದಾರೆ. ಸಿನಿಮಾ ಕುರಿತು ಮಾತನಾಡಿದ ಕೀರ್ತಿ ಕೃಷ್ಣ, ‘ಸೀತಾ ರಾಮನ ಜೊತೆಗೆ ಹನುಮನಾಗಿ ರಾಜು ಪಾತ್ರ ಬರುತ್ತದೆ. ಚಿಕ್ಕಮಗಳೂರು, ಬೆಂಗಳೂರು ಸುತ್ತ ನಡೆಯುವ ಕಥೆ ಇದು’ ಎಂದರು. ‘ಸುಂದರವಾದ ಪ್ರೇಮಕಥೆಯ ಸಿನಿಮಾವಿದು. ಒಂದೇ ದಿನ ಮೂರು ಸಿನಿಮಾಗಳನ್ನು ಪ್ರಾರಂಭಿಸುವುದು ಸುಲಭದ ಮಾತಲ್ಲ’ ಎಂದರು ಕಾರ್ತಿಕ್ ಮಹೇಶ್. ಕ್ರಾಂತಿಕುಮಾರ್ ಸಂಭಾಷಣೆ, ರಾಘವೇಂದ್ರ ವಿ.ಸಂಗೀತ ಹಾಗೂ ಅಭಿಲಾಶ್ ಕಳತಿ ಛಾಯಾಚಿತ್ರಗ್ರಹಣ ಸಿನಿಮಾಗಿದೆ.

ದರ್ಶನ: ಈ ಸಿನಿಮಾದಲ್ಲಿ ‘ದಿಯಾ’ ಖ್ಯಾತಿಯ ಪೃಥ್ವಿ ಅಂಬಾರ್ ಮುಖ್ಯಭೂಮಿಕೆಯಲ್ಲಿದ್ದು, ನಿಶಾ ರವೀಂದ್ರ ನಾಯಕಿಯಾಗಿದ್ದಾರೆ. ಇದೊಂದು ಕಾಮಿಡಿ ಡ್ರಾಮಾ ಜಾನರ್ ಚಿತ್ರವಾಗಿದ್ದು, ಸ್ವಸ್ತಿಕ್‌ಗೆ ಮೊದಲ ಚಿತ್ರ. ‘ಬೆಂಗಳೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಯಲಿದೆ. ಗೌರವ ಶೆಟ್ಟಿ, ಸಂತು ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ತಬಲಾ ನಾಣಿ ಅವರು ಇಲ್ಲಿ ‘ಬಂಗಾರಪ್ಪ’ ಎಂಬ ಪಾತ್ರ ಮಾಡುತ್ತಿದ್ದಾರೆ’ ಎಂದರು ಸ್ವಸ್ತಿಕ್.

ಕುಮಾರ್ ನಿರ್ದೇಶನದ ಹೊಸ ಚಿತ್ರದಲ್ಲಿ ತಬಲಾ ನಾಣಿ ಅವರು ಪ್ರಮುಖ ಪಾತ್ರದಲ್ಲಿರಲಿದ್ದಾರೆ. ಈ ಚಿತ್ರವಿನ್ನೂ ಪ್ರಾಥಮಿಕ ಹಂತದಲ್ಲಿದ್ದು ಕಲಾವಿದರ ಆಯ್ಕೆ ನಡೆಯಬೇಕಿದೆ. ‘ಎದ್ದೇಳು ಮಂಜುನಾಥ’ ಸಿನಿಮಾದಲ್ಲಿನ ತಬಲಾ ನಾಣಿಯವರ ಪಾತ್ರದಿಂದ ಪ್ರೇರಣೆ ಪಡೆದು ಕುಮಾರ್ ಈ ಸಿನಿಮಾ ಕಥೆ ಹೆಣೆದಿದ್ದಾರೆ. ‘ಹಾಸ್ಯ ಪ್ರಧಾನ ಸಿನಿಮಾ ಇದಾಗಿದ್ದು, ‘ಎದ್ದೇಳು ಮಂಜುನಾಥ’ ಕಥೆಗೂ ನನ್ನ ಕಥೆಗೂ ಸಂಬಂಧವಿಲ್ಲ’ ಎಂದಿದ್ದಾರೆ ಕುಮಾರ್.

ಟ್ರೇಲರ್‌ನಲ್ಲಿ ಕಾಲೆಳೆದ ಚಂದನ್

ಚಂದನ್ ಶೆಟ್ಟಿ ಅಭಿನಯದ ಹಾಗೂ ‘ಗುಬ್ಬಿ ಮೇಲೆ ಬ್ರಹ್ಮಾಸ್ತ್ರ’ ಖ್ಯಾತಿಯ ಸುಜಯ್ ಶಾಸ್ತ್ರಿ ನಿರ್ದೇಶನದ ‘ಎಲ್ರ ಕಾಲೆಳೆಯತ್ತೆ ಕಾಲ’ ಚಿತ್ರವು ಏ.17ರಂದು ತೆರೆಕಾಣಲಿದ್ದು, ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದೆ.

ಗೋಕುಲ ಎಂಟರ್‌ಟೇನರ್ಸ್ ಲಾಂಛನದಲ್ಲಿ ಗೋವಿಂದರಾಜು ನಿರ್ಮಿಸಿರುವ ಈ ಚಿತ್ರವು 90ರ ಕಾಲಘಟ್ಟದ ರೆಟ್ರೊ ಶೈಲಿಯಲ್ಲಿದೆ. ಕಾಲದ ಮಹತ್ವ ಸಾರುವ ಕಥೆ ಸಿನಿಮಾದಲ್ಲಿದೆ. ‘ರಿಯಾಲಿಟಿ ಶೋವೊಂದರಲ್ಲಿ ಚಂದನ್ ಶೆಟ್ಟಿ ಅವರನ್ನು ನೋಡಿದ ನನಗೆ ನಮ್ಮ ಕಥೆಗೆ ಇವರೇ ಸೂಕ್ತ ನಾಯಕ ಎನಿಸಿತು. ನಂತರ ಚಂದನ್ ಅವರಿಗೆ ನನ್ನ ಗೆಳೆಯ ರಾಜಗುರು ಹೊಸಕೋಟೆ ಬರೆದಿರುವ ಚಿತ್ರದ ಕಥೆ ಹೇಳಿದ್ದೆವು. ಪೂರ್ವತಯಾರಿಯೊಂದಿಗೆ ಚಂದನ್ ಹಾಗೂ ಅರ್ಚನಾ ಕೊಟ್ಟಿಗೆ ಅಭಿನಯಿಸಿದ್ದಾರೆ’ ಎಂದರು ಸುಜಯ್ ಶಾಸ್ತ್ರಿ.

ಮಂಜು ಪಾವಗಡ, ಮಾಹಂತೇಶ್, ಅನಂತ ಪದ್ಮನಾಭ ತಾರಾಬಳಗದಲ್ಲಿದ್ದಾರೆ.

ಅರ್ಚನಾ, ಚಂದನ್

ಟಿಎಂಸಿಗೆ ಮತ ವಿಭಜನೆ ಭೀತಿ

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ: ಓವೈಸಿ–ಕಬೀರ್ ಮೈತ್ರಿ 180 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅಣಿ

• ಮಂಜುನಾಥ ಹೆಬ್ಬಾರ್

ನವದೆಹಲಿ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಆಡಳಿತ ವಿರೋಧಿ ಅಲೆ, ಕಾನೂನು ಸುವ್ಯವಸ್ಥೆ ವೈಫಲ್ಯ ಹಾಗೂ ಸ್ಥಳೀಯ ಸಮಸ್ಯೆಗಳ ಜತೆಗೆ ಹಲವು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಇದರೊಂದಿಗೆ, ಹುಮಾಯೂನ್ ಕಬೀರ್ ಹಾಗೂ ಅಸಾದುದ್ದೀನ್ ಓವೈಸಿ ಅವರ ಪಕ್ಷಗಳ ಮೈತ್ರಿಯಿಂದಾಗಿ ಟಿಎಂಸಿಗೆ ಮತ ವಿಭಜನೆಯ ಆತಂಕ ಎದುರಾಗಿದೆ.

ಮುರ್ಷಿದಾಬಾದ್ ಜಿಲ್ಲೆಯಲ್ಲಿ ಬಾಬ್ರಿ ಮಸೀದಿ ಮಾದರಿಯಲ್ಲೇ ಮಸೀದಿ ನಿರ್ಮಾಣಕ್ಕೆ ಡಿಸೆಂಬರ್ 6ರಂದು ಶಂಕುಸ್ಥಾಪನೆ ನೆರವೇರಿಸುವುದಾಗಿ ಘೋಷಿಸಿ, ಭಾರಿ ವಿವಾದಕ್ಕೆ ಕಾರಣವಾಗಿದ್ದ ಭರತ್‌ಪುರ್ ಶಾಸಕ ಹುಮಾಯೂನ್ ಕಬೀರ್ ಅವರನ್ನು ಟಿಎಂಸಿಯಿಂದ ಕಳೆದ ವರ್ಷ ಅಮಾನತು ಮಾಡಲಾಗಿತ್ತು. ಆ ಬಳಿಕ ಕಬೀರ್ ಅವರು ಆಮ್ ಜನತಾ ಉನ್ನಯನ್ ಪಕ್ಷ (ಎಜೆಯುಪಿ) ಸ್ಥಾಪಿಸಿದ್ದರು. ಅವರ ಪಕ್ಷವು ಓವೈಸಿ ಅವರ ಎಐಎಂಐಎಂ ಪಕ್ಷದೊಂದಿಗೆ ಮೈತ್ರಿಕೂಟ ರಚಿಸಿಕೊಂಡು ಸುಮಾರು 180 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅಣಿಯಾಗಿದೆ. 100 ಕ್ಷೇತ್ರಗಳಲ್ಲಿ ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದಾಗಿ ಉಭಯ ನಾಯಕರು ಘೋಷಿಸಿದ್ದಾರೆ. ‘ಟಿಎಂಸಿಯ ದುರಾಡಳಿತಕ್ಕೆ ಕೊನೆ ಹಾಡುವುದೇ ತಮ್ಮ ಗುರಿ‘ ಎಂದು ಕಬೀರ್ ಗುಡುಗಿದ್ದಾರೆ. ‘ಈ ಮೈತ್ರಿಕೂಟವು ಬಿಜೆಪಿಯ ಬಿ–ಟೀಮ್‘ ಎಂದು ಟಿಎಂಸಿ ನಾಯಕರು ಲೇವಡಿ ಮಾಡಿದ್ದಾರೆ.

2011ರ ಜನಗಣತಿಯ ಪ್ರಕಾರ, ರಾಜ್ಯದಲ್ಲಿ ಮುಸ್ಲಿಮರ ಸಂಖ್ಯೆ ಶೇ 27ರಷ್ಟಿದೆ. ಮಾಲ್ಡಾ, ಮುರ್ಷಿದಾಬಾದ್ ಮತ್ತು ಉತ್ತರ ದಿನಾಜ್‌ಪುರ ಜಿಲ್ಲೆಗಳಲ್ಲಿ ಮುಸ್ಲಿಮರ ಜನಸಂಖ್ಯೆ ಶೇ 50ರಷ್ಟಿದ್ದರೆ, ದಕ್ಷಿಣ 24 ಪರಗಣಗಳು ಮತ್ತು ಬಿರ್ಭುಮ್ ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತ ಸಂಖ್ಯೆ ಶೇ 35ರಷ್ಟು. ಈ ಭಾಗದ 90 ಕ್ಷೇತ್ರಗಳಲ್ಲಿ ಮುಸ್ಲಿಂ ಮತಗಳೇ ನಿರ್ಣಾಯಕ. ಮುಸ್ಲಿಮರು ಟಿಎಂಸಿಯ ಸಾಂಪ್ರದಾಯಿಕ ಬೆಂಬಲಿಗರು. 2021ರ ಚುನಾವಣೆಯಲ್ಲಿ ಮುಸ್ಲಿಂ ಬಾಹುಳ್ಯದ 75 ಕ್ಷೇತ್ರಗಳಲ್ಲಿ ಟಿಎಂಸಿ ಜಯ ಗಳಿಸಿತ್ತು. ಕಳೆದ ಮೂರು ಚುನಾವಣೆಗಳಲ್ಲಿ ಪಕ್ಷವು ಪ್ರಚಂಡ ದಿಗ್ವಿಜಯ ಸಾಧಿಸಲು ಮುಸ್ಲಿಂ ಮತಗಳೇ ಪ್ರಮುಖ ಕಾರಣ. ಇನ್ನೊಂದೆಡೆ, ಕಾಂಗ್ರೆಸ್, ಎಡಪಕ್ಷಗಳೂ ಮುಸ್ಲಿಂ ಮತಗಳ ಮೇಲೆ ಪ್ರಮುಖವಾಗಿ ಕಣ್ಣಿಟ್ಟಿವೆ.


ಓವೈಸಿ

ಹುಮಾಯೂನ್

ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಳಿಕ 91 ಲಕ್ಷ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕಲಾಗಿದೆ. ಮುಸ್ಲಿಂ ಜನಸಂಖ್ಯೆ ಹೆಚ್ಚಿರುವ ಜಿಲ್ಲೆಗಳಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಮತದಾರರ ಹೆಸರನ್ನು ಕೈಬಿಡಲಾಗಿದೆ. ಎಸ್‌ಐಆರ್‌ನಿಂದಾಗಿ ಪ್ರತಿ ಕ್ಷೇತ್ರದಲ್ಲಿ ಮತದಾರರ ಸಂಖ್ಯೆ 15 ಸಾವಿರದಷ್ಟು ಕಡಿಮೆ ಆಗಿದೆ. ರಾಜ್ಯದಲ್ಲಿ ಬಿಜೆಪಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದಲೇ ಚುನಾವಣಾ ಆಯೋಗವು ಈ ಪ್ರಕ್ರಿಯೆ ನಡೆಸಿದೆ ಎಂದು ಟಿಎಂಸಿ ನಾಯಕರ ತಕರಾರು. ಒಂದು ಕಡೆಯಲ್ಲಿ ಎಸ್‌ಐಆರ್, ಇನ್ನೊಂದು ಕಡೆಯಲ್ಲಿ ಓವೈಸಿ–ಕಬೀರ್ ಮೈತ್ರಿ; ಇದರಿಂದ ನೇರ ಹೊಡೆತ ಟಿಎಂಸಿಯ ಮತ ಬ್ಯಾಂಕ್‌ಗೆ. ಈ ಬೆಳವಣಿಗೆಗಳಿಂದಾಗಿ ಮಮತಾ ಬ್ಯಾನರ್ಜಿ ಅವರಿಗೆ ಚುನಾವಣಾ ಕಣ ಕಡು ಕಠಿಣ ಆಗಿದೆ.

2021ರ ಚುನಾವಣೆಯಲ್ಲಿ 35 ಕ್ಷೇತ್ರಗಳಲ್ಲಿ ಗೆಲುವಿನ ಅಂತರ 5 ಸಾವಿರ ಮತಗಳಿಗಿಂತ ಕಡಿಮೆ. 70 ಕ್ಷೇತ್ರಗಳಲ್ಲಿ ಜಯದ ಅಂತರ 15 ಸಾವಿರ ಮತಗಳಿಗಿಂತ ಕಡಿಮೆ. ಕಳೆದ ಚುನಾವಣೆಯಲ್ಲಿ ಟಿಎಂಸಿ 213 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿದ್ದರೆ, ಬಿಜೆಪಿ 77 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಬಿಜೆಪಿ ಈ ಸಲ ಕಳೆದ ಬಾರಿಗಿಂತ ಹೆಚ್ಚು ಆಕ್ರಮಣಕಾರಿಯಾಗಿದೆ. ಹಳ್ಳಿ ಹಳ್ಳಿಗಳಲ್ಲೂ ಪಕ್ಷದ ಸಂಘಟನೆ ಬಲವಾಗುತ್ತಿದೆ. ಒಂದು ವೇಳೆ, ಕಬೀರ್ ಮತ್ತು ಓವೈಸಿ ಜೋಡಿಯು ಮುಸ್ಲಿಂ ಮತಗಳಲ್ಲಿ ಒಂದು ಸಣ್ಣ ಪಾಲನ್ನು (ಶೇ 2–5) ಸೆಳೆಯುವಲ್ಲಿ ಯಶಸ್ವಿಯಾದರೂ, ಬಿಗಿಯಾದ ಸ್ಪರ್ಧೆಯ ಕ್ಷೇತ್ರಗಳಲ್ಲಿ ಟಿಎಂಸಿಗೆ ಭಾರಿ ಹಾನಿ ಉಂಟುಮಾಡಬಹುದು.

ಪಿತೂರಿ ವಿಡಿಯೊ: ಪ.ಬಂಗಾಳದಲ್ಲಿ ರಾಜಕೀಯ ವಿವಾದ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಮುಂಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಸೋಲಿಸಲು ಟಿಎಂಸಿಯಿಂದ ಉಚ್ಚಾಟಿತರಾಗಿರುವ ಹುಮಾಯೂನ್ ಕಬೀರ್ ಪಿತೂರಿ ನಡೆಸಿದ್ದಾರೆ ಎನ್ನಲಾಗಿರುವ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದೀಗ ಪಶ್ಚಿಮ ಬಂಗಾಳದಲ್ಲಿ ರಾಜಕೀಯ ವಿವಾದಕ್ಕೂ ಕಾರಣವಾಗಿದೆ.

ಇದಕ್ಕೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್ ಪಕ್ಷವು ಗುರುವಾರ ಪತ್ರಿಕಾಗೋಷ್ಠಿ ನಡೆಸಿದ್ದು, ವಿಡಿಯೊವನ್ನು ಮಾಧ್ಯಮಗಳ ಮುಂದೆ ಹಂಚಿಕೊಂಡಿದೆ. ಅಲ್ಲದೇ, ಈ ಕುರಿತಂತೆ ಜಾರಿ ನಿರ್ದೇಶನಾಲಯ ತನಿಖೆ ನಡೆಸಬೇಕು ಎಂದೂ ಆಗ್ರಹಿಸಿದೆ.

‘ಮಮತಾ ಬ್ಯಾನರ್ಜಿ ಅವರನ್ನು ಸೋಲಿಸಲು ನಾನು ಯಾವ ಹಂತಕ್ಕೆ ಬೇಕಿದ್ದರೂ ಹೋಗುತ್ತೇನೆ. ಸುವೇಂದು ಅಧಿಕಾರಿ ಸೇರಿದಂತೆ ಬಿಜೆಪಿಯ ಹಲವು ಹಿರಿಯ ನಾಯಕರ ಜತೆಗೆ ಸಂಪರ್ಕದಲ್ಲಿದ್ದೇನೆ. ಪ್ರಧಾನಿ ಕಚೇರಿ ಜತೆಗೂ ಮಾತನಾಡಿದ್ದೇನೆ. ಬಿಜೆಪಿ ಆಡಳಿತದ ಇತರೆ ರಾಜ್ಯಗಳ ನಾಯಕರ ಜತೆಗೆ ಸಮನ್ವಯ ಸಾಧಿಸುವಂತೆ ಪಿಎಂಒ ಸಲಹೆ ನೀಡಿದೆ’ ಎಂದು ಕಬೀರ್ ವಿಡಿಯೊದಲ್ಲಿ ಹೇಳಿದ್ದಾರೆ ಎಂದು ಟಿಎಂಸಿ ಆರೋಪಿಸಿದೆ.

‘ಬಾಬರಿ ಮಸೀದಿ ವಿಚಾರವನ್ನು ಮುಂದಿಟ್ಟು ಟಿಎಂಸಿಯ ಮುಸ್ಲಿಂ ಮತಗಳನ್ನು ಬೇರೆಡೆಗೆ ತಿರುಗಿಸಿದರೆ ಅದರಿಂದ ಬಿಜೆಪಿಗೆ ಲಾಭವಾಗುತ್ತದೆ. ಈ ನಿಟ್ಟಿನಲ್ಲಿ ನಾನು ಕಾರ್ಯತಂತ್ರ ರೂಪಿಸುತ್ತಿದ್ದೇನೆ. ಎಲ್ಲಾ ಕ್ಷೇತ್ರಗಳಲ್ಲಿ ಈ ಕಾರ್ಯತಂತ್ರ ಜಾರಿಗೊಳಿಸಲು ನೂರಾರು ಕೋಟಿ ಹಣ ಬೇಕಾಗಬಹುದು’ ಎಂದೂ ಕಬೀರ್ ಹೇಳಿದ್ದಾರೆ ಎನ್ನಲಾಗಿದೆ.

ಟಿಎಂಸಿ ಹಿರಿಯ ನಾಯಕರಾದ ಫರ್ಹಾದ್ ಹಕೀಂ ಹಾಗೂ ಅರೂಪ್ ಬಿಸ್ವಾಸ್ ಅವರು ಈ ಬಗ್ಗೆ ಮಾತನಾಡಿ, ‘ರಾಜ್ಯದ ಚುನಾವಣಾ ಫಲಿತಾಂಶದ ಮೇಲೆ ಪ್ರಭಾವಬೀರಲು ರೂಪಿಸಿರುವ ಸಂಚನ್ನು ಈ ವಿಡಿಯೊ ಬಹಿರಂಗ ಪಡಿಸಿದೆ ಈ ಬಗ್ಗೆ ತನಿಖೆ ನಡೆಸಲೇಬೇಕು’ ಎಂದು ಆಗ್ರಹಿಸಿದ್ದಾರೆ.

ಸ್ತ್ರೀಯರಿಗೆ ತಿಂಗಳಿಗೆ ₹2 ಸಾವಿರ, 3 ಲಕ್ಷ ಹುದ್ದೆ ಭರ್ತಿ ಭರವಸೆ


ತಮಿಳುನಾಡು ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚೆನ್ನೈನಲ್ಲಿ ಗುರುವಾರ ಬಿಡುಗಡೆ ಮಾಡಿದರು. ಪ್ರಣಾಳಿಕೆ ಸಮಿತಿಯ ಅಧ್ಯಕ್ಷರೂ ಆದ ಸಂಸದ ಕಾರ್ತಿ ಚಿದಂಬರಂ ಮತ್ತಿತರರು ಜತೆಗಿದ್ದಾರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಖಾತೆಗೆ ತಿಂಗಳಿಗೆ ₹2 ಸಾವಿರ, 3 ಲಕ್ಷ ಸರ್ಕಾರಿ ಹುದ್ದೆ ಭರ್ತಿ, ಭೂರಹಿತ ರೈತರಿಗೆ ವಾರ್ಷಿಕ ₹6 ಸಾವಿರ ಸೇರಿದಂತೆ ತಮಿಳುನಾಡಿನ ಎಲ್ಲ ವರ್ಗದವರ ಹಿತ ಕಾಪಾಡುವ ಭರವಸೆಗಳನ್ನು ಒಳಗೊಂಡ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಚೆನ್ನೈನಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಗುರುವಾರ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಶಿವಕುಮಾರ್, ‘ಸಂಸದ ಕಾರ್ತಿ ಚಿದಂಬರಂ ಮತ್ತು ಅವರ ತಂಡ ತಮಿಳುನಾಡಿನ ಮೂಲೆ ಮೂಲೆಗೆ ತೆರಳಿ ಎಲ್ಲ ವರ್ಗದ ಜನರನ್ನು ಭೇಟಿ ಮಾಡಿ, ಜನರ ಭಾವನೆ ಅರಿತು ಈ ಪ್ರಣಾಳಿಕೆ ರೂಪಿಸಿದೆ. ಮಹಿಳೆಯರನ್ನು ಸಬಲರನ್ನಾಗಿ ಮಾಡಬೇಕು, ಮಹಿಳೆ ಶಕ್ತಿಶಾಲಿಯಾದರೆ ಕುಟುಂಬ ಶಕ್ತಿಶಾಲಿಯಾಗುತ್ತದೆ. ಕುಟುಂಬ ಶಕ್ತಿಶಾಲಿಯಾದರೆ, ಸಮಾಜ ಬಲಿಷ್ಠವಾಗುತ್ತದೆ. ಇದಕ್ಕಾಗಿ ಮಹಿಳೆಯರಿಗೆ ತಿಂಗಳಿಗೆ ₹2 ಸಾವಿರ ನೀಡಲು ತೀರ್ಮಾನಿಸಲಾಗಿದೆ. ನೇರ ಹಣ ವರ್ಗಾವಣೆ ಮೂಲಕ ಮಧ್ಯವರ್ತಿಗಳಿಲ್ಲದೆ ಫಲಾನುಭವಿಗಳಿಗೆ ಹಣ ತಲುಪಿಸಲಾಗುವುದು’ ಎಂದು ಆಶ್ವಾಸನೆ ನೀಡಿದರು.

‘ಆರೋಗ್ಯ, ಮೀನುಗಾರರ ಸಮಸ್ಯೆ, ಭೂ ದಾಖಲೆ ಹಂಚಿಕೆ ಯೋಜನೆಗಳನ್ನೂ ಪ್ರಣಾಳಿಕೆಯಲ್ಲಿ ಘೋಷಿಸಲಾಗಿದೆ. ರಾಜ್ಯದ ಜನರ ಅಗತ್ಯಕ್ಕೆ ತಕ್ಕಂತೆ ಯೋಜನೆ ರೂಪಿಸಲಾಗಿದೆ. ನಿರುದ್ಯೋಗಿ ಯುವಕರಿಗಾಗಿ 3 ಲಕ್ಷ ಸರ್ಕಾರಿ ಹುದ್ದೆಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲಾಗುವುದು. ಹುದ್ದೆ ಖಾಲಿಯಾದ 300 ದಿನಗಳಲ್ಲಿ ಅವುಗಳನ್ನು ಭರ್ತಿ ಮಾಡಲಾಗುವುದು. ತಮಿಳುನಾಡಿನ ದೇವಾಲಯಗಳತ್ತ ಜನರನ್ನು ಆಕರ್ಷಿಸಲು ಕಾರ್ಯಕ್ರಮ ರೂಪಿಸಲಾಗುವುದು. ಪಿಂಚಣಿ ಏರಿಕೆ ಮಾಡಲಾಗಿದ್ದು, ಭೂರಹಿತ ರೈತರಿಗೆ ವಾರ್ಷಿಕ ₹6 ಸಾವಿರ ಹಣ ನೀಡಲಾಗುವುದು’ ಎಂದರು.

ನುಡಿದಂತೆ ನಡೆದಿದ್ದೇವೆ: ‘ಕರ್ನಾಟಕದಲ್ಲಿ ನಾವು ಕೊಟ್ಟ ಐದು ಗ್ಯಾರಂಟಿ ಯೋಜನೆಗಳನ್ನು ಅಧಿಕಾರಕ್ಕೆ ಬಂದ ಮೊದಲ ಆರು ತಿಂಗಳ ಒಳಗಾಗಿ ಜಾರಿ ಮಾಡಿದ್ದೇವೆ. ನಾವು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ ಬಳಿಕ ಇಡೀ ದೇಶದೆಲ್ಲೆಡೆ ನಮ್ಮ ಮಾದರಿಯನ್ನೇ ಅನುಸರಿಸಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ನಮ್ಮ ಮೈತ್ರಿಕೂಟ ಜನಾಶೀರ್ವಾದದೊಂದಿಗೆ ಮತ್ತೆ ಅಧಿಕಾರಕ್ಕೆ ಬರಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ 90 ಲಕ್ಷ ಮತದಾರರ ಹೆಸರು ತೆಗೆಸಿದೆ: ಮಮತಾ

ಕೋಲ್ಕತ್ತ (ಪಿಟಿಐ): ‘ರಾಜ್ಯದಲ್ಲಿ ಅಧಿಕಾರ ಕಸಿದುಕೊಳ್ಳಲು ಬಿಜೆಪಿ 90 ಲಕ್ಷಕ್ಕೂ ಹೆಚ್ಚು ಜನರ ಹೆಸರನ್ನು ಮತದಾರರ ಪಟ್ಟಿಯಿಂದ ಅಳಿಸಿ ಹಾಕಿಸಿದೆ’ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಗುರುವಾರ ಆರೋಪಿಸಿದ್ದಾರೆ.

ಉತ್ತರ 24 ಪರಗಣ ಜಿಲ್ಲೆಯ ಮಿನಾಖಾನ್‌ನಲ್ಲಿ ಸಾರ್ವಜನಿಕ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಅಳಿಸಿ ಹಾಕಿರುವ ಎಲ್ಲರ ಹೆಸರನ್ನು ನ್ಯಾಯಾಲಯದ ಮೊರೆಹೋಗಿ ಟಿಎಂಸಿ ಮರು ಸೇರ್ಪಡೆ ಮಾಡಿಸಲಿದೆ’ ಎಂದು ಭರವಸೆ ನೀಡಿದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮುಗಿದ ನಂತರ ಪಶ್ಚಿಮ ಬಂಗಾಳದಲ್ಲಿ ಸುಮಾರು 91 ಲಕ್ಷ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಡಲಾಗಿದೆ ಎಂಬ ಮಾಹಿತಿ ಹೊರಬಿದ್ದ ಬೆನ್ನಲ್ಲೇ ಮಮತಾ ಅವರು ಬಿಜೆಪಿ ವಿರುದ್ಧ ಹರಿಹಾಯ್ದಿದ್ದಾರೆ.

ಬಂಗಾಳ ವಿಭಜಿಸುವ ತಂತ್ರ

‘ಪಶ್ಚಿಮ ಬಂಗಾಳವನ್ನು ಮೂರು ಪಾಲು ಮಾಡುವ ಉದ್ದೇಶದಿಂದಲೇ ಬಿಜೆಪಿ ಕ್ಷೇತ್ರ ಪುನರ್ ವಿಂಗಡಣೆ ಮಸೂದೆ ತರುತ್ತಿದೆ’ ಎಂದು ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ. ‘ಗುಜರಾತ್‌ನ ಕಿರಿಯ ಸಹೋದರ (ಅಮಿತ್ ಶಾ) ತನಿಖಾ ಸಂಸ್ಥೆಗಳ ಮೂಲಕ ಜನರಿಗೆ ತನಿಖೆಯ ಬೆದರಿಕೆ ಹಾಕುತ್ತಿದ್ದಾರೆ. ನಮ್ಮ ರಾಜ್ಯ ಮತ್ತು ಜನರ ರಕ್ಷಣೆಗೆ ರಾಜಕೀಯ ಮತ್ತು ಕಾನೂನಾತ್ಮಕ ಹೋರಾಟ ಮಾಡುತ್ತೇವೆ’ ಎಂದರು.

‘ಅಧಿಕಾರಕ್ಕೆ ಬರಲು ನೀವು ಎಸ್‌ಐಆರ್ ಮೂಲಕ 90 ಲಕ್ಷ ಮತದಾರರ ಹೆಸರು ತೆಗೆಸಿರಬಹುದು. ಆದರೆ, ಜಯ ನಮ್ಮದೇ’ ಎಂದಿದ್ದಾರೆ. ‘ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಬಂಗಾಳಿ ಭಾಷಿಕರಿಗೆ ಕಿರುಕುಳ ನೀಡಲಾಗುತ್ತಿದೆ. ಬಂಗಾಳಿ ಭಾಷೆ ವಿದೇಶಿ ಭಾಷೆ. ಆ ಭಾಷೆ ಮಾತನಾಡುವವರಿಗೆ ನುಸುಳುಕೋರರ ಪಟ್ಟ ಕಟ್ಟಲಾಗುತ್ತಿದೆ’ ಎಂದು ಮಮತಾ ಆರೋಪಿಸಿದರು.

ಪ್ರಧಾನಿ ಮೋದಿ ವಿರುದ್ಧ ಕಿಡಿ: ‘ಮೀನು ಉತ್ಪಾದನೆಯಲ್ಲಿ ಪಶ್ಚಿಮ ಬಂಗಾಳ ಸರ್ಕಾರ ವಿಫಲವಾಗಿದೆ. 15 ವರ್ಷಗಳಿಂದಲೂ ಬೇರೆ ರಾಜ್ಯಗಳಿಂದ ಆಮದು ಮಾಡಿಕೊಳ್ಳುತ್ತಿದೆ’ ಎಂಬ ಪ್ರಧಾನಿ ಮೋದಿ ಅವರ ಹೇಳಿಕೆಗೆ ಮಮತಾ ತಿರುಗೇಟು ನೀಡಿದ್ದಾರೆ.

‘ಮೋದಿ ವಾಸ್ತವ ಸಂಗತಿ ಹೇಳುತ್ತಿಲ್ಲ. ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಮಾಂಸಾಹಾರ ಸೇವನೆಗೂ ಅವಕಾಶ ನೀಡುತ್ತಿಲ್ಲ. ರಾಜಸ್ಥಾನ, ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಮೀನು, ಮೊಟ್ಟೆ, ಮಾಂಸ ಸೇವಿಸಲು ಬಿಡುತ್ತಿಲ್ಲ. ಮಾಂಸ ದಂಗಡಿಗಳನ್ನು ಮುಚ್ಚಿಸಲಾಗುತ್ತಿದೆ’ ಎಂದು ಆರೋಪಿಸಿದರು.

‘ಆಂಧ್ರ ಪ್ರದೇಶದಿಂದ ಮೀನು ತರಿಸುತ್ತಿದ್ದೆವು. ಅದೀಗ ನಿಂತುಹೋಗಿದೆ. ಪ್ರಧಾನಿ ಮೊದಲು ಅತ್ತ ಗಮನಹರಿಸಲಿ’ ಎಂದರು.

ಪಶ್ಚಿಮ ಬಂಗಾಳದ ಮತದಾರರಿಗೆ ಮೋದಿ ಕರೆ ಚುನಾವಣೆ: ಗ್ಯಾರಂಟಿ ಘೋಷಿಸಿದ ಪ್ರಧಾನಿ

‘ನಿರ್ಮಮ್’ ಸರ್ಕಾರ ಕಿತ್ತೊಗೆಯಿರಿ’

ಹಲ್ದಿಯಾ (ಪಿಟಿಐ): ಚುನಾವಣೆ ಹೊಸ್ತಿಲಿನಲ್ಲಿರುವ ಪಶ್ಚಿಮ ಬಂಗಾಳದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬಿಜೆಪಿ ಪರವಾಗಿ ಗುರುವಾರ ಆರು ಗ್ಯಾರಂಟಿಗಳನ್ನು ಘೋಷಿಸಿದ್ದಾರೆ. ಜತೆಗೆ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸರ್ಕಾರವನ್ನು ಅಧಿಕಾರದಿಂದ ಕಿತ್ತೊಗೆಯುವಂತೆ ಮತದಾರರನ್ನು ಪ್ರಧಾನಿ ಆಗ್ರಹಿಸಿದ್ದಾರೆ.

ಪುರ್ಬಾ ಮೇದಿನಿಪುರದ ಬಂದರು ನಗರಿ ‘ಹಲ್ದಿಯಾ’ದಲ್ಲಿ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಪ್ರಧಾನಿ ಮೋದಿ ರ‍್ಯಾಲಿ ನಡೆಸಿದ್ದಾರೆ. ಇದೇ ವೇಳೆ ಮುಖ್ಯಮಂತ್ರಿ ಮಮತಾ ನೇತೃತ್ವದ ಸರ್ಕಾರವನ್ನು ‘ನಿರ್ಮಮ್’ (ಮಮಕಾರವೇ ಇಲ್ಲದ; ಕ್ರೂರ) ಸರ್ಕಾರ ಎಂದು ಮೋದಿ ಕರೆದಿದ್ದಾರೆ.

‘ಇಡೀ ದೇಶವು ಅಭಿವೃದ್ಧಿಯ ಮಾರ್ಗದಲ್ಲಿ ನಡೆಯುತ್ತಿದ್ದರೆ, ಇತ್ತ ಮಮತಾ ಅವರ ‘ನಿರ್ಮಮ್’ ಸರ್ಕಾರ ರಾಜ್ಯವನ್ನು ಹಿಂದುಳಿಯುವಂತೆ ಮಾಡುತ್ತಿದೆ. ಪಶ್ಚಿಮ ಬಂಗಾಳವು ವಿಕಸಿತ ಬಂಗಾಳವಾಗಬೇಕಾದರೆ ಟಿಎಂಸಿಯನ್ನು ಕಿತ್ತೊಗೆಯಬೇಕು’ ಎಂದು ಪ್ರಧಾನಿ ಪ್ರತಿಪಾದಿಸಿದ್ದಾರೆ

ಟಿಎಂಸಿ ಆಡಳಿತದಲ್ಲಿ ಭಯದ ವಾತಾವರಣ ಆವರಿಸಿಕೊಂಡಿದೆ. ಎಲ್ಲಿ ಭಯವಿರುತ್ತದೆಯೋ ಅಲ್ಲಿ ಹೂಡಿಕೆ ಸಾಧ್ಯವಿಲ್ಲ. ಬಿಜೆಪಿ ಅಧಿಕಾರಕ್ಕೆ ಬಂದರೆ ವಿಶ್ವಾಸದ ವಾತಾವರಣ ಸೃಷ್ಟಿಸಿ, ನಂಬಿಕೆ ಆಧಾರದಲ್ಲಿ ಹೂಡಿಕೆಗಳನ್ನು ರಾಜ್ಯಕ್ಕೆ ತರಲಿದೆ ಎಂದೂ ಮೋದಿ ಭರವಸೆ ನೀಡಿದ್ದಾರೆ. ಅಲ್ಲದೇ, ಮೀನುಗಾರಿಕೆ ಮತ್ತು ಸಾಗರ ಆಹಾರೋತ್ಪನ್ನ ವಲಯದಲ್ಲಿ ರಾಜ್ಯವನ್ನು ಸ್ವಾವಲಂಬಿ ಆಗಿಸುವುದಾಗಿಯೂ ಹೇಳಿದ್ದಾರೆ.

6 ಮೋದಿ ಗ್ಯಾರಂಟಿಗಳು

- ಟಿಎಂಸಿ ಆಡಳಿತದಲ್ಲಿರುವ ಭಯದ ವಾತಾವರಣವನ್ನು ತೊಡೆದುಹಾಕಿ ವಿಶ್ವಾಸ, ನಂಬಿಕೆ ಆಧರಿತ ವ್ಯವಸ್ಥೆಯನ್ನು ಸೃಷ್ಟಿಸಲಾಗುವುದು
- ಸಾರ್ವಜನಿಕ ಸೇವೆಯಲ್ಲಿರುವವರು ತೆಗೆದುಕೊಳ್ಳುವ ಎಲ್ಲಾ ಕ್ರಮಗಳು ಸಾರ್ವಜನಿಕರಿಗೆ ಉತ್ತರದಾಯಿ ಆಗಿರುವಂತೆ ಮಾಡುವುದು
- ಟಿಎಂಸಿ ಮುಚ್ಚಿಹಾಕಿರುವ ಭ್ರಷ್ಟಾಚಾರದ ಎಲ್ಲಾ ಪ್ರಕರಣಗಳು, ಮಹಿಳೆಯರ ವಿರುದ್ಧದ ದೌರ್ಜನ್ಯ ಪ್ರಕರಣಗಳನ್ನು ಬಿಜೆಪಿ ಮತ್ತೆ ತೆರೆದು ತನಿಖೆ ನಡೆಸಲಿದೆ
- ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಎಲ್ಲಾ ನಾಯಕರನ್ನೂ ಜೈಲಿಗೆ ಕಳುಹಿಸಲಾಗುವುದು, ಟಿಎಂಸಿಯ ಯಾವ ಗೂಂಡಾ ಕೂಡ ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳಲಾಗದು
- ಎಲ್ಲಾ ಅರ್ಹ ನಾಗರಿಕರಿಗೆ ಸರ್ಕಾರದ ಸೌಲಭ್ಯ, ಯೋಜನೆ ತಲುಪುವಂತೆ ಮಾಡಲಾಗುವುದು. ನುಸುಳುಕೋರರಿಗೆ ದೇಶದಲ್ಲಿ ಇರಲು ಅವಕಾಶ ನೀಡಲಾಗದು
- ರಾಜ್ಯದ ಸರ್ಕಾರಿ ಉದ್ಯೋಗಿಗಳಿಗೆ, ಶಿಕ್ಷಕರಿಗೆ ಹಾಗೂ ಸಂಬಂಧಿತ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವವರಿಗಾಗಿ 7ನೇ ಹಣಕಾಸು ಆಯೋಗವನ್ನು ಬಿಜೆಪಿ ಸರ್ಕಾರ ರಚನೆಯಾದ ತಕ್ಷಣವೇ ಜಾರಿಗೊಳಿಸಲಾಗುವುದು



‘ನಾರಿಶಕ್ತಿಯ ಒಟ್ಟಾಗಿ ಬಲಪಡಿಸೋಣ’

ನವದೆಹಲಿ (ಪಿಟಿಐ): ಮಹಿಳಾ ಮೀಸಲಾತಿ ಕಾಯ್ದೆಯ ಪ್ರಸ್ತಾವಿತ ತಿದ್ದುಪಡಿಯು ಕೇವಲ ಶಾಸನ ಜಾರಿ ಪ್ರಕ್ರಿಯೆ ಅಲ್ಲ. ಬದಲಿಗೆ ಭಾರತದಾದ್ಯಂತ ಕೋಟ್ಯಂತರ ಮಹಿಳೆಯರ ಆಕಾಂಕ್ಷೆಗಳ ಪ್ರತಿಬಿಂಬವಾಗಿದೆ. ಈ ಕ್ರಮವನ್ನು ಬೆಂಬಲಿಸಲು ಎಲ್ಲಾ ಸಂಸದರೂ ಒಟ್ಟಾಗಬೇಕು ಎಂದು ಪ್ರಧಾನಿ ಮೋದಿ ಗುರುವಾರ ಕರೆ ನೀಡಿದ್ದಾರೆ.

‘ನಾರಿ ಶಕ್ತಿ ವಂದನಾ ಅಧಿನಿಯಮ’ ಅಥವಾ ಮಹಿಳಾ ಮೀಸಲಾತಿ ಕಾಯ್ದೆಗೆ ತಿದ್ದುಪಡಿಗಳನ್ನು ತರುವ ಕರಡು ಮಸೂದೆಗಳಿಗೆ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟವು ಬುಧವಾರ ಅನುಮೋದನೆ ನೀಡಿದೆ. 2029ರ ಸಾರ್ವತ್ರಿಕ ಚುನಾವಣೆಯಿಂದಲೇ ಮೀಸಲು ಅನ್ವಯಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಪ್ರಧಾನಿ ಮೋದಿ ಗುರುವಾರ ತಮ್ಮ ವೆಬ್‌ಸೈಟ್‌ನಲ್ಲಿ ಲೇಖನವೊಂದನ್ನು ಹಂಚಿಕೊಂಡಿದ್ದು, ಅದರಲ್ಲಿ ಮಸೂದೆಗೆ ಬೆಂಬಲ ಸೂಚಿಸುವಂತೆ ಸಂಸದರನ್ನು ಕೋರಿದ್ದಾರೆ. ಜತೆಗೆ ಮಹಿಳಾ ಮೀಸಲಾತಿಯ ಬಗ್ಗೆ ಚರ್ಚಿಸಲು ಹಾಗೂ ಮಸೂದೆಯನ್ನು ಅಂಗೀಕರಿಸಲು ಸಂಸತ್‌ನ ಬಜೆಟ್ ಅಧಿವೇಶನವನ್ನು ವಿಸ್ತರಿಸಲಾಗಿದೆ, ಏಪ್ರಿಲ್ 16ರಿಂದ 18ರವರೆಗೆ ವಿಶೇಷ ಅಧಿವೇಶನ ನಡೆಯಲಿದೆ ಎಂದೂ ತಿಳಿಸಿದ್ದಾರೆ.

ಅಲ್ಲದೇ, ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯಲು ಹಾಗೂ ರಾಷ್ಟ್ರದ ಅಭಿವೃದ್ಧಿಗಾಗಿ ನಾರಿ ಶಕ್ತಿಯನ್ನು ಬಲಪಡಿಸಲು ಈ ಅವಕಾಶವನ್ನು ಜವಾಬ್ದಾರಿಯಿಂದ ಬಳಸಿಕೊಳ್ಳೋಣ ಎಂದರು.

ಪುದುಚೆರಿಯಲ್ಲಿ ಶೇ 90ರಷ್ಟು ಮತದಾನ

ಪುದುಚೆರಿ (ಪಿಟಿಐ): 30 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಕೇಂದ್ರಾಡಳಿತ ಪ್ರದೇಶ ಪುದುಚೆರಿಯ ವಿಧಾನಸಭೆಗೆ ಗುರುವಾರ ನಡೆದ ಚುನಾವಣೆಯಲ್ಲಿ ಉತ್ತಮ ಮತದಾನ ನಡೆದಿದ್ದು, ಶೇ 89.83ರಷ್ಟು ಮತದಾನ ದಾಖಲಾಗಿದೆ. ಇದು 1964ರ ನಂತರ ದಾಖಲಾದ ಅತ್ಯಧಿಕ ಮತದಾನವಾಗಿದೆ.

2021ರಲ್ಲಿ ನಡೆದ ಚುನಾವಣೆಯಲ್ಲಿ ಇಲ್ಲಿ ಶೇ 83.38ರಷ್ಟು ಮತದಾನವಾಗಿತ್ತು. ಇಲ್ಲಿ ಎನ್‌ಡಿಎ ಅಧಿಕಾರ ಉಳಿಸಿಕೊಳ್ಳಲು ಹವಣಿಸುತ್ತಿದ್ದರೆ, ಕಾಂಗ್ರೆಸ್ ನೇತೃತ್ವದ ಬಣವು ಅಧಿಕಾರ ಕಸಿದುಕೊಳ್ಳಲು ಯತ್ನಿಸುತ್ತಿದೆ. ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷವು ಎರಡೂ ಬಣಗಳಿಗೆ ಪೈಪೋಟಿಯೊಡ್ಡಿದೆ.

ಮತದಾನ ಮಾಡಲು...

ಪಿಟಿಐ ಚಿತ್ರ

ಅಸ್ಸಾಂನ ದರ್‍ರಾಂಗ್‌ನಲ್ಲಿ, ಮತಗಟ್ಟೆಗೆ ಹೋಗಲು ಮತದಾರರು ಬ್ರಹ್ಮಪುತ್ರ ನದಿಯನ್ನು ದೋಣಿಯಲ್ಲಿ ದಾಟಿದರು

ಮೋದಿ ಏಟಿಗೆ ಟಿಎಂಸಿ ‘ಫ್ಯಾಕ್ಟ್‌ಚೆಕ್’ ತಿರುಗೇಟು

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಹಲ್ದಿಯಾದಲ್ಲಿ ನಡೆದ ರ‍್ಯಾಲಿಯಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಮಾಡಿದ ಆರೋಪಗಳಿಗೆ ಟಿಎಂಸಿ ರಾಜ್ಯಸಭಾ ಸದಸ್ಯ ಡೆರೆಕ್ ಒಬ್ರಿಯಾನ್ ‘ಫ್ಯಾಕ್ಟ್ ಚೆಕ್’ ಮೂಲಕ ತಿರುಗೇಟು ನೀಡಿದ್ದಾರೆ. ಮೋದಿ ಅವರ ಹೇಳಿಕೆಗಳಿಗೆ ವಿರುದ್ಧವಾಗಿರುವ 7 ಅಂಶಗಳ ಸತ್ಯಾಸತ್ಯತೆಯನ್ನು ‘ಎಕ್ಸ್’ನಲ್ಲಿ ಹಂಚಿಕೊಳ್ಳುವ ಮೂಲಕ ಟಿಎಂಸಿ ಪರ ಒಬ್ರಿಯಾನ್ ಸ್ಪಷ್ಟತೆ ನೀಡಿದ್ದಾರೆ.

ಮೋದಿ ಮಾಡಿದ ಆರೋಪಗಳು

- ಭಾರತ ವೇಗವಾಗಿ ಮುಂದುವರಿಯುತ್ತಿದ್ದರೂ ಟಿಎಂಸಿಯಿಂದಾಗಿ ಪಶ್ಚಿಮ ಬಂಗಾಳ ಹಿಂದುಳಿದಿದೆ
- ರಾಜ್ಯದಲ್ಲಿ ಕಾರ್ಖಾನೆಗಳನ್ನು ಮುಚ್ಚಲಾಗಿದ್ದು, ಜನರು ಕೆಲಸಕ್ಕಾಗಿ ಹೊರರಾಜ್ಯಗಳಿಗೆ ಹೋಗುತ್ತಿದ್ದಾರೆ
- ಬಿಜೆಪಿ ಆಡಳಿತದ ರಾಜ್ಯಗಳು ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿವೆ
- ರಾಜ್ಯದ ಯುವಜನತೆಗೆ ಟಿಎಂಸಿ ನೇತೃತ್ವದ ಸರ್ಕಾರ ದ್ರೋಹ ಬಗೆದಿದೆ
- ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಳವಾಗಿದ್ದು, ಬಿಜೆಪಿ ಅಧಿಕಾರಕ್ಕೆ ಬಂದರೆ ಅವುಗಳನ್ನು ತನಿಖೆ ಮಾಡುತ್ತದೆ

ಒಬ್ರಿಯಾನ್ ಉಲ್ಲೇಖಿಸಿದ ಅಂಶಗಳು

- 15 ವರ್ಷಗಳಲ್ಲಿ ರಾಜ್ಯದ ದೇಶೀಯ ಉತ್ಪನ್ನ 5 ಪಟ್ಟು ಹೆಚ್ಚಾಗಿದ್ದು, ರಫ್ತು ಕೂಡ ಹೆಚ್ಚಿದೆ. ವಿಶ್ವದಲ್ಲಿ ಅತಿಹೆಚ್ಚು ಬಡವರು ಭಾರತದಲ್ಲಿದ್ದು, ಪ್ರತಿ ಐವರು ಭಾರತೀಯರಲ್ಲಿ ನಾಲ್ವರು ಪ್ರತಿದಿನ ₹171 ಗಳಿಸಲು ಸಾಧ್ಯವಾಗುತ್ತಿದೆ
- 2011ಕ್ಕೆ ಹೋಲಿಸಿದರೆ (1.37 ಲಕ್ಷ) 2025ರಲ್ಲಿ (2.50 ಲಕ್ಷ) ರಾಜ್ಯದಲ್ಲಿ ನೋಂದಣಿಯಾದ ಕಂಪನಿಗಳ ಸಂಖ್ಯೆ ಶೇ 83ರಷ್ಟು ಹೆಚ್ಚಿದೆ. ಪ್ರತಿವರ್ಷ 7,500ಕ್ಕೂ ಅಧಿಕ ಕಂಪನಿಗಳು ನೋಂದಣಿಯಾಗಿವೆ
- ನೀತಿ ಆಯೋಗದ ವರದಿಗಳ ಪ್ರಕಾರ 21 ಕೋಟಿ ಭಾರತೀಯರು ಇನ್ನೂ ಬಹು ಆಯಾಮದ ಬಡತನದಲ್ಲಿ ಬದುಕುತ್ತಿದ್ದಾರೆ. ರಾಜ್ಯಕ್ಕೆ ನೀಡಬೇಕಿದ್ದ ₹2 ಲಕ್ಷ ಕೋಟಿ ಹಣವನ್ನು ಕೇಂದ್ರ ನೀಡಿಲ್ಲ
- ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗಗಳು ಖಾಲಿ ಇದ್ದರೂ ಪಾರದರ್ಶಕವಾಗಿ ಕೇಂದ್ರವು ಅವುಗಳನ್ನು ಭರ್ತಿ ಮಾಡುತ್ತಿಲ್ಲ
- ದೇಶದಲ್ಲಿ ಪ್ರತಿ ಮೂವರಲ್ಲಿ ಒಬ್ಬರು ಉದ್ಯೋಗ, ಶಿಕ್ಷಣ ಅಥವಾ ತರಬೇತಿಯಿಂದ ವಂಚಿತರಾಗಿದ್ದಾರೆ
- ಪಶ್ಚಿಮ ಬಂಗಾಳದಲ್ಲಿ 2 ಕೋಟಿ ಉದ್ಯೋಗ ಸೃಷ್ಟಿಯಿಂದಾಗಿ ನಿರುದ್ಯೋಗ ಸಮಸ್ಯೆಯನ್ನು ಶೇ 40ರಷ್ಟು ಕಡಿಮೆ ಮಾಡಲಾಗಿದೆ
- ಗೃಹ ಸಚಿವಾಲಯದ ವರದಿಗಳ ಪ್ರಕಾರ ಸತತ 4 ವರ್ಷ ಕೋಲ್ಕತ್ತ ಸುರಕ್ಷಿತ ನಗರ ಎಂಬ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಆದರೆ, ಇತ್ತ ಬಿಜೆಪಿಯು ಮಹಿಳಾ ಕುಸ್ತಿ ಪಟುಗಳಿಗೆ ಕಿರುಕುಳ ನೀಡಿದ ಬಿಜೆಪಿ ಸಂಸದನ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಬಿಲ್ಕಿಸ್ ಬಾನೊ ಅತ್ಯಾಚಾರ ಆರೋಪಿಗಳನ್ನು ಬಿಡುಗಡೆ ಮಾಡಲಾಯಿತು. ಬಿಜೆಪಿ ಆಡಳಿತದ ಉತ್ತರ ಪ್ರದೇಶದ ಹಾಥರಸ್‌ನ ಉನ್ನಾವೊದಲ್ಲಿ ಭಯಾನಕ ಘಟನೆಗಳು ನಡೆದವು

ಬಾರಾಮತಿ: ನಾಮಪತ್ರ ಹಿಂಪಡೆದ ಕಾಂಗ್ರೆಸ್

ಮುಂಬೈ/ಪುಣೆ (ಪಿಟಿಐ): ಬಾರಾಮತಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಹೊಸ್ತಿಲಿನಲ್ಲಿರುವಾಗಲೇ ಕಾಂಗ್ರೆಸ್ ಪಕ್ಷವು ಈ ಕ್ಷೇತ್ರದಲ್ಲಿ ಕಣಕ್ಕಿಳಿಸಿದ್ದ ತನ್ನ ಅಭ್ಯರ್ಥಿಯ ನಾಮಪತ್ರವನ್ನು ಹಿಂಪಡೆದಿದೆ. ಮಹಾರಾಷ್ಟ್ರ ರಾಜಕೀಯ ಸಂಸ್ಕೃತಿಯನ್ನು ಹಾಗೂ ಘನತೆಯನ್ನು ಕಾಪಾಡಲು ಈ ನಿರ್ಣಯ ತೆಗೆದುಕೊಂಡಿರುವುದಾಗಿ ಕಾಂಗ್ರೆಸ್ ಹೇಳಿದೆ. ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಸುನೇತ್ರಾ ಪವಾರ್ ಅವರು ಬಾರಾಮತಿಯಿಂದ ಸ್ಪರ್ಧಿಸುತ್ತಿದ್ದು, ಅವರ ವಿರುದ್ಧ ಆಕಾಶ್ ಮೋರೆ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿತ್ತು.ಆದರೆ, ಪಕ್ಷದ ನಾಯಕತ್ವದ ಸೂಚನೆ ಮೇರೆಗೆ ನಾಮಪತ್ರ ಹಿಂಪಡೆದಿದ್ದೇನೆ’ ಎಂದು ಆಕಾಶ್ ತಿಳಿಸಿದ್ದಾರೆ.

ಮಹಿಳಾ ಮೀಸಲಾತಿಗೆ ಬೆಂಬಲವಿದೆ; ರಾಜ್ಯಗಳು ಶಿಕ್ಷೆಗೆ ಒಳಗಾಗದಿರಲಿ: ಸ್ಟಾಲಿನ್

‘ಮಹಿಳಾ ಮಸೂದೆ: ಅನುಮಾನ ಹುಟ್ಟಿಸುತ್ತಿದೆ’

ಚೆನ್ನೈ (ಪಿಟಿಐ): ತಮಿಳುನಾಡು ಸೇರಿ ಇತರ ರಾಜ್ಯಗಳಲ್ಲಿ ಚುನಾವಣೆ ಹತ್ತಿರ ಇರುವಾಗ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ತಿದ್ದುಪಡಿ ಮಸೂದೆ ತಂದಿರುವುದು, ಚುನಾವಣೆಯಲ್ಲಿ ಲಾಭ ಪಡೆಯಲು ಮಾಡಿದ ಮತ್ತೊಂದು ರಾಜಕೀಯ ಗಿಮಿಕ್ ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಗುರುವಾರ ಆರೋಪಿಸಿದ್ದಾರೆ.

‘ಪ್ರಸ್ತಾಪಿತ ತಿದ್ದುಪಡಿಯ ಸಮಯವು ಗಂಭೀರ ಅನುಮಾನಗಳನ್ನು ಹುಟ್ಟುಹಾಕುತ್ತಿದೆ. ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಿರುವ ಮಧ್ಯೆಯೇ ಇಂತಹ ದೊಡ್ಡ ನಿರ್ಧಾರವನ್ನು ತರುವ ಅಗತ್ಯವೇನಿತ್ತು? 2024ರ ಲೋಕಸಭಾ ಚುನಾವಣೆಯ ಮುನ್ನ ಮಹಿಳಾ ಮತದಾರರನ್ನು ಸೆಳೆಯಲು ಮಾಡಿದಂತೆಯೇ ಈಗಲೂ ಮಾಡುತ್ತಿದ್ದಾರೆ’ ಎಂದು ‘ಇದು ಸುಧಾರಣೆಯಲ್ಲ, ಅಧಿಕಾರ ಮರುಹೊಂದಾಣಿಕೆ ಮಾಡುವ ತಂತ್ರ’ ಎಂಬ ತಲೆಬರಹವಿರುವ ಹೇಳಿಕೆಯಲ್ಲಿ ಸ್ಟಾಲಿನ್ ಆರೋಪ ಮಾಡಿದ್ದಾರೆ.


ಎಂ.ಕೆ.ಸ್ಟಾಲಿನ್

‘ನಾನು ನಿಸ್ಸಂದಿಗ್ಧವಾಗಿ ಹೇಳುತ್ತಿದ್ದೇನೆ; ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿಗೆ ನಮ್ಮ ಸಂಪೂರ್ಣ ಬೆಂಬಲವಿದೆ. ಆದರೆ ಸೀಟುಗಳನ್ನು ಹೆಚ್ಚಿಸದೆ, ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿದ ರಾಜ್ಯಗಳನ್ನು ಶಿಕ್ಷಿಸದೆ ಅದನ್ನು ಜಾರಿಗೆ ತರಬೇಕು. ಒಳ್ಳೆಯ ಉದ್ದೇಶವಿದ್ದರೆ, ಈಗಿರುವ ವ್ಯವಸ್ಥೆಯಲ್ಲೇ ತಕ್ಷಣವೇ ಜಾರಿಗೆ ತರಲು ಯಾವುದೇ ತೊಂದರೆಯಿಲ್ಲ’ ಎಂದು ಅವರು ಹೇಳಿದ್ದಾರೆ.

‘ಕ್ಷೇತ್ರ ಮರುವಿಂಗಡಣೆ ಹೇಗೆ ಮಾಡಲಾಗುತ್ತಿದೆ?’

ನ್ಯಾಯಯುತವಾದ ಕ್ಷೇತ್ರ ಮರುವಿಂಗಡಣೆಗೆ ಒತ್ತಾಯಿಸಿರುವ ಸ್ಟಾಲಿನ್ ಅವರು, ‘ಕ್ಷೇತ್ರ ಮರುವಿಂಗಡಣೆಯನ್ನು ಯಾವ ಆಧಾರದ ಮೇಲೆ ಮಾಡಲಾಗುತ್ತಿದೆ ಎಂಬುದು ಯಾರಿಗೂ ಗೊತ್ತಿಲ್ಲ. ಇದು ಜನಸಂಖ್ಯಾ ನಿಯಂತ್ರಣಕ್ಕೆ ಮೊದಲು ಇದ್ದ 1971ರ ಅಂಕಿ–ಅಂಶಗಳ ಮೇಲೋ ಅಥವಾ 2021ರ ಜನಗಣತಿಯ ಮೇಲೋ’ ಎಂದು ಪ್ರಶ್ನಿಸಿದ್ದಾರೆ.

‘ಸರ್ಕಾರದ ಅಸ್ಪಷ್ಟ ಭರವಸೆಗಳು ಅನುಮಾನ ಹೆಚ್ಚು ಮಾಡುತ್ತಿವೆ. ಈ ನಿರ್ಧಾರದಿಂದ ರಾಜ್ಯಗಳ ಮೇಲೆ ಭಾರಿ ಹಣಕಾಸಿನ ಹೊರೆ ಬೀಳುತ್ತದೆ ಮತ್ತು ವಿಧಾನಸಭೆಗಳನ್ನು ವಿಸ್ತರಿಸುವ ಅಥವಾ ಹೊಸದಾಗಿ ಕಟ್ಟುವ ಅನಿವಾರ್ಯ ಎದುರಾಗುತ್ತದೆ. ಇದೆಲ್ಲವೂ ಸರಿಯಾದ ಚರ್ಚೆ ನಡೆಸದೆ ಮಾಡಲಾಗುತ್ತಿದೆ’ ಎಂದು ಅವರು ಹೇಳಿದ್ದಾರೆ

ಕೇರಳ: ವಿವಿಧೆಡೆ ನಕಲಿ ಮತದಾನದ ಸದ್ದು

ತಿರುವನಂತಪುರ (ಪಿಟಿಐ): ಕೇರಳ ವಿಧಾನಸಭೆ ಗುರುವಾರ ನಡೆದ ಚುನಾವಣೆಯಲ್ಲಿ ಕೆಲವೆಡೆ ನಕಲಿ ಮತದಾನದ ಆರೋಪಗಳು ಕೇಳಿ ಬಂದಿದ್ದರೆ, ವಿವಿಧೆಡೆ ಪ್ರತಿಭಟನೆಗಳು ನಡೆದಿವೆ. ಕೆಲವೆಡೆ ‘ಟೆಂಡರ್ ಮತದಾನ’ಕ್ಕೆ ಅವಕಾಶ ನೀಡಲಾಗಿದೆ.

ರಾಜ್ಯದ 140 ವಿಧಾನಸಭಾ ಕ್ಷೇತ್ರಗಳಲ್ಲಿ 883 ಅಭ್ಯರ್ಥಿಗಳು ಅದೃಷ್ಟ ಪರೀಕ್ಷೆ ಎದುರಿಸಿದರು. ಒಟ್ಟು ಶೇ 78.12 ರಷ್ಟು ಮತದಾನ ದಾಖಲಾಗಿದೆ. 2021ರ ವಿಧಾನಸಭಾ ಚುನಾವಣೆಯಲ್ಲಿ ಶೇ 76ರಷ್ಟು ಮತದಾನ ನಡೆದಿತ್ತು.

ಅಂಚೆ ಮತದಿಂದ ಗೊಂದಲ: ತ್ರಿಶ್ಶೂರ್ ಮತ್ತು ಕೋಯಿಕ್ಕೋಡ್ ಮತಗಟ್ಟೆಯಲ್ಲಿ ಮತಚಲಾಯಿಸಲು ಹೋದ ಇಬ್ಬರು ಮತದಾರರಿಗೆ ಈಗಾಗಲೇ ಅಂಚೆ ಮತಪತ್ರದ ಮೂಲಕ ತಮ್ಮ ಮತದಾನ ದಾಖಲಾಗಿದೆ ಎಂದು ಹೇಳಿದ್ದರಿಂದ ಗೊಂದಲ ಉಂಟಾಗಿ ಪ್ರತಿಭಟನೆಗಳು ನಡೆದಿವೆ. ಬಳಿಕ ತ್ರಿಶ್ಶೂರ್‌ನಲ್ಲಿ ಟೆಂಡರ್ ಮತದಾನಕ್ಕೆ ಅವಕಾಶ ನೀಡಿದರೂ, ಮತದಾರರು ಮತ ಚಲಾಯಿಸದೆ ಹಿಂದಿರುಗಿದ್ದಾರೆ. ಪಾಲಕ್ಕಾಡ್, ತಿರುವನಂತಪುರದ ಕೆಲವೆಡೆ ಮೂಲ ಮತದಾರ ಹೆಸರಿನಲ್ಲಿ ಅನ್ಯರು ಮತ ಚಲಾಯಿಸಿದ್ದಾರೆ ಎಂಬ ದೂರುಗಳು ವ್ಯಕ್ತವಾದವು. ಇದರಿಂದ ಇಲ್ಲೆಲ್ಲ ಪ್ರತಿಭಟನೆಗಳು ನಡೆದವು. ಬಳಿಕ ಈ ಭಾಗದಲ್ಲಿ ಬಾಧಿತ ಮತದಾರರಿಗೆ ‘ಟೆಂಡರ್ ಮತ’ ಚಲಾಯಿಸಲು ಅವಕಾಶ ನೀಡಲಾಯಿತು.

ವಿವಾಹದ ನಡುವೆಯೂ ಮತ ಚಲಾವಣೆ: ಪತ್ತನಂತಿಟ್ಟ ಜಿಲ್ಲೆಯ ನವ ದಂಪತಿ ಗುರುವಾರ ತಮ್ಮ ವಿವಾಹವಾದ ಬೆನ್ನಲ್ಲೇ, ಮದುವೆ ಮನೆಯಿಂದ ಹೋಗಿ ಮತ ಚಲಾಯಿಸಿದರು. ಇನ್ನೊಂದೆಡೆ ವಯನಾಡ್ ಜಿಲ್ಲೆಯ ವಧುವೊಬ್ಬರು ಮದುವೆ ಸಮಾರಂಭಕ್ಕೆ ಹೋಗುವ ಮೊದಲು ಮತಗಟ್ಟೆಗೆ ಹೋಗಿ ಮತದಾನ ಮಾಡಿದರು.

ಅಸ್ಸಾಂನಲ್ಲಿ ದಾಖಲೆ ಮತದಾನ

ಗುವಾಹಟಿ (ಪಿಟಿಐ): ಅಸ್ಸಾಂನ 126 ವಿಧಾನಸಭಾ ಕ್ಷೇತ್ರಗಳಲ್ಲಿ ಕಣದಲ್ಲಿರುವ 722 ಅಭ್ಯರ್ಥಿಗಳ ಭವಿಷ್ಯ ವಿದ್ಯುನ್ಮಾನ ಮತಯಂತ್ರಗಳಲ್ಲಿ (ಇವಿಎಂ) ಗುರುವಾರ ದಾಖಲಾಗಿದೆ. ಈ ಬಾರಿ ದಾಖಲೆಯ ಶೇ 85.38ರಷ್ಟು ಮತದಾನ ದಾಖಲಾಗಿದೆ.

ದಲ್ಗಾಂವ್‌ನಲ್ಲಿ ಅತಿ ಹೆಚ್ಚು (ಶೇ 95.53) ಮತದಾನವಾಗಿದ್ದರೆ, ನ್ಯೂ ಗುವಾಹಟಿಯಲ್ಲಿ ಅತಿ ಕಡಿಮೆ (ಶೇ 72.05) ಮತದಾನವಾಗಿದೆ. 2021ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಶೇ 82.04ರಷ್ಟು ಮತದಾನವಾಗಿತ್ತು. ಅಸ್ಸಾಂನ ವಿವಿಧೆಡೆ ನಡೆದ ಹಿಂಸಾಚಾರದಲ್ಲಿ ಸುಮಾರು 30 ಮಂದಿ ಗಾಯಗೊಂಡಿದ್ದು, ಏಳು ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಜುಬೀನ್ ಪತ್ನಿ ಮತದಾನ

ಅನುಮಾನಾಸ್ಪದವಾಗಿ ಮೃತಪಟ್ಟ ಗಾಯಕ ಜುಬೀನ್ ಗರ್ಗ್ ಅವರ ಪತ್ನಿ ಗರಿಮಾ ಸೈಕಿಯಾ ಗರ್ಗ್ ಅವರು ಗುವಾಹಟಿಯ ದಿಸ್ಪುರ್ ಕ್ಷೇತ್ರದಲ್ಲಿ ಮತಚಲಾಯಿಸಿದರು. ‘ಪತಿಯ ಸಾವಿಗೆ ತ್ವರಿತ ನ್ಯಾಯ ದೊರೆಯುವ ಆಶಯವಿದೆ. ಜನರು ತಮ್ಮ ಆಯ್ಕೆಯ ಸರ್ಕಾರವನ್ನು ಆರಿಸಲು ಮತಚಲಾಯಿಸಬೇಕು’ ಎಂದರು.

ಗಾಳಿಯಲ್ಲಿ ಗುಂಡು

ತಮುಲ್ಪುರದಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದ ಬಗ್ಗೆ ಮಾಹಿತಿ ಬಂದ ಕೂಡಲೇ ಪೊಲೀಸರು ಸ್ಥಳಕ್ಕೆ ಹೋಗಿ ಪರಿಸ್ಥಿತಿ ನಿಯಂತ್ರಿಸಲು ಗಾಳಿಯಲ್ಲಿ ಕೆಲ ಸುತ್ತು ಗುಂಡುಗಳನ್ನು ಹಾರಿಸಿದರು.

PARISHRAMA
PU COLLEGE | NEET ACADEMY

PU College Recognised by Government of Karnataka. College Code: AS1057
NEET ACADEMY Recognised by Ministry of Corporate Affair (GoI)

ಎರಡು ವರ್ಷಗಳ ನಿರಂತರ ಪರಿಶ್ರಮದ ಪ್ರತಿಫಲ

ಚರಿತ್ರೆ ಸೃಷ್ಟಿಸುವುದು ನಮಗೆ ಹೊಸದೇನಲ್ಲ. ಪ್ರಾರಂಭಿಸಿದ ಮೊದಲ ವರ್ಷದಲ್ಲೇ

ಕರ್ನಾಟಕದ No.1 ಪಿಯು ಕಾಲೇಜಾಗಿ ಹೊರಹೊಮ್ಮಿದ್ದೇವೆ!

ಶ್ರದ್ಧೆ, ಏಕಾಗ್ರತೆ ಹಾಗೂ ದಿನಕ್ಕೆ ಹದಿನಾರು ತಾಸು ಅಧ್ಯಯನದ ಫಲಿತಾಂಶವೇ ಈ ಸಾಧನೆ. ಎರಡು ವರ್ಷ ಮೊಬೈಲ್ ಮತ್ತು ಸಾಮಾಜಿಕ ಜಾಲತಾಣದಿಂದ ಸಂಪೂರ್ಣ ದೂರವಿದ್ದು, ಅಧ್ಯಯನ ಮಾಡಿರುವುದರಿಂದ ಸರಸ್ವತಿ ನಮ್ಮನ್ನು ಆಶೀರ್ವದಿಸಿದ್ದಾಳೆ.

ಪರಿಶ್ರಮಕ್ಕೆ, ಪರಿಶ್ರಮ ಕಟ್ಟಿದ ವಿದ್ಯಾರ್ಥಿಗಳಿಗೆ, ಪರಿಶ್ರಮವನ್ನು ರೂಪಿಸಿದ ನಾಯಕತ್ವಕ್ಕೆ ಮತ್ತು ಪರಿಶ್ರಮವನ್ನು ನಂಬಿದ ಪೋಷಕರಿಗೆ ಈ ಗೆಲುವು ಅರ್ಪಣೆ.

TOTAL SCORE 586 — Aishwarya B
Physics : 99, Biology : 94, Chemistry : 96, 2nd language : 97, Maths : 100, English : 100

TOTAL SCORE 595 — Likhith N R
Physics : 100, Biology : 99, Chemistry : 99, 2nd language : 100, Maths : 99, English : 98

UNDER THE GUIDANCE OF
Pradeep Eshwar
Founder & Managing Director

TOTAL SCORE 587 — Harshitha DM
Physics : 98, Biology : 99, Chemistry : 98, 2nd language : 95, Maths : 99, English : 98

TOTAL SCORE 582 — Rakshith Gowda SM
Physics : 92, Biology : 98, Chemistry : 97, 2nd language : 96, Maths : 100, English : 99

TOTAL SCORE 581 — **Bhoomika R Yaligar**
P: 97 C: 94 M: 99
B: 99 E: 98 LNG: 94

TOTAL SCORE 578 — **Yuktha R**
P: 96 C: 96 M: 98
B: 99 E: 95 LNG: 94



TOTAL SCORE 578 — **Manikanta B Gowda**
P: 96 C: 96 M: 97
B: 98 E: 95 LNG: 96



TOTAL SCORE 578 — **Vishal C**
P: 98 C: 96 M: 99
B: 95 E: 98 LNG: 82

TOTAL SCORE 577 — **Siri Hegde M S**
P: 97 C: 89 M: 98
B: 98 E: 99 LNG: 96

TOTAL SCORE 577 — **Sanvi R Tirlapur**
P: 96 C: 95 M: 98
B: 94 E: 97 LNG: 97

TOTAL SCORE 577 — **Shashank N**
P: 97 C: 96 M: 97
B: 99 E: 97 LNG: 91



TOTAL SCORE 577 — **Syed M Ahmed**
P: 97 C: 96 M: 93
B: 98 E: 95 LNG: 98

TOTAL SCORE 577 — **Keerthan Teja DH**
P: 100 C: 96 M: 97
B: 96 E: 92 LNG: 96

TOTAL SCORE 577 — **Kalyani H K**
P: 98 C: 90 M: 100
B: 96 E: 95 LNG: 98

TOTAL SCORE 576 — **Tahirhusen I Naik**
P: 95 C: 95 M: 98
B: 99 E: 93 LNG: 96

TOTAL SCORE 575 — **Sanjaykumar S**
P: 99 C: 97 M: 94
B: 96 E: 94 LNG: 95

LNG: 2nd Language*

080 24413400, 74838 30545 For more details visit: www.parishramagroup.com



Name	Total Score	P	C	M	B	E	LNG
Kohil S Miraskar	574	100	95	99	96	86	98
T Ramtej	572	98	91	96	94	95	98
Chala Venkatesh	571	99	96	89	99	95	93
Karan N Raj	571	95	95	92	96	99	94
Arman Chand	571	98	94	93	97	97	92
Mohammad Minhaj	571	97	96	95	96	92	95
B Siri Gowri	569	93	93	92	95	96	100
Shamitha R N	569	96	98	85	96	98	96
P Prashanth	568	99	96	96	100	87	90
Girisha KM	568	96	91	97	96	90	98
K M Shivani	567	95	90	99	93	99	91
Pavan Gowda G	567	99	96	98	99	81	94
Nayan Yadav S	567	96	96	98	99	86	92
Yashwanth Reddy D S	570	91	95	97	97	97	93
Bhuvana C Gowda	569	92	96	99	98	91	93

LNG: 2nd Language*

FACILITIES @ PARISHRAMA

- Faculty with Proven Track Record
- 24x7 Security & Medical Assistance
- Hygienic Food (Own Centralised Kitchen)
- Separate Hostel for Boys & Girls
- 100% In-house Study Material
- Student Tracker App for Parents

ADMISSIONS OPEN FOR 2026-27 PUC & NEET (LONG TERM)

RESIDENTIAL	SEMI RESIDENTIAL	NON-RESIDENTIAL
PCMB (BOARD+NEET+K-CET)	PCMB (BOARD+NEET+K-CET)	PCMB (BOARD)

State toppers of CBSE, ICSE & State Board can avail upto 100% scholarship!

WHY PARISHRAMA?

- Integrated NEET preparation
- Solve over 1 lakh MCQs for thorough concept mastery
- Daily objective-type tests to build speed & accuracy
- Comprehensive guidance on every sub - topic, reinforced with targeted MCQ practice
- Special emphasis on answer writing skills for Board excellence
- Parishrama is one among the top institutes to send students to AIIMS & JIPMER

Scan QR Code to watch the review

PU College
42, Kengeri Outer Ring Road, Jnanaganga Nagar, Mariyappana Palya, Mallathahalli, Bengaluru - 560056

Scan for PU College location

Head Office
Omkar Hills Road, Srinivasapura, Dr. Vishnuvardhan Road, Towards Uttarahalli Main Road, Bengaluru - 560060

Follow us on:

080 24413400, 74838 30545 For more details visit: www.parishramagroup.com

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,997
ಇಂದಿನ ಅಂತ್ಯ:	23,775
ದಿನದ ಕನಿಷ್ಠ:	23,682
	▼ 222

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹470
12 ಕ್ಕೆ	₹72
ಮೈಸೂರು: 100 ಕ್ಕೆ	₹480

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹226
ಆರ್‌ಎಸ್‌ಎಸ್-5	₹220
ಗುಡ್ ಲಾಟ್	₹199

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹500-740
ದ್ವಿತಳಿ (ಬಿ.ವಿ)	₹477-815

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23250
ಎಸಿ	₹13850
ಆರ್‌ಪಿ	₹17900
ಆರ್‌ಸಿ	₹9600

ಮುಂಬೈ ಖಾದ್ಯ ತೈಲ (10 ಕೆ.ಜಿಗೆ) (ಆವರಣದಲ್ಲಿ ಕಳೆದ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1750 (1750)
ಸೋಯಾ (ರಿಫೈನ್ಡ್)	₹1560 (1540)
ಸೂರ್ಯಕಾಂತಿ (ರಿಫೈನ್ಡ್)	₹1700 (1700)
ಪಾಮೋಲಿನ್	₹1480 (1480)

ಚಿಟಿಕೆ ಸುದ್ದಿ

ಸೆನ್ಸೆಕ್ಸ್ 931 ಅಂಶ ಇಳಿಕೆ

ಮುಂಬೈ (ಪಿಟಿಐ): ಕದನ ವಿರಾಮ ಸುತ್ತಲಿನ ಅನಿಶ್ಚಿತತೆಯಿಂದಾಗಿ ದೇಶದ ಷೇರುಪೇಟೆ ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಕದನ ವಿರಾಮದ ಒಪ್ಪಂದದ ನಡುವೆಯೂ ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮಾಡಿದ್ದರಿಂದ ಇರಾನ್ ಹೊರ್ಮುಜ್ ಜಲಸಂಧಿಯನ್ನು ಮತ್ತೆ ಮುಚ್ಚಿದೆ. ಇದು ಕದನ ವಿರಾಮದ ಬಗೆಗಿನ ಆಶಾವಾದವನ್ನು ಮಸುಕಾಗಿಸಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡವು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಏಷ್ಯಾ ಮತ್ತು ಯುರೋಪಿನ ಮಾರುಕಟ್ಟೆಗಳು ನಕಾರಾತ್ಮಕ ವಹಿವಾಟು ಕಂಡಿವೆ. ಕಚ್ಚಾ ತೈಲದ ದರ ಏರಿಕೆ ಮತ್ತು ದೇಶದ ಷೇರುಪೇಟೆಯಿಂದ ವಿದೇಶಿ ಬಂಡವಾಳದ ಹೊರಹರಿವು ಸಹ ಷೇರುಪೇಟೆ ಸೂಚ್ಯಂಕಗಳ ಇಳಿಕೆಗೆ ಕಾರಣವಾದವು ಎಂದು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 931 ಅಂಶ ಇಳಿಕೆಯಾಗಿ, 76,631ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 222 ಅಂಶ ಕಡಿಮೆಯಾಗಿ, 23,775ಕ್ಕೆ ಕೊನೆಗೊಂಡಿದೆ.

ಯುದ್ಧದ ಪರಿಣಾಮ ಎದುರಿಸಲು ಸಮರ್ಥ

ಭಾರತದ ಆರ್ಥಿಕ ಸ್ಥಿತಿ ಕುರಿತು ವಿಶ್ವ ಬ್ಯಾಂಕ್ ಭರವಸೆಯ ಮಾತು

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಜಾಗತಿಕ ಮಟ್ಟದಲ್ಲಿ ಇಂಧನ ಪೂರೈಕೆಗೆ ಆಗಿರುವ ಧಕ್ಕೆಯನ್ನು ನಿಭಾಯಿಸುವ ಸಾಮರ್ಥ್ಯವು ಭಾರತಕ್ಕೆ ಇದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ.

ಭಾರತದ ಬಳಿ ವಿದೇಶಿ ವಿನಿಮಯದ ಮೀಸಲು ಹೆಚ್ಚಿನ ಮಟ್ಟದಲ್ಲಿದೆ, ಅಗತ್ಯ ವಿತ್ತೀಯ ತೀರ್ಮಾನಗಳನ್ನು ತೆಗೆದುಕೊಳ್ಳಲು ಅವಕಾಶ ಇದೆ, ದೇಶದಲ್ಲಿ ಹಣದುಬ್ಬರ ಪ್ರಮಾಣ ಕಡಿಮೆ ಇದೆ. ಜಾಗತಿಕವಾಗಿ ಸಮಸ್ಯೆಗಳು ಇದ್ದರೂ ಇವೆಲ್ಲವೂ ಭಾರತದ ಬೆಳವಣಿಗೆಗೆ ಸಹಾಯ ಮಾಡುತ್ತವೆ ಎಂದು ವಿಶ್ವ ಬ್ಯಾಂಕ್‌ನ ದಕ್ಷಿಣ ಏಷ್ಯಾದ ಹಿರಿಯ ಅಧಿಕಾರಿ ಸೆಬಾಸ್ಟಿಯನ್ ಎಕಾರ್ಟ್ ಗುರುವಾರ ಹೇಳಿದ್ದಾರೆ.

THE WORLD BANK

ಹಿಂದಿನ ತ್ರೈಮಾಸಿಕದ ಅವಧಿಯಲ್ಲಿ ಸುಂಕದ ಕಾರಣದಿಂದಾಗಿ ಉಂಟಾದ ಸಮಸ್ಯೆಗಳನ್ನು ಕೂಡ ಭಾರತವು ಚೆನ್ನಾಗಿಯೇ ನಿಭಾಯಿಸಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಜಾಗತಿಕವಾಗಿ ಸಮಸ್ಯೆಗಳು ಇದ್ದರೂ ಭಾರತ ಮತ್ತು ಈ ಭಾಗವು ಬಹಳ ಸುಭದ್ರ ಸ್ಥಿತಿಯಲ್ಲಿ ಇರಲಿದೆ, ಪ್ರವರ್ಧಮಾನಕ್ಕೆ ಬರುತ್ತಿರುವ ಇತರ ದೇಶಗಳಿಗಿಂತ ಭಾರತವು ಉತ್ತಮ ಸಾಧನೆ ತೋರಲಿದೆ ಎಂಬುದು ನಮ್ಮ ಅನಿಸಿಕೆ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ಚೆನ್ನಾಗಿ ಇದ್ದುದು ಮತ್ತು ರಫ್ತು ವಹಿವಾಟುಗಳು ಉತ್ತಮ ಮಟ್ಟದಲ್ಲಿ ಇದ್ದ ಕಾರಣದಿಂದಾಗಿ ಭಾರತದ ಅರ್ಥ ವ್ಯವಸ್ಥೆಯು 2025–26ನೆಯ ಹಣಕಾಸು ವರ್ಷದಲ್ಲಿ ಶೇ 7.6ರಷ್ಟು ಬೆಳವಣಿಗೆ ಕಂಡಿರುವ ಅಂದಾಜು ಇದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ.

2025–26ನೆಯ ಹಣಕಾಸು ವರ್ಷದಲ್ಲಿ ಕೂಡ ಭಾರತವು ಜಗತ್ತಿನ ದೊಡ್ಡ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ಹೆಚ್ಚಿನ ವೇಗದ ಬೆಳವಣಿಗೆ ಕಂಡ ರಾಷ್ಟ್ರವಾಗಿ ಮುಂದುವರಿದಿದೆ. ಭಾರತದ ಸರಕುಗಳಿಗೆ ಜಾಗತಿಕವಾಗಿ ಬಹಳ ದೊಡ್ಡ ಮಟ್ಟದಲ್ಲಿ ಸುಂಕ ವಿಧಿಸಿದರೂ, ಈ ಬೆಳವಣಿಗೆ ಆಗಿದೆ ಎಂದು ವಿಶ್ವ ಬ್ಯಾಂಕ್‌ನ ಭಾರತದ ಮುಖ್ಯ ಅರ್ಥಶಾಸ್ತ್ರಜ್ಞ ಆರೇಲಿಯನ್ ಕ್ರೂಸ್ ಹೇಳಿದ್ದಾರೆ.

ಕಳೆದ ವರ್ಷದಲ್ಲಿ ಕೇಂದ್ರ ಸರ್ಕಾರವು ಆದಾಯ ತೆರಿಗೆ ಮಿತಿಯನ್ನು ಹೆಚ್ಚು ಮಾಡಿದ್ದು ಹಾಗೂ ಜಿಎಸ್‌ಟಿ ಮಂಡಳಿಯು ತೆರಿಗೆ ಪ್ರಮಾಣವನ್ನು ಪರಿಷ್ಕರಿಸಿದ ಕ್ರಮವು ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚು ಮಾಡಿವೆ. ಹೆಚ್ಚಿನ ಸುಂಕದ ಕಾರಣದಿಂದಾಗಿ ತೊಂದರೆಗೆ ಒಳಗಾಗಬಹುದು ಎಂಬ ಅಂದಾಜು ಮಾಡಿದ್ದ ರಫ್ತು ಹಾಗೂ ಹೂಡಿಕೆ ವಲಯಗಳು ನಿರೀಕ್ಷೆಗಿಂತ ಉತ್ತಮ ಬೆಳವಣಿಗೆ ಕಂಡಿವೆ ಎಂದು ಅವರು ತಿಳಿಸಿದ್ದಾರೆ.

ಭಾರತದ ಬೆಳವಣಿಗೆ ಮುನ್ನೋಟ ಹೆಚ್ಚಳ

ನವದೆಹಲಿ (ಪಿಟಿಐ): ಏಪ್ರಿಲ್ 1ರಿಂದ ಆರಂಭವಾಗಿರುವ ಪ್ರಸಕ್ತ ಆರ್ಥಿಕ ವರ್ಷದಲ್ಲಿ (2026–27) ಭಾರತದ ಜಿಡಿಪಿ ಬೆಳವಣಿಗೆ ದರವು ಶೇ 6.6ರಷ್ಟು ಇರಲಿದೆ ಎಂದು ವಿಶ್ವ ಬ್ಯಾಂಕ್ ಅಂದಾಜು ಮಾಡಿದೆ.

ಜಿಎಸ್‌ಟಿ ದರ ಪರಿಷ್ಕರಣೆಯ ಕ್ರಮವು ಗ್ರಾಹಕರಿಂದ ಬರುವ ಬೇಡಿಕೆಯನ್ನು ಈ ಆರ್ಥಿಕ ವರ್ಷದ ಆರಂಭದ ತಿಂಗಳುಗಳಲ್ಲಿ ಹೆಚ್ಚು ಮಾಡುತ್ತದೆ. ಆದರೆ, ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಸೃಷ್ಟಿಯಾಗಿರುವ ಸಮಸ್ಯೆಗಳು ಬೆಳವಣಿಗೆಯನ್ನು ಕುಂದಿಸಬಹುದು ಎಂದು ಅದು ಹೇಳಿದೆ.

ಜನವರಿಯಲ್ಲಿ ಒಂದು ಅಂದಾಜನ್ನು ಬಿಡುಗಡೆ ಮಾಡಿದ್ದ ವಿಶ್ವ ಬ್ಯಾಂಕ್, 2026–27ರಲ್ಲಿ ಭಾರತದ ಜಿಡಿಪಿ ಬೆಳವಣಿಗೆ ಶೇ 6.5ರಷ್ಟು ಆಗಬಹುದು ಎಂದು ಹೇಳಿತ್ತು. ಆದರೆ ಈಗಿನ ಅಂದಾಜು ಅದಕ್ಕಿಂತ ಹೆಚ್ಚು.

ಕ್ವಿಂಟಲ್ ಕೊಬ್ಬರಿ ₹36 ಸಾವಿರ

ಪ್ರಜಾವಾಣಿ ವಾರ್ತೆ

ತುಮಕೂರು: ಉಂಡೆ ಕೊಬ್ಬರಿ ಧಾರಣೆ ಗಗನಮುಖಿಯಾಗಿದ್ದು, ಗುರುವಾರ ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಕ್ವಿಂಟಲ್ ₹36,006ಕ್ಕೆ ಮಾರಾಟವಾಗುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿದೆ.

ಕೊಬ್ಬರಿ ಆವಕ ತೀವ್ರವಾಗಿ ಕಡಿಮೆಯಾಗಿರುವುದು ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ. ಗುರುವಾರದ ಹರಾಜಿಗೆ ಕೇವಲ 1,482 ಕ್ವಿಂಟಲ್ (3,447 ಚೀಲ) ಆವಕವಾಗಿದ್ದು, ಕನಿಷ್ಠ ಕ್ವಿಂಟಲ್ ₹30,500, ಮಾದರಿ ₹32,000ಕ್ಕೆ ಮಾರಾಟವಾಗಿದೆ. ಸೋಮವಾರ ನಡೆದ ಹರಾಜಿಗೆ 1,621 ಕ್ವಿಂಟಲ್ ಆವಕವಾಗಿದ್ದರೆ, ಗುರುವಾರ ಆವಕ ಮತ್ತಷ್ಟು ಕುಸಿತ ಕಂಡಿತ್ತು.

ಏ. 6ರಂದು ನಡೆದ ಹರಾಜಿನಲ್ಲಿ ಕ್ವಿಂಟಲ್ ₹32,218ಕ್ಕೆ ಮಾರಾಟ ಆಗುವ ಮೂಲಕ ದಾಖಲೆ ನಿರ್ಮಿಸಿತ್ತು. ಈಗ ಹಿಂದಿನ ದಾಖಲೆ ಮುರಿದು ₹36 ಸಾವಿರಕ್ಕೆ ಏರಿಕೆ ಕಂಡಿದೆ.

ಕೊಬ್ಬರಿಗೆ ಉತ್ತಮ ಬೇಡಿಕೆ ಇಲ್ಲವಾಗಿದ್ದರೂ, ಇರುವ ಅತ್ಯಲ್ಪ ಪ್ರಮಾಣದ ಬೇಡಿಕೆಯನ್ನು ಪೂರೈಸುವಷ್ಟು ಮಾಲು ಬರುತ್ತಿಲ್ಲ. ಆವಕ ತಗ್ಗಿರುವುದು ಬೆಲೆ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ.

ಟಿಸಿಎಸ್ ಲಾಭ ಶೇ 12ರಷ್ಟು ಜಿಗಿತ

ಷೇರುದಾರರಿಗೆ ₹31 ಲಾಭಾಂಶ ಘೋಷಿಸಿದ ಕಂಪನಿ

ಮುಂಬೈ (ಪಿಟಿಐ): ದೇಶದ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಮಾರ್ಚ್ ತ್ರೈಮಾಸಿಕದ ತನ್ನ ಹಣಕಾಸಿನ ಫಲಿತಾಂಶವನ್ನು ಗುರುವಾರ ಪ್ರಕಟಿಸಿದ್ದು, ನಿವ್ವಳ ಲಾಭದಲ್ಲಿ ಶೇ 12.22ರಷ್ಟು ಹೆಚ್ಚಳ ದಾಖಲಿಸಿದೆ.

ಕೆ. ಕೃತಿವಾಸನ್

ಕಂಪನಿಯು ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹12,224 ಕೋಟಿ ಲಾಭ ಗಳಿಸಿತ್ತು. ಈ ಬಾರಿ ಅದು ₹13,718 ಕೋಟಿಗೆ ತಲುಪಿದೆ. 2025ರ ಡಿಸೆಂಬರ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ಲಾಭವು ₹10,657 ಕೋಟಿ ಆಗಿತ್ತು.

2025–26ರ ಪೂರ್ತಿ ಹಣಕಾಸು ವರ್ಷದಲ್ಲಿ ಟಿಸಿಎಸ್‌ನ ನಿವ್ವಳ ಲಾಭವು ಶೇ 1.35ರಷ್ಟು ಹೆಚ್ಚಳ ಕಂಡು, ₹49,210 ಕೋಟಿಗೆ ತಲುಪಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ನೌಕರರ ಸಂಖ್ಯೆಯು ನಿವ್ವಳ 2,356ರಷ್ಟು ಹೆಚ್ಚಳ ಕಂಡಿದ್ದು 5.84 ಲಕ್ಷಕ್ಕೆ ತಲುಪಿದೆ.

ಭಾರತದ ಐ.ಟಿ. ಸೇವಾ ವಲಯದ ಉದ್ದಿಮೆಗಳ ಪೈಕಿ ಮಾರ್ಚ್ ತ್ರೈಮಾಸಿಕದ ಹಣಕಾಸು ಫಲಿತಾಂಶವನ್ನು ಪ್ರಕಟಿಸಿದ ಮೊದಲ ಕಂಪನಿ ಟಿಸಿಎಸ್. ಕೃತಕ ಬುದ್ಧಿಮತ್ತೆ ಕುರಿತ ಚರ್ಚೆಗಳು, ಈ ತಂತ್ರಜ್ಞಾನದಿಂದಾಗಿ ಐ.ಟಿ ಸೇವಾ ವಲಯದ ನೌಕರರ ಮೇಲೆ ಆಗುವ ಪರಿಣಾಮಗಳ ಬಗ್ಗೆ ಮಾರ್ಚ್ ತ್ರೈಮಾಸಿಕದಲ್ಲಿ ವ್ಯಾಪಕ ಚರ್ಚೆ ಆಗಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಟಿಸಿಎಸ್‌ನ ಕಾರ್ಯಾಚರಣೆ ವರಮಾನವು ಶೇ 9.64ರಷ್ಟು ಹೆಚ್ಚಳ ಆಗಿದ್ದು ₹70,698 ಕೋಟಿಗೆ ತಲುಪಿದೆ. 2025–26ನೆಯ ಪೂರ್ತಿ ಹಣಕಾಸು ವರ್ಷದಲ್ಲಿ ಕಂಪನಿಯ ಕಾರ್ಯಾಚರಣೆ ವರಮಾನವು ಶೇ 4.58ರಷ್ಟು ಜಾಸ್ತಿ ಆಗಿ, ₹2.67 ಲಕ್ಷ ಕೋಟಿಗೆ ತಲುಪಿದೆ. ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣೆ ಲಾಭದ ಪ್ರಮಾಣವು ಶೇ 25.3ಕ್ಕೆ ಹಿಗ್ಗಿದೆ.

ಕಂಪನಿಯು ಸತತ ಮೂರನೆಯ ತ್ರೈಮಾಸಿಕದಲ್ಲಿಯೂ ಬೆಳವಣಿಗೆ ಸಾಧಿಸಿದೆ ಎಂದು ಟಿಸಿಎಸ್ ಸಿಇಒ ಕೆ. ಕೃತಿವಾಸನ್ ಹೇಳಿದ್ದಾರೆ. 'ಅರ್ಥ ವ್ಯವಸ್ಥೆಯಲ್ಲಿ ಅಡ್ಡಿಗಳು ಇದ್ದರೂ, ಗ್ರಾಹಕರು ತಂತ್ರಜ್ಞಾನದ ಮೇಲೆ ಹೂಡಿಕೆ ಮಾಡುವುದು ಸ್ಥಿರವಾಗಿ ಇದೆ. ಹೀಗಾಗಿ ಮುಂದಿನ ದಿನಗಳಲ್ಲಿ ಲಭ್ಯವಾಗುವ ಅವಕಾಶಗಳನ್ನು ಪಡೆಯಲು ನಮಗೆ ಸಾಧ್ಯವಾಗುತ್ತದೆ' ಎಂದು ಅವರು ಹೇಳಿದ್ದಾರೆ.

ಕಂಪನಿಯ ಆಡಳಿತ ಮಂಡಳಿಯು ಷೇರುದಾರರಿಗೆ ಪ್ರತಿ ಷೇರಿಗೆ ₹31 ಅಂತಿಮ ಲಾಭಾಂಶ ನೀಡಲು ಶಿಫಾರಸು ಮಾಡಿದೆ. ಇದಕ್ಕೆ ಷೇರುದಾರರ ಒಪ್ಪಿಗೆಯ ಅಗತ್ಯವಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com or Scan QR code to access booking form

REMEMBRANCE

G. MUNIYAPPA IAS (Retd)
10.04.2008
Inserted by
D. Radhakrishna & Brothers
Daughters
M. Kavitha, M. Rekha

ಕೆಎಸ್‌ಒಯು ವಿರುದ್ಧ ಕ್ರಮ ಕೈಗೊಳ್ಳುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ರಾಜ್ಯಪಾಲರು ಆಕ್ಷೇಪ ವ್ಯಕ್ತಪಡಿಸಿರುವುದು ಸರಿಯೇ

● ಸರಿ ● ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹20000-20000
ಹಿರಿಯೂರು	₹11000-13400

ಮುಂಬೈ ಧಾರಣೆ (ಶೇಂಗಾ)

09-04-2026	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1760 (1760)
ಒಂದು ವಾರದ ಡೆಲಿವರಿ	1755 (1755)
ಪಾಮ್ ವಾರದ ಡೆಲಿವರಿ	1478 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1585 (1580)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,50,400 (1,50,000)
ಬೆಳ್ಳಿ ಕೆ.ಜಿಗೆ	2,38,000 (2,44,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಅಡಿಕೆ ಧಾರಣೆ

ಚಿತ್ರದುರ್ಗ		ಕೋಕ	13699-35899	ತಟ್ಟಬೆಟ್ಟೆ	36889-42609
ಅಪಿ	54619-55029	ಕೆಂಪುಗೋಟು	24989-37719	**ಶಿರಸಿ**	
ಬೆಟ್ಟೆ	37649-38099	ರಾಶಿ	38270-59410	ಬೆಟ್ಟೆ	41899-50509
ಕೆಂಪುಗೋಟು	31609-32010	ಸಿಪ್ಪೆಗೋಟು	7499-23425	ಬಿಳಿಗೋಟು	26100-39899
ರಾಶಿ	54139-54569	**ಶಿವಮೊಗ್ಗ**		ಚಾಲಿ	45000-49600
ಕುಮಟಾ		ಸರಕು	50859-97396	ಕೆಂಪುಗೋಟು	26123-38699
ಚಾಲಿ	35051-49199	ಬೆಟ್ಟೆ	53109-65099	ರಾಶಿ	47099-55699
ಚಿಪ್ಪು	26609-44639	ರಾಶಿ	45009-55689	**ಯಲ್ಲಾಪುರ**	
ಕೋಕ	19699-36689	ಗೊರಬಲು	19010-40799	ಅಪಿ	58400-61999
ಹಳೆಚಾಲಿ	47769-49898	**ಸಿದ್ದಾಪುರ**		ಬಿಳಿಗೋಟು	14899-40611
ಪುತ್ತೂರು		ಬಿಳಿಗೋಟು	11000-38679	ಚಾಲಿ	40399-49499
ಕೋಕ	20000-34500	ಚಾಲಿ	41099-48899	ಕೋಕ	12909-34299
ಹೊಸತು	30000-50000	ಕೋಕ	15317-34499	ಕೆಂಪುಗೋಟು	19000-38500
ಸಾಗರ		ಕೆಂಪುಗೋಟು	14177-34699	ರಾಶಿ	49219-57269
ಬಿಳಿಗೋಟು	20199-37300	ರಾಶಿ	46300-54409	ತಟ್ಟಬೆಟ್ಟೆ	38810-51269
ಚಾಲಿ	34099-44214				

ಬೆಳ್ಳಿ ₹7,800 ಇಳಿಕೆ

ನವದೆಹಲಿ (ಪಿಟಿಐ): ಕದನ ವಿರಾಮದ ಸುತ್ತ ಉಂಟಾಗಿರುವ ಅನಿಶ್ಚಿತತೆಯಿಂದ ಹೂಡಿಕೆದಾರರು ಲಾಭದ ಗಳಿಕೆಗಾಗಿ ಚಿನ್ನ ಮತ್ತು ಬೆಳ್ಳಿ ಮಾರಾಟಕ್ಕೆ ಮುಂದಾದರು. ಇದರಿಂದ ಈ ಲೋಹಗಳ ಬೆಲೆಯು ಗುರುವಾರದ ವಹಿವಾಟಿನಲ್ಲಿ ಇಳಿಕೆ ಆಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹1,500ರಷ್ಟು ಇಳಿಕೆಯಾಗಿ, ₹1,54,900ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹7,800ರಷ್ಟು ಕಡಿಮೆಯಾಗಿ, ₹2,43,200 ಆಗಿದೆ.

ಸುದ್ದಿ 2 ನಿಮಿಷ

ದೇಶದ ಆನ್‌ಲೈನ್ ರಿಟೇಲ್ ಮಾರುಕಟ್ಟೆ ಗಾತ್ರ ₹6 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಕಳೆದ ವರ್ಷ ದೇಶದ ಆನ್‌ಲೈನ್ ರಿಟೇಲ್ ಮಾರುಕಟ್ಟೆಯ (ಇ–ಕಾಮರ್ಸ್) ಗಾತ್ರವು ₹6 ಲಕ್ಷ ಕೋಟಿಗಿಂತ ಹೆಚ್ಚಾಗಿದೆ. ಇದು 2024ಕ್ಕೆ ಹೋಲಿಸಿದರೆ ಶೇ 21ರಷ್ಟು ಅಧಿಕವಾಗಿದೆ.

ಕ್ವಿಕ್ ಕಾಮರ್ಸ್ ವಲಯದಲ್ಲಿ ಭಾರತವು, ಜಾಗತಿಕ ಮಟ್ಟದಲ್ಲಿ ನಾಯಕನ ಸ್ಥಾನದಲ್ಲಿದೆ ಎಂದು ಇ–ಕಾಮರ್ಸ್ ಕಂಪನಿ ಫ್ಲಿಪ್‌ಕಾರ್ಟ್ ಸಹಯೋಗದೊಂದಿಗೆ ಸಲಹಾ ಸಂಸ್ಥೆ ಬೈನ್ ಆ್ಯಂಡ್ ಕಂಪನಿ ಸಿದ್ಧಪಡಿಸಿರುವ ವರದಿ ತಿಳಿಸಿದೆ.

2030ರ ವೇಳೆಗೆ ದೇಶದ ಆನ್‌ಲೈನ್ ರಿಟೇಲ್ ಮಾರುಕಟ್ಟೆಯ ಗಾತ್ರವು ₹16 ಲಕ್ಷ ಕೋಟಿಯಷ್ಟಾಗುವ ನಿರೀಕ್ಷೆ ಇದ್ದು, ವಾರ್ಷಿಕ ಶೇ 20ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿದೆ.

2025ರಲ್ಲಿ ಆನ್‌ಲೈನ್ ರಿಟೇಲ್ ಮಾರುಕಟ್ಟೆಯ ಒಟ್ಟು ಮಾರಾಟದ ಮೌಲ್ಯದಲ್ಲಿ ಕ್ವಿಕ್ ಕಾಮರ್ಸ್ ವಲಯವು ₹1 ಲಕ್ಷ ಕೋಟಿಯಷ್ಟು ಪಾಲು ಹೊಂದಿದೆ. ಇದು 2030ರ ವೇಳೆಗೆ ಇದು ₹6.48 ಲಕ್ಷ ಕೋಟಿಯಷ್ಟಾಗುವ ನಿರೀಕ್ಷೆಯಿದ್ದು, ಒಟ್ಟು ಮಾರುಕಟ್ಟೆಯ ಗಾತ್ರದ ಶೇ 45ರಿಂದ ಶೇ 50ರಷ್ಟಾಗಲಿದೆ ಎಂದು ತಿಳಿಸಿದೆ.

2022ರಿಂದ 2024ರವರೆಗೆ ಕುಟುಂಬಗಳು ಸರಕು ಮತ್ತು ಸೇವೆಗಳಿಗೆ ಖರ್ಚು ಮಾಡುವ ಪ್ರಮಾಣ ವಾರ್ಷಿಕ ಶೇ 8ರಷ್ಟು ಬೆಳವಣಿಗೆ ಕಂಡಿತ್ತು. ಇದು 2025ರ ವೇಳೆಗೆ ಶೇ 10.5ಕ್ಕೆ ಏರಿಕೆಯಾಗಿದೆ. ಜಿಎಸ್‌ಟಿ ದರ ಪರಿಷ್ಕರಣೆ, ವೈಯಕ್ತಿಕ ಆದಾಯ ತೆರಿಗೆ ವಿನಾಯಿತಿ, ಹಣದುಬ್ಬರ ಇಳಿಕೆ ಮತ್ತು ಕಡಿಮೆ ಬಡ್ಡಿ ದರದ ಸಾಲವು ಕುಟುಂಬಗಳು ಖರ್ಚು ಮಾಡುವ ಪ್ರಮಾಣವನ್ನು ಹೆಚ್ಚಿಸಿವೆ ಎಂದು ತಿಳಿಸಿದೆ.

ಕಳೆದ ಐದು ವರ್ಷದಲ್ಲಿ ದೇಶದ ಆನ್‌ಲೈನ್ ಶಾಪಿಂಗ್ ಮಾರುಕಟ್ಟೆಯ ಗಾತ್ರ ಎರಡು ಪಟ್ಟಿಗಿಂತಲೂ ಹೆಚ್ಚು ಬೆಳವಣಿಗೆ ಕಂಡಿದೆ.

ದೇಶದ ಜಿಡಿಪಿ ಗಾತ್ರಕ್ಕೆ ಹೋಲಿಸಿದರೆ ಆನ್‌ಲೈನ್ ರಿಟೇಲ್ ಮಾರುಕಟ್ಟೆಯು ಶೇ 1.6ರಷ್ಟಿದೆ. ಆದರೆ ಚೀನಾದಲ್ಲಿ ಶೇ 14ರಷ್ಟು ಮತ್ತು ಇಂಡೊನೇಷ್ಯಾ ಶೇ 4.5ರಷ್ಟಿದೆ ಎಂದು ತಿಳಿಸಿದೆ.

200 ಮಳಿಗೆ ಆರಂಭಿಸಲು ಚಿಂತನೆ: ಮೋಮೊ

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಎರಡು ಮತ್ತು ಮೂರನೇ ಹಂತದ ನಗರಗಳಲ್ಲಿ 150ರಿಂದ 200 ಹೆಚ್ಚುವರಿ ಮಳಿಗೆಗಳನ್ನು ಆರಂಭಿಸಲು ಯೋಜಿಸಲಾಗಿದೆ ಎಂದು ತ್ವರಿತ ಸೇವಾ ರೆಸ್ಟೊರೆಂಟ್ 'ವಾವ್! ಮೋಮೊ ಫುಡ್ಸ್' ಗುರುವಾರ ತಿಳಿಸಿದೆ.

ಇದೇ ಆರ್ಥಿಕ ವರ್ಷದಲ್ಲಿ ವಹಿವಾಟು ಮೂಲಕ ₹1,200 ಕೋಟಿ ವರಮಾನ ಗಳಿಸುವ ಗುರಿ ಹೊಂದಲಾಗಿದೆ ಎಂದು ಕಂಪನಿ ತಿಳಿಸಿದೆ.

2025–26ರ ಆರ್ಥಿಕ ವರ್ಷದಲ್ಲಿ ಕಂಪನಿಯು 200 ಮಳಿಗೆಗಳನ್ನು ಆರಂಭಿಸಿತ್ತು. ಇದು ವರ್ಷವೊಂದರಲ್ಲಿ ಅತಿ ಹೆಚ್ಚು ಮಳಿಗೆಗಳನ್ನು ಆರಂಭಿಸಿದ ವರ್ಷವಾಗಿದೆ. ಪ್ರಸ್ತುತ ಕಂಪನಿಯು ದೇಶದ 90 ನಗರಗಳಲ್ಲಿ 850ಕ್ಕೂ ಹೆಚ್ಚು ಮಳಿಗೆಗಳನ್ನು ಹೊಂದಿದೆ.

ಇ.ವಿ ವಾಹನ ಮಾರುಕಟ್ಟೆ ಪ್ರವೇಶಿಸಿದ ರಾಯಲ್ ಎನ್‌ಫೀಲ್ಡ್

ನವದೆಹಲಿ (ಪಿಟಿಐ): ಐಷರ್ ಮೋಟರ್ಸ್ ಸಮೂಹಕ್ಕೆ ಸೇರಿರುವ ರಾಯಲ್ ಎನ್‌ಫೀಲ್ಡ್, ವಿದ್ಯುತ್ ಚಾಲಿತ ದ್ವಿಚಕ್ರ ವಾಹನ ಮಾರುಕಟ್ಟೆಯನ್ನು ಗುರುವಾರ ಪ್ರವೇಶಿಸಿದೆ. ತನ್ನ ಮೊದಲ ಇ.ವಿ. ದ್ವಿಚಕ್ರ ವಾಹನ 'ಫ್ಲೈಯಿಂದ ಫ್ಲೀ ಸಿ6' ವಾಹನವನ್ನು ಬಿಡುಗಡೆ ಮಾಡಿದೆ,

ಇದರ ಎಕ್ಸ್ ಷೋರೂಂ ಬೆಲೆಯು ₹2.79 ಲಕ್ಷ. ಆದರೆ, ಬ್ಯಾಟರಿಯನ್ನು ಒಂದು ಸೇವೆಯ ರೂಪದಲ್ಲಿ ಪಡೆದರೆ ಈ ವಾಹನವು ₹1.99 ಲಕ್ಷಕ್ಕೆ ಸಿಗುತ್ತದೆ ಎಂದು ಐಷರ್ ಮೋಟರ್ಸ್ ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಂಪನಿಯು ಈ ವಾಹನವನ್ನು ಗ್ರಾಹಕರಿಗೆ ವಿತರಿಸುವ ಕೆಲಸವನ್ನು ಮೇ ತಿಂಗಳ ಕೊನೆಯ ಭಾಗದಿಂದ ಶುರು ಮಾಡಲಿದೆ. ವಾಹನವು ಗಂಟೆಗೆ ಗರಿಷ್ಠ 115 ಕಿ.ಮೀ. ವೇಗದಲ್ಲಿ ಸಾಗಬಲ್ಲದು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Wanted

ಅಡುಗೆ ಭಟ್ಟರು ಬೇಕಾಗಿದ್ದಾರೆ: ಬೆಂಗಳೂರಿನ ದೇವಸ್ಥಾನದಲ್ಲಿ ಪ್ರಸಾದ ಮಾಡಲು ಬ್ರಾಹ್ಮಣ ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ : 7019132200

ಕಂಪನಿಗೆ ಯುವಕ ಯುವತಿಯರು ವಿವಿಧ ಹುದ್ದೆಗೆ ಬೇಕಾಗಿದ್ದಾರೆ. 21,000 ಸಂಬಳ + ಊಟ ವಸತಿ ಉಚಿತ. ಸಂಪರ್ಕಿಸಿರಿ: 8310382944 ಮಂಗಳೂರು

ರಿಯಲ್ ಎಸ್ಟೇಟ್ ಸೆಲ್ಲಿಂಗ್

Kengeri

LUXURY APARTMENT Booking Started Call Kirti 9341218992 By Landmark, Next To Kingeri Metro Station 4 Tower Of 69-798999 Floor, Payment In 36 Months 3 Bhk- 2,250 To 2,601 Sft 3.6 cr To 4.16 cr+

ಪ್ರವಾಸ

Travel

11.06.2026 13/17ದಿನಗಳು ಕೇದಾರನಾಥ, ಬದರಿನಾಥ್, ಯಮುನೋತ್ರಿ, ಗಂಗೋತ್ರಿ (Subsidy_20000) 38000/, 12.07.2026 13/17ದಿನಗಳು ಅಮರನಾಥ ವೈಷ್ಣೋದೇವಿ ಕಾಶ್ಮೀರ ಅಮೃತಸರ ಆಗ್ರ ದೆಹಲಿ 38000/ 11.05.2026 6ದಿನ ಕಾಶಿ, ಅಯೋಧ್ಯ ಪ್ರಯಾಗರಾಜ್ "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9739847429/ 9845560219

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರೇಖಾಚಿತ್ರಗಳನ್ನು ಪ್ರಕಟಿಸಿರುವ ಇರಾನ್‌ನ ಅರೆಸರ್ಕಾರಿ ಮಾಧ್ಯಮಗಳು

ಹೊರ್ಮುಜ್‌ನಲ್ಲಿ ಜಲಬಾಂಬ್?

ದುಬೈ (ಎಪಿ): ತಾತ್ಕಾಲಿಕ ಕದನ ವಿರಾಮ ಘೋಷಣೆಯಾಗಿ, ಒಪ್ಪಂದ ಕುರಿತಂತೆ ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ನಡೆಯಲಿರುವ ಸಭೆಗೆ ಸಿದ್ಧತೆಗಳೂ ಭರದಿಂದ ಸಾಗಿವೆ.

ಈ ನಡುವೆ, ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಹೊರ್ಮುಜ್‌ನಲ್ಲಿ ಜಲಬಾಂಬ್‌ಗಳನ್ನು ಅಳವಡಿಸಿದ್ದನ್ನು ತೋರಿಸುವ ರೇಖಾಚಿತ್ರಗಳನ್ನು ಇರಾನ್‌ನ ಅರೆಸರ್ಕಾರಿ ಮಾಧ್ಯಮ ಸಂಸ್ಥೆಗಳು ಗುರುವಾರ ಪ್ರಕಟಿಸಿವೆ.

ಈ ಜಲಬಾಂಬ್‌ಗಳನ್ನು ಅಳವಡಿಸುವುದಕ್ಕೆ ಐಆರ್‌ಜಿಸಿ ಅನುಮತಿ ನೀಡಿದೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ.

ಸುದ್ದಿಸಂಸ್ಥೆಗಳಾದ ಐಎಸ್‌ಎನ್‌ಎ, ತಾಸ್ನಿಮ್ ಈ ರೇಖಾಚಿತ್ರಗಳನ್ನು ಪ್ರಕಟಿಸಿವೆ. ಈ ಸಂಸ್ಥೆಗಳು ಐಆರ್‌ಜಿಸಿ ಜೊತೆ ನಿಕಟ ಸಂಬಂಧ ಹೊಂದಿವೆ ಎನ್ನಲಾಗುತ್ತಿದೆ.

ಅಮೆರಿಕದ ಮೇಲೆ ಒತ್ತಡ ಹೇರುವ ತಂತ್ರದ ಭಾಗವಾಗಿ ಈ ಸ್ಫೋಟಕಗಳನ್ನು ಅಳವಡಿಸಲಾಗಿದೆ ಎಂಬ ಸಂದೇಶ ರವಾನಿಸುವ ಉದ್ದೇಶದಿಂದ ಈ ರೇಖಾಚಿತ್ರಗಳನ್ನು ಪ್ರಕಟಿಸಲಾಗಿದೆ ಎಂದು ಹೇಳಲಾಗುತ್ತಿದೆ. ಪಾರ್ಸಿ ಭಾಷೆಯಲ್ಲಿ 'ಅಪಾಯಕಾರಿ ವಲಯ' ಎಂದು ಬರೆದು, ಅದಕ್ಕೆ ವೃತ್ತದ ಗುರುತು ಹಾಕಿರುವುದು ರೇಖಾಚಿತ್ರದಲ್ಲಿದೆ.

'ಶುಲ್ಕ ಸಂಗ್ರಹ ಆರಂಭ': ಹೊರ್ಮುಜ್ ಜಲಸಂಧಿ ಮೂಲಕ ಸಾಗುವ ಹಡಗುಗಳಿಂದ ಶುಲ್ಕ ಸಂಗ್ರಹಕ್ಕೆ ಇರಾನ್ ಚಾಲನೆ ನೀಡಿದೆ ಎಂದು ಮೂಲಗಳು ಹೇಳಿವೆ. ಇರಾನ್ ಮತ್ತು ಒಮಾನ್ ಜಲಪ್ರದೇಶದಲ್ಲಿನ ಹಡಗುಗಳಿಗೆ ಮಾರ್ಗ ಬದಲಿಸುವಂತೆ ಇರಾನ್ ಸೂಚಿಸುತ್ತಿದ್ದು, ಲರಾಕ್ ದ್ವೀಪ ಬಳಸಿ ಸಾಗುವಂತೆ ಹೇಳುತ್ತಿದೆ.

ಲೆಬನಾನ್ ಜತೆ ನೇರ ಮಾತುಕತೆ: ಇಸ್ರೇಲ್

ದುಬೈ (ಎಪಿ): 'ಲೆಬನಾನ್ ಜತೆಗೆ ಆದಷ್ಟು ಬೇಗ ನೇರ ಮಾತುಕತೆ ನಡೆಸುವುದಾಗಿ' ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಅಮೆರಿಕ–ಇರಾನ್ ನಡುವೆ ಏರ್ಪಟ್ಟಿರುವ ತಾತ್ಕಾಲಿಕ ಕದನ ವಿರಾಮಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ನೆತನ್ಯಾಹು ಹೇಳಿಕೆ ಹೊರಬಿದ್ದಿದೆ. ನೆತನ್ಯಾಹು ಹೇಳಿಕೆ ಬಗ್ಗೆ ಲೆಬನಾನ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಮೂಲಗಳ ಪ್ರಕಾರ ಇಸ್ರೇಲ್–ಲೆಬನಾನ್ ನಡುವಿನ ಮಾತುಕತೆ ಮುಂದಿನ ವಾರ ವಾಷಿಂಗ್ಟನ್‌ನಲ್ಲಿ ನಡೆಯುವ ಸಾಧ್ಯತೆ ಇದೆ ಎನ್ನಲಾಗಿದೆ.

ಲೆಬನಾನ್‌ನಲ್ಲಿರುವ ಹಿಜ್ಬುಲ್ಲಾ ಬಂಡುಕೋರರನ್ನು ನಿಶ್ಶಸ್ತ್ರೀಕರಣಗೊಳಿಸುವುದು, ನೆರೆಯ ದೇಶದೊಂದಿಗೆ ಸಂಬಂಧ ಮರುಸ್ಥಾಪಿಸುವ ನಿಟ್ಟಿನಲ್ಲಿ ಮಾತುಕತೆ ನಡೆಸಲು ಅಧಿಕಾರಿಗಳಿಗೆ ಅಧಿಕಾರ ನೀಡಿರುವುದಾಗಿ ನೆತನ್ಯಾಹು ಹೇಳಿದ್ದಾರೆ.

ಇಸ್ರೇಲ್ ಮತ್ತು ಲೆಬನಾನ್ ನಡುವೆ 1948ರಿಂದ ಯುದ್ಧ ಮುಂದುವರಿದಿದೆ.

ಇರಾನ್ ವಿರುದ್ಧ ಯುಎಇ ವಾಗ್ದಾಳಿ

ಹೊರ್ಮುಜ್ ಜಲಸಂಧಿಯನ್ನು ಮುಚ್ಚಿರುವ ಇರಾನ್‌ನ ನಡೆಯನ್ನು ಯುಎಇಯ ಪ್ರಮುಖ ತೈಲ ಸಂಸ್ಥೆ ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ ಖಂಡಿಸಿದೆ.

'ತೈಲ ಹಡಗುಗಳು ಸಾಗುವ ಈ ಪ್ರಮುಖ ಜಲಮಾರ್ಗವನ್ನು ತನ್ನ ಉದ್ದೇಶ ಸಾಧನೆಗಾಗಿ ಇರಾನ್ ಆಯುಧದಂತೆ ಬಳಸುವುದು ಸರಿಯಲ್ಲ. ಇಂತಹ ಪ್ರಯತ್ನಗಳು ಯಾವುದೇ ಫಲ ನೀಡುವುದಿಲ್ಲ' ಎಂದು ಕಂಪನಿಯ ಸಿಇಒ ಸುಲ್ತಾನ್ ಅಲ್ ಜಬೇರ್ ಹೇಳಿದ್ದಾರೆ.

'ತೈಲ ಹೊತ್ತ 230ರಷ್ಟು ಹಡಗುಗಳು ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿವೆ. ಯಾವುದೇ ಷರತ್ತು ವಿಧಿಸದೇ ಇವುಗಳ ಸಂಚಾರಕ್ಕೆ ಅವಕಾಶ ನೀಡಬೇಕು. ಈ ಜಲಮಾರ್ಗದ ಮೇಲೆ ಯಾವ ದೇಶವೂ ಹಕ್ಕು ಸ್ಥಾಪಿಸುವಂತಿಲ್ಲ' ಎಂದಿದ್ದಾರೆ.

ಹೊರ್ಮುಜ್: ಶುಲ್ಕಕ್ಕೆ ಇಯು ವಿರೋಧ

ಬ್ರುಸೆಲ್ಸ್ (ಎಎಫ್‌ಪಿ): 'ಹೊರ್ಮುಜ್ ಮೂಲಕ ಹಡಗುಗಳು ಯಾವುದೇ ಶುಲ್ಕ ಭರಿಸದೇ ಸಂಚರಿಸುವ ಸ್ವಾತಂತ್ರ್ಯ ಹೊಂದಿರುವುದನ್ನು ಖಾತ್ರಿಪಡಿಸಬೇಕು' ಎಂದು ಐರೋಪ್ಯ ಒಕ್ಕೂಟ (ಇಯು) ಹೇಳಿದೆ.

'ಅಂತರರಾಷ್ಟ್ರೀಯ ಕಾನೂನು ಕಡಲಯಾನದ ಸ್ವಾತಂತ್ರ್ಯವನ್ನು ನೀಡಿದೆ. ಅಂದರೆ, ಹಡಗುಗಳ ಸಂಚಾರಕ್ಕೆ ಯಾವುದೇ ಶುಲ್ಕ ನೀಡುವ ಅಗತ್ಯ ಇಲ್ಲ. ಇಂಥ ಕ್ರಮವು ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿದೆ' ಎಂದು ಒಕ್ಕೂಟದ ವಕ್ತಾರ ಅನ್ವರ್ ಎಲ್ ಅನೌನಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಪಾಕ್: ಸಭೆಯತ್ತ ಜಗದ ಚಿತ್ತ

ಇಸ್ಲಾಮಾಬಾದ್ (ಪಿಟಿಐ): ಈಗಾಗಲೇ ಘೋಷಿಸಲಾಗಿರುವ ತಾತ್ಕಾಲಿಕ ಕದನ ವಿರಾಮ ಕುರಿತು ಮಾತುಕತೆ ನಡೆಸುವದಕ್ಕಾಗಿ ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನ, ಶುಕ್ರವಾರ ನಡೆಯಲಿರುವ ಸಭೆಗೆ ಭಾರಿ ಭದ್ರತೆ ಒದಗಿಸಿದೆ.

ಪಶ್ಚಿಮ ಏಷ್ಯಾದಲ್ಲಿ ಮತ್ತೆ ಸಂಘರ್ಷ ಉದ್ಭವಿಸುವುದನ್ನು ತಡೆಯುವುದು ಹಾಗೂ ಕದನ ವಿರಾಮ ಒಪ್ಪಂದಕ್ಕೆ ಅಂತಿಮ ರೂಪ ನೀಡಿ ಜಾರಿಗೊಳಿಸುವ ಕುರಿತು ಅಮೆರಿಕ ಹಾಗೂ ಇರಾನ್‌ನ ನಿಯೋಗಗಳು ಈ ಸಭೆಯಲ್ಲಿ ಮಾತುಕತೆ ನಡೆಸಲಿವೆ. ಹೀಗಾಗಿ, ಎಲ್ಲ ದೇಶಗಳು ಇಸ್ಲಾಮಾಬಾದ್‌ನಲ್ಲಿ ನಡೆಯಲಿರುವ ಸಭೆಯತ್ತ ಗಮನ ಕೇಂದ್ರೀಕರಿಸಿವೆ.

ಪಾಕಿಸ್ತಾನದಲ್ಲಿನ ಇರಾನ್ ರಾಯಭಾರಿ ರೆಜಾ ಅಮಿರಿ ಮೊಘದಮ್ ಅವರು ಇರಾನ್‌ನ ನಿಯೋಗವು ಶುಕ್ರವಾರದ ಸಭೆಯಲ್ಲಿ ಪಾಲ್ಗೊಳ್ಳುವುದನ್ನು ಖಚಿತಪಡಿಸಿದ್ದಾರೆ.

'ಇಸ್ರೇಲ್ ಪಡೆಗಳಿಂದ ತಾತ್ಕಾಲಿಕ ಕದನ ವಿರಾಮ ಉಲ್ಲಂಘನೆ ಮುಂದುವರಿದಿದೆ. ಹೀಗಾಗಿ ಪಾಕಿಸ್ತಾನದಲ್ಲಿ ನಡೆಯಲಿರುವ ಶಾಂತಿ ಮಾತುಕತೆ ಕುರಿತಂತೆ ಇರಾನ್ ಜನರಲ್ಲಿ ಸಂದೇಹ ಮನೆ ಮಾಡಿದೆ' ಎಂದು ರೆಜಾ ಹೇಳಿದ್ದಾರೆ.

'ಲೆಬನಾನ್: ಒಪ್ಪಂದದ ಪ್ರಮುಖ ಭಾಗ'

ಟೆಹರಾನ್ (ಎಎಫ್‌ಪಿ): 'ಎರಡು ವಾರಗಳ ಕದನ ವಿರಾಮ ಒಪ್ಪಂದದ ಕರಾರಿನಲ್ಲಿ ಲೆಬನಾನ್ ಕೂಡ ಪ್ರಮುಖ ಭಾಗವಾಗಿದೆ. ಈ ಕರಾರಿನ ಉಲ್ಲಂಘನೆಯು ಕೆಟ್ಟ ಪರಿಣಾಮವನ್ನು ತಂದೊಡ್ಡಬಹುದು' ಎಂದು ಇರಾನ್ ಎಚ್ಚರಿಕೆ ನೀಡಿದೆ.

ಲೆಬನಾನ್ ಮೇಲೆ ಇಸ್ರೇಲ್ ನಡೆಸುತ್ತಿರುವ ಭೀಕರ ದಾಳಿಯ ಕುರಿತು ಪ್ರತಿಕ್ರಿಯಿಸಿರುವ ಇರಾನ್‌ನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್, 'ಲೆಬನಾನ್ ಮತ್ತು ಪಶ್ಚಿಮ ಏಷ್ಯಾದಲ್ಲಿ ಹರಡಿಕೊಂಡಿರುವ ಹಿಜ್ಬುಲ್ಲಾ ಸೇರಿದಂತೆ ನಮ್ಮ ಎಲ್ಲ ಸೇನಾ ಸಂಘಟನೆಗಳು ಒಪ್ಪಂದದ ಭಾಗವಾಗಿವೆ' ಎಂದಿದ್ದಾರೆ.

'ಒಪ್ಪಂದವನ್ನು ಉಲ್ಲಂಘಿಸಿದರೆ ದೊಡ್ಡ ಮೊತ್ತದ ಬೆಲೆ ತೆರಬೇಕಾಗುತ್ತದೆ ಮತ್ತು ನಮ್ಮಿಂದ ತೀವ್ರ ಪ್ರತಿಕ್ರಿಯೆ ಎದುರಿಸಬೇಕಾಗುತ್ತದೆ' ಎಂದರು. ಆದರೆ, ಇರಾನ್‌ನ ಈ ವಾದವನ್ನು ಅಮೆರಿಕ ನಿರಾಕರಿಸಿದೆ. ಲೆಬನಾನ್ ಕದನ ವಿರಾಮ ಒಪ್ಪಂದ ಭಾಗವಾಗಿಲ್ಲ ಎಂದಿದೆ.

ಲೆಬನಾನ್ ಕೈಬಿಡೆವು: ಇರಾನ್

ಲೆಬನಾನ್ ಮೇಲೆ ಇಸ್ರೇಲ್ ನಡೆಸಿರುವ ದಾಳಿಯು ವಂಚಕತನದಿಂದ ಕೂಡಿದೆ ಮತ್ತು ಇದನ್ನು ಸಹಿಸಲು ಸಾಧ್ಯವಿಲ್ಲ. ಶಾಂತಿ ಮಾತುಕತೆಯು ನಿರರ್ಥಕ ಎಂಬುದನ್ನು ಈ ದಾಳಿ ಸೂಚಿಸುತ್ತಿದೆ. ನಮ್ಮ ಕೈಗಳು ಬಂದೂಕಿನ ಟ್ರಿಗರ್ ಮೇಲೆಯೇ ಇವೆ. ಲೆಬನಾನ್‌ನ ನಮ್ಮ ಸಹೋದರ ಸಹೋದರಿಯರನ್ನು ಇರಾನ್ ಎಂದಿಗೂ ಕೈಬಿಡುವುದಿಲ್ಲ

ಮೊಸೂದ್ ಪೆಜೆಶ್ಕಿಯಾನ್, ಇರಾನ್ ಅಧ್ಯಕ್ಷ

ಅಲ್ಪ ವಿರಾಮದ ಮೇಲೆ ತೂಗುಗತ್ತಿ

ಎರಡನೇ ಮುಖ ಪುಟದಿಂದ...

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಾತ್ಕಾಲಿಕ ಕದನ ವಿರಾಮ ಕುರಿತು ಬುಧವಾರ ಘೋಷಣೆ ಮಾಡಿದ್ದರು. ಅದರ ಬೆನ್ನಲ್ಲೇ, ತನ್ನ ಷರತ್ತುಗಳಿಗೆ ಒಳಪಟ್ಟು ಕದನ ವಿರಾಮಕ್ಕೆ ಸಮ್ಮತಿಸುವುದಾಗಿ ಇರಾನ್ ಸಹ ಘೋಷಿಸಿತ್ತು. ಆದರೆ, ತಾನು ಲೆಬನಾನ್ ಮೇಲೆ ನಡೆಸುತ್ತಿರುವ ದಾಳಿಗಳು ಕದನ ವಿರಾಮ ಒಪ್ಪಂದದ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಇಸ್ರೇಲ್ ಬುಧವಾರವೇ ಘೋಷಿಸಿತ್ತು. ಲೆಬನಾನ್ ರಾಜಧಾನಿ ಬೈರೂತ್ ಹಾಗೂ ಬಂಡುಕೋರರ ಸಂಘಟನೆ ಹಿಜ್ಬುಲ್ಲಾ ನೆಲೆಗಳನ್ನು ಗುರಿಯಾಗಿಸಿ ದಾಳಿಯನ್ನು ಮುಂದುವರಿಸಿದೆ.

ಕದನ ವಿರಾಮ ಒಪ್ಪಂದದಂತೆ ನಡೆದುಕೊಳ್ಳದಿದ್ದಲ್ಲಿ ಈ ಮೊದಲಿನಕ್ಕಿಂತಲೂ ಭೀಕರವಾಗಿ ದಾಳಿ ನಡೆಸುವುದಾಗಿ ಇರಾನ್‌ಗೆ ಟ್ರಂಪ್ ಎಚ್ಚರಿಸಿದ್ದಾರೆ.

ಈ ಎಲ್ಲ ವಿದ್ಯಮಾನಗಳು ಕದನ ವಿರಾಮ ಒಪ್ಪಂದಕ್ಕೆ ಸ್ಪಷ್ಟ ರೂಪ ನೀಡಿ, ಅದನ್ನು ಜಾರಿಗೊಳಿಸುವ ಕುರಿತಂತೆ ಅನಿಶ್ಚಿತತೆ ಹಾಗೂ ಸಂಶಯ ಮೂಡುವಂತೆ ಮಾಡಿವೆ.

ಉತ್ತರ ಸಿಗದ ಪ್ರಶ್ನೆಗಳು: ಕದನ ವಿರಾಮ ಒಪ್ಪಂದ ಕುರಿತಂತೆ ಇನ್ನೂ ಸಹಮತ ಮೂಡಿಲ್ಲ. ಲೆಬನಾನ್ ಮೇಲೆ ಇಸ್ರೇಲ್ ದಾಳಿ ನಡೆಸುತ್ತಿರುವ ವಿಚಾರವು ಒಪ್ಪಂದದ ಭಾಗವಾಗಿದೆಯೇ ಇಲ್ಲವೇ ಎಂಬುದಕ್ಕಿಂತ ಇತರ ಹಲವು ಸಂಗತಿಗಳು ಕದನ ವಿರಾಮ ಕುರಿತಂತೆ ಪ್ರಶ್ನೆಗಳು ಉದ್ಭವಿಸುವಂತೆ ಮಾಡಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

ಇರಾನ್ ಬಳಿ ಇರುವ ಸಮೃದ್ಧೀಕರಿಸಿದ ಯುರೇನಿಯಂ ದಾಸ್ತಾನು ಕುರಿತು ಏನು ನಿರ್ಣಯ ತೆಗೆದುಕೊಳ್ಳಲಾಗುತ್ತದೆ? ಹೊರ್ಮುಜ್ ಜಲಸಂಧಿ ಮೂಲಕ ಹಡಗುಗಳ ಸಂಚಾರವು ಸಹಜ ಸ್ಥಿತಿಗೆ ಮರಳುವುದು ಯಾವಾಗ ಮತ್ತು ಹೇಗೆ? ಭವಿಷ್ಯದಲ್ಲಿ ಕ್ಷಿಪಣಿ ದಾಳಿ ನಡೆಸುವ ಇರಾನ್‌ನ ಸಾಮರ್ಥ್ಯ ತಗ್ಗುವುದೇ ಎಂಬ ಪ್ರಶ್ನೆಗಳು ಮೂಡಿವೆ.

'ಅಣ್ವಸ್ತ್ರ ತಯಾರಿಕೆಗೆ ಅಗತ್ಯವಿರುವ ಗುಣಮಟ್ಟದ ಯುರೇನಿಯಂ ಹೊಂದುವುದು ಇರಾನ್‌ನ ಹಕ್ಕು. ಅಮೆರಿಕದೊಂದಿಗೆ ನಡೆಯಲಿರುವ ಶಾಂತಿ ಮಾತುಕತೆ ವೇಳೆ ಈ ಕುರಿತು ಪ್ರಸ್ತಾಪಿಸಲಾಗುವುದು' ಎಂದು ಇರಾನ್‌ನ ಅಣು ಶಕ್ತಿ ಸಂಘಟನೆ (ಎಇಒಐ) ಮುಖ್ಯಸ್ಥ ಮೊಹಮ್ಮದ್ ಇಸ್ಲಾಮಿ ಹೇಳಿದ್ದಾರೆ.

ಯುರೇನಿಯಂ ಸಮೃದ್ಧೀಕರಿಸುವ ಕುರಿತ ಇರಾನ್‌ನ ವಾದ ಒಪ್ಪುವುದಿಲ್ಲ ಎಂದು ಅಮೆರಿಕ ಹೇಳಿದೆ. ಹೀಗಾಗಿ ತಾತ್ಕಾಲಿಕ ಕದನ ವಿರಾಮ ಕುರಿತಂತೆ ಇಸ್ಲಾಮಾಬಾದ್‌ನಲ್ಲಿ ಶುಕ್ರವಾರ (ಏಪ್ರಿಲ್ 10) ನಡೆಯಲಿರುವ ಮಾತುಕತೆ ಕುತೂಹಲಕ್ಕೆ ಕಾರಣವಾಗಿದೆ.

> ಲೆಬನಾನ್ ವಿಚಾರವನ್ನು ಕದನ ವಿರಾಮ ಒಪ್ಪಂದದಿಂದ ಹೊರಗೆ ಇಟ್ಟರೂ ಲೆಬನಾನ್ ಮೇಲಿನ ಇಸ್ರೇಲ್ ದಾಳಿ ತೀವ್ರವಾಗಲಿದೆ. ಇರಾನ್ ಮತ್ತು ಅದರ ಪರವಾಗಿ ಕಾರ್ಯನಿರ್ವಹಿಸುವ ಸಂಘಟನೆಗಳ ನಡುವೆ ಒಡಕು ಮೂಡಿಸುವ ಉದ್ದೇಶದಿಂದ ಲೆಬನಾನ್ ಮೇಲೆ ಇಸ್ರೇಲ್ ದಾಳಿ ನಡೆಸುತ್ತಿರಬಹುದು ಹಾಗೂ ತನ್ನನ್ನು ಹೊರಗಿಟ್ಟು ಕದನ ವಿರಾಮ ಒಪ್ಪಂದ ಕುರಿತ ಮಾತುಕತೆ ನಡೆಸುತ್ತಿರುವುದಕ್ಕೆ ಅಸಮಾಧಾನಗೊಂಡು ಇಂಥ ದಾಳಿಗಳ ಮೂಲಕ ಅದು ಪ್ರತಿಕ್ರಿಯಿಸುತ್ತಿರಬಹುದು ಎಂದು ಅರ್ಥೈಸಲಾಗುತ್ತದೆ
>
> **ಸೌಫನ್ ಸೆಂಟರ್,** ನ್ಯೂಯಾರ್ಕ್, ಜಾಗತಿಕ ವಿದ್ಯಮಾನಗಳ ಕುರಿತು ವಿಶ್ಲೇಷಣೆ ಮಾಡುವ ಸಂಸ್ಥೆ

ಪಾಕ್‌ಗೆ ವ್ಯಾನ್ಸ್ ನೇತೃತ್ವದ ನಿಯೋಗ

ಎರಡನೇ ಮುಖ ಪುಟದಿಂದ...

ಹೊರ್ಮುಜ್ ಮೂಲಕ ಸಾಗುವ ಹಡಗುಗಳಿಗೆ ಇರಾನ್ ಶುಲ್ಕ ವಿಧಿಸುವುದಕ್ಕೆ ಅನುಮತಿ ನೀಡುವ ಕುರಿತು ಚರ್ಚೆ ನಡೆಯಲಿದೆಯೇ? ಕ್ಷಿಪಣಿಗಳ ಅಭಿವೃದ್ಧಿ ಹಾಗೂ ಅಣ್ವಸ್ತ್ರ ಕಾರ್ಯಕ್ರಮ ಮುಂದುವರಿಸುವುದಕ್ಕೆ ಇರಾನ್‌ಗೆ ಅವಕಾಶ ನೀಡುವ ಕುರಿತು ಸಭೆಯಲ್ಲಿ ಪ್ರಸ್ತಾಪಿಸಲಾಗುವುದೇ ಎಂಬ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲ ಎಂದು ಮೂಲಗಳು ಹೇಳಿವೆ.

ಲೆಬನಾನ್: 203 ಮಂದಿ ಸಾವು

ಬೈರೂತ್ (ಎಪಿ): ಬೈರೂತ್ ಸೇರಿದಂತೆ ಲೆಬನಾನ್‌ನ ಹಲವು ಪ್ರದೇಶಗಳ ಮೇಲೆ ಇಸ್ರೇಲ್ ಬುಧವಾರ ನಡೆಸಿದ ದಾಳಿಯಲ್ಲಿ 203 ಜನ ಮೃತಪಟ್ಟಿದ್ದಾರೆ ಮತ್ತು ಸಾವಿರಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ಗುರುವಾರ ತಿಳಿಸಿದೆ.

ಹಿಜ್ಬುಲ್ಲಾ ನೆಲೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿರುವುದಾಗಿ ಇಸ್ರೇಲ್ ಸೇನೆ ಹೇಳಿದೆ. ಮಧ್ಯಾಹ್ನ ಜನದಟ್ಟಣೆ ಇರುವ ಸಂದರ್ಭದಲ್ಲಿ ಯಾವುದೇ ಮುನ್ಸೂಚನೆ ನೀಡದೆ ವಾಣಿಜ್ಯ ಮತ್ತು ವಸತಿ ಪ್ರದೇಶಗಳ ಮೇಲೆ ಇಸ್ರೇಲ್ ದಾಳಿ ನಡೆಸಿದ್ದರಿಂದ ಅಪಾರ ಸಾವು–ನೋವು ಸಂಭವಿಸಿದೆ.

5 ವಾರದಿಂದ ನಿರಂತರವಾಗಿ ನಡೆಯುತ್ತಿರುವ ಇಸ್ರೇಲ್ ಮತ್ತು ಲೆಬನಾನ್ ಬಂಡುಕೋರ ಸಂಘಟನೆ ಹಿಜ್ಬುಲ್ಲಾ ನಡುವಿನ ಸಂಘರ್ಷದಲ್ಲಿ ಒಂದೇ ದಿನದಲ್ಲಿ ಅಪಾರ ಸಾವು ನೋವು ಸಂಭವಿಸಿರುವುದು ಇದೇ ಮೊದಲು.

ಹಿಜ್ಬುಲ್ಲಾ ನಾಯಕ ನೈಮ್ ಕಸೆಮ್ ಆಪ್ತ ಅಲಿ ಯೂಸುಫ್ ಹಾರ್ಷಿಯನ್ನು ಹತ್ಯೆ ಮಾಡಿದ್ದಾಗಿ ಇಸ್ರೇಲ್ ಗುರುವಾರ ಹೇಳಿದೆ. ಹಿಜ್ಬುಲ್ಲಾ ಸಂಘಟನೆ ಈ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ. ಇಸ್ರೇಲ್ ದಾಳಿಯು ಅಮಾನವೀಯ ಎಂದು ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಖಂಡಿಸಿದ್ದಾರೆ.

ಇರಾನ್‌ಗೆ ಬೆಂಬಲ: ಆರೋಪ ನಿರಾಕರಿಸಿದ ಚೀನಾ

ಬೀಜಿಂಗ್ (ಪಿಟಿಐ): ಇಸ್ರೇಲ್–ಅಮೆರಿಕ ಜೊತೆ ಯುದ್ಧ ನಡೆಸುತ್ತಿದ್ದ ಇರಾನ್‌ಗೆ ಚೀನಾದ ಸಂಸ್ಥೆಗಳು ಉಪಗ್ರಹ ಚಿತ್ರಗಳು ಮತ್ತು ಸೆಮಿಕಂಡಕ್ಟರ್ ಚಿಪ್ ಉತ್ಪಾದನಾ ಸಾಧನವನ್ನು ಪೂರೈಸುತ್ತಿದ್ದವು ಎಂಬ ವರದಿಗಳನ್ನು ಚೀನಾ ರಕ್ಷಣಾ ಸಚಿವಾಲಯ ಗುರುವಾರ ನಿರಾಕರಿಸಿದೆ.

ಊಹಾತ್ಮಕ ಮತ್ತು ತಪ್ಪು ಮಾಹಿತಿಯ ಪ್ರಸಾರವನ್ನು ಚೀನಾ ವಿರೋಧಿಸುತ್ತದೆ ಎಂದು ಚೀನಾ ರಕ್ಷಣಾ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ.

ಚೀನಾದ ಸೆಮಿಕಂಡಕ್ಟರ್ ಉತ್ಪಾದನಾ ಅಂತರರಾಷ್ಟ್ರೀಯ ನಿಗಮ (ಎಸ್‌ಎಂಐಸಿ)ವು ಇರಾನ್‌ಗೆ ಸಾಧನಗಳನ್ನು ನೀಡಿದೆ ಮತ್ತು ಚೀನಾದ ವಾಣಿಜ್ಯ ಉಪಗ್ರಹ ಸಂಸ್ಥೆಯು ಪಶ್ಚಿಮ ಏಷ್ಯಾದಲ್ಲಿರುವ ಅಮೆರಿಕದ ಸೇನಾ ನೆಲೆಗಳ ಚಿತ್ರಗಳನ್ನು ನೀಡಿದೆ ಎಂದು ವರದಿಯಾಗಿತ್ತು.

'ಇರಾನ್‌ಗೆ ಸಹಾಯ ಮಾಡಲು ಚೀನಾ ಮತ್ತು ರಷ್ಯಾ ಕೈಗೊಂಡಿರುವ ಕ್ರಮಗಳ ಬಗ್ಗೆ ನಮಗೆ ಅರಿವಿದೆ, ಅಗತ್ಯಬಿದ್ದರೆ ಪ್ರತಿಕ್ರಿಯಿಸುತ್ತೇವೆ' ಎಂದು ಅಮೆರಿಕ ಅಧಿಕಾರಿಗಳು ಮಾಡಿರುವ ಆರೋಪಗಳನ್ನು ಚೀನಾ ನಿರಾಕರಿಸಿದೆ.

ಆಧಾರ್: 'ಸುಪ್ರೀಂ'ಗೆ ಪಿಐಎಲ್ ಸಲ್ಲಿಕೆ

'ವಯಸ್ಕರಿಗೆ ಗುರುತಿನ ಸಂಖ್ಯೆ ವಿತರಿಸಲು ಕಠಿಣ ಮಾರ್ಗಸೂಚಿ ತನ್ನಿ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಒಳ ನುಸುಳುಕೋರರಿಂದ ಆಗುತ್ತಿರುವ ದುರ್ಬಳಕೆ ತಡೆಯಲು ಆರು ವರ್ಷದೊಳಗಿನ ಭಾರತೀಯ ಪ್ರಜೆಗಳಿಗೆ ಮಾತ್ರ ಆಧಾರ್ ಕಾರ್ಡ್ ವಿತರಿಸುವಂತೆ ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರಕ್ಕೆ (ಯುಐಡಿಎಐ) ನಿರ್ದೇಶನ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದು ಸಲ್ಲಿಕೆಯಾಗಿದೆ.

ಭಾರತೀಯ ನಾಗರಿಕರು ಎಂದು ನುಸುಳುಕೋರರು ಬಿಂಬಿಸಿಕೊಳ್ಳುವುದನ್ನು ನಿಯಂತ್ರಿಸುವ ಉದ್ದೇಶದಿಂದ ಹರೆಯದವರು ಮತ್ತು ವಯಸ್ಕರಿಗೆ ಆಧಾರ್ ವಿತರಿಸಲು ಕಟ್ಟುನಿಟ್ಟಾದ ಮಾರ್ಗಸೂಚಿಗಳನ್ನು ರೂಪಿಸುವ ಅಗತ್ಯ ಇದೆ ಎಂದು ಅರ್ಜಿಯಲ್ಲಿ ಪ್ರತಿಪಾದಿಸಲಾಗಿದೆ.

ವಕೀಲರಾದ ಅಶ್ವಿನಿ ಉಪಾಧ್ಯಾಯ ಎಂಬುವರು ಅಶ್ವಿನಿ ದುಬೆ ಎಂಬುವರ ಮೂಲಕ ಅರ್ಜಿ ಸಲ್ಲಿಸಿದ್ದಾರೆ.

'12 ಅಂಕಿಗಳ ಡಿಜಿಟಲ್ ಆಧಾರ್ ಸಂಖ್ಯೆ ಗುರುತಿನ ದಾಖಲೆಯೇ ಹೊರತು ಪೌರತ್ವದ ಆಧಾರವಲ್ಲ' ಎಂಬ ಪ್ರದರ್ಶನ ಫಲಕಗಳನ್ನು ಆಧಾರ್ ಸೇವಾ ಕೇಂದ್ರಗಳ ಮುಂದೆ ಅಳವಡಿಸಬೇಕು' ಎಂದು ನ್ಯಾಯಾಲಯಕ್ಕೆ ಮನವಿ ಮಾಡಲಾಗಿದೆ.

ಪ್ರಾಧಿಕಾರ 144 ಕೋಟಿ ಆಧಾರ್ ಕಾರ್ಡ್ ವಿತರಿಸಿದೆ. ಶೇ 99ರಷ್ಟು ಭಾರತೀಯರು ನೋಂದಣಿ ಮಾಡಿಕೊಂಡಿದ್ದಾರೆ. ಹೀಗಾಗಿ ಇನ್ನು ಮುಂದೆ ಆರು ವರ್ಷದ ಒಳಗಿನವರಿಗೆ ಮಾತ್ರ ಆಧಾರ್ ಸಂಖ್ಯೆ ವಿತರಿಸುವಂತೆ ಸಂವಿಧಾನದ 32ನೇ ವಿಧಿಯ ಅವಕಾಶ ಬಳಸಿಕೊಂಡು ಅರ್ಜಿದಾರರು ಕೋರಿದ್ದಾರೆ.

ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ ಹಾಗೂ ಇತರೆ ಗುರುತಿನ ಚೀಟಿಗಳನ್ನು ಪಡೆಯಲು ಇತ್ತೀಚೆಗೆ ಆಧಾರ್ ಕಾರ್ಡ್ ಮೂಲ ದಾಖಲೆಯಾಗಿ ಬಳಕೆಯಾಗುತ್ತಿದೆ. ಆಧಾರ್ ನೀಡಲು ಅನುಸರಿಸುವ ಪರಿಶೀಲನಾ ಪ್ರಕ್ರಿಯೆ ದುರ್ಬಲವಾಗಿವೆ. ನುಸುಳುಕೋರರು ಸುಲಭವಾಗಿ ದಾಖಲೆ ತಿರುಚುತ್ತಿದ್ದಾರೆ. ಹೀಗಾಗಿ ಕಠಿಣ ಮಾರ್ಗಸೂಚಿಗಳನ್ನು ರೂಪಿಸುವ ಅಗತ್ಯ ಇದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ವಿದೇಶಿಗರು ಆಧಾರ್‌ಗಾಗಿ ವಿದೇಶಿ ವಿಭಾಗದಲ್ಲಿ ಅರ್ಜಿ ಸಲ್ಲಿಸುತ್ತಾರೆ. ಆದರೆ, ನುಸುಳುಕೋರರು 'ಭಾರತೀಯ ನಾಗರಿಕ' ವಿಭಾಗದಲ್ಲಿ ಅರ್ಜಿ ಸಲ್ಲಿಸಿ ಸುಲಭವಾಗಿ ಪಡೆಯುತ್ತಿದ್ದಾರೆ. ಆನಂತರ ವಾಸ ದೃಢೀಕರಣ, ಚಾಲನಾ ಪರವಾನಗಿ ಸೇರಿ ಇತರೆ ದಾಖಲೆ ಪಡೆದು ಸುಲಭವಾಗಿ ಭಾರತೀಯ ಪ್ರಜೆ ಎನಿಸಿಕೊಳ್ಳುತ್ತಿದ್ದಾರೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ವಿದೇಶಿಯರನ್ನು ಭಾರತೀಯ ಪ್ರಜೆಯಿಂದ ಬೇರ್ಪಡಿಸುವಲ್ಲಿ ಆಧಾರ್ ಕಾಯ್ದೆ–2026 ವಿಫಲವಾಗಿದೆಯೇ ಎಂಬ ಕಾನೂನಾತ್ಮಕ ಪ್ರಶ್ನೆಯನ್ನೂ ಈ ಅರ್ಜಿ ಎತ್ತಿದೆ.

ಆಧಾರ್ ದುರ್ಬಳಕೆಯು ಕಲ್ಯಾಣ ಕಾರ್ಯಕ್ರಮಗಳು ಮತ್ತು ಸಾರ್ವಜನಿಕ ಸಂಪನ್ಮೂಲ ಅನರ್ಹರ ಪಾಲಾಗುವುದನ್ನು ಹೆಚ್ಚಿಸಿದೆ ಎಂದು ಅರ್ಜಿಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ.

ಮತದಾರರ ಗುರುತಿನ ಚೀಟಿ, ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿ ಸಾಂವಿಧಾನಿಕ ಅವಕಾಶಗಳ ಬಗ್ಗೆಯೂ ಅರ್ಜಿಯಲ್ಲಿ ಗಮನಸೆಳೆಯಲಾಗಿದೆ. ಅಕ್ರಮ ನೋಂದಣಿಗಳು ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳನ್ನು ಹಾಳುಮಾಡುತ್ತವೆ ಎಂಬ ಆತಂಕ ಅರ್ಜಿಯಲ್ಲಿ ವ್ಯಕ್ತವಾಗಿದೆ.

ಮಕ್ಕಳ ಕಳ್ಳಸಾಗಣೆ: ಸುಪ್ರೀಂ ಕೋರ್ಟ್ ಕಳವಳ

ನವದೆಹಲಿ: ದೇಶದಾದ್ಯಂತ ಮಕ್ಕಳ ಕಳ್ಳಸಾಗಣೆ ಪ್ರಕರಣಗಳು ಹೆಚ್ಚುತ್ತಿರುವ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಇದನ್ನು ತಡೆಯುವ ನಿಟ್ಟಿನಲ್ಲಿ ತಕ್ಷಣವೇ ಕಾರ್ಯಪ್ರವೃತ್ತರಾಗದಿದ್ದಲ್ಲಿ, ಪರಿಸ್ಥಿತಿ ಕೈಮೀರಿ ಹೋಗುತ್ತದೆ ಎಂದು ಎಚ್ಚರಿಸಿದೆ.

'ದೇಶದಾದ್ಯಂತ ಮಕ್ಕಳ ಕಳ್ಳಸಾಗಣೆ ತಂಡಗಳು ಸಂಘಟಿತವಾಗಿ ಕಾರ್ಯಾಚರಿಸುತ್ತಿವೆ. ಈ ಜಾಲವನ್ನು ಮಟ್ಟಹಾಕಲು ರಾಜ್ಯಗಳು ಮತ್ತು ಗೃಹ ಇಲಾಖೆ ಕಟ್ಟೆಚ್ಚರದಿಂದ ಕಾರ್ಯನಿರ್ವಹಿಸಬೇಕು. ಕೋರ್ಟ್ ಕೂಡ, ಮಕ್ಕಳ ನಾಪತ್ತೆ ಪ್ರಕರಣಗಳ ಮೇಲೆ ನಿಗಾ ವಹಿಸುತ್ತಿದೆ. ಆದರೆ, ಅಂತಿಮವಾಗಿ ಕ್ರಮ ಕೈಗೊಳ್ಳಬೇಕಿರುವುದು ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆ' ಎಂದು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ ಹಾಗೂ ಕೆ.ವಿ ವಿಶ್ವನಾಥನ್ ಅವರ ನ್ಯಾಯಪೀಠ ಹೇಳಿದೆ. ಮಕ್ಕಳ ಕಳ್ಳಸಾಗಣೆ ತಡೆಯುವ ನಿಟ್ಟಿನಲ್ಲಿ 2025ರ ಸುಪ್ರೀಂ ಕೋರ್ಟ್ ಆದೇಶವನ್ನು ಜಾರಿಗೊಳಿಸಲು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಮೀನ ಮೇಷ ಎಣಿಸುತ್ತಿರುವ ಬಗ್ಗೆಯೂ ನ್ಯಾಯಪೀಠವು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

'ಮಕ್ಕಳ ಕಳ್ಳಸಾಗಣೆ ಪ್ರಕರಣಗಳ ವಿಚಾರಣೆಯನ್ನು ಆರು ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕು, ಮಾನವ ಕಳ್ಳಸಾಗಣೆ ತಡೆ ಘಟಕಗಳನ್ನು (ಎಎಚ್‌ಟಿಯುಎಸ್) ದೇಶದಾದ್ಯಂತ ತೆರೆಯಬೇಕು, ತನಿಖೆಯ ಮಾನದಂಡವನ್ನು ಪರಿಷ್ಕರಿಸಬೇಕು' ಎಂದು ಸುಪ್ರೀಂ ಕೋರ್ಟ್ 2025ರಲ್ಲಿ ತೀರ್ಪು ನೀಡಿತ್ತು.

ಮಹಿಳೆಯರ ನಿಷೇಧಕ್ಕೆ ಬೆಂಬಲ

ಎರಡನೇ ಮುಖಪುಟದಿಂದ...

ಈ ದೇಗುಲದಲ್ಲಿ ವಾರ್ಷಿಕವಾಗಿ ನಡೆಯುವ 'ಚಮಯವಿಳಕ್ಕು' ಉತ್ಸವಕ್ಕೆ ಪುರುಷರು ಮಹಿಳೆಯರಂತೆಯೇ ವೇಷ ಧರಿಸಬೇಕು. ಶತಮಾನಗಳ ಹಿಂದಿನಿಂದಲೂ ಈ ಸಂಪ್ರದಾಯ ಇಲ್ಲಿ ನಡೆದುಕೊಂಡು ಬಂದಿದೆ ಎಂದು ಅವರು ಹೇಳಿದರು.

ಹೀಗಾಗಿ ಇದು ಪುರುಷ ಕೇಂದ್ರಿತ ಅಥವಾ ಮಹಿಳಾ ಕೇಂದ್ರಿದ ಧಾರ್ಮಿಕ ನಂಬಿಕೆಗಳ ಪ್ರಶ್ನೆಯಲ್ಲ. ಆದರೆ, ಶಬರಿಮಲೆ ಪ್ರಕರಣವನ್ನು ಮಹಿಳಾ ಕೇಂದ್ರಿತವಾಗಿಸಲಾಗಿದೆ ಎಂದು ಮೆಹ್ತಾ ಬೇಸರ ವ್ಯಕ್ತಪಡಿಸಿದರು.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ, ಎಂ.ಎಂ.ಸುಂದರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ್ ಕುಮಾರ್, ಆಗಸ್ಟೀನ್ ಜಾರ್ಜ್ ಮಸೀಹ್, ಪ್ರಸನ್ನ ಬಿ. ವರಾಳೆ, ಆರ್. ಮಹದೇವನ್ ಮತ್ತು ಜಾಯ್‌ಮಾಲ್ಯಾ ಬಾಗ್ಚಿ ಅವರು ಈ ಪೀಠದಲ್ಲಿದ್ದಾರೆ.

2018ರಲ್ಲಿ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು 4:1ರ ಬಹುಮತದ ತೀರ್ಪಿನ ಮೂಲಕ ಕೇರಳದ ಶಬರಿಮಲೆ ಅಯ್ಯಪ್ಪ ದೇವಸ್ಥಾನಕ್ಕೆ 10ರಿಂದ 50 ವರ್ಷದೊಳಗಿನ ಮಹಿಳೆಯರು ಪ್ರವೇಶಿಸಲು ಇದ್ದ ನಿಷೇಧವನ್ನು ರದ್ದುಗೊಳಿಸಿತು. ಶತಮಾನಗಳಷ್ಟು ಹಳೆಯದಾದ ಈ ಹಿಂದೂ ಧಾರ್ಮಿಕ ಪದ್ಧತಿಯು ಕಾನೂನುಬಾಹಿರ ಮತ್ತು ಅಸಾಂವಿಧಾನಿಕ ಎಂದು ತೀರ್ಪು ನೀಡಿತು.

ಬಳಿಕ 2019ರ ನವೆಂಬರ್ 14ರಂದು ಆಗಿನ ಸಿಜೆಐ ರಂಜನ್ ಗೊಗೊಯ್ ನೇತೃತ್ವದ ಮತ್ತೊಂದು ಐವರು ನ್ಯಾಯಮೂರ್ತಿಗಳ ಪೀಠವು 3:2ರ ಬಹುಮತದಿಂದ ವಿವಿಧ ಪೂಜಾ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯದ ವಿಷಯವನ್ನು ವಿಸ್ತೃತ ಪೀಠಕ್ಕೆ ಉಲ್ಲೇಖಿಸಿತ್ತು.

ಲಾಚೆನ್‌ನಲ್ಲಿ ಗುರುವಾರ ವಾಹನಗಳು ಹಿಮಾವೃತಗೊಂಡಿದ್ದವು – ಪಿಟಿಐ ಚಿತ್ರ

ಸಿಕ್ಕಿಂ: 1,321 ಪ್ರವಾಸಿಗರ ರಕ್ಷಣೆ

ಗ್ಯಾಂಗ್ಟಕ್ (ಪಿಟಿಐ): ಭೂಕುಸಿತದಿಂದಾಗಿ ರಸ್ತೆ ಸಂಪರ್ಕ ಕಡಿತಗೊಂಡು ಸಿಕ್ಕಿಂನ ಲಾಚೆನ್‌ನಲ್ಲಿ ಸಿಲುಕಿದ್ದ ಸಾವಿರಕ್ಕೂ ಅಧಿಕ ಪ್ರವಾಸಿಗರನ್ನು ಗುರುವಾರ ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರವಾಸಿಗರು ಏಪ್ರಿಲ್ 5ರಿಂದ ಲಾಚೆನ್‌ನಲ್ಲಿ ಸಿಲುಕಿದ್ದರು. ರಕ್ಷಣಾ ಕಾರ್ಯಾಚರಣೆ ಪೂರ್ಣಗೊಂಡಿದ್ದು, 1321 ಪ್ರವಾಸಿಗರು ಮತ್ತು 84 ಸ್ಥಳೀಯರು ಸುರಕ್ಷಿತ ಸ್ಥಳಗಳಿಗೆ ತಲುಪಿದ್ದಾರೆ. ಪ್ರವಾಸಿಗರನ್ನು ಗ್ಯಾಂಗ್ಟಕ್‌ಗೆ ಕರೆದುಕೊಂಡು ಹೋಗಲು ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಲಾಗಿತ್ತು.

ಚಿಟಿಕೆ ಸುದ್ದಿ

ಶರಣಾಗತ ನಕ್ಸಲರಿಂದ ಭದ್ರತಾ ಸಿಬ್ಬಂದಿಗೆ ತರಬೇತಿ

ರಾಯಪುರ (ಪಿಟಿಐ): ಛತ್ತೀಸಗಢ ಪೊಲೀಸರು ಕಚ್ಚಾ ಬಾಂಬ್ ಬಳಕೆಯಲ್ಲಿ ಪರಿಣತರಾಗಿದ್ದ ಶರಣಾಗತ ನಕ್ಸಲರಿಂದ ಭದ್ರತಾ ಸಿಬ್ಬಂದಿಗೆ ತರಬೇತಿ ಕೊಡಿಸುತ್ತಿದ್ದಾರೆ.

'ಶರಣಾಗತರಾದ ನಕ್ಸಲರು ತರಬೇತಿ ನೀಡುವುದರಿಂದ ಕಚ್ಚಾ ಬಾಂಬ್ ಪತ್ತೆ ಮಾಡಿ, ನಿಷ್ಕ್ರಿಯಗೊಳಿಸುವ ಭದ್ರತಾ ಸಿಬ್ಬಂದಿಯ ಸಾಮರ್ಥ್ಯವು ಮತ್ತಷ್ಟು ವೃದ್ಧಿಸಲಿದೆ. ಬಸ್ತರ್ ಪ್ರದೇಶ ಸುರಕ್ಷಿತವಾಗಿರಲಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕಚ್ಚಾ ಬಾಂಬ್ ನಿರ್ವಹಣೆ ಮತ್ತು ಬಳಕೆಯ ಬಗ್ಗೆ ಅನುಭವವಿರುವ 20 ಮಾಜಿ ನಕ್ಸಲರನ್ನು ಆಯ್ಕೆ ಮಾಡಿ, ಭಯೋತ್ಪಾದನಾ ನಿಗ್ರಹ ಮತ್ತು ಅರಣ್ಯ ಕಾರ್ಯಾಚರಣೆ ಕಾಲೇಜಿನಲ್ಲಿ ತರಬೇತಿಗೆ ಬಳಸಿಕೊಳ್ಳಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ಅಬು ಹಸೀಮ್ ಚೌಧರಿ ನಿಧನ

ಕೋಲ್ಕತ್ತ (ಪಿಟಿಐ): ಕಾಂಗ್ರೆಸ್‌ನ ಹಿರಿಯ ನಾಯಕ, ಕೇಂದ್ರದ ಮಾಜಿ ಸಚಿವ ಅಬು ಹಸೀಮ್ ಖಾನ್ ಚೌಧರಿ (89) ಅವರು ವಯೋಸಹಜ ಕಾರಣಗಳಿಂದ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ರಾತ್ರಿ ಮೃತಪಟ್ಟರು.

ಚೌಧರಿ ಅವರಿಗೆ ಪತ್ನಿ, ಒಬ್ಬ ಮಗ ಇಶಾ ಖಾನ್ ಚೌಧರಿ ಇದ್ದಾರೆ. ಇಶಾ ಅವರು ಪಶ್ಚಿಮ ಬಂಗಾಳದ ಮಾಲ್ಡಾ ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದರಾಗಿದ್ದಾರೆ.

ಮಾಲ್ಡಾದಲ್ಲಿ ಪ್ರಸಿದ್ಧ ಖಾನ್ ಚೌಧರಿ ಕುಟುಂಬದಲ್ಲಿ 1938ರ ಜನವರಿ 12ರಂದು ಚೌಧರಿ ಅವರು ಜನಿಸಿದರು. ತಮ್ಮ ಹಿರಿಯಣ್ಣ, ಆಮಜಿ ಕೇಂದ್ರ ಸಚಿವ ಎಬಿಎ ಗನಿ ಖಾನ್ ಚೌಧರಿ ಅವರಿಂದ ರಾಜಕೀಯ ಪಾಠ ಕಲಿತ ಚೌಧರಿ ಅವರು ಅಣ್ಣನ ಸಾವಿನ ಬಳಿಕ ಪ್ರಮುಖ ರಾಜಕಾರಣಿಯಾಗಿ ಬೆಳೆದರು. 1996ರಿಂದ 2006ರವರೆಗೆ ಕಾಲಿಯಾಚಕ್ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿದ್ದರು. 2009ರಿಂದ ಸತತ ಮೂರು ಬಾರಿ ಮಾಲ್ಡಾ ದಕ್ಷಿಣ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿದ್ದರು.

ರಷ್ಯಾ ಜಲಾಂತರ್ಗಾಮಿ ಹಿಮ್ಮೆಟ್ಟಿಸಿದ ಬ್ರಿಟನ್

ಲಂಡನ್ (ಪಿಟಿಐ): 'ತನ್ನ ಜಲಗಡಿಯಲ್ಲಿ ರಷ್ಯಾ ರಹಸ್ಯವಾಗಿ ಜಲಾಂತರ್ಗಾಮಿ ಕಾರ್ಯಾಚರಣೆ ನಡೆಸಿದ್ದು, ಸಶಸ್ತ್ರ ಪಡೆ ಇದನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದೆ' ಎಂದು ಬ್ರಿಟನ್ ಹೇಳಿದೆ.

'ಕೆಲವು ವಾರಗಳ ಹಿಂದೆ ರಷ್ಯಾದ ಜಲಾಂತರ್ಗಾಮಿ ನೌಕೆಯೊಂದು ಅಂತರ ರಾಷ್ಟ್ರೀಯ ಜಲಗಡಿ ಉಲ್ಲಂಘಿಸಿದ್ದನ್ನು ಯುದ್ಧನೌಕೆ ಪತ್ತೆ ಹಚ್ಚಿದೆ' ಎಂದು ಬ್ರಿಟನ್ ರಕ್ಷಣಾ ಸಚಿವಾಲಯ ಹೇಳಿದೆ.

'ಪುಟಿನ್ ಅವರ ಆಕ್ರಮಣಶೀಲತೆಯಿಂದ ನಮ್ಮ ಜನರನ್ನು ರಕ್ಷಿಸಲು ದೃಢ ನಿಶ್ಚಯ ಮಾಡಿದ್ದೇನೆ' ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಹೇಳಿದ್ದಾರೆ.

ಮೂರೂ ಸೇನಾಪಡೆಗಳ 2026ನೇ ಸಾಲಿನ 'ರಣ ಸಂವಾದ'

'ಸಂಯೋಜಿತ ಕಾರ್ಯಾಚರಣೆ ಈಗಿನ ತುರ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯ ಸೇನೆಯ ಮೂರೂ ಪಡೆಗಳು ಒಟ್ಟಿಗೇ ಕೆಲಸ ಮಾಡುವಂತಹ 'ಬಹು–ಪಡೆ ಕಾರ್ಯಾಚರಣೆ ವ್ಯವಸ್ಥೆ' ಈ ಹೊತ್ತಿನ ತುರ್ತು' ಎಂದು ಸಂಯೋಜಿತ ರಕ್ಷಣಾ ಪಡೆ ಮುಖ್ಯಸ್ಥ ಏರ್ ಮಾರ್ಷಲ್ ಅಶುತೋಷ್ ದೀಕ್ಷಿತ್ ಹೇಳಿದರು.

ಭಾರತೀಯ ವಾಯುಪಡೆಯು ಇಲ್ಲಿ ಆಯೋಜಿಸಿರುವ ಎರಡು ದಿನಗಳ ಬಹು–ಪಡೆ ಕಾರ್ಯಾಚರಣೆ ವ್ಯವಸ್ಥೆ ಕುರಿತ, 'ರಣ ಸಂವಾದ–2026' ಅನ್ನು ಉದ್ದೇಶಿಸಿ ಅವರು ಮಾತನಾಡಿದರು. 'ನಮ್ಮ ಮೂರೂ ಪಡೆಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುವ ವ್ಯವಸ್ಥೆಯಿಂದ ನೂತನ ವ್ಯವಸ್ಥೆಗೆ ಶೀಘ್ರವೇ ಪರಿವರ್ತನೆಯಾಗಬೇಕು' ಎಂದರು.

'ರಕ್ಷಣಾ ತಂತ್ರಗಾರಿಕೆ ಪ್ರತಿದಿನವೂ ಹೊಸರೂಪ ಪಡೆದುಕೊಳ್ಳುತ್ತಿದೆ. ಭಾರತದ ಭೂಗಡಿಗಳಲ್ಲಿ ಡ್ರೋನ್ ಕಣ್ಗಾವಲು, ಉಪಗ್ರಹ ಕಣ್ಗಾವಲು ಮತ್ತು ಗಸ್ತು ಮುಖ್ಯವಾಗುತ್ತದೆ. ಇವುಗಳ ಜತೆಯಲ್ಲಿ ಸೈಬರ್ ಯುದ್ಧ ತಂತ್ರಗಾರಿಕೆಗಳು, ಅವುಗಳಿಗೆ ಪೂರಕವಾಗಿ ಬಾಂಬರ್ ಯುದ್ಧವಿಮಾನಗಳು ಮತ್ತು ರಕ್ಷಣಾ ಹೆಲಿಕಾಪ್ಟರ್–ವಿಮಾನಗಳ ಅಗತ್ಯವಿದೆ. ಈ ಎಲ್ಲವೂ ಒಟ್ಟಿಗೇ ಕೆಲಸ ಮಾಡಬೇಕು' ಎಂದರು.

'ಈ ಮೊದಲು ಯುದ್ಧದ ಸಂದರ್ಭದಲ್ಲಿ ಬಾಂಬ್ ದಾಳಿ ನಡೆಯಬಹುದು, ಗಡಿ ಅತಿಕ್ರಮಣ ನಡೆಯಬಹುದು ಎಂದು ಎಣಿಸಲಾಗುತ್ತಿತ್ತು. ಆದರೆ ಈಗ ನಮ್ಮ ಸೇನಾಪಡೆಗಳ ದತ್ತಾಂಶ ಕೇಂದ್ರ ಅಥವಾ ನಿಯಂತ್ರಣ ಕೊಠಡಿಯ ಮೇಲೆ ಸೈಬರ್ ದಾಳಿ ನಡೆಸಬಹುದು. ಬಾಂಬ್ ದಾಳಿಗಿಂತ ಹೆಚ್ಚು ಅಪಾಯಕಾರಿಯಾದ ದಾಳಿ ಇದು' ಎಂದು ವಿವರಿಸಿದರು.

'ಬಹು–ಪಡೆ ಕಾರ್ಯಾಚರಣೆ ವ್ಯವಸ್ಥೆಗೆ ಈಗಿನ ಅಮೆರಿಕ–ಇಸ್ರೇಲ್ ಮತ್ತು ಇರಾನ್ ಯುದ್ಧವು ನಮಗೆ ಉತ್ತಮ ಉದಾಹರಣೆ. ಅಮೆರಿಕ ಮತ್ತು ಇಸ್ರೇಲ್ ಯುದ್ಧವಿಮಾನಗಳ ಮೂಲಕ ಬಾಂಬ್ ದಾಳಿ ಮತ್ತು ಯುದ್ಧನೌಕೆಗಳ ಮೂಲಕ ಕ್ಷಿಪಣಿ ದಾಳಿ ನಡೆಸಿದವು. ಇದಕ್ಕೆ ಪ್ರತಿಯಾಗಿ ಇರಾನ್ ದೂರಗಾಮಿ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಬಳಸಿಕೊಂಡಿತು. ಹೊರ್ಮುಜ್ ಜಲಸಂಧಿಯನ್ನು ಮುಚ್ಚುವ ಮೂಲಕ ಭೌಗೋಳಿಕ ಲಕ್ಷಣವನ್ನೂ ಯುದ್ಧದ ಒಂದು ಅಸ್ತ್ರವನ್ನಾಗಿ ಪ್ರಯೋಗಿಸಿತು' ಎಂದರು.

'ರಣ ಸಂವಾದ'ದಲ್ಲಿ ಮೂರೂ ಸೇನಾಪಡೆಗಳ ಅಧಿಕಾರಿಗಳು ಭಾಗಿಯಾಗಿದ್ದರು –ಪ್ರಜಾವಾಣಿ ಚಿತ್ರ

> **ಭಾರತೀಯ ಸೇನೆಯ ಮೂರೂ ಪಡೆಗಳು ಪರಸ್ಪರ ಸಂಯೋಜನೆಯಲ್ಲಿ ಕಾರ್ಯಾಚರಣೆ ನಡೆಸಿದ್ದಕ್ಕೆ ಆಪರೇಷನ್ ಸಿಂಧೂರ ಉತ್ತಮ ಉದಾಹರಣೆ**
> **ಚೀಫ್ ಜನರಲ್ ಉಪೇಂದ್ರ ದ್ವಿವೇದಿ,** ಭೂಸೇನೆ ಮುಖ್ಯಸ್ಥ

'ಇರಾನ್ ನೌಕೆ ಧ್ವಂಸ– ಭಾರತಕ್ಕೆ ಪಾಠ'

'ದೂರದಲ್ಲಿ ನಡೆಯುತ್ತಿರುವ ಪ್ರಾದೇಶಿಕ ಸಂಘರ್ಷವು ನಮ್ಮ ಮನೆಯ ಹೊಸ್ತಿಲಿಗೂ ಬರಬಹುದು ಎಂಬುದಕ್ಕೆ ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಣ ಯುದ್ಧವೇ ಸಾಕ್ಷಿ. ನಮ್ಮ ಜಲಗಡಿಯಿಂದ ಕೆಲವೇ ನಾಟಿಕಲ್ ಮೈಲು ದೂರದಲ್ಲಿ ಇರಾನ್ ನೌಕಾಪಡೆಯ ಹಡಗನ್ನು ಹೊಡೆದುರುಳಿಸಲಾಯಿತು. ಅದಕ್ಕೂ ನಮಗೂ ಸಂಬಂಧವೇ ಇಲ್ಲ ಎಂದು ಕೂರಲಾಗದು, ನಮಗೆ ಅದೊಂದು ದೊಡ್ಡ ಪಾಠ' ಎಂದು ಅಶುತೋಷ್ ದೀಕ್ಷಿತ್ ಅಭಿಪ್ರಾಯಪಟ್ಟರು.

'ಶ್ರೀಲಂಕಾದ ಜಲಗಡಿ ವ್ಯಾಪ್ತಿಯಲ್ಲಿ ಇರಾನಿನ ಹಡಗನ್ನು ಧ್ವಂಸ ಮಾಡಲಾಯಿತು. ಆ ದಾಳಿ ನಡೆದ ಪ್ರದೇಶವು ಭಾರತದ ಹಿತಾಸಕ್ತಿಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಯುದ್ಧ ನಡೆಯುತ್ತಿರುವ ಪ್ರದೇಶದಿಂದ ಸಾವಿರಾರು ಕಿ.ಮೀ. ದೂರದಲ್ಲಿ ಈ ದಾಳಿ ನಡೆಸಲಾಯಿತು ಎಂಬುದನ್ನು ನಾವು ಗಮನಿಸಬೇಕು' ಎಂದರು.

ತುರ್ತು ಸಂದೇಶ ರವಾನಿಸಿದ ಪೈಲಟ್

ಮುಂಬೈ: ಮುಂಬೈನಿಂದ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದ ಏರ್ ಇಂಡಿಯಾ ವಿಮಾನದ ಪೈಲಟ್ ತಾಂತ್ರಿಕ ಸಮಸ್ಯೆಯಿಂದ 'ಪ್ಯಾನ್–ಪ್ಯಾನ್' ತುರ್ತು ಸಂದೇಶ (ಸಾಧ್ಯವಿರುವ ಸಹಾಯ ಅಗತ್ಯವಿದೆ) ಕಳುಹಿಸಿ, ವಿಮಾನವನ್ನು ಸುರಕ್ಷಿತವಾಗಿ ಇಳಿಸಿದ್ದಾರೆ. ಮುಂಬೈನ ವಿಮಾನ ನಿಲ್ದಾಣದಿಂದ ಟೇಕ್‌ಆಫ್ ಆಗುತ್ತಿದ್ದಂತೆ ತಾಂತ್ರಿಕ ಸಮಸ್ಯೆ ಕಾಣಿಸಿತು. ಪೈಲಟ್ ತುರ್ತು ಸಂದೇಶ ಕಳಿಸಿದರು. ಬದಲಿ ವಿಮಾನದಲ್ಲಿ ಪ್ರಯಾಣಿಕರನ್ನು ಬೆಂಗಳೂರಿಗೆ ಕಳುಹಿಸಲಾಯಿತು.

ಲೈಂಗಿಕ ದೌರ್ಜನ್ಯ, ಮತಾಂತರ ಯತ್ನ: ಆರು ಸೆರೆ

ಪ್ರಜಾವಾಣಿ ವಾರ್ತೆ

ಮುಂಬೈ: ಕಿರಿಯ ಶ್ರೇಣಿಯ ಮಹಿಳಾ ಉದ್ಯೋಗಿಗಳಿಗೆ ಲೈಂಗಿಕ ಕಿರುಕುಳ ನೀಡಿ, ಮತಾಂತರಕ್ಕೆ ಯತ್ನಿಸಿದ ಆರೋಪದಲ್ಲಿ ಮಹಾರಾಷ್ಟ್ರದ ನಾಸಿಕ್ ನಗರದ ಬಹುರಾಷ್ಟ್ರೀಯ ಐಟಿ ಕಂಪನಿಯೊಂದರ ಆರು ಉದ್ಯೋಗಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಐಟಿ ಕಂಪನಿಯಲ್ಲಿ ಮಹಿಳಾ ಉದ್ಯೋಗಿಗಳ ಮೇಲೆ ಲೈಂಗಿಕ ದೌರ್ಜನ್ಯ ಮತ್ತು ಮತಾಂತರಕ್ಕೆ ಯತ್ನ ನಡೆದಿರುವುದು ಅತ್ಯಂತ ಗಂಭೀರ ಪ್ರಕರಣ' ಎಂದಿರುವ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಪ್ರಕರಣದ ಸಮಗ್ರ ತನಿಖೆಗೆ ಆದೇಶಿಸಿದ್ದಾರೆ. 2022ರಿಂದ 2026ರ ಅವಧಿಯಲ್ಲಿ ಪ್ರಕರಣ ನಡೆದಿದೆ ಎನ್ನಲಾಗಿದೆ. ಈ ಸಂಬಂಧ ಒಟ್ಟು 9 ಎಫ್‌ಐಆರ್‌ಗಳು ದಾಖಲಾಗಿವೆ. ಸಂತ್ರಸ್ತರಲ್ಲಿ 8 ಮಹಿಳೆಯರು ಮತ್ತು ಒಬ್ಬ ಪುರುಷ ಸೇರಿದ್ದಾರೆ. ಡಾನಿಶ್ ಶೇಕ್, ತೌಸಿಫ್ ಅತ್ತರ್, ರಾಜಾ ಮೆಮನ್, ಶಾರೂಕ್ ಖುರೇಷಿ, ಶಫಿ ಶೇಕ್, ಆಸಿಫ್ ಮತ್ತು ಅನ್ಸಾರಿ ಬಂಧಿತ ಆರೋಪಿಗಳು.

ತನಿಖೆಗಾಗಿ ನಾಸಿಕ್ ನಗರ ಪೊಲೀಸ್ ಆಯುಕ್ತ ಸಂದೀಪ್ ಕಾರ್ಣಿಕ್ ಅವರು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದ್ದಾರೆ. 'ಇದು ಜಿಹಾದ್ ಅಲ್ಲ, ಪ್ರಕರಣದ ಸೂತ್ರಧಾರ, ಹಣಕಾಸಿನ ನೆರವು ನೀಡಿದ್ದು ಯಾರು ಎನ್ನವುದು ಪೊಲೀಸ್ ತನಿಖೆಯಿಂದ ಬಹಿರಂಗಗೊಳ್ಳಲಿದೆ' ಎಂದು ಸಚಿವ ನಿತೀಶ್ ರಾಣೆ ಹೇಳಿದ್ದಾರೆ.

ನೋಂದಣಿ ಸಂಖ್ಯೆ:05–1906–07, ದಿ.09–09–1907
ರಾಜ್ಯ ಒಕ್ಕಲಿಗರ ಸಂಘ (ರಿ)
ನಂ.148, ಕೃಷ್ಣರಾಜೇಂದ್ರ ರಸ್ತೆ, ವಿಶ್ವೇಶ್ವರಪುರ, ಬೆಂಗಳೂರು-560 004 ದೂ ಸಂ. 26611029,

ಪ್ರಕಟಣೆ

ರಾಜ್ಯ ಒಕ್ಕಲಿಗರ ಸಂಘದ 2014–2015 ರಿಂದ 2024–2025 ನೇ ಆರ್ಥಿಕ ವರ್ಷಗಳ ಸರ್ವ ಸದಸ್ಯರ ಸಭೆ ಮತ್ತು ವಿಶೇಷ ಸರ್ವ ಸದಸ್ಯರ ಸಭೆಯನ್ನು ಕರೆಯಲು ದಿನಾಂಕ:08.04.2026 ರಂದು ನಡೆದ ವಿಶೇಷ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಸರ್ವ ಸದಸ್ಯರ ಸಭೆಯನ್ನು **ದಿನಾಂಕ: 31.05.2026 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ** ಹಾಗೂ ವಿಶೇಷ ಸರ್ವ ಸದಸ್ಯರ ಸಭೆಯನ್ನು ಮಧ್ಯಾಹ್ನ 3 ಗಂಟೆಗೆ ಬೆಂಗಳೂರು ನಗರದ ಅರಮನೆ ಮೈದಾನದ ಗಾಯಿತ್ರಿ ವಿಹಾರ ಮತ್ತು ಗಾಯಿತ್ರಿ ವೃಕ್ಷ ಆವರಣ, ಗೇಟ್ ನಂ.04 ರಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಲ್. ಶ್ರೀನಿವಾಸ್ ರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ಸರ್ವ ಸದಸ್ಯರ ಸಭೆಯ ನೋಟೀಸನ್ನು ರಾಜ್ಯ ಒಕ್ಕಲಿಗರ ಸಂಘದ ಬೈಲಾ ನಿಬಂಧನೆ 17(1) ರ ಪ್ರಕಾರ ಸಭೆ ನಡೆಯುವ 21 ದಿನ ಮುಂಚಿತವಾಗಿ ಪ್ರಮುಖ ಕನ್ನಡ ದಿನ ಪತ್ರಿಕೆಗಳಲ್ಲಿ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಪ್ರಕಟಿಸಲಾಗುವುದು.

ಕಾರ್ಯಕಾರಿ ಸಮಿತಿ ಅಪ್ಪಣೆ ಮೇರೆಗೆ

ಸ್ಥಳ: ಬೆಂಗಳೂರು
ದಿನಾಂಕ: 09.04.2026

ಸಹಿ/–
(ಸಿ.ಜಿ. ಗಂಗಾಧರ್)
ಪ್ರಧಾನ ಕಾರ್ಯದರ್ಶಿ

ದಾವಣಗೆರೆ ಜಿಲ್ಲೆಯ ಹದಡಿ ಗ್ರಾಮದ ಗ್ರಾಮ ಪಂಚಾಯಿತಿ ಕಚೇರಿ ಮತಗಟ್ಟೆಯಲ್ಲಿ ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ ಅಂಗವಾಗಿ ಮತದಾನ ಮಾಡಲು ಸರತಿ ಸಾಲಿನಲ್ಲಿ ನಿಂತಿದ್ದ ಮತದಾರರು –ಪ್ರಜಾವಾಣಿ ಚಿತ್ರ/ ಸತೀಶ್ ಬಡಿಗೇರ

ಎರಡು ಕ್ಷೇತ್ರ: ಮೇ 4ಕ್ಕೆ ಫಲಿತಾಂಶ

ಎರಡನೇ ಮುಖಪುಟದಿಂದ...

ಜನರು ಬೆಳಗಿನಿಂದಲೇ ಉತ್ಸಾಹದಿಂದ ಮತಗಟ್ಟೆಗಳಿಗೆ ಬಂದು, ಮತ ಚಲಾಯಿಸಿದರು. ಮಧ್ಯಾಹ್ನ 12ರವರೆಗೆ ಬಹುತೇಕ ಮತಗಟ್ಟೆಗಳಲ್ಲಿ ಸರತಿ ಸಾಲು ಕಂಡು ಬಂತು. ಬಿಸಿಲು ಹೆಚ್ಚಾದ ನಂತರ ಮತಗಟ್ಟೆಗಳಲ್ಲಿ ಮತದಾರರ ಸಂಖ್ಯೆ ಕಡಿಮೆ ಆಗಿತ್ತು. ಮತ್ತೆ ಸಂಜೆ ಮತದಾನ ಬಿರುಸು ಪಡೆಯಿತು.

ಶಾಸಕರಾಗಿದ್ದ ಎಚ್.ವೈ. ಮೇಟಿ ಅವರ ನಿಧನದಿಂದ ತೆರವಾದ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಅವರ ಪುತ್ರ ಉಮೇಶ ಮೇಟಿ, ಬಿಜೆಪಿಯಿಂದ ವೀರಣ್ಣ (ವೀರಭದ್ರಯ್ಯ) ಚರಂತಿಮಠ, ಉತ್ತಮ ಪ್ರಜಾಕೀಯ ಪಾರ್ಟಿಯಿಂದ ಅಂತೋಷ ಸವ್ವಾಸೆ, ಜನತಾ ಚಳವಳಿ ಭಾರತ ಪಕ್ಷದಿಂದ ತೇಜೋರಾಮ ಶೆಟ್ಟಿ ದೇವಾಂಗ, ಕರ್ನಾಟಕ ರಾಷ್ಟ್ರ ಸಮಿತಿಯಿಂದ ನಾಗರಾಜ ಕಲಕುಟಗರ, ಬ್ಲೂ ಇಂಡಿಯಾ ಪಾರ್ಟಿಯಿಂದ ತಳವಾರ ಶಿವಕುಮಾರ, ಆಲ್ ಇಂಡಿಯಾ ಜನರಕ್ಷ ಪಾರ್ಟಿಯಿಂದ ಸಿದ್ದಪ್ಪ ಗೋಡಿ, ಪಕ್ಷೇತರರಾಗಿ ಆನಂದ ಜಕಾತಿ, ರವಿ ಪಡಸಲಗಿ ಅವರ ಭವಿಷ್ಯ ಮತಯಂತ್ರ ಸೇರಿದೆ.

ದೂರು ದಾಖಲು: 'ಮತದಾರರಿಗೆ ಹಣ ಹಂಚುವುದು ಮೇಲ್ನೋಟಕ್ಕೆ ಕಂಡು ಬಂದ ಆರೋಪದ ಮೇಲೆ ಕಾಂಗ್ರೆಸ್ ಮುಖಂಡ ಜಾಫರ್ ಬೇಪಾರಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಫ್ಲೈಯಿಂಗ್ ಸ್ಕ್ವಾಡ್‌ನ ವಿಠ್ಠಲ ನಾಯಿಕ ಪ್ರಕರಣ ದಾಖಲಿಸಿದ್ದಾರೆ.

ಟೇಬಲ್ ವಿಚಾರದಲ್ಲಿ ಗಲಾಟೆ

ದಾವಣಗೆರೆ: ಮತದಾರರ ಚೀಟಿ ನೀಡಲು ಮತಗಟ್ಟೆ ಸಮೀಪ ಹಾಕಿಕೊಂಡಿದ್ದ ಟೇಬಲ್ ವಿಚಾರದಲ್ಲಿ ಕಾಂಗ್ರೆಸ್ ಹಾಗೂ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಕಾರ್ಯಕರ್ತರ ನಡುವೆ ನೂಕಾಟ– ತಳ್ಳಾಟ ನಡೆಯಿತು.

ಮೆಹಬೂಬ್ ನಗರದ ಮುಖ್ಯ ರಸ್ತೆಯ ಆಲಾ ಹಜರತ್ ಚೌಕದಲ್ಲಿ ಕಾಂಗ್ರೆಸ್ ಹಾಗೂ ಎಸ್‌ಡಿಪಿಐ ಕಾರ್ಯಕರ್ತರು ಟೇಬಲ್ ಹಾಕಿಕೊಂಡು ಮತದಾರರ ಮನವೊಲಿಸಲು ಕೊನೆಯ ಗಳಿಗೆಯಲ್ಲಿ ಪ್ರಯತ್ನ ಮಾಡುತ್ತಿದರು. ಮುಖ್ಯ ರಸ್ತೆಯಿಂದ ಹಿಂದಕ್ಕೆ ಟೇಬಲ್ ಹಾಕಿಕೊಳ್ಳುವಂತೆ ಕಾಂಗ್ರೆಸ್ ನಾಯಕರು ಎಸ್‌ಡಿಪಿಐ ಮುಖಂಡರಿಗೆ ತಾಕೀತು ಮಾಡಿದರು.

ಈ ವಿಚಾರದಲ್ಲಿ ಎರಡು ಪಕ್ಷಗಳ ಕಾರ್ಯಕರ್ತರು, ನಾಯಕರ ನಡುವೆ ವಾಗ್ವಾದ ತಾರಕಕ್ಕೇರಿತು. ಮಧ್ಯಪ್ರವೇಶಿಸಿದ ಪೊಲೀಸರು ಪರಿಸ್ಥಿತಿಯನ್ನು ತಿಳಿಗೊಳಿಸಿ ಜನರನ್ನು ಚದುರಿಸಿದರು.

ಬೆಂಗಳೂರಿಗೆ ‘ರಾಯಲ್ಸ್’ ಚಾಲೆಂಜ್

ಪಾಟೀದಾರ್–ಪರಾಗ್ ಮುಖಾಮುಖಿ ಇಂದು • ಡೇವಿಡ್, ದೇವದತ್ತ ಮೇಲೆ ಕಣ್ಣು

ಮುಖ್ಯಾಂಶಗಳು

- ಆರ್‌ಸಿಬಿಗೆ ತವರಿನಿಂದ ಹೊರಗೆ ಮೊದಲ ಪಂದ್ಯ
- ಎರಡು ಅರ್ಧಶತಕ ಹೊಡೆದಿರುವ ದೇವದತ್ತ ಪಡಿಕ್ಕಲ್
- ವೈಭವ್ ಸೂರ್ಯವಂಶಿಗೆ ಡಫಿ, ಭುವಿ ಚಾಲೆಂಜ್

ಭುವನೇಶ್ವರ್ ಕುಮಾರ್

ರಾಜಸ್ಥಾನ ರಾಯಲ್ಸ್ ತಂಡದ ಬ್ಯಾಟರ್ ವೈಭವ್ ಸೂರ್ಯವಂಶಿ

ಪ್ರಜಾವಾಣಿ ವಾರ್ತೆ/ಪಿಟಿಐ

ಗುವಾಹಟಿ: ದಿಗ್ಗಜ ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ಎಸೆತಗಳನ್ನು ಸಿಕ್ಸರ್‌ಗೆತ್ತಿದ ಸಂತಸದಲ್ಲಿರುವ ವೈಭವ್ ಸೂರ್ಯವಂಶಿಯ ಆಟಕ್ಕೆ ಕಡಿವಾಣ ಹಾಕಲು ‘ಹಾಲಿ ಚಾಂಪಿಯನ್’ ರಾಯಲ್ ಚಾಲೆಂಜರ್ಸ್ ಬೆಂಗಳೂರು ಬೌಲಿಂಗ್ ಪಡೆ ಸನ್ನದ್ಧವಾಗಿದೆ.

ತವರಿನಂಗಳದಲ್ಲಿ ಸತತ ಎರಡೂ ಪಂದ್ಯಗಳಲ್ಲಿ ಜಯಭೇರಿ ಬಾರಿಸಿರುವ ಆರ್‌ಸಿಬಿಯು ಶುಕ್ರವಾರ ಬರ್ಸಾಪರ ಕ್ರೀಡಾಂಗಣದಲ್ಲಿ ರಿಯಾನ್ ಪರಾಗ್ ನಾಯಕತ್ವದ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ. ರಜತ್ ಪಾಟೀದಾರ್ ಬಳಗವು ಈ ಟೂರ್ನಿಯಲ್ಲಿ ತವರೂರಿನಿಂದ ಹೊರಗೆ ಆಡುತ್ತಿರುವ ಮೊದಲ ಪಂದ್ಯವೂ ಇದಾಗಿದ್ದು, ಜಯದ ಓಟ ಮುಂದುವರಿಸಿ ‘ಹ್ಯಾಟ್ರಿಕ್’ ಸಾಧಿಸುವ ಛಲದಲ್ಲಿದೆ. ಆತಿಥೇಯ ತಂಡವು ಇದುವರೆಗೆ ಆಡಿರುವ ಮೂರು ಪಂದ್ಯಗಳಲ್ಲಿಯೂ ಜಯಿಸಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿಯ ವೇಗಿ ಜೇಕಬ್ ಡಫಿ ಅಮೋಘವಾಗಿ ಬೌಲಿಂಗ್ ಮಾಡಿದ್ದರು. ಅದರಲ್ಲೂ ಪವರ್ ಪ್ಲೇ ಹಂತದಲ್ಲಿ ಅವರ ನಿಖರ ದಾಳಿಗೆ ಸನ್‌ರೈಸರ್ಸ್ ಹೈದರಾಬಾದ್ ತಂಡವು ಸಂಕಷ್ಟಕ್ಕೆ ಸಿಲುಕಿತ್ತು. ಎರಡನೇ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧವೂ ಡಫಿ ಎರಡು ವಿಕೆಟ್ ಗಳಿಸಿದ್ದರು. ಆದರೆ ದುಬಾರಿಯಾಗಿದ್ದರು. ಆ ಪಂದ್ಯದಲ್ಲಿ ಭುವನೇಶ್ವರ್ ಕುಮಾರ್ (41ಕ್ಕೆ3) ಅವರು ಮಿಂಚಿದ್ದರು. ‘ಸ್ಪಿನ್ನರ್–ಬೌನ್ಸರ್’ ಬೌಲರ್ ಕೃಣಾಲ್ ಪಾಂಡ್ಯ ಕೂಡ ಎರಡು ವಿಕೆಟ್ ಪಡೆದಿದ್ದರು. ಸುಯಶ್ ಶರ್ಮಾ, ಹೊಸಪ್ರತಿಭೆ ಅಭಿನಂದನ್ ಸಿಂಗ್ ಕೂಡ ಮಿಂಚಿದ್ದರು. ಅದರಿಂದಾಗಿ ಆತಿಥೇಯ ತಂಡದ ಸ್ಫೋಟಕ ಆರಂಭಿಕ ಜೋಡಿಯನ್ನು ಕಟ್ಟಿಹಾಕುವ ಆತ್ಮವಿಶ್ವಾಸದಲ್ಲಿ ಆರ್‌ಸಿಬಿ ಬೌಲಿಂಗ್ ಪಡೆ ಇದೆ.

ಒಂದೊಮ್ಮೆ ಜೈಸ್ವಾಲ್ ಮತ್ತು ವೈಭವ್ ಅವರನ್ನು ಬೇಗನೆ ಕಟ್ಟಿಹಾಕಿದರೂ, ರಾಜಸ್ಥಾನ ತಂಡದಲ್ಲಿ ಬ್ಯಾಟರ್‌ಗಳ ದೊಡ್ಡ ಪಟ್ಟಿ ಇದೆ. ವಿಕೆಟ್‌ಕೀಪರ್–ಬ್ಯಾಟರ್ ಧ್ರುವ ಜುರೇಲ್, ಶಿಮ್ರಾನ್ ಹೆಟ್ಮೆಯರ್, ರವೀಂದ್ರ ಜಡೇಜ, ನಾಯಕ ಪರಾಗ್, ಡೊನೊವನ್ ಪೆರೇರಾ ಅವರು ಉತ್ತಮ ಲಯದಲ್ಲಿದ್ದಾರೆ. ಅವರನ್ನೂ ನಿಯಂತ್ರಿಸಲು ಬೌಲರ್‌ಗಳು ಗಮನ ಹರಿಸುವುದು ಅನಿವಾರ್ಯವಾಗಲಿದೆ. ಅದರಲ್ಲೂ ಜುರೇಲ್ ಅವರು ಯಾವುದೇ ಹಂತದಲ್ಲಿಯೂ ಜಯವನ್ನು ತಮ್ಮ ತಂಡದತ್ತ ವಾಲುವಂತೆ ಮಾಡುವ ಸಮರ್ಥರಾಗಿದ್ದಾರೆ. ಇದುವರೆಗೆ ಇಂಗ್ಲೆಂಡ್ ವೇಗಿ ಜೋಫ್ರಾ ಆರ್ಚರ್, ನಾಂದ್ರೆ ಬರ್ಗರ್, ಸ್ಪಿನ್ನರ್ ರವಿ ಬಿಷ್ಣೋಯಿ ಹಾಗೂ ತುಷಾರ್ ದೇಶಪಾಂಡೆ ಅವರು ಪರಿಣಾಮಕಾರಿ ದಾಳಿಯನ್ನು ಮಾಡಿದ್ದಾರೆ. ಅವರ ಮುಂದೆ ಈಗ ಆರ್‌ಸಿಬಿಯ ಬಲಾಢ್ಯ ಬ್ಯಾಟಿಂಗ್ ಪಡೆಯನ್ನು ನಿಯಂತ್ರಿಸುವ ಸವಾಲು ಇದೆ.

ಸ್ಥಿರವಾದ ಆರಂಭ ನೀಡುತ್ತಿರುವ ವಿರಾಟ್ ಕೊಹ್ಲಿ, ಎರಡೂ ಪಂದ್ಯಗಳಲ್ಲಿ ಅರ್ಧಶತಕ ದಾಖಲಿಸಿರುವ ದೇವದತ್ತ ಪಡಿಕ್ಕಲ್, ಮಧ್ಯಮ ಕ್ರಮಾಂಕದಲ್ಲಿ ಅಬ್ಬರಿಸುತ್ತಿರುವ ನಾಯಕ ರಜತ್ ಹಾಗೂ ಟಿಮ್ ಡೇವಿಡ್ ಅವರು ಬೌಲರ್‌ಗಳಿಗೆ ಕಠಿಣ ಸವಾಲೊಡ್ಡುವುದು ಖಚಿತ. ಚೆನ್ನೈ ಎದುರಿನ ಪಂದ್ಯದ ಮೊದಲ ಹತ್ತು ಓವರ್‌ಗಳಲ್ಲಿ ಆರ್‌ಸಿಬಿಯು ಕೇವಲ 91 ರನ್ ಗಳಿಸಿತ್ತು. ಆದರೆ ನಂತರದ ಹತ್ತು ಓವರ್‌ಗಳಲ್ಲಿ 159 ರನ್‌ಗಳನ್ನು ಸೂರೆ ಮಾಡಿತ್ತು. ಅದಕ್ಕೆ ಪ್ರಮುಖ ಕಾರಣರಾಗಿದ್ದು ಟಿಮ್ ಡೇವಿಡ್ ಅವರು. ಅಜಾನುಬಾಹು ಆಟಗಾರ ಡೇವಿಡ್ ಎಂಟು ಸಿಕ್ಸರ್ ಸಿಡಿಸಿದ್ದರು. ಕೇವಲ 25 ಎಸೆತಗಳಲ್ಲಿ ಅಜೇಯ 70 ರನ್ ಹೊಡೆದಿದ್ದರು. ಈ ಪಂದ್ಯದಲ್ಲಿ ಆರಂಭಿಕ ಫಿಲ್ ಸಾಲ್ಟ್ ಕೂಡ ಲಯಕ್ಕೆ ಮರಳಿದ್ದರು. ನಾಲ್ಕು ರನ್ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡಿದ್ದರು. ಆದರೆ ಅವರು ಫಾರ್ಮ್‌ನಲ್ಲಿರುವುದು ಆರ್‌ಸಿಬಿ ಬ್ಯಾಟಿಂಗ್ ಪಡೆ ಮತ್ತಷ್ಟು ಬಲಿಷ್ಠವಾದಂತಾಗಿದೆ. ಜಿತೇಶ್ ಶರ್ಮಾ, ಕೃಣಾಲ್ ಅವರೂ ಅವಕಾಶ ಸಿಕ್ಕರೆ ರನ್‌ಗಳ ಕಾಣಿಕೆ ನೀಡಬಲ್ಲರು.

ಗುವಾಹಟಿಯಲ್ಲಿ ಶುಕ್ರವಾರ ರಾತ್ರಿ ಒಂದೊಮ್ಮೆ ಮಳೆ ಬರದೇ ಹೋದರೆ, ಉಭಯ ತಂಡಗಳ ಬ್ಯಾಟರ್‌ಗಳು ರನ್ ಹೊಳೆ ಹರಿಸುವ ಸಾಧ್ಯತೆಯಂತೂ ಖಂಡಿತ ಇದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್ ಆ್ಯಪ್

ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಮತ್ತು ಫಿಲ್ ಸಾಲ್ಟ್ ಪಿಟಿಐ ಚಿತ್ರಗಳು

ಬಲಾಬಲ — 34 ಪಂದ್ಯ

ಆರ್‌ಸಿಬಿ ಜಯ	17
ಆರ್‌ಆರ್ ಜಯ	14
ಫಲಿತಾಂಶವಿಲ್ಲ	3

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಆರ್	3	3	0	0	6	2.403
ಪಿಬಿಕೆಎಸ್	3	2	0	1	5	0.637
ಆರ್‌ಸಿಬಿ	2	2	0	0	4	2.501
ಡಿಸಿ	3	2	1	0	4	0.811
ಎಲ್‌ಎಸ್‌ಜಿ	3	2	1	0	4	- 0.359
ಎಸ್‌ಆರ್‌ಎಚ್	3	1	2	0	2	0.275
ಜಿಟಿ	3	1	2	0	2	-0.270
ಎಂಐ	3	1	2	0	2	-0.715
ಕೆಕೆಆರ್	4	0	3	1	1	-1.315
ಸಿಎಸ್‌ಕೆ	3	0	3	0	0	-2.517

ಆರೇಂಜ್ ಕ್ಯಾಪ್–ಯಶಸ್ವಿ ಜೈಸ್ವಾಲ್, ಆರ್‌ಆರ್ (170 ರನ್)
ಪರ್ಪಲ್ ಕ್ಯಾಪ್–ರವಿ ಬಿಷ್ಣೋಯಿ, ಆರ್‌ಆರ್ (7 ವಿಕೆಟ್)

ಲಖನೌಗೆ ಸತತ ಎರಡನೇ ಜಯ • ಕೋಲ್ಕತ್ತಕ್ಕೆ ನಿರಾಸೆ

ಮುಕುಲ್ ಸಾಹಸಕ್ಕೆ ಒಲಿದ ಗೆಲುವು

ಕೋಲ್ಕತ್ತ (ಪಿಟಿಐ): ಹೊಸಮುಖ ಮುಕುಲ್ ಚೌಧರಿ (ಔಟಾಗದೇ 54;27ಎ) ಅವರ ಏಕಾಂಗಿ ಸಾಹಸದಿಂದ ಲಖನೌ ಸೂಪರ್ ಜೈಂಟ್ಸ್ ತಂಡವು ಐಪಿಎಲ್ ಪಂದ್ಯದಲ್ಲಿ ಗುರುವಾರ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಮೂರು ವಿಕೆಟ್‌ಗಳ ರೋಚಕ ಜಯ ದಾಖಲಿಸಿತು.

ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 182 ರನ್‌ಗಳ ಸವಾಲಿನ ಗುರಿಯನ್ನು ಬೆನ್ನಟ್ಟಿದ ಲಖನೌ ತಂಡವು 128 ರನ್‌ಗಳಿಗೆ ಏಳು ವಿಕೆಟ್‌ಗಳನ್ನು ಕಳೆದುಕೊಂಡು ಸೋಲಿನ ಹಾದಿಯಲ್ಲಿತ್ತು. ಈ ಹಂತದಲ್ಲಿ ಐಪಿಎಲ್‌ನಲ್ಲಿ ಮೂರನೇ ಪಂದ್ಯವನ್ನು ಆಡಿದ ರಾಜಸ್ಥಾನದ 22 ವರ್ಷದ ವಿಕೆಟ್ ಕೀಪರ್–ಬ್ಯಾಟರ್ ಮುಕುಲ್ ಸ್ಮರಣೀಯ ಇನಿಂಗ್ಸ್ ಕಟ್ಟಿದರು.

ಏಳನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಅವರು ಆವೇಶ್ ಖಾನ್ (ಔಟಾಗದೇ 1;3ಎ) ಅವರೊಂದಿಗೆ ಮುರಿಯದ ಎಂಟನೇ ವಿಕೆಟ್‌ಗೆ 54 ರನ್ (24ಎಸೆತ) ಸೇರಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಅವರ ಇನಿಂಗ್ಸ್‌ನಲ್ಲಿ ಎರಡು ಬೌಂಡರಿ ಮತ್ತು ಏಳು ಭರ್ಜರಿ ಸಿಕ್ಸರ್ ಒಳಗೊಂಡಿದ್ದವು.

ಕೊನೆಯ ಎರಡು ಓವರ್‌ಗಳಲ್ಲಿ ಗೆಲುವಿಗೆ 30 ರನ್ ಬೇಕಿದ್ದವು. ಕ್ಯಾಮರಾನ್ ಗ್ರೀನ್ ಹಾಕಿದ 19ನೇ ಓವರ್‌ನಲ್ಲಿ ಹೆಲಿಕಾಪ್ಟರ್ ಶಾಟ್ ಮೂಲಕ ಎರಡು ಸಿಕ್ಸರ್ ಮತ್ತು ಒಂದು ಬೌಂಡರಿ ಬಾರಿಸಿದ ಮುಕುಲ್ ಪಂದ್ಯಕ್ಕೆ ಮಹತ್ವದ ತಿರುವು ನೀಡಿದರು. ಮೊದಲ ಜಯದ ಆಸೆಯಲ್ಲಿದ್ದ ಕೋಲ್ಕತ್ತಕ್ಕೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ.

ಕೊನೆಯ ಓವರ್‌ನಲ್ಲಿ ಜಯಕ್ಕೆ 14 ರನ್ ಬೇಕಿತ್ತು. ವೈಭವ್ ಅರೋರಾ ಹಾಕಿದ ಮೊದಲ ಎಸೆತದಲ್ಲಿ ಸ್ಟ್ರೈಕ್‌ನಲ್ಲಿದ್ದ ಆವೇಶ್ ಒಂಟಿ ರನ್ ತೆಗೆದರು. ಎರಡನೇ ಎಸೆತವನ್ನು ಮುಕುಲ್ ಸಿಕ್ಸರ್‌ಗೆ ಅಟ್ಟಿದರು. ಮೂರು ಮತ್ತು ನಾಲ್ಕನೇ ಎಸೆತಗಳು ಡಾಟ್ ಆದವು. ಈ ಹಂತದಲ್ಲಿ ಕೋಲ್ಕತ್ತ ತಂಡದ ಪಾಳಯದಲ್ಲಿ ಸಂಭ್ರಮ ಮೂಡಿತು. ಆದರೆ, ಅದು ಕ್ಷಣಿಕವಾಗಿತ್ತು. ಐದನೇ ಎಸೆತದಲ್ಲಿ ಮುಕುಲ್ ಮತ್ತೆ ಸಿಕ್ಸರ್ ಬಾರಿಸಿದ್ದರಿಂದ ಸ್ಕೋರ್ ಸಮನಾಯಿತು. ಕೊನೆಯ ಎಸೆತದಲ್ಲಿ ‘ಬೈ’ ಮೂಲಕ ಒಂಟಿ ರನ್ ತೆಗೆದು ಸಂಭ್ರಮಿಸಿದರು. ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗೆ 182 ರನ್ ಗಳಿಸಿತು. ಮಧ್ಯಮ ಕ್ರಮಾಂಕದಲ್ಲಿ ಆಯುಷ್ ಬಡೋನಿ (54;34ಎ) ಅವರು ತಂಡಕ್ಕೆ ಬಲ ತುಂಬಿದರು. ನಾಯಕ ರಿಷಭ್ ಪಂತ್ (10) ನಿರಾಸೆ ಮೂಡಿಸಿದರು.

ಮುಕುಲ್ ಚೌಧರಿ ಪಿಟಿಐ ಚಿತ್ರ

ಇದಕ್ಕೂ ಮುನ್ನ ಅಂಗಕ್ರಿಶ್ ರಘುವಂಶಿ (45; 33ಎ) ಮತ್ತು ನಾಯಕ ಅಜಿಂಕ್ಯ ರಹಾನೆ (41; 24ಎ) ಆಟದ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ಎದುರು 4 ವಿಕೆಟ್‌ಗೆ 181 ರನ್ ಗಳಿಸಿತು. ತಂಡವು 13.1 ಓವರ್‌ಗಳಲ್ಲಿ 111 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತ್ತು. ಕೊನೆಯಲ್ಲಿ ಅಬ್ಬರಿಸಿದ ರೋವ್ಮನ್ ಪೊವೆಲ್ (ಅಜೇಯ 39; 24ಎ, 4X4, 6X2) ಮತ್ತು ಕ್ಯಾಮರಾನ್ ಗ್ರೀನ್ (ಅಜೇಯ 32; 24ಎ, 4X3, 6X1) ಅವರು ಸವಾಲಿನ ಮೊತ್ತ ಗಳಿಸಲು ನೆರವಾದರು.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 181 (ಅಜಿಂಕ್ಯ ರಹಾನೆ 41, ಅಂಗಕ್ರಿಷ್ ರಘುವಂಶಿ 45, ಕ್ಯಾಮರಾನ್ ಗ್ರೀನ್ ಔಟಾಗದೇ 32, ರೋವ್ಮನ್ ಪೊವೆಲ್ ಔಟಾಗದೇ 39, ಮಣಿಮಾರನ್ ಸಿದ್ಧಾರ್ಥ್ 34ಕ್ಕೆ1, ದಿಗ್ವೇಶ್ ಸಿಂಗ್ ರಾಠಿ 25ಕ್ಕೆ1, ಆವೇಶ್ ಖಾನ್ 44ಕ್ಕೆ1). ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 182 (ಆಯುಷ್ ಬಡೋನಿ 54, ಮುಕುಲ್ ಚೌಧರಿ ಔಟಾಗದೇ 54; ವೈಭವ್ ಅರೋರಾ 38ಕ್ಕೆ 2, ಅನುಕೂಲ್ ರಾಯ್ 32ಕ್ಕೆ 2). ಪಂದ್ಯದ ಆಟಗಾರ: ಮುಕುಲ್ ಚೌಧರಿ

ಶುಭಮನ್ ಗಿಲ್‌ಗೆ ₹12 ಲಕ್ಷ ದಂಡ

ನವದೆಹಲಿ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಬುಧವಾರ ನಡೆದ ಪಂದ್ಯದಲ್ಲಿ ನಿಗದಿ ಅವಧಿಯಲ್ಲಿ ಓವರುಗಳನ್ನು ಪೂರೈಸಲು ಗುಜರಾತ್ ಟೈಟನ್ಸ್ ವಿಫಲರಾದ ಕಾರಣ ನಾಯಕ ಶುಭಮನ್ ಗಿಲ್ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯ ಕೊನೆಯ ಎಸೆತದವರೆಗೆ ಸಾಗಿ ಟೈಟನ್ಸ್ ತಂಡ ಒಂದು ರನ್‌ನ ರೋಚಕ ಜಯಗಳಿಸಿತ್ತು.



ಮುಂಬೈನ ವಾಂಖೆಡೆ ಕ್ರೀಡಾಂಗಣದ ಸ್ಟ್ಯಾಂಡ್‌ವೊಂದಕ್ಕೆ ಮಾಜಿ ಕ್ರಿಕೆಟಿಗ ರವಿ ಶಾಸ್ತ್ರಿ ಅವರ ಹೆಸರನ್ನು ಗುರುವಾರ ಇಡಲಾಯಿತು. ರವಿ ಶಾಸ್ತ್ರಿ ಕುಟುಂಬ ಸದಸ್ಯರು, ಭಾರತ ಟಿ20 ಕ್ರಿಕೆಟ್ ತಂಡದ ನಾಯಕ ಸೂರ್ಯಕುಮಾರ್ ಯಾದವ್, ಮಾಜಿ ಕ್ರಿಕೆಟಿಗರಾದ ಡಯಾನಾ ಎಡುಲ್ಜಿ ಉಪಸ್ಥಿತರಿದ್ದರು ಪಿಟಿಐ ಚಿತ್ರ

ಫೈನಲ್ ಗೆದ್ದ ಮೀನಾಕ್ಷಿ, ಪ್ರೀತಿ, ಪ್ರಿಯಾ, ಅರುಂಧತಿ

ಬಾಕ್ಸಿಂಗ್: ಒಂದೇ ದಿನ ನಾಲ್ಕು ಚಿನ್ನ

ಉಲಾನ್‌ಬತಾರ್ (ಮಂಗೋಲಿಯಾ), (ಪಿಟಿಐ): ಹಾಲಿ ವಿಶ್ವ ಚಾಂಪಿಯನ್ ಮೀನಾಕ್ಷಿ ಹೂಡಾ, ಪ್ರೀತಿ ಪವಾರ್ ಸೇರಿದಂತೆ ಭಾರತದ ನಾಲ್ವರು ಮಹಿಳೆಯರು ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಚಿನ್ನದ ಪದಕ ಗೆದ್ದುಕೊಂಡರು.

ಮೀನಾಕ್ಷಿ (48 ಕೆ.ಜಿ.) ಮತ್ತು ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತೆ ಪ್ರೀತಿ (54 ಕೆ.ಜಿ) ಜೊತೆಗೆ ಪ್ರಿಯಾ ಘಂಗಾಸ್ (60 ಕೆ.ಜಿ.) ಮತ್ತು ವಿಶ್ವ ಬಾಕ್ಸಿಂಗ್ ಕಪ್ ಸ್ವರ್ಣ ವಿಜೇತೆ ಅರುಂಧತಿ ಚೌಧರಿ (70 ಕೆ.ಜಿ.) ಅವರೂ ಬಂಗಾರದ ಪದಕಕ್ಕೆ ಕೊರಳೊಡ್ಡಿದರು.

ಆದರೆ ಭಾರತಕ್ಕೆ ದೊಡ್ಡ ಹಿನ್ನಡೆಯಾಗಿದ್ದು ಮಹಿಳೆಯರ 57 ಕೆ.ಜಿ. ವಿಭಾಗದ ಫೈನಲ್‌ನಲ್ಲಿ. ಈ ಸೆಣಸಾಟದಲ್ಲಿ ಹಾಲಿ ವಿಶ್ವ ಚಾಂಪಿಯನ್ ಜೈಸ್ಮಿನ್ ಲಂಬೋರಿಯಾ ಅವರು 0–5 ರಿಂದ ಎರಡು ಬಾರಿಯ ವಿಶ್ವ ಚಾಂಪಿಯನ್ ಪುನ್ರವೀ ರ್‍ಯುನ್ರೋಸ್ (ಥಾಯ್ಲೆಂಡ್) ಅವರಿಗೆ ಮಣಿದರು.

ಭಾರತದ ಅಲ್ಫಿಯಾ ಪಠಾಣ್ 80 ಕೆ.ಜಿ + ವಿಭಾಗದಲ್ಲಿ ರನ್ನರ್ ಅಪ್ ಆದರು. ಅವರು ಫೈನಲ್‌ನಲ್ಲಿ 0–5 ರಿಂದ ಕಜಾಕಸ್ತಾನದ ದೀನಾ ಇಸ್ಲಾಮ್‌ಬೆಕೊವಾ ಅವರಿಗೆ ಮಣಿದರು.

ಭಾರತದ ಮಹಿಳೆಯರು ಒಟ್ಟು 10 ಪದಕಗಳನ್ನು ಗೆದ್ದು ಪ್ರಭಾವಶಾಲಿ ಪ್ರದರ್ಶನ ನೀಡಿದರು. ಇವುಗಳಲ್ಲಿ ನಾಲ್ಕು ಚಿನ್ನ, ಎರಡು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳಿವೆ.



ಅರುಂಧತಿ ಪ್ರೀತಿ ಪ್ರಿಯಾ

ಆದರೆ ಕೆಲವು ವಿಭಾಗಗಳಲ್ಲಿ 2–3 ಸ್ಪರ್ಧಿಗಳಿದ್ದ ಕಾರಣ, ಲವ್ಲಿನಾ ಬೊರ್ಗೊಹೈನ್ (75 ಕೆ.ಜಿ), ಪೂಜಾ ರಾಣಿ (80 ಕೆ.ಜಿ) ಮತ್ತು ಅಲ್ಫಿಯಾ ಭಾಗವಹಿಸಿದ ಮಾತ್ರಕ್ಕೆ ಪದಕ ಪಡೆದರು.

ಮೀನಾಕ್ಷಿ ಅವರು 5–0 ಯಿಂದ ಮಂಗೋಲಿಯಾದ ನೊಮುನ್ದರಿ ಎನ್ಖ್–ಅಮ್ಗಲನ್ ಅವರನ್ನು ಸೋಲಿಸಿ ಭಾರತದ ಚಿನ್ನದ ಬೇಟೆ ಆರಂಭಿಸಿದರು. ಪ್ರೀತಿ ಮೂರು ಬಾರಿಯ ವಿಶ್ವ ಚಾಂಪಿಯನ್ ಹುವಾಂಗ್ ಸಿಯಾವೊವೆನ್ (ತೈವಾನ್) ಅವರನ್ನು 5–0 ಸರ್ವಾನುಮತದ ತೀರ್ಪಿನಲ್ಲಿ ಸೋಲಿಸಿದರು.

ಪ್ರಿಯಾ 3–0 ಯಿಂದ ಉತ್ತರ ಕೊರಿಯಾದ ವೊನ್ ಉನ್–ಗ್ಯಾಂಗ್ ಅವರನ್ನು ಮಣಿಸಿದರೆ, ಅರುಂಧತಿ ಫೈನಲ್‌ನಲ್ಲಿ 4–1 ರಿಂದ ಕಜಾಕಸ್ತಾನದ ಬಕಿಟ್ ಸೀದಿಶ್ ಅವರನ್ನು ಮಣಿಸಿದರು.

ಎಂಟರ ಘಟ್ಟಕ್ಕೆ ಆಯುಷ್ ಶೆಟ್ಟಿ

ನಿಂಗ್ಬೊ (ಚೀನಾ), (ಪಿಟಿಐ): ಭಾರತದ ಆಯುಷ್ ಶೆಟ್ಟಿ, ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ನೇರ ಗೇಮ್‌ಗಳ ಗೆಲುವು ಸಾಧಿಸಿ ಎಂಟರ ಘಟ್ಟಕ್ಕೆ ದಾಪುಗಾಲಿಟ್ಟರು. ಆದರೆ ಅನುಭವಿಗಳಾದ ಪಿ.ವಿ.ಸಿಂಧು ಮತ್ತು ಎಚ್.ಎಸ್.ಪ್ರಣಯ್ ಅವರ ಸವಾಲು ಅಂತ್ಯಗೊಂಡಿತು.

ವಿಶ್ವ ಕ್ರಮಾಂಕದಲ್ಲಿ 25ನೇ ಸ್ಥಾನದಲ್ಲಿರುವ ಆಯುಷ್ 21–16, 21–12 ರಿಂದ 20ನೇ ಕ್ರಮಾಂಕದ ಆಟಗಾರ ಚಿ ಯು ಜೆನ್ (ತೈವಾನ್) ಅವರನ್ನು ಅಧಿಕಾರಯುತವಾಗಿ ಸೋಲಿಸಿದರು. ಕನ್ನಡಿಗ ಆಯುಷ್ ಮುಂದಿನ ಸುತ್ತಿನಲ್ಲಿ ಇಂಡೊನೇಷ್ಯಾದ ಜೊನಾಥನ್ ಕ್ರಿಸ್ಟಿ ಅವರನ್ನು ಎದುರಿಸಲಿದ್ದಾರೆ.

ಎರಡು ಒಲಿಂಪಿಕ್ಸ್‌ಗಳಲ್ಲಿ ಪದಕ ಗೆದ್ದಿರುವ ಸಿಂಧು ಮಹಿಳೆಯರ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ 18–21, 8–21 ರಲ್ಲಿ ಚೀನಾದ ವಾಂಗ್ ಝಿಯಿ ಅವರಿಗೆ ಸೋತರು. ಎರಡನೇ ಶ್ರೇಯಾಂಕದ ಝಿಯಿ ಅವರಿಗೆ 46 ನಿಮಿಷಗಳಲ್ಲಿ ಗೆಲುವು ಒಲಿಯಿತು.

ಆಯುಷ್ ಶೆಟ್ಟಿ

ಜಪಾನ್‌ನ ಟೊಮೊಕಾ ಮಿಯಾಝಾಕಿ ಇನ್ನೊಂದು ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಉದಯೋನ್ಮುಖ ಆಟಗಾರ್ತಿ ಉನ್ನತಿ ಹೂಡಾ ಅವರನ್ನು 21–17, 21–9 ರಿಂದ ಹಿಮ್ಮೆಟ್ಟಿಸಿದರು.

33 ವರ್ಷದ ಪ್ರಣಯ್ ಪುರುಷರ ಸಿಂಗಲ್ಸ್‌ನಲ್ಲಿ 12–21, 19–21 ರಲ್ಲಿ ಚೀನಾದ ವೆಂಗ್ ಹಾಂಗ್ ಯಾಂಗ್ ಅವರಿಗೆ ಮಣಿದರು.

ಸಂಕ್ಷಿಪ್ತ ಸುದ್ದಿ

ಕುಸ್ತಿ: ಹನ್ಸಿಕಾ, ನೇಹಾಗೆ ಕಂಚು

ಬಿಷ್ಕೆಕ್ (ಕಿರ್ಗಿಸ್ತಾನ), (ಪಿಟಿಐ): ಹನ್ಸಿಕಾ ಲಂಬಾ ಮತ್ತು ನೇಹಾ ಅವರು ಸೀನಿಯರ್ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ 55 ಕೆ.ಜಿ. ಮತ್ತು 59 ಕೆ.ಜಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡರು.

ಎರಡು ಬಾರಿಯ ರಾಷ್ಟ್ರೀಯ ಚಾಂಪಿಯನ್ ಮೀನಾಕ್ಷಿ ಗೋಯತ್ ಅವರು ಸೋಲಿನ ಸುಳಿಯಿಂದ ಚೇತರಿಸಿ ದಕ್ಷಿಣ ಕೊರಿಯಾದ ಸಿಯೊಂಗ್ ಪಾರ್ಕ್ ವಿರುದ್ಧ ಗೆದ್ದು 53 ಕೆ.ಜಿ. ವಿಭಾಗದಲ್ಲಿ ಫೈನಲ್‌ಗೆ ಲಗ್ಗೆಯಿಟ್ಟರು.

55 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕಕ್ಕೆ ನಡೆದ ಸ್ಪರ್ಧೆಯಲ್ಲಿ 19 ವರ್ಷ ವಯಸ್ಸಿನ ಹನ್ಸಿಕಾ, ಆತಿಥೇಯ ಕಿರ್ಗಿಸ್ತಾನದ ಅರುಕೆ ಕದಿರ್ಬೆಕ್ ಕಿಝಿ ಅವರನ್ನು 6–1 ರಿಂದ ಮಣಿಸಿದರು.

ಬಿಜೆಕೆ ಕಪ್: ಇಂಡೊನೇಷ್ಯಾಕ್ಕೆ ಜಯ

ನವದೆಹಲಿ (ಪಿಟಿಐ): ಭಾರತ ತಂಡ ಬಿಲ್ಲೀ ಜೀನ್ ಕಿಂಗ್ ಕಪ್ ಟೆನಿಸ್ ಏಷ್ಯಾ/ ಒಷಾನಿಯಾ ಐ ಗುಂಪಿನ ಪಂದ್ಯದಲ್ಲಿ ಗುರುವಾರ 0–3 ರಿಂದ ಇಂಡೊನೇಷ್ಯಾಕ್ಕೆ ಮಣಿಯಿತು.

ಡಿಎಲ್‌ಟಿಎ ಕ್ರೀಡಾಂಗಣದಲ್ಲಿ ನಡೆದ ಮೊದಲ ಸಿಂಗಲ್ಸ್‌ನಲ್ಲಿ 21 ವರ್ಷ ವಯಸ್ಸಿನ ವೈಷ್ಣವಿ (ವಿಶ್ವ ಕ್ರಮಾಂಕ: 391) ಹೋರಾಟದ ನಂತರ 7–6 (3), 6–7 (3), 3–6 ರಿಂದ ಪ್ರಿಸ್ಕಾ ಮಡೆಲಿನ್ ನುಗ್ರೊಹೊ (ಕ್ರಮಾಂಕ: 419) ಅವರಿಗೆ ಮಣಿದರು. ಜಾನಿಸ್ ಟಿಜೆನ್ (ಕ್ರಮಾಂಕ: 41) ಅವರು ಎರಡನೇ ಸಿಂಗಲ್ಸ್‌ನಲ್ಲಿ 6–2, 6–1 ರಿಂದ ಸಹಜಾ ಯಮಲಪಲ್ಲಿ ಅವರನ್ನು ನಿರಾಯಾಸವಾಗಿ ಸೋಲಿಸಿದರು.

ಚೆಸ್: ಪ್ರಜ್ಞಾನಂದಗೆ ಸೋಲು

ಪಾಫೋಸ್ (ಸೈಪ್ರಸ್): ಭಾರತದ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಅವರನ್ನು ಸೋಲಿಸಿದ ವಿಶ್ವಕಪ್ ವಿಜೇತ ಜಾವೊಖಿರ್ ಸಿಂದರೋವ್ ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಹತ್ತನೇ ಸುತ್ತಿನ ನಂತರ ತಮ್ಮ ಅಗ್ರಸ್ಥಾನವನ್ನು ಇನ್ನಷ್ಟು ಬಲಪಡಿಸಿಕೊಂಡರು.

ವೈಶಾಲಿ

ಉಜ್ಬೇಕಿಸ್ತಾನದ ಭರವಸೆಯ ಆಟಗಾರ ಸಿಂದರೋವ್ 8 ಅಂಕ ಗಳಿಸಿದ್ದಾರೆ. ಎರಡನೇ ಸ್ಥಾನದಲ್ಲಿರುವ ಡಚ್ ಗ್ರ್ಯಾಂಡ್‌ಮಾಸ್ಟರ್ ಅನಿಶ್ ಗಿರಿ 6 ಅಂಕ ಗಳಿಸಿದ್ದಾರೆ. ಇನ್ನು ನಾಲ್ಕು ಸುತ್ತುಗಳಷ್ಟೇ ಉಳಿದಿವೆ. ಪ್ರಜ್ಞಾನಂದ 4 ಅಂಕ ಗಳಿಸಿದ್ದು, ಮೂರನೇ ಸೋಲಿನಿಂದ ಅವರ ಪ್ರಶಸ್ತಿ ಆಸೆ ಕಮರಿಹೋಯಿತು. ಗುರುವಾರ ನಡೆದ ಇನ್ನೊಂದು ಪಂದ್ಯದಲ್ಲಿ ಅನಿಶ್, ಅಮೆರಿಕದ ಹಿಕಾರು ನಕಾಮುರ (4.5) ಜೊತೆ ಡ್ರಾ ಮಾಡಿಕೊಂಡರು. ಫ್ಯಾಬಿಯಾನೊ ಕರುವಾನ (5) ಮತ್ತು ವೀ ಯಿ (4.5) ನಡುವಣ ಪಂದ್ಯವೂ ಡ್ರಾ ಆಯಿತು.

ಅಗ್ರಸ್ಥಾನಕ್ಕೆ ವೈಶಾಲಿ: ಮಹಿಳೆಯರ ವಿಭಾಗದಲ್ಲಿ ಭಾರತದ ವೈಶಾಲಿ ಆರ್. (6 ಅಂಕ) ಅವರು ಅನ್ನಾ ಮುಝಿಚುಕ್ (5.5) ವಿರುದ್ಧ ಡ್ರಾ ಮಾಡಿಕೊಂಡು, ಅಗ್ರಸ್ಥಾನಕ್ಕೇರಿದ್ದಾರೆ. ಬುಧವಾರ ಮುನ್ನಡೆ ಹಂಚಿಕೊಂಡಿದ್ದ ಚೀನಾದ ಝು ಜಿನೆರ್ (5.5) ಅವರು ಕಜಾಕಸ್ತಾನದ ಬಿಬಿಸಾರ ಅಸುಬ್ಬಯೇವಾ (5) ಅವರಿಗೆ ಸೋತರು.

ಟೆಸ್ಟ್ ಕ್ರಿಕೆಟಿಗ ಗೋಪಿನಾಥ್ ನಿಧನ



ಚೆನ್ನೈ (ಪಿಟಿಐ): ಭಾರತದ ಅತಿ ಹಿರಿಯ ಟೆಸ್ಟ್ ಆಟಗಾರ ಎನಿಸಿದ್ದ ಸಿ.ಡಿ.ಗೋಪಿನಾಥ್ (96) ಅವರು ಗುರುವಾರ ಇಲ್ಲಿ ನಿಧನರಾದರು. ಆ ಮೂಲಕ ಮೊತ್ತಮೊದಲ ಟೆಸ್ಟ್ ಜಯ ಸಾಧಿಸಿದ್ದ ತಂಡದ ಕೊನೆಯ ಕೊಂಡಿ ಕಳಚಿದಂತಾಯಿತು.

ಆಸ್ಟ್ರೇಲಿಯಾದ ದಂತಕತೆ ನೀಲ್ ಹಾರ್ವಿ (97) ನಂತರ ಗೋಪಿನಾಥ್ ಅವರು ವಿಶ್ವದ ಎರಡನೇ ಅತಿ ಹಿರಿಯ ಜೀವಂತ ಕ್ರಿಕೆಟರ್ ಎನಿಸಿದ್ದರು. ಅವರಿಗೆ ಪತ್ನಿ, ಮೂವರು ಮಕ್ಕಳು ಇದ್ದಾರೆ.

ಗೋಪಿನಾಥ ಅವರ ನಿಧನದೊಂದಿಗೆ ಸದ್ಯ ಮುಂಬೈನ ಚಂದ್ರಕಾಂತ ಪಾಟಣಕರ್ ಅವರು ಬದುಕುಳಿದಿರುವ ಭಾರತದ ಅತಿ ಹಿರಿಯ ಟೆಸ್ಟ್ ಕ್ರಿಕೆಟರ್ ಎನಿಸಿದ್ದಾರೆ. ಚಂದ್ರಕಾಂತ ಅವರು 1955 ರಲ್ಲಿ ನ್ಯೂಜಿಲೆಂಡ್ ವಿರುದ್ಧ ಒಂದು ಟೆಸ್ಟ್ ಆಡಿದ್ದರು. ಈಗ ಅವರ ವಯಸ್ಸು 95.

ಭಾರತ ತಂಡವು ಟೆಸ್ಟ್‌ನಲ್ಲಿ ತನ್ನ ಮೊದಲ ಗೆಲುವನ್ನು 1952ರಲ್ಲಿ ಚೆಪಾಕ್‌ನಲ್ಲಿ ಇಂಗ್ಲೆಂಡ್ ವಿರುದ್ಧ (ಇನಿಂಗ್ಸ್ ಮತ್ತು ಎಂಟು ರನ್‌ಗಳಿಂದ) ಸಾಧಿಸಿತ್ತು. ಆ ಪಂದ್ಯದಲ್ಲಿ ಗೋಪಿನಾಥ್ 35 ರನ್ ಗಳಿಸಿದ್ದರು.

ಬಲಗೈ ಬ್ಯಾಟರ್ ಆಗಿದ್ದ ಅವರು ಎಂಟು ಟೆಸ್ಟ್ ಪಂದ್ಯಗಳನ್ನು ಆಡಿದ್ದರು. ಒಟ್ಟು 242 ರನ್ ಗಳಿಸಿದ್ದು ಅಜೇಯ 50 ರನ್ ಅತ್ಯಧಿಕ ಮೊತ್ತವಾಗಿತ್ತು.

ಆದರೆ ಆಗಿನ ಮದ್ರಾಸ್ ತಂಡದ ಪರ 83 ಪಂದ್ಯಗಳನ್ನು ಆಡಿ 42ರ ಸರಾಸರಿಯಲ್ಲಿ ಅವರು 4,259 ರನ್ ಗಳಿಸಿದ್ದರು.

ಫುಟ್‌ಬಾಲ್: ಆರ್.ಆರ್.ನಗರ, ಕೆ.ಆರ್.ಪುರ ತಂಡಗಳು ಸೆಮಿಗೆ

ಬೆಂಗಳೂರು: ರಾಜರಾಜೇಶ್ವರಿ ನಗರ ಮತ್ತು ಕೃಷ್ಣರಾಜಪುರ ತಂಡಗಳು ಕೆಎಸ್‌ಎಫ್‌ಎ–ವೈಷ್ಣವಿ ಎರಡನೇ ಆವೃತ್ತಿಯ ಸಿಎಂ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದವು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ರಾಜರಾಜೇಶ್ವರಿ ತಂಡವು 4–2 ಗೋಲುಗಳಿಂದ ಸಿವಿಆರ್ ನಗರ ತಂಡವನ್ನು ಮಣಿಸಿತು. ಆರ್.ಆರ್. ತಂಡದ ಪರ ಯೂಕ್ ಆಂಥೋನಿ (8ನೇ ಮತ್ತು 11ನೇ) ಹಾಗೂ ರಿವಾಲ್ಡೊ ಜೆ.ಸಿ. (63ನೇ ಮತ್ತು 86ನೇ) ತಲಾ ಎರಡು ಗೋಲು ಗಳಿಸಿದರು. ಸಿವಿಆರ್ ತಂಡದ ಪರ ಖಲೀಲ್ ಯು.ಆರ್. ರೆಹಮಾನ್ (39ನೇ) ಮತ್ತು ಉತ್ತಮ್ ಪ್ರಶಾಂತ್ (90 + 5ನೇ) ತಲಾ ಒಂದು ಗೋಲು ದಾಖಲಿಸಿದರು.

ಮತ್ತೊಂದು ಕ್ವಾರ್ಟರ್ ಫೈನಲ್‌ನಲ್ಲಿ ಕೆ.ಆರ್.ಪುರ ತಂಡವು 2–0ಯಿಂದ ಹೆಬ್ಬಾಳ ತಂಡವನ್ನು ಮಣಿಸಿತು. ಕೆ.ಆರ್.ಪುರ ತಂಡದ ಪರ ಸ್ಟೀವ್ ಮ್ಯಾಥ್ಯೂಸ್ (56ನೇ) ಮತ್ತು ತೇಜಸ್ (87ನೇ) ಗೋಲು ದಾಖಲಿಸಿದರು.

ಶುಕ್ರವಾರ ನಡೆಯುವ ಉಳಿದ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಶಾಂತಿನಗರ ತಂಡವು ಶಿವಾಜಿನಗರ ವಿರುದ್ಧ; ಸದಾಶಿವನಗರ ತಂಡವು ರಾರಾಜಿನಗರ ತಂಡದ ವಿರುದ್ಧ ಸೆಣಸಲಿವೆ.

PARAMETER	VICTORIS S-CNG	COMPETITION MID SUV DIESEL	BENEFIT OF VICTORIS S-CNG OVER DIESEL CARS
Running Cost/km	₹4.8	~ ₹6.3	✓ More savings per km
Lower Maintenance Cost	✓	✗	✓ Easy on pocket
Reduced Emission	✓	✗	✓ Good for environment
Recovery Period#	~4.5 Yrs	~7.9 Yrs	✓ Faster recovery

Applicable T&C available at your nearest dealership. Creative visualization. Car colour may vary due to printing on paper. Images used are for illustration purposes only. Features may vary by model/conditions. For details on functioning of safety features including airbags, kindly refer to the Owner's Manual. #Considered average daily drive of 35 km. Fuel Cost calculation done basis fuel prices in Banglore as of 9th March 2026 and considered 70% delivery of ARAI tested Mileage. **The loyalty reward scheme is subject to terms and conditions. For more details visit authorised dealership. The offer is valid only on Victoris. *As certified by Test Agency under Rule 115 (G) of Central Motor Vehicles Rules 1989.